
ಸುಮಧುರ ಮಾಸಿಕ

# ಭಾವನಾ

ಮೇ 2001 ರೂ.7




ಭಾವನಾ
ಚಿತ್ರ : ಡಿ. ಪಿ. ನಾಗೇಶ್




ನಮ್ಮ ಏಪ್ರಿಲ್ ವಾರ್ಷಿಕ ವಿಶೇಷಾಂಕವನ್ನು ನೀವು ಕೈಗೆತ್ತಿಕೊಂಡ ರೀತಿ ನಮ್ಮನ್ನು ಮೂಕವಾಗಿಸಿದೆ. ''ಇಡೀ ವರುಷ ಓದಬಹುದಾದಷ್ಟು ಸುಗ್ರಾಸ ಸಾಮಗ್ರಿಯನ್ನು ಕೇವಲ ಒಂದು ಮಸಾಲೆ ದೋಸೆಯ 15 ರೂ. ಬೆಲೆಗೆ ಯಾಕೆ ಕೊಟ್ಟರಿ?'' ಎಂದು ಕೆಲವರು ನಮ್ಮನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಎಲ್ಲರನ್ನೂ ಆದಷ್ಟು ವ್ಯಾಪಕವಾಗಿ, ಆಳವಾಗಿ ನಿಲುಕುವುದೇ ನಮ್ಮ ಮುಖ್ಯ ತವಕ. ಹಳ್ಳಿ-ಪಟ್ಟಣ, ಘಟ್ಟ-ಕರಾವಳಿ, ಉತ್ತರ-ದಕ್ಷಿಣ ಇತ್ಯಾದಿ ಯಾವ ಪ್ರಭೇದಗಳಿಲ್ಲದೆ ಏಕರೂಪವಾಗಿ ಕನ್ನಡದ ಎಲ್ಲೆಡೆಯಿಂದ ಭರಪೂರ ಬಂದ ನಿಮ್ಮ ಮಮತೆಯ ಸ್ವಾಗತ ನಮ್ಮ ಹೊಣೆಯನ್ನು ಹೆಚ್ಚಿಸಿದೆ. ಪ್ರತಿ ಜೀವಿಯ ಅನನ್ಯತೆಯನ್ನು ಗೌರವಿಸುತ್ತ, ಸಾರ್ವತ್ರಿಕ ಅನುಭೂತಿಯ ವಿನ್ಯಾಸವನ್ನು ವಿಸ್ತರಿಸುವ ನಮ್ಮ ಯತ್ನ ಮುಂದುವರೆಯುತ್ತದೆ. ಬುದ್ಧನ ಪ್ರತಿಮೆಯನ್ನು ಧ್ವಂಸಗೊಳಿಸಿದ ಸಿಡಿಮದ್ದುಗಳ ಸದ್ದು ಹೃದಯಗಳ ನೀರವದಲ್ಲಿ ಇನ್ನೂ ಆರುತ್ತಿರುವಾಗಲೇ, ಆ ಬುದ್ಧನ ಛಿನ್ನ ವಿಚ್ಛಿನ್ನ ಚೂರುಗಳ ಮಾರಾಟವೂ ಬಜಾರುಗಳಲ್ಲಿ ಆರಂಭವಾಗಿಬಿಟ್ಟಿದೆಯಂತೆ! ಭಗ್ನಾವಶೇಷಗಳನ್ನು ಕೊಂಡು ಮೆರೆಯುವ ನಾಗರಿಕರಿಗೆಲ್ಲಿದೆ ಕೊರತೆ ಈ ಪ್ರಪಂಚದಲ್ಲಿ?

ವಿಗ್ರಹಗಳ ಮಾತಿರಲಿ, ಜೀವಂತ ಮನುಷ್ಯನ ಭಗ್ನರೂಪಗಳ ಉದ್ವಿಗ್ನ ಕಾಲ ಇದು. ಮುರಿದ ಮೂಳೆ ಮತ್ತೆ ಕೂಡಲು ಬಿಗಿದು ಅಲ್ಲಾಡದೆ ಕೂರಿಸುತ್ತಾರೆ. ಹಾಗೇ ಕಂಗೆಟ್ಟ ಮನಸುಗಳನ್ನು ಜೋಡಿಸಲೂ ನಿಸ್ವಾರ್ಥದಲ್ಲಿ ಹುಟ್ಟಿದ ಮಮತೆಯ ಬಂಧನ ಬೇಕು. ಪರಸ್ಪರ ಅಮೃತ ಕ್ಷಣಗಳನ್ನು ಗುರುತಿಸೋಣ. ನಿಸ್ವಾರ್ಥ ಬರವಣಿಗೆಯ ಮುಖೇನ ಅವುಗಳನ್ನು ಹಂಚಿಕೊಳ್ಳೋಣ. 'ಬಾಳುವ' ಖುಷಿಯನ್ನು ಅನುಭವಿಸೋಣ!

ಸಂಪಾದಕ

# ಭಾವ ಲೋಕ

## ಕತೆಗಳು


ಬೈಗು ಮೊಗ್ಗು/ 8
ಶ್ರೀನಿವಾಸ ಕುಲಕರ್ಣಿ

ಆಸೆಯೆಂಬ ತಥಾಗತನ ವೈರಿ / 28
ಚಿದಾನಂದ ಸಾಲಿ

ಬಳಿಯೆಣ್ಣು, ದುಂಡವ್ವನ ದೆವ್ವ / 33
ಎಂ.ಎಸ್. ವೇದಾ

ಸ್ಕೂಟರ್ ಕಳ್ಳ / 48
ಆರ್ಯ

ಬೇರಿಲ್ಲದವರು / 56
ಉಮಾ ಹೆಗಡೆ

ಕಮಾನ್ ಇಂಡಿಯಾ / 96
ಪ್ರಹ್ಲಾದ ಅಗಸನಕಟ್ಟೆ

ಭಾವದ ಬಯಲು / 112
ಎಸ್. ಗಂಗಾಧರಯ್ಯ

ಅಗ್ನಿಸ್ನಾನ / 124
ಯತಿರಾಜ ವೀರಾಂಬುಧಿ

ಝೆನ್ ಕಥೆಗಳು / 133
ಮುನಿಯಾಲ ಗಣೇಶ ಶೆಣೈ

ಪದ್ಮಗಂಧಿನಿ (ಜನಪದ) / 86
ಸಂ. ಎಲ್. ಆರ್. ಹೆಗಡೆ


## ಶತಮಾನದ ಮೆಲುಕು


ಜ್ಞಾನಾರ್ಜನೆ / 68
ಕೃಷ್ಣ ಕೊಲ್ಹಾರ ಕುಲಕರ್ಣಿ



## ವಿಶ್ವ ಭಾರತಿ / 136


ಬೀಬಿ ಹಲ್ದಾರ್‌ಳ ಚಿಕಿತ್ಸೆ-ಝುಂಪಾ ಲಹಿರಿ
ದೀಪಾ ಗಣೇಶ್

ಕಾವ್ಯ ಧಾರವಾಹಿ /46
ಕೆ.ವಿ. ತಿರುಮಲೇಶ್


## ಕವಿ ಸಮಯ


ಎನ್.ಕೆ. ಹನುಮಂತಯ್ಯ / 80
ದೇವಯಾನಿ / 82
ಮಂಜುನಾಥ್ ಗೀತಾ / 82
ಸಿದ್ಧಾಪುರ ಸಂಜೀವ / 83
ಚೇತನಾ ಬಾಳಗೋಡು / 83
ಸುಕನ್ಯಾ ಕಳಸ / 84

# ಭಾವನಾ


## ಮಧುವನ

ಅರವಿಂದ ನಾವಡ / 147

ಬೆಳ್ಳಿ ಕಸುಬು / 152
ಟಿ. ಎನ್. ಸೀತಾರಾಮ್

ವ್ಯಂಗ್ಯಚಿತ್ರ / 134

## ಅಂಕಣಗಳು

ಮಂಟಪ / 22
ಕಥನ ಕುತೂಹಲ / 65
ಭಳಾರೇ ವಿಚಿತ್ರಂ / 77
ಸನಿಹ / 88
ಶಬ್ದತೀರ / 122
ಕೊನೇ-ಸಿಪ್ / 160

ಮೊಗ್ಗಿನ ಜಡೆ / 4
ಭಾವ ಬಿಂದು / 6
ಕಾಗದದ ದೋಣಿ / 24
ಸಾಲ್ ಮಿಂಚು / 33
ಗರಿ / 90
ಗಾಳಿಪುಟ / 94
ಭ್ರಷ್ಟತೆಯ ಕತ್ತಲಲ್ಲಿ ಒಂದು ಪಣತಿ / 110
ಕಾಡುವ ಬಿಂಬಗಳು / 121
ತೆರೆದ ಅಂಚೆ / 157



ಸಂಪುಟ -2 ಸಂಚಿಕೆ - 2
ಮೇ 2001

ಪ್ರಕಾಶಕರು, ಮುದ್ರಕರು, ಮಾಲಿಕರು
ವಿಜಯ ಸಂಕೇಶ್ವರ
ಆನಂದ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಸಂಪಾದಕ
ಜಯಂತ ಕಾಯ್ಕಿಣಿ

ಮುಖಪುಟ ಕಲಾಕೃತಿ : ವಿಶ್ವಕರ್ಮ-ಕ್ರಿಯಾನ್

ಹಿಂಪುಟ ಛಾಯಾಚಿತ್ರ : ವಿ.ಕೆ. ಜನಾರ್ಧನ ಅಯ್ಯಂಗಾರ್

ಸಂಚಿಕೆಯ ಕಲಾವಿದರು : ರಾವ್ ಬೈಲ್, ಸೃಜನ್, ಇಕ್ಬಾಲ್ ಅಹ್ಮದ್, ಬಿ.ಸಿ. ದೇವರಾಜ್, ಕಮಲಮ್ ಅರಸು, ಎನ್. ಆರ್. ಬಡಿಗೇರ್, ಪ್ರೀತಿ ಸಂಯುಕ್ತಾ, ಶಶಿಧರ್, ಪ್ರವೀಣ್ ರಬಕವಿ, ಅಣ್ಣಪ್ಪ, ಬಾ ಸುಮಾ, ಪ್ರತಿಭಾ ನಂದಕುಮಾರ್, ಇಂದ್ರಕುಮಾರ್, ಪೂರ್ಣಿಮಾ, ಹರೀಶ್ ಕುಮಾರ್, ಅಂತರ್ಮುಖಿ, ಅಶೋಕ್, ಎಸ್. ವಿ. ಪದ್ಮನಾಭ್, ಶ್ರೀಪಾದ್



ಸಂಪಾದಕೀಯ ಕಾರ್ಯಾಲಯ
ನಂ. 38, ಎ.ಎಂ. ರಸ್ತೆ, ಕಲಾಸಿಪಾಳ್ಯಂ ನ್ಯೂ ಎಕ್ಸ್‌ಟೆನ್‌ಷನ್
ಬೆಂಗಳೂರು - 560 002
ಫೋನ್: 2246350, 2226044, 2229102
ಫ್ಯಾಕ್ಸ್: 080-2246349
E-mail: vksbc@ bgl.vsnl.net.in

ಪ್ರಧಾನ ಕಛೇರಿ
ಗಿರಿರಾಜ ಅನೆಕ್ಸ್
ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ
ದೂರವಾಣಿ: 0836-253656, 253657
ಫ್ಯಾಕ್ಸ್: 0836-253630



# ಮೊಗ್ಗಿನ ಜಡೆ

## ಬಣ್ಣದ ಚಿಟ್ಟೆ

ಬಣ್ಣ ಬಣ್ಣದ ಚಿಟ್ಟೆ
ಮೈತುಂಬ ಪಟ್ಟೆ
ಹಾರಲು ನಿನಗೆ ಆತುರ
ಆಡಲು ನನಗೆ ಕಾತುರ

## ಅಮ್ಮ

ಅಮ್ಮ ಬಂದಳು
ಕೋಲು ತಂದಳು
ಜಾರಿ ಬಿದ್ದಳು
ನಾನು ನಕ್ಕೆನು

## ಮಳೆ-ಬೆಳೆ

ಸುರಿಯಿತು ಮಳೆ
ಭೂಮಿಗೆ ಕಳೆ
ನಾಡಿಗೆ ಬೆಳೆ

**ಕೃಪಾ . ಕೆ**
(8 ವರ್ಷ), ಕೊರಟಗೆರೆ



## ಕಾಫಿ, ಟೀ

ಕಾಫಿ, ಟೀ ಕುಡಿಯೋಕೆ
ಬಿಡೋದೇ ಇಲ್ವಲ್ಲಮ್ಮ
ನೀವು ಮಾತ್ರ ಯಾವಾಗ್ಲೂ
ಕುಡಿತಾನೇ ಇರತೀರಲ್ಲಮ್ಮ

ತರತರ ಹಾಲು
ಬರೀ ಬೋರು
ನಂಗೂ ಬೇಕು
ರುಚಿ, ರುಚಿ ಕಾಫೀ, ಟೀಯು

ತಾಳಿ ನಿಮಗೆ ಮಾಡ್ತೀನಿ
ಬೇಗ ದೊಡ್ಡವನಾಗ್ತೀನಿ
ಹಂಡೆ ಹಂಡೆ ಕಾಫಿ, ಟೀ
ಗಟಗಟ ಅಂತ ಕುಡಿತೀನಿ.

**ಎಚ್. ಎನ್. ನಿಶಾಂತ್**
(4ನೇ ತರಗತಿ), ಹಾಸನ

## ದೊಡ್ಡವರು

ದೊಡ್ಡವ್ರು ನಿಜಾನೇ ಹೇಳ್ಬೇಕಂತಾರೆ
ಸಮಯ ಬಂದಾಗ
ತಾವೇ ಸುಳ್ ಹೇಳ್ಬಿಡ್ತಾರೆ.

ನಂಗರ್ಥ ಆಗಲ್ಲ
ಅವರು ಹೇಳೋದು ಸರಿಯೋ
ಮಾಡೋದು ಸರಿಯೋ
ಒಂದೂ ಗೊತ್ತಾಗೊಲ್ಲಾ!

ಇದು ಮುದ್ದು ಮಕ್ಕಳ ಮುಕ್ತ ಪುಟ. ಮಕ್ಕಳೇ ಬರೆದ ಚಿತ್ರ, ಕಥೆ, ಚುಟುಕ, ಕವಿತೆಗಳಿಗೆ ಸ್ವಾಗತ.

# ಒಳ್ಳೆಯತನಕ್ಕೆ ಬೆಲೆಯಿದೆ




ಅರುಣಾ ಶಿ. ಹಳಗೋಧಿ
5ನೇ ತರಗತಿ, ಕರಜಗಿ

ಒಂದು ಊರಿನಲ್ಲಿ ಒಬ್ಬಾಕೆ ಇದ್ದಳು. ಅವಳ ಗಂಡ ಮೊದಲೇ ತೀರಿಕೊಂಡಿದ್ದನು. ಅವಳಿಗೆ ಒಬ್ಬ ಹೆಣ್ಣುಮಗಳಿದ್ದಳು. ಅವಳು ಮೂಕಿಯಾಗಿದ್ದಳು. ಅವಳನ್ನು ಯಾರೂ ಮದುವೆಯಾಗಿರಲಿಲ್ಲ.

ಮುಂದೆ ಅವಳನ್ನು ಭೈರಪ್ಪ ಎಂಬ ಬಡವ ಮದುವೆಯಾಗಿ ಮತ್ತೊಂದು ಊರಿಗೆ ಹೋದನು. ಅಲ್ಲಿಯೇ ಇದ್ದ ಒಬ್ಬ ಸಾಹುಕಾರನ ಹತ್ತಿರ ಹೋಗಿ, ''ಸಾಹುಕಾರರೇ, ನಿಮ್ಮಲ್ಲಿ ಯಾವುದಾದರೊಂದು ಕೆಲಸವಿದ್ದರೆ ಕೊಡಿ, ನಾವು ನಿಮ್ಮ ಹತ್ತಿರ ಇರುತ್ತೇವೆ, ನಿಮ್ಮ ಹೊಲದಲ್ಲಿ ದುಡಿಯುತ್ತೇವೆ'' ಎಂದರು. ಅದಕ್ಕೆ ಸಾಹುಕಾರನು ಒಪ್ಪಿ ಹೊಲದಲ್ಲಿ ದುಡಿಯಲು ಹೇಳಿದನು. ಇವರು ಹೊಲದಲ್ಲಿ ದುಡಿದು ಬಂದ ಹಣದಿಂದ ಜೀವನ ನಡೆಸುತ್ತಿದ್ದರು.

ಇವರು ಚೆನ್ನಾಗಿ ಇರುವುದನ್ನು ನೋಡಿ ಸಹಿಸಲಾರದೆ ಸಾಹುಕಾರನ ಆಳು ಮನುಷ್ಯ ಒಬ್ಬ ಸಾಹುಕಾರರ ಹತ್ತಿರ ಹೋಗಿ, ಸುಳ್ಳುಸುಳ್ಳು ಅವರ ಮೇಲೆ ಚಾಡಿ ಹೇಳಿ ಅವರು ಕೆಟ್ಟವರಿದ್ದಾರೆ ಎಂದು ಹೇಳಿದನು. ಆಗ ಸಾಹುಕಾರ ಅವರನ್ನು ಕೆಲಸದಿಂದ ತೆಗೆದುಹಾಕಿದ. ಅವರು ಕಾಲಿಗೆ ಬಿದ್ದು ಬೇಡಿಕೊಂಡರು. ಅಷ್ಟಾದರೂ ಅವರನ್ನ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಅದೇ ದಿವಸ ಸಾಹುಕಾರನ ಮನೆಗೆ ಕಳ್ಳರು ಬಂದರು. ಅವನ ಮನೆಯಲ್ಲಿಯ ಒಡವೆ, ವಸ್ತು, ಬಂಗಾರವನ್ನೆಲ್ಲ ಕಳ್ಳತನ ಮಾಡಿ ಒಯ್ದರು. ಮುಂಜಾನೆ ಎದ್ದು ಸಾಹುಕಾರ ನೋಡುತ್ತಾನೆ, ಮನೆಯಲ್ಲಿ ಏನೂ ಇಲ್ಲ. ಅಷ್ಟರಲ್ಲಿ ಆ ಆಳು ಮನುಷ್ಯ ಬಂದು, 'ಮತ್ಯಾರು ಕಳ್ಳತನ ಮಾಡುತ್ತಾರೆ ಆ ಭೈರಪ್ಪನ ಹೊರತು' ಎಂದು ಹೇಳಿದನು. ಆಗ ಸಾಹುಕಾರನಿಗೆ ಸಿಟ್ಟು ಬಂದು ಆ ಭೈರಪ್ಪನ ಗುಡಿಸಲಿಕ್ಕೆ ಬೆಂಕಿ ಹಚ್ಚಿ ಬನ್ನಿರಿ ಎಂದು ಆಜ್ಞೆ ಮಾಡಿದನು. ಅವನ ಗುಡಿಸಲನ್ನು ಸುಟ್ಟುಬಿಟ್ಟರು. ಆಗ ಭೈರಪ್ಪ ಮತ್ತು ಅವನ ಹೆಂಡತಿ ಅಳುತ್ತ ನಿಂತರು. ಅಷ್ಟರಲ್ಲಿ ಈಶ್ವರನು ಪ್ರತ್ಯಕ್ಷನಾಗಿ ಈ ಸುಟ್ಟ ಬೂದಿ ಅರಮನೆಯಾಗಲಿ ಎಂದನು. ಆ ಮನೆ ದೊಡ್ಡ ಅರಮನೆಯಾಯಿತು. ಭೈರಪ್ಪ ಮತ್ತು ಅವನ ಹೆಂಡತಿ ಸುಖದಿಂದ ಜೀವನ ನಡೆಸಿದರು.





ಆರ್. ರಜತ
(6ನೇ ತರಗತಿ)
ಬೆಂಗಳೂರು

# ಬೆಳಗಾಗ ನಾವೆದ್ದು...

ಗುಡಿಸಿಲಿನ ಮಂಕರಿಯೊಳಗಿಂದ ಹೊರಟ ಆ ಹುಂಜನ ಕೊಕ್ಕೊಕ್ಕೋ ಕೂಗು ಸೂರ್ಯನನ್ನೂ ದಡಬಡಿಸಿಬಿಡುತ್ತದೆ. ಹೊತ್ತು ಹುಟ್ಟುತ್ತದೆ. ಎಲ್ಲಾ ಶುರುವಾಗುವುದೇ ಇಲ್ಲಿಂದ. ಕಳಂಕ ಹೊತ್ತ ಕಪ್ಪು ಕಾಗೆ ಕೂಡ ಕಾ ಕಾ ಎಂದು ಹೊತ್ತನ್ನು ಸ್ವಾಗತಿಸಿ ಜಗತ್ತನ್ನು ಎಚ್ಚರಿಸುತ್ತದೆ.

ಕಂಠವಿದ್ದ, ಇಲ್ಲದ ಹಕ್ಕಿ ಪಕ್ಷಿ ಕೀಟಗಳೂ ಕಿಚ ಪಿಚ ಚಿಲಪಿಲ ದನಿ ಮಾಡಿ, ಹಗಲನ್ನು ಆಹ್ವಾನಿಸುತ್ತವೆ, ಆಹ್ಲಾದಿಸುತ್ತವೆ. ಗುಬ್ಬಚ್ಚಿ ಗೂಡು ಬಿಟ್ಟು ಶೃತಿ ಸೇರಿಸುತ್ತದೆ. ಸತ್ತವನಂತೆ ಬಿದ್ದ ಸೋಮಾರಿಗೂ ಬೆಳಕು ಹರಿದ ಸುದ್ದಿ ತಲುಪಿಸಿಬಿಡುತ್ತವೆ. ಶುಭೋದಯಕ್ಕೆ ಇದಕ್ಕಿಂತಲೂ ಮಂಗಳವಾದ್ಯ ಬೇಕೆ?

ಹರಿದ ಕಂಬಳಿಯೊಳಗೆ ತೂರಿದ ಕಾಲು ಬಿಡಿಸಿಕೊಂಡ ಮಕ್ಕಳು, ತಾಮುಂದು ನಾಮುಂದು ಎಂದು ಮಗುಚಿದ ಮಂಕರಿ ಎತ್ತಿ, ಕೋಳಿಗಳನ್ನು ದಿನದೊಳಗೆ ದೂಕುತ್ತಾರೆ. ಹುಂಜನ ಹುಂಬನ್ನು, ಮರಿ ಕೋಳಿಯ ಮಹಾ ನಿಗವನ್ನು, ಪ್ರೀತಿಯನ್ನು ಬೆರಗಾಗಿ ನೋಡುತ್ತಾರೆ. ಮೋಟು ಲಂಗದ ಹುಡುಗಿ ಮೆಲ್ಲಗೆ ಮುಸುಕು ಸರಿಸಿ ಹಟ್ಟಿಗೆ ಬರುತ್ತಾಳೆ. ಗುಡಿಸಿ, ಸಗಣಿಯಿಂದ ಸಾರಿಸುತ್ತಾಳೆ. ಇಷ್ಟಕ್ಕೂ ಅವಳಿಗೆ ಇವತ್ತೊಂದು ತರಹ ರಂಗೋಲಿ ರಚಿಸುವ ತವಕ. ಎಲ್ಲೆಲ್ಲಿ ನೋಡಿದ್ದೋ? ಆಯ್ದದ್ದೋ? ಪಟಪಟ ಚುಕ್ಕಿ ಉದುರಿಸಿ ಬೆರಳ



ನುಣುಚಿನಿಂದ ರಂಗೋಲಿ ನೇಯ್ದು, ನಿಂತು ನೋಡಿದ್ದಾಳೆ! ರಂಗನಿಲ್ಲಿ ನಲಿದಾಡಲೇಬೇಕು! ಅವ್ವ ಎದ್ದವಳೇ ಮುಖ ತೊಳೆದು, ಚಂಬು ಹಿಡಿದು ಕೊಟ್ಟಿಗೆಗೆ ಹೋಗಿ, ''ಕರಾ ಬಿಡು ಬಾರ್ಲಾ ಮಗಾ'' ಎಂದು ಕೂಗಿದ್ದಾಳೆ. ಅವನು ಓಡುತ್ತಲೇ ಬಂದು ಕುಣಿಕೆ ಬಿಚ್ಚಿದ್ದಾನೆ. ಕರು ಒಂದೇ ನೆಗೆತಕ್ಕೆ ಅದರವ್ವನ ಕೆಚ್ಚಲು ಕಚ್ಚಿದ್ದನ್ನು ಕುತೂಹಲದಿಂದ ನೋಡಿದ್ದಾನೆ.

ಅಪ್ಪ ಯಾವಾಗ ಎದ್ದ? ಆಗಲೇ ಅಂಗಳದಲ್ಲಿ ನೇಗಿಲು, ನೊಗ ಹಾಜರಾಗಿವೆ. ಎತ್ತು ನೊಗಕ್ಕೆ ಹೆಗಲು ಕೊಡುತ್ತಿವೆ. ಇಷ್ಟೆನ್ನುವಷ್ಟರಲ್ಲಿ ಕೊಟ್ಟಿಗೆಯ ಕಸ ತಿಪ್ಪೆ ಸೇರಿದೆ. ಅವ್ವ ಹೊಲಕ್ಕೆ ಹೋಗುವ ಮುತುವರ್ಜಿಗಾಗಿ ರೊಟ್ಟಿ ಬಡಚುತ್ತಾ ಒಲೆ ಉರಿಸಿದ್ದಾಳೆ. ಮಕ್ಕಳು ಹುಲ್ಲು, ಸೊಪ್ಪಿಗೆ ಹೊರಟಿವೆ, ಶಾಲೆಗೆ ಹೋಗಲು ತಡವಾಗುವ ಅವಸರದಲ್ಲಿ.

ಕುಂಬಾರಣ್ಣ ಮಣ್ಣು ನಾದಲು ಮಸಲತ್ತಿನಿಂದ ಮಣ್ಣು ತುಳಿಯುತ್ತಿದ್ದಾನೆ. ಉಂಡೆ ಮಾಡಿಕೊಂಡು ತಿಗರಿಗೇರಿಸಿ ತಿರುಗಿಸಿದ್ದಾನೆ. ಈಗ ಇಲ್ಲಿ ಮಗೆ-ಮಡಕೆ-ಕುಡಿಕೆ ಗುಡಾಣಗಳು ಹುಟ್ಟಿಕೊಳ್ಳುತ್ತವೆ. ''ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡಾನ, ಹಾರ್‍ಯಾಡಿ ಮಣ್ಣಾ ತುಳಿದಾನ...'' ಹಾಡು ಹುಟ್ಟುತ್ತದೆ.

ಕಮ್ಮಾರ ಕುಲುಮೆ ಬಿಚ್ಚಿ, ಒಲೆಗೆ ಇದ್ದಿಲು ತುಂಬಿ ಕಿಡಿ ತಗುಲಿಸಿದ್ದಾನೆ. ತಿದಿಯ ತಾಕತ್ತಿಗೆ ಕಿಡಿ ಕೆಂಡವಾಗಿದೆ! ಹಡೆಯಿಂದ್ಹೊರಟ 'ಟಣ್' ಶಬ್ದವು ಊರಿಗೆಲ್ಲಾ ಹೋಗಿದೆ. ಇನ್ನು ಇಲ್ಲಿ ಏನೇನು ಕಾಯುತ್ತವೆಯೋ? ಕರಗುತ್ತವೆಯೋ?


ಬಜಂತ್ರಿ ಬೋರಲಿಂಗಯ್ಯ ಬೇಗನೆದ್ದು ಅಡಪದ ಪೆಟ್ಟಿಗೆ ಬಿಚ್ಚಿ, 'ಎಲ್ಲಾ ಸರಿಯಾಗಿವೆಯೆ?' ಎಂದು ನೋಡಿಕೊಂಡಿದ್ದಾನೆ. ಕತ್ತಿ ಮಸೆದು ಮಡಚಿಟ್ಟುಕೊಂಡು, ಪೆಟ್ಟಿಗೆ ಹೆಗಲಿಗೇರಿಸಿ ಹೊರಟಿದ್ದಾನೆ. ಯಾರ್‍ಯಾರ ತಲೆ, ಮೀಸೆ, ಗಡ್ಡಗಳು ಇವನಿಗಾಗಿ ಕಾಯುತ್ತಿವೆಯೋ? ಬೆಳಗಾಗ ನಾವೆದ್ದು ಯಾರ್‍ಯಾರಾ ನೆನೆಯಾಲೆ...?

ಅಲ್ಲಿ ಪ್ಯಾಟೆಯಲ್ಲಿ ಬೆಳಗು ಹೀಗಿರುವುದಿಲ್ಲ. ಹಕ್ಕಿ ಪಕ್ಷಿಗಳ ದನಿಯಿರುವುದಿಲ್ಲ. ಕೊಕ್ಕೊಕ್ಕೋ ಕೂಗು ಇಲ್ಲವೇ ಇಲ್ಲ. ಗುಬ್ಬಚ್ಚಿಗೆ ಗೂಡು ಕಟ್ಟಲು ಜಾಗವಿಲ್ಲದಿರುವಾಗ, ಕಾಗೆಗೆ ಕಾಳು ಕೂರಲು ಮರಗಳಿಲ್ಲದಿರುವಾಗ ದನಿಯಿನ್ನೆಲ್ಲಿಂದ ಬಂದೀತು? ಕರುವಿನ 'ಅಂಬಾ' ಎಂಬುದಿಲ್ಲ. ಅಂಗಳದಲ್ಲಿ ಹುಡುಗಿಯ ರಂಗೋಲಿಯಿಲ್ಲ. ನೆಲದ ನೆನಪಿಲ್ಲ. ಕುಂಬಾರನ ಕುಡಿಕೆಯಿಲ್ಲ. ಕಮ್ಮಾರನ ಕಮ್ಮಟವಿಲ್ಲ. ಬಜಂತ್ರಿ ಬೋರಲಿಂಗಯ್ಯ ಬರುವುದಿಲ್ಲ. ಮೇಲಾಗಿ ಬೆಳಗ ಬರಮಾಡಿಕೊಳ್ಳುವ ತವಕವಿಲ್ಲ.


ಹಳ್ಳಿ ಸುರೇಶ

ಶ್ರೀನಿವಾಸ ಕುಲಕರ್ಣಿ

# ಬೈಗು ಮೊಗ್ಗು



ಕೊಲಾಜ್: ರಾವ್‌ಬೈಲ್



ಅಂದು ನದಿ ತೀರದಿಂದ ಸಂಜೆ ವಾಯುವಿಹಾರ ಮುಗಿಸಿಕೊಂಡು ಕೃಷ್ಣ ಮನೆಗೆ ಮರಳಿದಾಗ ಮೈ-ಮನ ಹೂವಿನಷ್ಟು ಹಗುರವಾಗಿತ್ತು. ಅವರ್ಣನೀಯ ಆನಂದ ಆವರಿಸಿದ ಅನುಭವ. ಇಪ್ಪತ್ತು ವರುಷಗಳ ಅವನ ಒಂಟಿ ಬದುಕಿನಲ್ಲಿ ಏಕಾಏಕಿ ವಸಂತಾಗಮನವಾಗಿ, ಹಸಿರು ಚಿಗುರೊಡೆದು, ಮೊಗ್ಗುಗಳರಳಿ, ಮಂದಾನಿಲದ ನರುಗಂಪು ಹಿತವಾಗಿ ತೀಡಿ ಮುದ ನೀಡತೊಡಗಿತ್ತು.

ಕೃಷ್ಣ ಬಾಗಿಲು ತೆರೆದು ಹಾಲಿನೊಳಗೆ ಬಂದು ಕಿಟಕಿ ತೆರೆದು, ಅಲ್ಲಿಯೇ ಇದ್ದ ಖುರ್ಚಿಯ ಮೇಲೆ ಕುಳಿತುಕೊಂಡ. ಮುಚ್ಚಿಕೊಂಡ ಕಿಟಕಿಯ ಗಾಜುಗಳಿಗೆ ಟಪಟಪನೆ ಮಳೆಯ ಹನಿಗಳು ಮೆಲುವಾಗಿ ತಾಗಿ ಕೆಳಗುರುಳತೊಡಗಿದವು. ಅವನು ಸರ್‍ರನೆ ಎದ್ದು ಕಿಟಕಿ ಬಾಗಿಲು ತೆರೆದು ಹೊರಗೆ ಇಣಿಕಿ ನೋಡಿ, 'ಅರೆ, ಇದೇನು ಮಳೆ ಬರಲಿಕ್ಕೆ ಹತ್ತಿತು. ಕಲ್ಪನಾ ಮನೀ ಮುಟ್ಟಿದಳೋ ಇಲ್ಲೊ?' ಎಂದು ತನ್ನೊಳಗೆ ಗುನಗುಟ್ಟಿ ಚಡಪಡಿಸುತ್ತ ಮತ್ತೆ ಖುರ್ಚಿಯ ಮೇಲೆ ಕುಳಿತುಕೊಂಡ. ಎದುರುಗಡೆ ಶೋಕೇಸಿನಲ್ಲಿ ಗಂಧದ ಕಟ್ಟಿಗೆಯ ಫ್ರೇಮಿನಲ್ಲಿದ್ದ ಹೆಂಡತಿ ಸುನೀತಾಳ ಸುಂದರ ಭಾವಚಿತ್ರ ತನ್ನ ಕಡೆಗೇ ನೋಡಿದಂತಾಯಿತು. ಮೆಲ್ಲನೆದ್ದು ಅತ್ತ ನಡೆದ.

'ಇದೇನು, ಕಲ್ಪನಾಳ ಬಗ್ಗೆ ಇಷ್ಟು ಚಡಪಡಿಸುತ್ತೀರಿ... ಯಾರು ಈ ಕಲ್ಪನಾ' ಎಂದು ಸುನೀತಾ ಮುಗುಳ್ನಗೆ ಬೀರಿ ನಕ್ಕಂತಾಯಿತು. ಅವನೂ ನಕ್ಕ. ಸುನೀತಾಳ ಭಾವಚಿತ್ರ ಕೈಯಲ್ಲಿ ತೆಗೆದುಕೊಂಡು, ''ಹೌದು ಸುನೀತಾ; ನನಗೂ ಅರ್ಥ ಆಗ್ತಾ ಇಲ್ಲ. ಈ ಕಲ್ಪನಾಳ ಬಗ್ಗೆ ಯಾಕೆ ನನಗೆ ಇಷ್ಟು ಚಡಪಡಿಕೆ ಆಗಲಿಕ್ಕೆ ಹತ್ತೇದ!... ಇವತ್ತ ನಾ ಆ ಹುಡುಗಿನ್ನ ನದಿ ತೀರದಾಗ ಕಂಡಿದ್ದು, ಮಾತಾಡಿದ್ದು... ಹಾಂ! ಇಲ್ಲೆ ಕೂಡು, ನಾನು ನಡೆದದ್ದನ್ನೆಲ್ಲ ಹೇಳ್ತೀನಿ''... ಎಂದು ಕಿಟಕಿಯ ಬಳಿ ಇದ್ದ ಖುರ್ಚಿಯ ಮೇಲೆ ಫೋಟೋ ಇರಿಸಿ ಆಚೆ ಇಣಿಕಿ ನೋಡಿದ.

ಮೋಡದಿಂದ ಜಿನುಗುವ ಮಳೆ ನೆಲದೆರೆಗೆ ತಂಪನೀಯಲು ಹಂಬಲಿಸಿ ಉತ್ಸಾಹವನ್ನು ನೂರ್ಮಡಿಸಿಕೊಂಡು ಸುರಿಯತೊಡಗಿತ್ತು... ಒಂದು ತಾಸಿನ ಹಿಂದೆ ಏನೂ ಸೂಚನೆಯನ್ನೀಯದೆ ಬಂದ ಆ ಮಳೆಯ ಹಿಂದಿನ ಘಟನೆ... ಆ ನೆನಪು...

ಎಂದಿನಂತೆ ಅಂದೂ ಕೃಷ್ಣ ಸಂಜೆಯ ವಿಹಾರಕ್ಕೆ ನದಿಯ ತೀರಕ್ಕೆ ಬಂದು, ಮರಳ ರಾಶಿಯಲ್ಲಿ ಮೈಚಲ್ಲಿ, ತೂರಿಬರುವ ತೆರೆಗಳನ್ನು, ಆಗಸದಲ್ಲಿ ಮೂಡಿದ ಬಣ್ಣಬಣ್ಣದ ಚಿತ್ತಾರಗಳನ್ನು ನೋಡುತ್ತ, ಪಕ್ಷಿ ಸಂಕುಲದ ಮಧುರ ಗಾನವನ್ನು ಆಲಿಸುತ್ತ ಕುಳಿತಿದ್ದ. ಯಾವುದೊ ಮಗು ಜೋರಾಗಿ ಓಡಿಬಂದು, ಹಿಂದಿನಿಂದ ಹಾದು ಕೊರಳಿಗೆ ನೇತುಬಿದ್ದಂತಾಯಿತು. 'ಯಾರು ನೀನು ಮಗು?...' ಎಂದು ಕೃಷ್ಣ ಆ ಮಗುವನ್ನು ಮುಖದತ್ತ ಕೈಹಾಕಿ ಎಳೆದುಕೊಂಡು ಕೇಳು ವಷ್ಟರಲ್ಲಿ, ''ಪಾಪೂ, ನೀನು ಭಾಳಾ ತುಂಟ ಆಗೀದಿ... ಓಡಬ್ಯಾಡಾ ಅಂದ್ರ, ಕೇಳ್ತೀಯಾ'' ಎನ್ನುತ್ತ ಕಿಲಕಿಲನೆ ನಗುತ್ತ ಓಡಿ ಬಂದ ಕಲ್ಪನಾ, ಕೃಷ್ಣನ ಪಕ್ಕದಲ್ಲಿ ಜಿಗಿದು ಕುಳಿತು ಪಾಪುವನ್ನ ಎಳೆದುಕೊಂಡಳು. ಕೃಷ್ಣ ಅವಳತ್ತ ನೋಡಿದ. ಆದರೆ ಮೂಗಿನ ಮೇಲಿದ್ದ ಕನ್ನಡಕ ಪಾಪುವಿನ ಧಕ್ಕೆಗೆ ಜಾರಿಬಿದ್ದಿತ್ತು. ಹುಡುಕಾಡತೊಡಗಿದ.

''ಏನು ಹುಡುಕಲಿಕ್ಕೆ ಹತ್ತೀರಿ ಮಾಮಾ...'', ಕಲ್ಪನಾಳ ಮಧುರವಾದ ದನಿ ಮೊದಲ ಬಾರಿ ಅವನ ಮನವನ್ನಾವರಿಸಿತು. ಹಿತವೆನ್ನಿಸಿತು. 'ಮಾಮಾ...' ಎಂದು ಕರೆದ ಈ ಹುಡುಗಿ ಯಾರು ಎಂದು ನೋಡಬೇಕೆಂದು ಹಾತೊರೆದ. ಆದರೆ ಅವನ ಕನ್ನಡಕ! 'ನನ್ನ ಚಾಳೀಸು' ಎನ್ನುತ್ತ ಹಿಂತಿರುಗಿ ಮರಳಲ್ಲಿ ಹುಡುಕತೊಡಗಿದ. ''ನಿಮಗ ಚಾಳೀಸು ಇಲ್ಲದ ಕಾಣಸೋದ ಇಲ್ಲೇನು ಮಾಮಾ'' ಎಂದು ಜೋರಾಗಿ ನಗುತ್ತ, ಅಲ್ಲಿಯೇ ಬಿದ್ದ ಕನ್ನಡಕವನ್ನು ಎತ್ತಿ, ಅವನ ಕೈಗೆ ಕೊಡದೆ ನೇರವಾಗಿ ತಾನೇ ಅವನ ಮೂಗಿನ ಮೇಲೆ ಕೂರಿಸಿದಳು. ಕೃಷ್ಣ ಕಣ್ಣು ಪಿಳಕಿಸಿ ಅವಳನ್ನು ನೋಡಿದ. ಅವಳ ಮುಖ ವೃತ್ತವನ್ನೆಳೆದಂತೆ ದುಂಡಗಾಗಿ ಸುಂದರವಾಗಿತ್ತು. ಅದರಲ್ಲಿ ಅರಳಿದ್ದ ದೊಡ್ಡ ದೊಡ್ಡ ಕಣ್ಣುಗಳು ಮುಗ್ಧತೆಯನ್ನು ಸೂಸುತ್ತಿದ್ದವು. ಗೋಧಿ ಬಣ್ಣ, ಮೈಕೈ ವಯಸ್ಸಿಗೆ ಮೀರಿ ತುಂಬಿಕೊಂಡಿದ್ದವು. ಬಹುಶಃ ಅವಳಿಗೆ ಹದಿನೆಂಟು ವರುಷ ವಯಸ್ಸಾಗಿರಬೇಕೆಂದು ಊಹಿಸಿದ. ಆ ಪಾಪುವಿಗೆ ಮೂರು-ನಾಲ್ಕು ವರುಷವಿರಬೇಕು.

''ಈಗ ಕಾಣಸ್ತೀನಾ ಮಾಮಾ...'' ಎಂದು ಕಲ್ಪನಾ ಕೇಳುತ್ತಿದ್ದಂತೆ, ''ನಾನೂ ಕಾಣಸ್ತೀನಾ ಅಂಕಲ್'' ಎಂದು ಪುಟ್ಟ ಕೈ ತಟ್ಟುತ್ತ ಪಾಪು ಕೇಳಿದ. ಕಲ್ಪನಾ ನಗಹತ್ತಿದಳು, ಬೆಳದಿಂಗಳು ಸುರಿವಂತೆ. ಕೃಷ್ಣನೂ ಅವರ ನಗೆಗೆ ತನ್ನ ನಗೆ ಸೇರಿಸಿದ. ನದಿಯೂ ನಕ್ಕಿತು.

''ನಿನ್ನ ಹೆಸರೇನೆಂದೆ'', ಕೃಷ್ಣ ನಗು ನಿಲ್ಲಿಸಿ ಕೇಳಿದ.

''ನನ್ನ ಹೆಸರು ಕಲ್ಪನಾ... ಇವನ ಹೆಸರು...'' ಹೇಳಲು ಹೊರಟವಳು ನಿಲ್ಲಿಸಿ ''ಪಾಪು ನೀನೆ ಹೇಳು'' ಎಂದು ಅಕ್ಕರೆಯಿಂದ ಅವನ ಗದ್ದ ಮೇಲೆತ್ತಿ ಕೇಳಿದಳು.

''ಕಿರಣ'' ಎಂದು ಪಾಪು ಕಣ್ಣರಳಿಸಿ ಹೇಳಿದ.

''ಛಂದ ಅದ ನಿನ್ನ ಹೆಸರು...'' ಎಂದು ಅವನು ಪಾಪುವಿನ ಗಲ್ಲವನ್ನು ಮೆಲುವಾಗಿ ತಟ್ಟಿ, ಕಲ್ಪನಾಳತ್ತ ತಿರುಗಿ ''ನೋಡು ಕಲ್ಪನಾ, ಚಾಳೀಸು ಇಲ್ಲದ ಕಾಣಸೋದಿಲ್ಲೇನು? ಎಂದು ಕೇಳಿದೆಲ್ಲ, ವಯಸ್ಸಾದ ಮೇಲೆ ಹಿಂಗs... ತಿಳೀತ'' ಎಂದು ಪಾಠ ಹೇಳುವಂತೆ ನುಡಿದು, ''ನನಗೀಗ ಐವತ್ತೆಂಟು ವರುಷ. ಕೆಲಸದಿಂದ ನಿವೃತ್ತಿ ಆಗೇದ'' ಎಂದ. ''ಹೋಗ್ರಿ ಮಾಮಾ... ನೀವೇನೂ ಅಷ್ಟು ವಯಸ್ಸಾದಹಂಗ ಕಾಣಸೋದೇ ಇಲ್ಲ... ಕೂದಲ ಸಹಿತ ಬೆಳ್ಳಗ ಆಗಿಲ್ಲ. ಮುಂದಷ್ಟ ಬಿಳೇಗೆರಿ ಎಳದ ಹಂಗ ಕಾಣಸ್ತಾವ ಒಂದೆರಡು ಬಿಳೀ ಕೂದಲಾ...''

ಅವಳ ಮಾತಿಗೆ ಕೃಷ್ಣ ತುಟಿಯಲ್ಲೆ ನಕ್ಕ. ಅವನದು ಆಕರ್ಷಕ ರೂಪು. ತೆಳ್ಳಗೆ ಬೆಳ್ಳಗೆ ಎತ್ತರದ ನಿಲುವು. ಉದ್ದನೆಯ ಮೂಗು. ಮೇಲಕ್ಕೆ ಬಾಚಿಕೊಂಡ ಏರಿಳಿತದ ಕೂದಲು ಸಮೂಹದಲ್ಲಿ ಕೆಲವು ನರೆಗೂದಲು ಮಾತ್ರ ಇಣಕಿ ನೋಡುತ್ತಿದ್ದವು.

..."ಅಂದ್ರ ಕಲ್ಪನಾ, ಕೂದಲು ಬೆಳ್ಳಗ ಆಗದಿದ್ದರ ವಯಸ್ಸು ಆಗೇ ಇಲ್ಲ ಅಂತೀ ಏನು? ಕೆಲವರಿಗೆ ವಯಸ್ಸು ಆಗಿರೋದೆ ಇಲ್ಲ ಕೂದಲು ಬೆಳ್ಳಗ ಆಗಿರ್ತಾವ'' ಎಂದು ಅವನು ಕೆದಕಿದ.

"ಅದೂ ಖರೇವದ ಮಾಮಾ... ನಮ್ಮ ಮನಿ ಹಿಂದಿನ ಓಣಿಯೊಳಗ'' ಎನ್ನುತ್ತ ಏನೋ ಗೂಢ ವಿಷಯವನ್ನು ವಿವರಿಸುವಂತೆ ಧ್ವನಿತಗ್ಗಿಸಿ, ಅವನ ಹತ್ತಿರ ಇನ್ನಷ್ಟು ಸರಿದು "ಒಬ್ಬರು ಇದ್ದಾರ, ಇನ್ನೂ ಸಣ್ಣವರು-ಲಗ್ನ ಆಗಿಲ್ಲ-ತಲಿ ಬೆಳ್ಳಗ ಹಂಜಿ ಬುಚ್ಚಿ ಆಗೇದ'' ಎಂದು ನಕ್ಕು ನುಡಿಯುತ್ತಿದ್ದವಳು ಮಾತನ್ನು ಅರ್ಧಕ್ಕೆ ನಿಲ್ಲಿಸಿ ಕೃಷ್ಣನನ್ನೆ ದಿಟ್ಟಿಸಿ ನೋಡತೊಡಗಿದಳು.

"ಏನಾತು ಕಲ್ಪನಾ, ಯಾಕ ನನ್ನ ಹಿಂಗ ಒಮ್ಮೆಲೆ ನೋಡಲಿಕ್ಕೆ ಹತ್ತಿದಿ!...'' ಆಶ್ಚರ್ಯದಿಂದ ಕೃಷ್ಣ ಕೇಳಿದ. "ಮಾಮಾ ಮುಖಾ ಸ್ವಲ್ಪ ಕ್ರಾಸ್‌ಯಾಂಗಲ್ ಮ್ಯಾಲೆ ಮಾಡ್ರಿ...'' ಕಲ್ಪನಾಳ ಆ ಮಾತಿಗೆ ತಬ್ಬಿಬ್ಬಾದ ಕೃಷ್ಣ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಮುಖ ಹೊರಳಿಸತೊಡಗಿದ.

"ಹಂಗಲ್ಲರೀ... ನಾ... ಹೇಳಿದ್ದು... ಹಾಂ!- ಇದು ಕರೆಕ್ಟ್ ಪೋಜ್'' ಎನ್ನುತ್ತ ಕಲ್ಪನಾ ತಾನೇ ಅವನ ಗಲ್ಲ ಆಚೆ-ಈಚೆ ಹೊರಳಿಸಿ ತನಗೆ ಸರಿ ಕಂಡ ರೀತಿಯಲ್ಲಿ ತಂದು ನಿಲ್ಲಿಸಿಕೊಳ್ಳುತ್ತಿದ್ದಾಗ "ಇದೇನು ಕಲ್ಪನಾ ನನ್ನ ಗೋಣು ನುಯಸಲಿಕ್ಕೆ ಹತ್ತ್ಯ'' ಎಂದು ಕೃಷ್ಣ ಚಡಪಡಿಸಿದ.

"ಹಾಂ! ನನ್ನ ಊಹೆ ಸರಿ! ಈಗ ಸರಿಯಾಗಿ ಕೂತುಗೊಂಡು ನನ್ನ ಪ್ರಶ್ನೆಗೆ ಉತ್ತರಾ ಹೇಳ್ರಿ....''

ಕೃಷ್ಣನಿಗೆ ಅದೇನು ಅವಳು ಕೇಳ ಬಯಸುತ್ತಾಳೊ ಎಂಬ ಕುತೂಹಲವಾಯಿತು. 'ಏನು' ಎಂದು ಪ್ರಶ್ನಿಸುವಂತೆ ಅವಳತ್ತ ನೋಡಿದ. "ನೀವು ಕೃಷ್ಣಕುಮಾರ ಹೌದಲ್ಲೊ!... ಕಥಿ-ಕಾದಂಬರಿ ಬರದೀರಲ್ಲ...'' ಅನಿರೀಕ್ಷಿತವಾಗಿ ಬಂದ ಅವಳ ಪ್ರಶ್ನೆಗೆ ಕೃಷ್ಣ ಚಕಿತನಾಗಿ ಸುಮ್ಮನೆ ಕುಳಿತುಬಿಟ್ಟ.

"ಹೇಳ್ರಿ, ಮಾಮಾ... ನನ್ನ ಊಹೆ ಖರೇ ಹೌದಲ್ಲೋ...''

"ಹೌದು ಹಿಂದಕ ಬರೀತಿದ್ದೆ... ನಿನಗ ಹ್ಯಾಂಗ ಗೊತ್ತ ಆತು...''

"ಕೆಲವು ಕಾದಂಬರಿ ಮ್ಯಾಲೆ ನಿಮ್ಮ ಫೋಟೋ... ಆಗಲೇ ನೋಡಿದ್ನೆಲ್ಲ ಆ ಯ್ಯಾಂಗಲ್ ಮಾಲೆ ಅದ... ನಿಮ್ಮ ಕಥಿ... ಕಾದಂಬರಿ ನನ್ಗ ಭಾಳಾ ಸೇರ್ತಾವ... ಲೈಬ್ರರಿಯೊಳಗಿಂದಾ ಎಲ್ಲ ತಂದು ಓದಿಬಿಟ್ಟಿನಿ... ಆಮ್ಯಾಲೆ ಯಾಕ ಬರದಿಲ್ಲ ಮಾಮಾ...''

ಅವಳ ಮಾತಿಗೆ, ಸೂಕ್ಷ್ಮದೃಷ್ಟಿಗೆ ಮಂತ್ರಮುಗ್ಧನಾದ ಕೃಷ್ಣ, ಅವಳ ಕೊನೆಯ ಪ್ರಶ್ನೆಗೆ ಆಗಲೇ ಉತ್ತರ ಹೇಳಲು ಬಯಸಲಿಲ್ಲ. ಮಿಂಚಿನಂತೆ ಝಳಪಿಸಿತು ಮತ್ತೊಂದು ಪ್ರಶ್ನೆ. "ನಿಮ್ಮದು ಲವ್ ಮ್ಯಾರೇಜ್ ಹೌದಲ್ಲೋ ಮಾಮಾ?'' "ಹೌದು ಎನ್ನಲೋ, ಇಲ್ಲ ಎನ್ನಲೋ'' ಎಂದು ಅವನು ಯೋಚಿಸುವ ಮೊದಲೇ ಅವಳು ಉತ್ತರಿಸಿಬಿಟ್ಟಳು. "ಲವ್ ಮ್ಯಾರೇಜೇ ಇರ ಬೇಕು ಯಾಕಂದ್ರ ನಿಮ್ಮ ಕಥಿ, ಕಾದಂಬರಿ ಗಳಲ್ಲಿಯ ಪ್ರಣಯ ಸನ್ನಿವೇಶ, ವರ್ಣನೆ ನೋಡಿದ್ರ ಅದು ನಿಮ್ಮದ ಅನುಭವ ಇರಬೇಕು ಅನಸ್ತದ... ಮಾಮಾ ಮೊದಲು ನೀವು ಪ್ರೀತ್ಸಿದ್ರೋ... ಮಾಮಿ ಪ್ರೀತ್ಸಿದ್ಲೋ?'' ಎನ್ನುತ್ತ ಮತ್ತೆ ಜೋರಾಗಿ ನಗಹತ್ತಿದಳು...

ಕಲ್ಪನಾಳ ಮಾತನ್ನು ನೆನಪಿಸಿಕೊಂಡ ಕೃಷ್ಣ ಮತ್ತೆ ಖುರ್ಚಿಯ ಮೇಲಿದ್ದ ಸುನೀತಾಳ ಭಾವಚಿತ್ರದತ್ತ ಸಾಗಿ, ಅದನ್ನು ಎತ್ತಿಕೊಂಡು ಸೋಫಾದ ಮೇಲೊರಗಿ, ಸುನೀತಾಳ ಕಣ್ಣಲ್ಲಿ ಕಣ್ಣಿರಿಸಿ, "ನೀನ ಹೇಳು ಸುನೀತಾ, ನಾನು ಮೊದಲು ನಿನ್ನ ಪ್ರೀತ್ಸಿದ್ನೊ ಅಥವಾ ನೀನು ನನ್ನ ಮೊದಲು ಪ್ರೀತ್ಸಿದಿಯೊ?'' ಎಂದು ಮೆಲುವಾಗಿ ಉಸುರಿದ.

ಗಂಧದ ಫ್ರೇಮಿನ ಪರಿಮಳದೊಂದಿಗೆ ಸುನೀತಾ ಮಂದಹಾಸ ಬೀರುತ್ತ ಜೀವಂತವಾಗಿ ಹೊರಬಂದಂತಾಯಿತು. ಮನೆ ತುಂಬ ಬೆಳಕು ತುಂಬಿದಂತಾಯಿತು. ಘಲ್ ಘಲ್... ಗೆಜ್ಜೆಯ

ನಾದದೊಂದಿಗೆ, ಸುಂದರವಾಗಿ ಅಲಂಕರಿಸಿಕೊಂಡ ಸುನೀತಾ ಅವನ ಬಳಿ ಸಾರಿ ಬಂದು, ಪಕ್ಕದಲ್ಲಿ ಕುಳಿತು, ಮುಂಗುರುಳ ನೇವರಿಸುತ್ತ, ''ಮೊದಲು ಪ್ರೀತಿಸಿದವಳು ನಾನು, ನಿನ್ನನ್ನು ಪ್ರೀತಿಸ್ತೇನೆ ಸುನೀತಾ ಎಂದು ಮೊದಲು ಹೇಳಿದವರು ನೀವು'' ಎಂದಂತಾಯಿತು.

ಕೃಷ್ಣ ಧಿಗ್ಗನೆ ಎದ್ದುಕುಳಿತ. ಎಲ್ಲವೂ ಮಾಯವಾದವು. ಸುನೀತಾ ಗಂಧದ ಫ್ರೇಮಿನಲ್ಲಿ ಹಾಗೇ ನಿಶ್ಚಲಳಾಗಿ ಕುಳಿತಿದ್ದಳು. ಶೋಕೇಸಿನಲ್ಲಿ ಫೋಟೋ ಇರಿಸಿ ಕಿಟಕಿಯ ಬಳಿ ಬಂದ. ಮಳೆಯ ಆರ್ಭಟ ಕಡಿಮೆಯಾಗಿದ್ದರೂ ದಿನ್ನೆಯಿಂದ ಜಾರಿ ಆಳಕ್ಕೆ ಸರಿ ಯುತ್ತಿದ್ದ ರಸ್ತೆಯ ಮೇಲಿನ ನೀರು ಸದ್ದು ಮಾಡುತ್ತಲೇ ಇತ್ತು... ಕೃಷ್ಣನ ಮುಂದೆ ಮತ್ತೆ ಕಲ್ಪನಾ ಸುಳಿದಳು...

''ಎಷ್ಟು ಯೋಚನೀ ಮಾಡ್ತೀರಿ ಮಾಮಾ, ಅದ್ನ ಆಮ್ಯಾಲೆ ಹೇಳ್ರಿ... ಅಂದಹಂಗ ನಾಳೀನು ಇಲ್ಲೆ ಬರ್ತೀರಲ್ಲ ನಂಗ ಹೊತ್ತು ಆತು, ಹೋಗ್ತೀನಿ. ಬಾ ಪಾಪು ಹೋಗೋಣ'' ಎಂದು ಅವನನ್ನು ಕರೆದುಕೊಂಡು ಮರಳಲ್ಲಿ ಮಕ್ಕಳಂ ಜಗಿಯುತ್ತಾ ಹೊರಟುಹೋದಳು. ಕೃಷ್ಣ ಕಿಟ ಬಾಗಿಲು ಹಾಕಿದ. ಆದರೆ ಮನದ ಬಾಗಿಲ ಕಲ್ಪನಾ ನಿಂತೇ ಇದ್ದಳು.

ಸಂಜೆಯಾಗುತ್ತಿದ್ದಂತೆ ಕೃಷ್ಣ ನದಿ ತೀರದತ್ತ ಧಾವಿಸಿದ. ತಾನು ನಿತ್ಯ ಕುಳಿತುಕೊಳ್ಳುವ ಸ್ಥಳದಲ್ಲಿ ವಿರಮಿಸಿ ಕಲ್ಪನಾಳ ಬರವನ್ನೇ ನಿರೀಕ್ಷಿಸ ತೊಡಗಿದ. ಸುತ್ತಲೂ ಕಣ್ಣಾಡಿಸಿದ. ಜನಸಂದಣಿ ಕ್ರಮೇಣ ಹೆಚ್ಚತೊಡಗಿತ್ತು. 'ಯಾಕೋ ಅವರು ಬರಲಿಲ್ಲ ತಡವಾಯಿತು' ಎಂದುಕೊಳ್ಳುತ್ತಿದ್ದಂತೆ 'ಮಾಮಾ' ಎನ್ನುತ್ತ ಅವಳು ಪಾಪೂನ ಕೈ ಹಿಡಿದುಕೊಂಡು ಓಡುತ್ತ ಬರುತ್ತಿದ್ದುದು ಕಾಣಿಸಿತು. ಕೃಷ್ಣ ಎದ್ದು ಅವಳತ್ತ ನಡೆದ. ಪಾಪು ಕಲ್ಪನಾಳ ಕೈ ಬಿಡಿಸಿಕೊಂಡು, ''ಅಂಕಲ್'' ಎನ್ನುತ್ತ ಓಡಿದ. ಕೃಷ್ಣ ಅವನನ್ನು ತಬ್ಬಿ ಎತ್ತಿಕೊಂಡು, ''ಯಾಕೆ ಕಲ್ಪನಾ ತಡಾ ಮಾಡ್ದಿ...'' ಎಂದು ಕೇಳಿದ.



''ಇದೇನು ಮಾಮಾ ಹಿಂಗ ಕೇಳ್ತೀರಿ. ನಾ ಬರೋ ಹೊತ್ತಿಗೇ ಬಂದೀನಿ. ನಿಮ್ಮ ವಾಚ್ ಸರಿ ಅದನೋ ಇಲ್ಲೋ ನೋಡ್ರಿ...'', ಕಲ್ಪನಾ ಕೀಟಲೆ ಮಾಡಿದಾಗ ಕೃಷ್ಣ ತನ್ನ ವಾಚ್ ನೋಡಿಕೊಂಡ. ವಾಚಿಗಿಂತ ಅವನ ಮನದ ವೇಗ ಹೆಚ್ಚಿತ್ತು ಅಷ್ಟೆ! ತೆರೆಗಳ ಸಮೀಪದಲ್ಲಿದ್ದ ಬಂಡೆಯ ಮೇಲೆ ಮೂವರೂ ಕುಳಿತು ಕೊಂಡರು. ಕೃಷ್ಣ ಪುಟ್ಟ ಪುಟ್ಟ ಬೆಣಚು ಕಲ್ಲುಗಳನ್ನು, ಸಿಂಪುಗಳನ್ನು ಆರಿಸಿ ತಂದು ಪಾಪು ವಿನ ಕೈಯಲ್ಲಿ ಹಾಕಿದ. ಪಾಪು ಅವುಗಳನ್ನು ಎತ್ತಿ ಕೊಂಡು ಆಡತೊಡಗಿದ. ''ಕಲ್ಪನಾ, ಪಾಪು ನಿನ್ನ ತಮ್ಮ ಏನು?'' ತೆರೆಗಳಲ್ಲಿ ಹರಳುಗಳನ್ನು ಎಸೆಯುತ್ತ ಅವನು ಕೇಳಿದಾಗ, ಪಾಪು ತೂರು ತ್ತಿದ್ದ ಬೆಣಚುಕಲ್ಲುಗಳನ್ನು ಹಿಡಿಯುವುದನ್ನು ನಿಲ್ಲಿಸಿ ಕಲ್ಪನಾ ತನ್ನ ಬಗ್ಗೆ ವಿವರಿಸತೊಡಗಿದಳು. ''ಪಾಪು ನನ್ನ ತಮ್ಮ ಅಲ್ಲಾ ಮಾಮಾ, 'ಸಂಜೀವಿನಿ ನರ್ಸಿಂಗ್ ಹೋಂ' ಅದಲ್ಲ ಅದರ ಮಾಲಕರು, ಡಾ. ಸುರೇಶ ಅಂತ, ಅವರ ಮಗಾ. ಅವರ ಹೆಂಡತೀನೂ ಡಾಕ್ಟರ ಇದ್ದಾರ. ಪಾಪೂನ್ನ ನೋಡಕೊಳ್ಳಲಿಕ್ಕೆ ಅವರ ಮನ್ಯಾಗ ಯಾರೂ ಇಲ್ಲ. ನನ್ಗ ಅವ್ನ ನೋಡಕೊಳ್ಳೋ ಕೆಲಸಾ ಕೊಟ್ಟಾರ. ಇಡೀ ದಿವಸ ನಾನು ಪಾಪೂನ ಜೊತೀಗೆ ಇರ್ತೀನಿ...''

''ಅಂದ್ರ ನಿನ್ನ ಓದು...''

''ಮಾಮಾ ನನಗೆಲ್ಲಿ ಅದ ಆ ಭಾಗ್ಯ... ಪಿ.ಯು.ಸಿ. ತನಕ ಓದಿಸಿ ಬಿಡಿಸಿಬಿಟ್ಟರು. ನಮ್ಮದು ದೊಡ್ಡ ಸಂಸಾರ. ನಮ್ಮ ತಾಯಿ ಈ ಸಂಜೀವಿನಿ ನರ್ಸಿಂಗ್ ಹೋಂನಾಗ ಆಯಾ ಇದ್ದಾಳ. ಆಕಿ ಘಳಕಿಯಿಂದಾನ ಮನಿ ನಡಿ ಯೋದು. ನಮ್ಮ ಅಪ್ಪ ಏನೋ ಬಿಜಿನೆಸ್ ಅಂತ ಎಲ್ಲಾ ಹಾಳುಮಾಡಿ ಕುಡೀಲಿಕ್ಕೆ ಅಂಟಕೊಂಡು ಬಿಟ್ಟಾನ. ನನ್ಗ ಒಬ್ಬಾಕಿ ಅಕ್ಕಾ, ಒಬ್ಬ ತಂಗಿ, ಒಬ್ಬ ತಮ್ಮಾ ಇದ್ದಾರ. ನಮ್ಮ ತಾಯೀನ ಡಾಕ್ಟರಿಗೆ ಹೇಳಿ ಈ ಕೆಲಸಾ ಕೊಡಿಸ್ಯಾಳ. ತಿಂಗಳು 200 ರೂಪಾಯಿ ಕೊಡ್ತಾರ ಅಲ್ಪಸ್ವಲ್ಪ ಸಹಾಯ ಆಗ್ತದ... ಅಷ್ಟ. ನಮ್ಮ ಮನಿ ಆ ದಿನ್ನಿ ಇಳದ ಮೂರು ಓಣಿ ದಾಟಿದ ಮ್ಯಾಲೆ ಬರ್ತದ. ನರ್ಸಿಂಗ್ ಹೋಂ ಹತ್ರನ...''

ಕೃಷ್ಣನ ಮನಸ್ಸು ಖಿನ್ನವಾಯಿತು. ಈ ಅರಳು ಮೊಗ್ಗ ಬಡತನದ ಬೇಗೆಯಲ್ಲಿ ಬೇಯುತ್ತಿದೆ ಯಲ್ಲ ಎಂದು ಹಳಹಳಿಸಿದ. ತನ್ನ ಕಷ್ಟದ ಕಥೆ ಯನ್ನು ಹೇಳಿ ಯಾಕೆ ಕೃಷ್ಣನಿಗೆ ಬೇಸರ ತರಿಸಬೇಕೆನ್ನಿಸಿ ಕಲ್ಪನಾ ಮಾತು ಬದಲಿಸಿದಳು. ''ಮಾಮಾ ನನಗೂ ಕಥಿ ಬರೀಬೇಕು ಅನಸ್ತದ. ಏನೇನೋ ವಿಚಾರ ಬರ್ತಾವ. ಆದ್ರ ಬರೀಲಿಕ್ಕೆ ಬರವಲ್ಲು. ನಂಗ ಹ್ಯಾಂಗ ಬರೀಬೇಕು ಕಲಸ್ತೀರಾ...''

ಕೃಷ್ಣ ಅವಳ ಮಾತಿಗೆ ನಸುನಕ್ಕು, ''ನಿನಗ ಮನಸ ಇದ್ದರ ಸಾಕು. ಬರ್ದ ಬರೀತಿ. ಈಗ ಏನಾದರೂ ಬರದೀ ಏನು?'' ಎಂದು ಕೇಳಿದಾಗ, ''ಏನೇನೋ ಹುಚ್ಚುಚ್ಚಾರ ಬರದು ಹರದ ಹಾಕೀನಿ'' ಎಂದು ನಗಹತ್ತಿದಳು. ಅಷ್ಟರಲ್ಲಿ ಪಾಪು, ''ಅಂಕಲ್, ಆ ಹುಡುಗರ ಹಂಗ ನಾವು ನೀರಾಗ ಹೋಗೋಣ?'' ಎಂದು ಮುದ್ದು ಮುದ್ದಾಗಿ ಕೇಳಿದ. 'ಹಾಂ' ಎನ್ನುತ್ತ ಕೃಷ್ಣ ಎದ್ದ. ಪಾಪುವಿನ ಒಂದು ಕೈಯನ್ನು ಕಲ್ಪನಾ, ಇನ್ನೊಂದು ಕೈಯನ್ನು ಕೃಷ್ಣ ಹಿಡಿದುಕೊಂಡು ಅಲೆಗಳು ತೂರಿಬರುವತ್ತ ಓಡಿದರು. ಸೂರ್ಯ ನದಿಯ ಒಡಲ ಸೇರುವವರೆಗೆ ತೆರೆಗಳೊಂದಿಗೆ ಚೆಲ್ಲಾಟವಾಡಿದರು...

ಒಂದೊಂದು ದಿನವನ್ನೂ ಕಳೆಯುವುದು ಕಠಿಣವೆನ್ನಿಸುತ್ತಿದ್ದ ಕೃಷ್ಣಗೆ, ಕಲ್ಪನಾ ಅವನ ಜೀವನದಲ್ಲಿ ಬಂದಾಗಿನಿಂದ ದಿನಗಳು ಕೈಗೆ ಸಿಕ್ಕದಂತೆ ಉರುಳತೊಡಗಿದವು. ಕಲ್ಪನಾ-ಪಾಪುವಿನ ಜೊತೆಯಲ್ಲಿ ದಿನದಲ್ಲಿ ಒಂದು ಗಂಟೆ ಕಳೆದರೆ ಸಾಕು, ಮೂರು ದಿನ ಸಂಜೆಯುವರೆಗೆ ಲವಲವಿಕೆಯಿಂದ ಸಮಯ ನೂಕುತ್ತಿದ್ದ.

ಅಂದು ಸಂಜೆ ಕಲ್ಪನಾ, ಪಾಪುವನ್ನು ಕರೆದುಕೊಂಡು ನದಿ ತೀರಕ್ಕೆ ಬರಲೇ ಇಲ್ಲ. ಕೃಷ್ಣ ಚಡಪಡಿಸಿದ. ರಾತ್ರಿ ಎಂಟು ಗಂಟೆವರೆಗೂ ಅವಳಿಗಾಗಿ ಕಾದು ಮನೆಗೆ ಮರಳಿದ. ರಾತ್ರಿ ಊಟ ಕೂಡ ರುಚಿಸಲಿಲ್ಲ.

ಮರುದಿನ ಸಂಜೆ ಕಲ್ಪನಾ ಪಾಪುವಿನೊಂದಿಗೆ ಬಂದಳು. ಸಿಡಿಮಿಡಿಗೊಳ್ಳುತ್ತ ಕೃಷ್ಣ ಕುಳಿತಿದ್ದನ್ನು ಕಂಡು ಕಲ್ಪನಾ, ''ಸ್ಸಾರಿ ಮಾಮಾ! ನಿನ್ನೆ ನಮಗ ಬರಲಿಕ್ಕೆ ಆಗಲಿಲ್ಲ. ಪಾಪೂನ ಮನ್ಯಾಗ ಫಂಕ್ಷನ್ ಇತ್ತು. ನಾನೊಬ್ಬಾಕೆಯಾದರೂ ಬರಬೇಕೆಂದೆ. ಡ್ಯಾಕ್ಟರ್ ಬಿಡಲಿಲ್ಲ'' ಎಂದು ಕ್ಷಮಾ ಯಾಚಿಸುವ ಧ್ವನಿಯಲ್ಲಿ ಹೇಳಿದಳು. ಕೃಷ್ಣನಿಗೆ ಸಮಾಧಾನ ವಾಯಿತು. ಪಾಪುವನ್ನು ಕರೆದು ತೊಡೆಯ ಮೇಲೆ ಕೂಡಿಸಿಕೊಂಡು, 'ಯಾವ ಆಟಾ ಆಡೋಣ ಕಲ್ಪನಾ ಇವತ್ತು ಪಾಪುನ ಜೊತೆಗೆ' ಎಂದು ಕೇಳಿದ. ''ಅಬ್ಬಾ! ನಿಮ್ಮ ಸಿಟ್ಟು ಇಳೀತಲ್ಲ ಮಾಮಾ. ಬರ್ರಿ ಹಂಗರ ಹಳ್ಳಾಕೊಳ್ಳಾ... ನೀರು ಆಡೋಣ'' ಎನ್ನುತ್ತ ಪಾಪುನತ್ತ ನೋಡಿದಳು. ಪಾಪೂ 'ಹೂಂ' ಎಂದು ಗೋಣ ಹಾಕಿದ.

ಮೊದಲು ಪಾಪು ತನ್ನ ಎರಡೂ ಪುಟ್ಟ ಮುಂಗೈಗಳನ್ನು ಮರಳಿನ ಮೇಲಿರಿಸಿ ಕುಳಿತನು. ಕಲ್ಪನಾ, ''ಹಳ್ಳಾಕೊಳ್ಳಾ ನೀರು, ನೀರಿನ್ಯಾಗ ಬ್ಯಾಳಿ, ಬ್ಯಾಳಿ ತುಂಬಕೌತ ಹತ್ತೀಕೊಲ್, ಹೊನ್ನಿಕೋಲ್ ತಕ್ಕೊ ನಿನ್ನ ಮುತ್ತಿನ ಕೈ ಶುಂಠ್ಯೋ, ಸಕ್ಕ್ರ್ಯೋ'' ಎಂದು ಕೇಳಿದಳು. ಪಾಪು ಸುಂಟಿ ಅಂದಾಗ ಅದರ ಮುಂಗೈ ಚಿವುಟ ತೊಡಗಿದಳು. ಅವನು ನಗುತ್ತ ಕೂಡಲೇ ಸಕ್ಕರೆ ಎಂದ. ಕಲ್ಪನಾ ಚಿವುಟುವುದನ್ನು ನಿಲ್ಲಿಸಿದಳು. ಪಾಪು ''ಅಂಕಲ್ ಈಗ ನೀವು ನಿಮ್ಮ ಕೈ ಹಿಂಗ ಇಡರಿ'' ಎಂದಾಗ ಕಲ್ಪನಾ, ''ಹೌದು ಮಾಮಾ, ಈಗ ನಿಮ್ಮ ಸರದಿ. ಮುಂಗೈ ಹಿಂಗ ಇಡ್ರಿ'' ಎಂದು ನಗುತ್ತ ನುಡಿದಳು.

ಕೃಷ್ಣ, ಪಾಪುವಿನಂತೆ ತನ್ನ ಮುಂಗೈಗಳನ್ನು ಮರಳ ಮೇಲಿರಿಸಿದ. ಕಲ್ಪನಾ ಆಟ ಪ್ರಾರಂಭಿಸಿದಳು. ''ಹಳ್ಳಾ ಕೊಳ್ಳಾ ನೀರು... ಶುಂಠ್ಯೋ... ಸಕ್ಕ್ರ್ಯೋ'' ಎಂದು ಕೇಳಿದಳು. 'ಶುಂಠಿ' ಎನ್ನುತ್ತಲೇ ಇದ್ದ. ಅವಳ ಮಿದುವಾದ ಬೆರಳುಗಳು ಚಿವುಟುತ್ತಿದ್ದಾಗ ಅದಾವುದೋ ಆನಂದ ಅವನನ್ನ ಏರಿಸತೊಡಗಿತ್ತು. 'ಸಕ್ಕರೆ' ಎನ್ನಲೇ ಇಲ್ಲ. ''ಲಗೂ ಹೇಳ್ರೀ ಮಾಮಾ ಸಕ್ಕರೀ... ಅಂತ'' ಎಂದು ಕಲ್ಪನಾ ಕೇಳಿದಾಗ ಪಾಪು ಜೋರಾಗಿ ನಗುತ್ತ ''ಅಕ್ಕ, ಅವರ ಕೈ ಇನ್ನೂ ಜೋರಾಗಿ ಚೂಟು'' ಎಂದು ಕೈತಟ್ಟಿ ಕೇಕೆ ಹಾಕಿದ. ಕಲ್ಪನಾ ಅವನ ಮುಖದತ್ತ ಹುಸಿನಗೆ ಬೀರಿ, ''ಹೋಗ್ರಿ ಮಾಮಾ ನೀವು ಸಕ್ಕರಿ ಅಂದು ಕೈ ತಕ್ಕೊಳ್ಳೋದೆ ಇಲ್ಲ. ನೀವು ಆಟಕ್ಕ ಬ್ಯಾಡ, ಅಲ್ಲಾ ಪಾಪು?'' ಎಂದಳು. ಕೃಷ್ಣ ಜೋರಾಗಿ ನಕ್ಕು 'ಸಕ್ಕರೆ' ಎಂದ. ಕಲ್ಪನಾ ಚಿವುಟುವುದನ್ನು ನಿಲ್ಲಿಸಿ ಕೈ ತೆಗೆದುಕೊಂಡಳು...

ಸಕ್ಕರೆಯ ಸವಿಯಷ್ಟೆ ಸಿಹಿಯಾದ ದಿನಗಳು ಉರುಳಿದವು. ಅಂದು ಭಾನುವಾರ ಬೆಳಗ್ಗೆ ಕೃಷ್ಣ, ಬೇಗನೆ ಎದ್ದು, ಮನೆಯನ್ನು ಓರಣವಾಗಿರಿಸಿ, ಉಪಹಾರದ ಸಿದ್ಧತೆ ನಡೆಸಿದ್ದ. ಕಾಲ್‌ಬೆಲ್ ಆಯಿತು. ಬಾಗಿಲು ತೆರೆದ. ಅವನ ಆತ್ಮೀಯ ಸ್ನೇಹಿತ ಡಾಕ್ಟರ್ ಸುನೀಲ ಬಂದಿದ್ದ. ಕೃಷ್ಣ ಸ್ವಾಗತಿಸಿದ. ''ಏನಪ್ಪಾ ಕೃಷ್ಣಾ! ನಿನ್ನ ಭೆಟ್ಟೀನ ಇಲ್ಲ. ಆರಾಮ ಇದ್ದೀಯೊ ಇಲ್ಲೋ. ಬಿ.ಪಿ. ಚೆಕಪ್ ಗಾದ್ರೂ ಕ್ಲಿನಿಕ್‌ಗೆ ಬರ್ತಿದ್ದಿ. ಅದಕೂ ಬಂದಿಲ್ಲ. ಮನೀಗೂ ಬಂದಿಲ್ಲ'' ಎನ್ನುತ್ತ ಸುನೀಲ ಕೃಷ್ಣನ ಹೆಗಲ ಮೇಲೆ ಕೈಯಿರಿಸಿಕೊಂಡು ಒಳಗೆ ಬಂದ.

ಯಾವಾಗಲೂ ಅಲ್ಲಲ್ಲಿ ಅಸ್ತವ್ಯಸ್ತವಾಗಿ ಬಿದ್ದಿರುತ್ತಿದ್ದ ಪುಸ್ತಕಗಳು, ಪತ್ರಿಕೆಗಳು, ಬಟ್ಟೆ-ಬರಿಗಳು ಎಲ್ಲವೂ ಓರಣವಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತಿದ್ದವು. ಒಳಗಿನಿಂದ ಉಪಾಹಾರದ ಘಮ ಘಮ ವಾಸನೆ ಬರಹತ್ತಿತ್ತು. ''ಏನೋ ಕೃಷ್ಣಾ ಇದು, ಇದು, ನಿನ್ನ ಮನಿ ಹೌದೋ ಅಲ್ಲೋ!

ವೈನಿ ತೀರಿಕೊಂಡಾಗಿನಿಂದ ಈ ರೀತಿ ಇರಲೇ ಇಲ್ಲ. ಏನಪ್ಪಾ ಸುದ್ದಿ'' ಎಂದು ಆಶ್ಚರ್ಯದಿಂದ ಸುನೀಲ ಕೇಳಿದ.

ಕೃಷ್ಣ ಎಲ್ಲವನ್ನೂ ಸಾದ್ಯಂತವಾಗಿ ವಿವರಿಸಿದ. ಇದನ್ನೆಲ್ಲ ಆಲಿಸಿದ ಮೇಲೆ ಸುನೀಲ ನಸುನಕ್ಕು ಕೆದಕಿದ, ''ಕೃಷ್ಣಾ ಇದನ್ನೆಲ್ಲಾ ಕೇಳಿದ ಮ್ಯಾಲೆ ಯಾಕೋ ನನಗ ಅನುಮಾನ ಬರ್ತದ. ನೀನು 'ಲವ್ ಅಫೇರ'ನ್ಯಾಗ ಏನಾದ್ರು ಸಿಕ್ಕಬಿದ್ದಿ ಏನು?''

ಕೃಷ್ಣ ಗಂಭೀರವಾಗಿಯೇ ಉತ್ತರಿಸಿದ, ''ಏನಂತೀಯೋ ಸುನೀಲ, ನನ್ನ ಅರ್ಥಾ ಮಾಡಿಕೊಂಡಿಲ್ಲೇನು ನೀನು? 'ಲವ್ ಅಫೇರ್', ನಾನು, ಅದೂ ಈ ವಯಸ್ಸಿನ್ಯಾಗ? ನಿವೃತ್ತಿ ನಂತರದ ಬದುಕು ದೇವರು ಇನ್ನಷ್ಟು ಜೀವಿಸಲಿಕ್ಕೆ ಕೊಟ್ಟ ಎಕ್ಸಟನ್ಷನ್ ಪೀರಿಯಡ್. ಹಂಗ ಸೆಳವಿಗೆ ಸಿಗಬೇಕಾಗಿದ್ದರ ಆಗs ಸಿಗತಿದ್ದೆ-ಆಫೀಸಿನ್ಯಾಗ, ಎಂಥೆಂಥ ಸನ್ನಿವೇಶದೊಳಗ. ಅದೆಲ್ಲ ಸುನೀತಾಳ ಜೋಡಿ ಹೊರಟಹೋತು. ಇದೊಂದು ಹೊಸಾ ಜೀವನಾ... ನನ್ನ ಕಲ್ಪನಾ...''

ಸುನೀಲನಿಗೆ ಸನ್ನಿವೇಶದ ಅರ್ಥವಾಯಿತು. ''ನಿನ್ನೊಳಗ ಹಿಂಗ ಬದಲಾವಣೆ ಆಗಿದ್ದ ನೋಡಿ ಸಂತೋಷ ಆತು. ವೈನಿ ಹೋದ ಮ್ಯಾಲೆ ನಿನ್ನ ಮುಖದಾಗ ಇಂಥ ಆಕರ್ಷಣೆ ಉಳಿದೇ ಇರಲಿಲ್ಲ. ಆದದ್ದೆಲ್ಲ ಒಳಿತೇ ಆಯಿತು. ಇರಲಿ ನಿನ್ನ ಬಿ.ಪಿ. ನೋಡ್ತೀನಿ ಬಾ'' ಎಂದು ಬಿ.ಪಿ. ಪರೀಕ್ಷಿಸುವ ಉಪಕರಣ ಹೊರತೆಗೆದ.

ಕೃಷ್ಣ ಸೋಫಾದ ಮೇಲೊರಗಿದ. ಸುನೀಲ ಪರೀಕ್ಷಿಸಿ, ''ಇದೇನೋ ಕೃಷ್ಣ ನಿನ್ನ ಬಿ.ಪಿ. ನಾರ್ಮಲ್‌ಗೆ ಬಂದುಬಿಟ್ಟದ. ಖರೇವಂದ್ರು ನಿನ್ನ ಕಲ್ಪನಾನ್ನ ನಾನು ನೋಡಬೇಕಾತು. ಅದಕ್ಕ ಅನ್ನೋದು ಯಾವ ಮದ್ದಿಗೂ ವಾಸಿಯಾಗ ಲಾರದ್ದು ಪ್ರೀತಿಗೆ ವಾಸಿಯಾಗುತ್ತದೆ ಅಂತ. ಇರಲಿ, ಘಮ್ ಅಂತ ವಾಸನಿ ಬಂತಲ್ಲಾ ಏನ ಮಾಡೀದೀ ನನಗಿಷ್ಟು ಕೊಡು ನಡಿ'' ಎಂದ. ಇಬ್ಬರೂ ಅಡಿಗೆ ಮನೆಯೊಳಗೆ ನಡೆದರು. ಕೃಷ್ಣ ಮಾಡಿದ ಬಿಸಿಯಾದ ಉಪ್ಪಿಟ್ಟು ತಿಂದು ಸುನೀಲ ಹೊರಟುಹೋದ.

ಸಂಜೆಯಾಗುತ್ತಿದ್ದಂತೆ ಕೃಷ್ಣ ತನ್ನ ನಿತ್ಯದ ನದಿ ತೀರದ ಸ್ಥಳದಲ್ಲಿ ಬಂದು ಕುಳಿತ. ''ತಡಾ ಆದ್ರ ಮಾಮಾ ಬಯ್ತಾರ, ಲಗೂ ಲಗೂ ಬಾ ಪಾಪು'' ಎಂದು ಕಲ್ಪನಾ ಪಾಪುನನ್ನು ಕರೆದುಕೊಂಡು ದಾಪುಗಾಲು ಹಾಕುತ್ತ ಬಂದಳು.

''ಇದೇನು ಇಷ್ಟು ಏದುಸಿರು ಬಿಡುತ್ತ ಬಂದಿ ಕಲ್ಪನಾ'', ಕೃಷ್ಣ ಕಾರಣ ಗೊತ್ತಿದ್ದೂ ಪ್ರಶ್ನಿಸಿದ. ''ನೀವು ಎಲ್ಲಿ ಸಿಟ್ಟಿಗೇಳ್ತೀರೋ ಅಂತ ಅಂಜಿಕೆ ನನ್ಗ'' ಎನ್ನುತ್ತ ಕಲ್ಪನಾ ಅವನ ಪಕ್ಕದಲ್ಲಿ ಕುಳಿತುಕೊಂಡಳು. ಪಾಪು ಎದುರುಗಡೆ ಕುಳಿತ. ''ಮಾಮಾ, ನಿಮ್ಮ ಸಲುವಾಗಿ ಒಂದು ಮಜಾ ತಂದೀನಿ ಕಣ್ಣು ಮುಚ್ಚರಿ'' ಎಂದಳು ಸ್ಟೀಲಿನ ಡಬ್ಬಿ ತುಂಬ ಇದ್ದ ಶಿರಾ ಮುಂದಿಡುತ್ತಾ. ''ಮಾಮಾ, ನಿಮ್ಮ ಸಲುವಾಗಿ ನಾನs ಈ ಶಿರಾ ಮಾಡಕೊಂಡು ಬಂದೀನಿ. ದ್ರಾಕ್ಷಿ, ಗೋಡಂಬಿ ಎಲ್ಲಾ ಹಾಕೀನಿ. ಡಾಕ್ಟರ ಮನ್ಯಾಗ ಅಡಗಿ ಆಕಿ ಇದ್ದಾಳ. ಆಕೀನ ಮಾಡ್ತಾಳ. ಆದ್ರ ಇವತ್ತು ಮಾತ್ರ ನಾನs ಮಾಡಿಕೊಂಡು ತಂದೀನಿ. ಅಲ್ಲೆ ತಿನ್ನೋದು ಬಿಟ್ಟು ಪಾಪು, ನಾನು ನಿಮ್ಮ ಜೋಡಿ ತಿನ್ನೋಣ ಅಂತ ತೂಗೊಂಡ ಬಂದೀವಿ.''

''ಕಲ್ಪನಾ, ಶಿರಾ ನನ್ನ ಭಾಳಾ ಪ್ರೀತಿ ತಿನಸು. ನಿನಗ ಹ್ಯಂಗ ಗೊತ್ತಾತು?''

'ಸದಾ ನೀವು ನನ್ನ ಮನಸ್ಸಿನ್ಯಾಗ ಇರ್ತೀರಿ. ಅದಕ್ಕ ನಿಮ್ಮ ಪ್ರೀತಿ ತಿನಸು ಮಾಡಿದೆ ನೋಡ್ರಿ'' ಎಂದು ಸಹಜವಾಗಿಯೇ ನುಡಿದಳು. ಆದರೆ ಕೃಷ್ಣನ ಹೃದಯ ತುಂಬಿಬಂತು.

ಮೂವರೂ ಶಿರಾ ತಿಂದು ಮುಗಿಸಿದ ಮೇಲೆ ಪಾಪು ಮರಳಲ್ಲಿ ಮನೆಕಟ್ಟುವ ಆಟದಲ್ಲಿ ತೊಡಗಿದ. ಸ್ವಲ್ಪ ಹೊತ್ತು ಮೌನ ಆವರಿಸಿತು. ಕಲ್ಪನಾ ಕೃಷ್ಣನನ್ನೇ ನೋಡತೊಡಗಿದಳು. ''ಇದೇನು ಇವತ್ತು ನನ್ನ ಹಿಂಗ ನೋಡ್ತಿ...'', ಕೃಷ್ಣ ಕೇಳಿದ. ''ಸುನೀತಾ ಮಾಮಿ ನಿಮಗಿಂತ

ಛಂದ ಇರಬೇಕು ಅನಸ್ತದ. ನನಗೂ ಒಮ್ಮೆ ಅವರ್ನ ಭೆಟ್ಟಿ ಮಾಡಸ್ತೀರಾ... ಮಾಮಾ...''

ಕಲ್ಪನಾಳ ಈ ಅನಿರೀಕ್ಷಿತ ಪ್ರಶ್ನೆಗೆ ಕೃಷ್ಣ ಕೊಂಚ ವಿಚಲಿತನಾದ. ಅವನ ಮುಖ ಝರ‍್ರನೆ ಇಳಿದುಹೋಯಿತು. ''ಯಾಕ ಮಾಮಾ ಏನಾತು? ನಿಮ್ಮ ಮುಖಾ ಹಿಂಗ್ಯಾಕ ಆತು. ನಿಮ್ಮ ಕಣ್ಣಾಗ ನೀರು....'' ಕಲ್ಪನಾ ಗಾಬರಿಯಿಂದ ಕೇಳಿದಳು.

''ನಿನ್ನ ಸುನೀತಾ ಮಾಮಿ ಈಗಿಲ್ಲ. ದೇವರ ಪಾದಾ ಸೇರಿ ಇಪ್ಪತ್ತು ವರುಷ ಆದ್ವು.'' ಕಲ್ಪನಾ ತಲ್ಲಣಿಸಿದಳು. ಕೆಲಕ್ಷಣ ಅವಳ ಬಾಯಿಂದ ಮಾತುಗಳು ಹೊರಡಲೇ ಇಲ್ಲ. ಆಮೇಲೆ ಸಾವರಿಸಿಕೊಂಡು, ''ಏನಾಗಿತ್ತು ಮಾಮಾ...'' ಎಂದು ತಡವರಿಸುತ್ತ, ಅವನ ಸನಿಹಕ್ಕೆ ಸಾಗಿ ಕೇಳಿದಳು.

ತಳಮಳಗೊಳ್ಳುತ್ತಿರುವ ತೆರೆಗಳತ್ತ ನೋಡುತ್ತ ಕೃಷ್ಣ ಹೇಳತೊಡಗಿದ: ''ಸುನೀತಾನ್ನ ನಾನು ಪ್ರೀತಿಸಿ ಮದ್ವಿ ಆದೆ. ಭಾಳಾ ಛಂದ ಇದ್ದಳು. ಸದಾ ನಗುಮುಖಾ. ನಿನ್ನ ಹಾಗs... ಎಂದೂ ಆಕಿ ಸಿಟ್ಟಿಗೆದ್ದಿದ್ದು ನಾನು ನೋಡಿಲ್ಲ. ಎಂಥಾ ತ್ರಾಸ ಬಂದ್ರೂ, ಸಹಿಸಿಕೋತಿದ್ದಳು. ಆದರ ವಿಧಿ... ನಮ್ಗ ಮದ್ವಿ ಆಗಿ ಭಾಳಾ ವರುಷ ಆದ್ರು ಮಕ್ಕಳು ಆಗಲಿಲ್ಲ. ಆಕೀಗೆ ಅದೊಂದs ಕೊರಗು ಇತ್ತು. ಆದರೆ ಅದೇನೊ ಸುದೈವ ಅನ್ನು. ಹತ್ತು ವರುಷದ ಮ್ಯಾಲೆ ಗರ್ಭಿಣಿ ಆದಳು. ಆದರೆ ಮತ್ತೆ ವಿಧಿ ನಮ್ಮ ಸುಖಾ ಸಹಿಸಲಿಲ್ಲ. ಹೆಣ್ಣು ಮಗುವಿಗೆ ಜನ್ಮಾ ಕೊಟ್ಟು ಹೊರಟುಹೋದಳು. ಅವಳ ಹಿಂದೆ ಆ ಮಗೂನೂ ಸತ್ತುಹೋತು. ಸುನೀತಾ ಸತ್ತ ಮ್ಯಾಲೆ ಬಹಳಷ್ಟು ಜನ ನನ್ನ ಮದುವೆಗೆ ಪ್ರಯತ್ನಿಸಿದರು. ಆದರೆ ಕಲ್ಪನಾ, ನನ್ನ ಸುನೀತಾಳ ಜಾಗಾ ಬ್ಯಾರೆ ಯಾರೂ ತುಂಬಲಾರರು...''

ಕಲ್ಪನಾಳ ಕಣ್ಣಲ್ಲಿ ನೀರು ತುಂಬಿಬಂತು. ಕೃಷ್ಣನಿಗೆ ಸನ್ನಿವೇಶದ ಅರಿವಾಗಿ ವಾತಾವರಣ ತಿಳಿಗೊಳಿಸಲು ನಗು ತಂದುಕೊಂಡು, ''ಕಲ್ಪನಾ ಅಲ್ಲೆ ನೋಡು, ಪಾಪು ಒಂದ ಮನೀ ಕಟ್ಟಲಿಕ್ಕೆ ಹತ್ಯಾನ. ಬಾ ನಾವೂ ಕಟ್ಟೋಣ'' ಎಂದು ಅವಳ ಕೈಹಿಡಿದು ಎಬ್ಬಿಸಿದ. ಮೂವರೂ ತಮ್ಮ ಒಂದೊಂದು ಪಾದವನ್ನು ಮರಳ ಗುಂಪಿಯಲ್ಲಿರಿಸಿ, ಹೊರತೆಗೆದು ಮನೆ ಕಟ್ಟಿದರು...

ಅಂದು ಸಂಜೆ ಕೃಷ್ಣ ನದಿ ತೀರಕ್ಕೆ ಸ್ವಲ್ಪ ತಡವಾಗಿ ಬಂದ. ಆಗಲೇ ಕಲ್ಪನಾ ಬಂದು ಕುಳಿತಿದ್ದಳು. ಪಾಪು ಕಾಣಿಸಲಿಲ್ಲ. ಕಲ್ಪನಾ ತಿಳಿನೀಲಿ ಸೀರೆಯನ್ನುಟ್ಟು, ದುಂಡುಮಲ್ಲಿಗೆ ಮಾಲೆ ಮುಡಿದುಕೊಂಡು ಮದುಮಗಳಂತೆ ಶೃಂಗರಿಸಿಕೊಂಡಿದ್ದಳು. ''ಇದೇನು ಕಲ್ಪನಾ, ಪಾಪು ಬಂದಿಲ್ಲೇನು?'' ಎಂದು ಕೇಳುತ್ತ ಪಕ್ಕದಲ್ಲಿ ಕುಳಿತುಕೊಂಡ. ಹುಸಿಮುನಿಸಿನಿಂದ ಮುಖ ಆಚೆ ತಿರುಗಿಸಿ ಅವಳು, ''ನಾನು ತಡವಾಗಿ ಬಂದ್ರ ನಿಮಗ ಸಿಟ್ಟು ಬರ್ತದ ಅಲ್ಲ ಮಾಮಾ? ಮತ್ತ ನೀವು ತಡವಾಗಿ ಬಂದ್ರs...ನಡೀತದ?'' ಎಂದು ಕೇಳಿದಳು.

''ಓ! ಸಾರಿ ಕಲ್ಪನಾ, ಬರೋಮುಂದ ನನ್ನ ಸ್ನೇಹಿತ, ಡಾ. ಸುನೀಲ ಬಂದ. ಅದಕ್ಕ ಲೇಟ ಆತು'' ಎಂದು ಕ್ಷಮೆಯಾಚಿಸುವಂತೆ ಅವಳ ಮುಂದೆ ಬಾಗಿ ನುಡಿದ. ಕಲ್ಪನಾ ನಕ್ಕು, ''ಸುಮ್ಮನೆ ಅಂದೆ ಮಾಮಾ, ನೀವು ಏನೂ ತಿಳಕೋಬ್ಯಾಡ್ರಿ. ಪಾಪೂ ಊರಾಗಿಲ್ಲ. ತನ್ನ ತಾಯಿ ಜೋಡಿ ಬೆಂಗಳೂರಿಗೆ ಹೋಗ್ಯಾನಾ... ಬಹುಶಃ ಇನ್ನೂ ನಾಲ್ಕೈದು ದಿವಸ ಆಗಬಹುದು'' ಎಂದಳು. ಕೆಲಕ್ಷಣ ಇಬ್ಬರೂ ಮೌನವಾಗಿಯೇ ಕುಳಿತಿದ್ದರು. ''ಇದೇನು ಕಲ್ಪನಾ ಒಮ್ಮೆಲೆ ಸುಮ್ಮನೆ ಆಗಿಬಿಟ್ಟಿ?'' ಕೃಷ್ಣ ಮುಖ ಕೆಳಗೆ ಹಾಕಿಕೊಂಡು ಮರಳಲ್ಲಿ ಏನೇನೋ ಬರೆಯುತ್ತ ಕೇಳಿದ. ಅವಳು ಮೆಲ್ಲಗೆ, ''ನಾನು ಮದುವೆಯಾಗಬೇಕು ಅಂತ ಮಾಡೀನಿ'' ಎಂದು ನುಡಿದಳು. ಕೃಷ್ಣ ಸರ‍್ರನೆ ಅವಳ ಗದ್ದ ಹಿಡಿದೆತ್ತಿ, ನಗೆ ಬೀರುತ್ತ, ''ಭಾಳಾ ಸಂತೋಷದ ಸುದ್ದಿ ಹೇಳಿದಿ... ಯಾರು ಆ ಸುದೈವಿ, ನಿನ್ನಂಥವಳ ಕೈ ಹಿಡೀಬೇಕು



ಅಂದ್ರ..." ಎಂದು ಕೇಳಿದ. ಕಲ್ಪನಾ ಒಮ್ಮೆಲೆ ಉತ್ತರಿಸಲಿಲ್ಲ. ಮತ್ತೆ ಮೌನ.

"ಹೇಳು ಕಲ್ಪನಾ, ಯಾರು ನಿನ್ನ ಮದುವೆ ಆಗೋ ವ್ಯಕ್ತಿ?"

"ನೀವು ಮಾಮಾ. ಮದುವೆ ಆದ್ರ ನಿಮ್ಮನ್ನ ಮದುವೆ ಆಗಬೇಕು ಅಂತ ದೃಢ ನಿರ್ಧಾರ ಮಾಡೀನಿ" ಎಂದಾಗ, ಅವಳ ಕಣ್ಣಿಂದ ಝಳ ಪಿಸಿದ ಮಿಂಚು ಅವನನ್ನು ಬೆಚ್ಚಿಬೀಳಿಸಿತು. ಆದರೂ ಸಾವರಿಸಿಕೊಂಡು ಜೋರಾಗಿ ನಗುತ್ತ, "ಏನು ಈ ಮುದುಕನ್ನ ಮದವಿ ಆಗ್ತೀಯಾ! ಅಡ್ಡಿ ಇಲ್ಲಾ, ನೀನೂ ಚಾಷ್ಟೆ ಮಾಡಲಿಕ್ಕೆ ಸುರು ಮಾಡ್ದೀ ಅನ್ನು..." ಎಂದ ಅವಳತ್ತ ನೋಡುತ್ತ.


"ಇದು ಚಾಷ್ಟಿ ಅಲ್ಲ ಮಾಮಾ. ಖರೇವಂದ್ರು ಹೇಳಲಿಕ್ಕೆ ಹತ್ತೀನಿ. ಬಹಳಷ್ಟು ಯೋಚಿಸಿ ಈ ನಿರ್ಧಾರಕ್ಕ ಬಂದೀನಿ. ಸುನೀತಾ ಮಾಮಿ ಅಷ್ಟು ನಾನು ಛಂದ ಇರದಿದ್ದರೂ ಅವರು ಕೊಟ್ಟಷ್ಟು ಪ್ರೀತಿ ನಾನೂ ಕೊಡ್ತೀನಿ. ನನ್ನ ಮನಸ್ಸಿನೊಳಗ ನೀವು ತುಂಬೀರಿ" ಇನ್ನಷ್ಟು ಕೃಷ್ಣನ ಸನಿಹಕ್ಕೆ ಸರಿದು ಕಲ್ಪನಾ ಭಾವಾವೇಶದಲ್ಲಿ ತನ್ನ ಹೃದಯವನ್ನು ಬಿಚ್ಚಿಟ್ಟಳು. ಕೂಡಲೇ ಏನು ಉತ್ತರಿಸಬೇಕೆಂಬುದು ಕೃಷ್ಣನಿಗೆ ತೋಚಲಿಲ್ಲ. ನಂತರ ನಗುವನ್ನು ನಿಲ್ಲಿಸಿ ಮಕ್ಕಳನ್ನು ಸಂತೈಸುವಂತೆ ಹೇಳಿದ: "ನೋಡು ಕಲ್ಪನಾ, ನೀನು ಭಾವಾವೇಶದೊಳಗ ಸಿಕ್ಕೀದಿ. ನಿನ್ನ ವಯಸ್ಸು ಹಂಗ ಅದ. ಹಂಗ ಮಾತಾಡಸ್ತದ. ಜೀವನಾ ನಾವು ಅಂದುಕೊಂಡಷ್ಟು ಸುಲಭ ಅಲ್ಲ. ನನ್ನ ನಿನ್ನ ವಯಸ್ಸಿನ ಅಂತರದ ಅರಿವಾದರೂ ನಿನಗ ಅದ ಏನು?" "ಗೊತ್ತ ಅದ ಮಾಮಾ, ಅದನ್ನೂ ಯೋಚಿಸೀನಿ. ನಿಮ್ಮ 'ಅಂತರ-ಅನಂತರ' ಅನ್ನೋ ಕಥಿಯೊಳಗ ಭಾವನಾತ್ಮಕ ಸಂಬಂಧದ ಬಗ್ಗೆ ಏನು ಬರದೀರಿ ಹೇಳ್ರೀ?" ಅನಿರೀಕ್ಷಿತವಾಗಿ ಬಂದ ಆ ಬಾಣ ಅವನನ್ನು ಅಸ್ಥಿರ

ಗೊಳಿಸಿತು. ''ಅದು ಕಥಿ-ಕಥೀಗೂ ಜೀವನಕ್ಕೂ ಭಾಳಾ ಅಂತರ ಅದ...'' ಎಂದಾಗ ಅವಳು ''ಅದ್ಯಾಕ ಹಂಗ! ಬರೀಯೋದೊಂದು ಬಾಳೋದೊಂದು'' ಎಂದು ಅಬ್ಬರಿಸಿದಳು.

ಕೃಷ್ಣ ತತ್ತರಿಸಿದ. ತನ್ನ ಕಲ್ಪನೆಯೇ ಕುಸಿದಂತಾಯಿತು. ಇದನ್ನು ಇನ್ನಷ್ಟು ಮುಂದುವರಿಸಬಾರದೆಂದು ಮನದಲ್ಲಿ ನಿಶ್ಚಯಿಸಿ ಕೋಪದಿಂದ ಹೇಳಿದ, ''ಇಲ್ಲದ್ದೊಂದು ಹುಚ್ಚುಚ್ಚು ಪಾದಾ ಮಾಡಬ್ಯಾಡ ಕಲ್ಪನಾ. ನಾನು ಕಟ್ಟಿಕೊಂಡ ಕನಸಿನ ಗೋಪುರಾ ನುಚ್ಚುನೂರು ಮಾಡಬ್ಯಾಡಾ. ಸುನೀತಾ ಹೋದಮ್ಯಾಲೆ ಬರಡಾಗಿದ್ದ ನನ್ನ ಬದುಕಿನ್ಯಾಗ ಸಂತಸದ ಸೆಲಿಯಾಗಿ ಬಂದಿ. ಇನ್ನೂ ನಾನು ಜೀವಿಸಬೇಕು ಅನ್ನೋ ಆಶಾಕಿರಣ ಮೂಡಿಸಿದಿ. ಸುನೀತಾನೊಂದಿಗೆ ಬತ್ತಿ ಹೋದ ನನ್ನ ಲೇಖಣಿಗೆ ಜೀವ ಬರಬಹುದು ಎಂದು ಭಾವಿಸಿದೆ. ನಿನ್ನ ಬಗ್ಗೆ ನನ್ನ ಮನದೊಳಗ ಮೂಡಿದ ಚಿತ್ರಾನs ಬೇರೆ. ನಿನಗ ನೆನಪು ಅದನು... ನೀನು ಪುಂಟ್ಯೊ-ಸಕ್ರ್ಯೊ ಎಂದು ಕೇಳಿದಾಗ, ನಾನು ಸಕ್ಕರೆ ಎಂದು ಲಗೂನ ಹೇಳ್ದ ಹಂಗs ನೀನು ಚಿಪ್ಪುಟುವುದನ್ನು ಆನಂದಿಸಿದೆ. ಯಾಕ ಗೊತ್ತ... ನನ್ನ ಹೆಣ್ಣ ಮಗು ಸತ್ತಿತಲ್ಲ, ಅದು ಜೀವಂತ ಇದ್ದಿದ್ದರ ನಿನಗಿಂತ ಸ್ವಲ್ಪ ದೊಡ್ಡವಳು ಆಗಿರತಿದ್ದಳು, ಅವಳೂ ನನ್ನ ಜೋಡಿ ಈ ರೀತಿ ಆಡತಿದ್ದಳು, ಆ ಸವಿ ನೀಡುತಿದ್ದಳು... ಎಂದು ನೆನಪಿಸಿಕೊಂಡೆ. ನಾ ಹೇಳವೆಷ್ಟು ಕೇಳು. ನೀನು ದಿನಾ ಪಾಪೂನ ಜೋಡಿ ಬಂದು ಒಂದು ತಾಸು ನನ್ನ ಜೋಡಿ ಕಳದ್ರ ಸಾಕು... ಇದು ನನ್ಗ ಬೇಕಾದಷ್ಟು.''

''ನೋಡ್ರಿ ಮಾಮಾ, ನಾನು ಹಟಮಾರಿ... ಒಮ್ಮೆ ನಿರ್ಧಾರ ಮಾಡಿದ್ರ ಆತು. ನೀವು ಒಪ್ಪಲಿಲ್ಲ ಅಂದ್ರ...'' ಇನ್ನೂ ಅವಳು ಮಾತು ಮುಗಿಸಿರಲಿಲ್ಲ, ಕೃಷ್ಣನ ಕೋಪ ಉಕ್ಕಿ ಬಂತು. ''ಇದು ಎಂದಿಗೂ ಸಾಧ್ಯವಿಲ್ಲ. ಹುಚ್ಚು ಮಂಡತನ ಒಡದ್ಯಾ, ನನ್ಗ ಮುಖಾ ತೋರಿಸಬ್ಯಾಡ... ಹೊರಟುಹೋಗು...'' ಎಂದು ಅಬ್ಬರಿಸಿದ.

ಅಷ್ಟೇ ಶಾಂತ-ದೃಢ ಮನಸ್ಸಿನಿಂದ ಕಲ್ಪನಾ, ''ನಿಮ್ಮದು ಇದs ನಿರ್ಧಾರ ಆದ್ರ, ಈ ನದೀಯೊಳಗ ನನ್ನ ಶವಾ ತೇಲಿ ಬಂದದ್ದು ನೋಡತೀರಿ'' ಎಂದವಳೇ ಎದ್ದು ಧಡಧಡನೆ ಹೊರಟುಹೋದಳು. ಕೃಷ್ಣನಿಗೆ ತಾನು ಕುಳಿತ ಮರಳಲ್ಲಿ ಕುಸಿಯುತ್ತಿರುವೆನೋ ಎಂಬಂತೆ ಭಾಸವಾಯಿತು. ಜನ ಹೊರಟು ಹೋಗಿ ತೀರ ನಿರ್ಜನವಾಗುವವರೆಗೂ ಅಲ್ಲೇ ಕುಳಿತೇ ಇದ್ದ.



ಮರುದಿನ ಬೆಳಗ್ಗೆ ಕೃಷ್ಣನಿಗೆ ಹಾಸಿಗೆಯಿಂದ ಏಳಲಿಕ್ಕೆ ಆಗಲಿಲ್ಲ. ತಲೆಭಾರವಾಗಿತ್ತು, ಮೈ ಸುತ್ತುತ್ತಿರುವಂತೆ ಭಾಸವಾಯಿತು. ಕಾಲ್ ಬೆಲ್ ಬಾರಿಸಿತು. ನಿರ್ವಾಹವಿಲ್ಲದೆ ಎದ್ದು ಕಾಲು ಎಳೆಯುತ್ತ ಹೋಗಿ ಬಾಗಿಲು ತೆರೆದ.

ಸುನೀಲ 'ಏನಂತಾಳ ನಿನ್ನ ಕಲ್ಪನಾ...' ಎನ್ನುತ್ತ ಒಳಗೆ ಬರುತ್ತಿದ್ದವನು ಕೃಷ್ಣನ ಅವಸ್ಥೆ ನೋಡಿ ಗಾಬರಿಯಾದ.

"ಏನೋ ಕೃಷ್ಣ! ಏನಾಗೇದ ಮೈಯಾಗ ಆರಾಮ ಅದನೋ ಇಲ್ಲೋ?"

"ಸುನೀಲ, ನನ್ಗ ನಿಂದ್ರಲಿಕ್ಕೆ ಆಗವಲ್ತ, ಮೈ ತಿರಗಲಿಕ್ಕೆ ಹತ್ತೇದ..."

ಸುನೀಲ ಅವನ ಕೈಹಿಡಿದು ಮೆಲ್ಲಗೆ ಕರೆದುಕೊಂಡು ಹೋಗಿ ಹಾಸಿಗೆ ಮೇಲೆ ಮಲಗಿಸಿ ಬಿ.ಪಿ. ಪರೀಕ್ಷಿಸಿದ.

"ಬಿ.ಪಿ. ಭಾಳಾ ಏರೇದ... ಈ ಟ್ಯಾಬಲೆಟ್ಟ ಕೊಡ್ತೇನಿ ತೊಗೊಂಡು ಸ್ವಲ್ಪ ಹೊತ್ತು ಮಲಕೊ. ನಾನು ಚಹಾ ಮಾಡಕೊಂಡು ಬರ್ತೇನಿ..." ಎನ್ನುತ್ತ ಸುನೀಲ ಏಳಬೇಕೆಂದಾಗ ಕೃಷ್ಣ ಅವನ ಕೈಹಿಡಿದು ಕೂಡಿಸಿಕೊಂಡು, "ಅದ್ನ ಆಮ್ಯಾಲೆ ಮಾಡು ಸುನೀಲ. ಮೊದಲು ನಿನ್ಗೆ ನಡೆದದ್ದನ್ನೆಲ್ಲ ಹೇಳತೀನಿ ಕೇಳು.... ಅದ್ನ ಮನಸ್ಸಿನ್ಯಾಗ ಇಟಗೊಳ್ಳಲಿಕ್ಕೆ ಆಗವಲ್ಲುತ್ತ..." ಎಂದು ಮೆಲ್ಲಗೆ ನಡೆದ ಘಟನೆಯನ್ನು ವಿವರಿಸಿದ.

"ಕೃಷ್ಣ, ನಾನು ಇದನ್ನು ಎಕ್ಸ್‌ಪೆಕ್ಟ್ ಮಾಡಿದ್ದೆ. ನೀನು ಇನ್ಸಲ್ಟ್ ಆಗ್ತೀ ಅಂದುಕೊಂಡಿದ್ದೆ, ಆದ್ರ ಆ ಹುಡುಗಿ ಸೆಳವಿಗೆ ಸಿಕ್ಕಳು. ಆ ಹದಿವಯಸ್ಸೇ ಹಂಗ. ನೀನು ಸ್ವಲ್ಪ ತಾಳ್ಮೆ ವಹಿಸಬೇಕಾಗಿತ್ತು. ಹೆಂಗ್ಯಾಕ ಒಮ್ಮೆಲೆ ನಿರ್ದಾಕ್ಷಿಣ್ಯವಾಗಿ ಹೇಳಿದಿ"

ಕೃಷ್ಣ ಅವನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, "ಸುನೀಲ, ನನಗ ಅದೂ ಚಿಂತಿ ಆಗೇದ. ಕಲ್ಪನಾ ಎಲ್ಲಿ ದುಡುಕಿ ಜೀವಕ್ಕ ಅಪಾಯ ಮಾಡಕೋತಾಳೊ ಅನ್ನೊ ಅಂಜಿಕಿ ಬರಲಿಕ್ಕೆ ಹತ್ತೇದ. ಹಂಗೇನಾದ್ರು ಆದ್ರ ನಾನೂ ಜೀವಂತ ಇರೋದಿಲ್ಲ..." ಎಂದು ಪರಿತಪಿಸ ತೊಡಗಿದ.

"ನೀನು ಈಗ ಸುಮ್ಮನೆ ಮಲಕೊ. ನನ್ಗೆ ಯೋಚಿಸಲಿಕ್ಕೆ ಬಿಡು" ಎಂದು ಅವನನ್ನು ಸಂತೈಸಿ ಸುನೀಲ ಕೆಲಕ್ಷಣ ಯೋಚನೆಯಲ್ಲಿ ಮುಳಗಿದ. ನಂತರ, "ಕೃಷ್ಣ ಇವತ್ತು ಸಂಜಿಮುಂದ ನನ್ನ ನದಿತೀರಕ್ಕ ಕರಕೊಂಡು ಹೋಗು. ಕಲ್ಪನಾನ್ನ ಭೆಟ್ಟಿ ಮಾಡಸು. ನಾ ಎಲ್ಲಾ ಸರೀ ಮಾಡ್ತೇನಿ. ನೀ ಏನು ಯೋಚನಿ ಮಾಡಬ್ಯಾಡಾ. ಚಹಾ ಮಾಡಿಕೊಡ್ತೇನಿ. ಟ್ಯಾಬಲೆಟ್ ತೊಗೊಂಡು, ಚಹಾ ಕುಡುದು ಮಲಕೊ. ಆಮ್ಯಾಲೆ ನಾ ಬಂದು ಮನೀಗೆ ಕರಕೊಂಡು ಹೋಗ್ತೇನಿ. ನಿನ್ನ ಇಲ್ಲೆ ಯಾರೂ ನೋಡುಕೊಳ್ಳವರು ಇಲ್ಲ..." ಎಂದ.

"ಬ್ಯಾಡ ಸುನೀಲ ನಾ ಇಲ್ಲೇ ಇರ್ತೇನಿ- ನೀ ಸಂಜೀಮುಂದ ಬಾ!"

"ನೋಡ ಕೃಷ್ಣಾ, ಹಠಾ ಮಾಡಬ್ಯಾಡಾ. ನಿನಗ ಮನೀಗೆ ಬರಲಿಕ್ಕೆ ಸಂಕೋಚ ಆದ್ರ ನರ್ಸಿಂಗ್ ಹೋಂಗೆ ನಡಿ, ಅಲ್ಲೇ ನಿನ್ನ ಸರಿಯಾಗಿ ನೋಡಿಕೊಳ್ಳಲಿಕ್ಕೆ ಆಗ್ತದ"

ಕೃಷ್ಣನ ಉತ್ತರಕ್ಕೆ ಅವಕಾಶವನ್ನೂ ಕೊಡದೆ ಸುನೀಲ ಚಹಾ ತಯಾರಿಸಿ ತಂದು ಅವನಿಗೆ ಕುಡಿಯಲು ಕೊಟ್ಟ. ಕೃಷ್ಣ ಟ್ಯಾಬಲೆಟ್ ತೆಗೆದುಕೊಂಡು ಚಹ ಕುಡಿದು ಮುಗಿಸಿದ ನಂತರ ಅವನನ್ನು ಕರೆದುಕೊಂಡು ನರ್ಸಿಂಗ್ ಹೋಂಗೆ ಹೋದ.

ನರ್ಸಿಂಗ್ ಹೋಂನ ವಿಶೇಷ ಕೋಣೆಯಲ್ಲಿ ಮಲಗಿದ್ದರೂ ಕೃಷ್ಣನ ಮನದ ತುಂಬ ಕಲ್ಪನಾಳೇ ತುಂಬಿದ್ದಳು. 'ಇನ್ನೂ ಹಗಲು ಕಳೆಯಬೇಕು, ಸಂಜೆ ಬರಬೇಕು, ನಂತರ ಕಲ್ಪನಾಳ ಭೇಟಿ....' ಎಷ್ಟು ದೂರದ ಪಯಣ ಎನ್ನಿಸಿತು ಅವನಿಗೆ...

ಸಂಜೆ ಹೊತ್ತಿಗೆ ಮೈ ತಿರಗುವದು ಕಡಿಮೆಯಾಗಿದ್ದರೂ ತಲೆಭಾರ ಇನ್ನೂ ಇತ್ತು. ಹಾಗೇ ಸಾವರಿಸಿಕೊಂಡು ಮೆಲ್ಲಗೆ ಸುನೀಲನ ಕಾರಿನಲ್ಲಿ ಕುಳಿತುಕೊಂಡು ಅವನೊಂದಿಗೆ ನದಿ ತೀರ ತಲುಪಿದ. ಆದರೆ ಕಲ್ಪನಾ ಅವರು ನಿತ್ಯ ಕುಳಿತುಕೊಳ್ಳುವ ಸ್ಥಳದಲ್ಲಿ ಇರಲಿಲ್ಲ. ಕೃಷ್ಣನಿಗೆ ಆಘಾತವಾದಂತಾಯಿತು.

"ಎಲ್ಲಿ ಕೂಡುತಿದ್ದಿರಿ ನೀವು?"

''ಅಲ್ಲೇ... ಅದೇ... ಆ... ಜಾಗಾದಾಗ... ಕಲ್ಪನಾ ಅಲ್ಲಿ ಇಲ್ಲಾ... ಸುನೀಲ ನನ್ಗ ಯಾಕೋ ಭಯ ಆಗಲಿಕ್ಕೆ ಹತ್ತೇದ... ಕಲ್ಪನಾ... ಕಲ್ಪನಾ...'' ಎನ್ನುತ್ತ ಹಾಗೇ ಕುಸಿದು ಕುಳಿತ. ಸುನೀಲ ಗಾಬರಿಯಿಂದ ಅವನ ಕೈ ಹಿಡಿದು ಎತ್ತಿ ನಿಲ್ಲಿಸುತ್ತ, ''ರಿಲ್ಯಾಕ್ಸ್ ಕೃಷ್ಣ... ಏನೂ ಆಗೋದಿಲ್ಲ. ಆಮೇಲೆ ನೋಡೋಣ ಬಾ...'' ಎಂದು ಸಾವಕಾಶವಾಗಿ ಅವನನ್ನು ಕಾರಿನಲ್ಲಿ ಕೂಡಿಸಿಕೊಂಡು ನರ್ಸಿಂಗ್ ಹೋಂಗೆ ವಾಪಸ್ಸು ಬಂದ.

ಬಿ.ಪಿ. ಇನ್ನೂ ಹೆಚ್ಚಿತ್ತು. ಜ್ವರ ಏರುತ್ತಿದ್ದಂತೆ ಮೈಕಾದು ಕೆಂಡವಾಗತೊಡಗಿತ್ತು. ಸುನೀಲ ಮನೆಗೂ ಹೋಗದೆ ಅವನ ಶುಶ್ರೂಷೆಯಲ್ಲಿ ನರ್ಸಿಂಗ್ ಹೋಂನಲ್ಲೇ ಉಳಿದ. ಇಡೀ ರಾತ್ರಿ ಕೃಷ್ಣ ಅರೆಪ್ರಜ್ಞೆಯಲ್ಲಿ ಕಲ್ಪನಾಳ ಹೆಸರನ್ನೇ ಕನವರಿಸುತ್ತಿದ್ದ.

ಎರಡು ದಿನ ಕಳೆಯಿತು. ಸುನೀಲ ಕೃಷ್ಣನ ಕಾಯಿಲೆ ಜೊತೆಗೆ ಸೆಣಸಾಡಿ ಅವನಿಗೆ ಹೃದಯಾಘಾತವಾಗದಂತೆ ಎಚ್ಚರಿಕೆ ವಹಿಸಿದ.

ಕೃಷ್ಣ ಗುಣಮುಖನಾದ. ಅವನಿಗೆ ಮೂರನೆಯ ದಿನದ ಬೆಳಗು ಕಲ್ಪನೆಗೂ ಮೀರಿದ್ದಾಗಿತ್ತು. ಕಣ್ಣು ಬಿಟ್ಟಾಗ ಎದುರುಗಡೆ ಕಲ್ಪನಾ ನಿಂತಿದ್ದಳು. ಕಣ್ಣಂಚಿನಲ್ಲಿ ನೀರು ತುಂಬಿತ್ತು. ಆತಂಕ, ಕಾತರದ ಮಡುವಾಗಿತ್ತು ಮುಖ.

''ಕ...ಲ್ಪ...ನಾ...'' ಎನ್ನುತ್ತ ಮೆಲ್ಲಗೆ ಏಳಲುಹೋದ, ಸಾಧ್ಯವಾಗದೆ ಮತ್ತೆ ಹಾಗೇ ಒರಗಿಕೊಂಡ. ನಂಬದಾದ ಕಣ್ಣುಗಳಲ್ಲಿ ಜೀವ ತುಂಬಿಬಂದಿತು.

''ಮಾಮಾ... ನನ್ನ ಕ್ಷಮಸರಿ... ನಾ ತಪ್ಪ ಮಾಡ್ದೆ. ನಿಮಗ ಇಷ್ಟು ತ್ರಾಸ ಆಗೋಹಂಗ ಮಾಡ್ದೆ....''

ಎಂದು ಕಲ್ಪನಾ ಅಡರಾಸಿ ಓಡಿಹೋಗಿ ಅವನ ಎದೆಯ ಮೇಲೆ ಮುಖವಿರಿಸಿ ಬಿಕ್ಕಿ ಬಿಕ್ಕಿ ಅಳಹತ್ತಿದಳು. ಕೃಷ್ಣ ಮೆಲುವಾಗಿ ಅವಳ ಮುಂಗುರುಳು ನೇವರಿಸಿ, ''ನಿನ್ನ ಕಣ್ಣಾಗ ನೀರಬಂದ್ರ, ನಂಗ ನೋಡಲಿಕ್ಕೆ ಆಗೋದಿಲ್ಲ ಕಲ್ಪನಾ, ನೀ ಯಾವಾಗಲೂ ನಗನಗತಾನ ಇರಬೇಕು... ನಗು ನೋಡ್ತೀನಿ...'' ಎಂದಾಗ ಕಲ್ಪನಾ ಕಣ್ಣೀರು ಸೆರಗಿನಿಂದ ಒರಿಸಿಕೊಳ್ಳುತ್ತ ನಗೆ ತಂದುಕೊಂಡಳು.

''ಕಲ್ಪನಾ ನಿನ್ಗ ನಾನು ಇಲ್ಲೆ ಇದ್ದದ್ದು ಹ್ಯಾಂಗ ಗೊತ್ತಾತು...'' ಎಂದು ಅವನು ಪ್ರಶ್ನಿಸುವಷ್ಟರಲ್ಲಿ ಸುನೀಲ ಒಳಗೆ ಬಂದು ''ಅದ್ನ ನಾ ಹೇಳ್ತೀನಿ ಕೇಳು...'' ಎಂದು ಘಟನೆ ವಿವರಿಸಿದ.

''ನಿನ್ನೆ ಸಂಜೆ ನಾನು ನದಿ ತೀರದಾಗ ನೀವು ಕೂಡೋ ಸ್ಥಳಕ್ಕ ಹೋದೆ. ನನ್ಗ ಖಾತ್ರಿ ಇತ್ತು ಕಲ್ಪನಾ ಅಲ್ಲಿಗೆ ಬಂದು ಬರ್ತಾಳ ಅಂತ. ನಾನು ಕಲ್ಪನಾನ್ನ ನೋಡಿರಲಿಲ್ಲ. ಆದ್ರ ನೀ ತೋರಿಸಿದ ಜಾಗಾದಾಗ ಅಳಕೋತ ಕೂತ ಈ ಹುಡಗಿನ್ನ ನೋಡಿ ನನಗ ಖಾತ್ರಿ ಆತು... ಹತ್ರ ಹೋಗಿ 'ನೀನು ಕಲ್ಪನಾ ಹೌದಲ್ಲೊ...' ಎಂದು ಪ್ರಶ್ನಿಸಿದೆ. ಅಳು ನಿಲ್ಲಿಸಿ ಕಲ್ಪನಾ ಕಣ್ಣೊರಿಸಿಕೊಳ್ಳುತ್ತ ಎದ್ದು ನಿಂತು, 'ಹೌದು ನಾನೇ... ನೀವು?' ಎಂದು ಆತಂಕದಿಂದ ಕೇಳಿದಳು. ನಾನು ಡಾಕ್ಟರ್ ಸುನೀಲ. ಕೃಷ್ಣನ ಸ್ನೇಹಿತ ಎಂದು ಇನ್ನೂ ಮಾತು ಮುಗಿಸಿರಲಿಲ್ಲ, 'ಡಾಕ್ಟರ, ನೀವು ಅವರ ಸ್ನೇಹಿತರ? ಅವರು ಈಗೆಲ್ಲಿದ್ದಾರ. ದಯವಿಟ್ಟು ನನ್ಗ ಭೇಟಿ ಮಾಡಸರಿ... ಅವರ ಮನಸ್ಸು ಭಾಳಾ ನೋಯಿಸ್ದೆ, ನನ್ನ ತಪ್ಪಾಯ್ತು... ಲಗೂ ಹೇಳ್ರಿ ಅವರೆಲ್ಲಿದ್ದಾರು...' ಎಂದು ಚಡಪಡಿಸಿದಳು.

'ನಿನ್ನೆ ಇಡೀ ದಿನ ಅಳುತ್ತ ಕೂತಿದ್ದೆ. ಒಂದು ಅಗಳು ಅನ್ನ ಕಚ್ಚಿಲ್ಲ. ಮನ್ಯಾಗ ಎಲ್ಲಾರೂ ಗಾಬರಿ ಆದ್ರು... ಯಾರಿಗೂ ನಾನು ಹೇಳಲಿಲ್ಲ. ನನ್ನಷ್ಟಕ ನಾನು ಬಹಳಷ್ಟು ಯೋಚಿಸಿದೆ. ನಾ ತಪ್ಪ ಮಾಡಿಬಿಟ್ಟೆ ಅನಿಸ್ತು. ಮಾಮಾನ ಕ್ಷಮಾ ಕೇಳಲಿಕ್ಕೆ ಇಲ್ಲಿ ಬಂದೆ. ಅವರು ಕಾಣಸಲಿಲ್ಲಾ. ಅವರು ಊರಬಿಟ್ಟ ಹೋದ್ರೇನೂ-ಅಂತ ಅಂಜಿದೆ.

ಭಾಳಾ ಸಂಕಟಪಟ್ಟೆ. ನನ್ಗ ಏನೂ ಬ್ಯಾಡ, ಅವರ ಸಂತೋಷ ವಾಪಸ್ನ ಬಂದ್ರಾಸಾಕು,'' ಕಲ್ಪನಾ ನನ್ನ ಕೈ ತೆಗೆದುಕೊಂಡು ಕಣ್ಣಿಗೆ ಒತ್ತಿಕೊಳ್ಳುತ್ತ ಬಿಕ್ಕಳಿಸಿದಳು. ನಾನು ಅವಳ್ನ ಸಂತೈಸಿ ಇವತ್ತ ಇಲ್ಲಿಗೆ ಬರಲಿಕ್ಕೆ ಹೇಳಿದ್ದೆ...''


ಸುನೀಲ, ಕೃಷ್ಣ, ಕಲ್ಪನಾರ ಬಳಿ ಸಾಗಿ, ಕೃಷ್ಣನ ತಲೆಮೇಲೆ ಕೈಯಾಡಿಸುತ್ತ, ''ನಿನ್ನ ಕಲ್ಪನಾ ನಿನ್ಗ ಸಿಕ್ಕಳಲ್ಲ. ಇನ್ನ ಕಳಕೋಬ್ಯಾಡಾ...'' ಎಂದು ನಕ್ಕ. ಕೃಷ್ಣನ ಮುಖದಲ್ಲಿ ನಗೆ ಮೂಡಿತು. ಕಲ್ಪನಾಳ ಕಣ್ಣಲ್ಲಿ ಕಾಂತಿ ಮೂಡಿತು.

''ಡಾಕ್ಟರ್! ಮಾಮಾನ್ನ ನಾನು ಇವತ್ತು ನದೀ ತೀರಕ್ಕ ಕರಕೊಂಡು ಹೋಗಬಹುದ?''

''ಅಷ್ಟು ಅವಸರ ಬ್ಯಾಡಾ... ಇನ್ನು ಎರಡು ದಿವಸ ತಡಿ. ಅಂದ್ರ ಸೋಮವಾರ ಹೋಗಬಹುದು...'' ಎಂದು ಸುನೀಲ ಹೇಳಿದಾಗ ಕೃಷ್ಣ ''ಕಲ್ಪನಾ ಅಷ್ಟುಹೊತ್ತಿಗೆ ಪಾಪೂನು ಬರಬಹುದು. ಅವನ್ನೂ ಕರಕೊಂಡು ಬಾ...'' ಎಂದು ಅವಳ ಕೈ ತನ್ನ ಕೈಯಲ್ಲಿ ತೆಗೆದುಕೊಂಡು ವಾತ್ಸಲ್ಯ ತುಂಬಿದ ಧ್ವನಿಯಲ್ಲಿ ಹೇಳಿದ...


ಸೋಮವಾರ ಸಂಜೆಯಾಗುತ್ತಿದ್ದಂತೆ ಕೃಷ್ಣ, ಕಲ್ಪನಾ, ಪಾಪು ನದಿ ತೀರವನ್ನು ತಲುಪಿದರು. ಪಾಪುವಿನ ಒಂದು ಕೈಯನ್ನು ಕೃಷ್ಣ, ಇನ್ನೊಂದು ಕೈಯನ್ನು ಕಲ್ಪನಾ ಹಿಡಿದುಕೊಂಡು, ಮರಳರಾಶಿ ಯಲ್ಲಿ ಕುಣಿದು ಕುಪ್ಪಳಿಸುತ್ತ, ತೂರಿ ಬರುವ ತೆರೆಗಳನ್ನು ಅಂಗೈಯಲ್ಲಿ ತುಂಬಿಕೊಳ್ಳಲು ಧಾವಿಸಿ ದರು.

ಮತ್ತೆ ಅದೇ ಸಂಜೆ, ಅದೇ ಸ್ಥಳ, ಅದೇ ನದಿ. ಎದೆಯ ವೀಣೆಯಿಂದ ಮೀಂಟುವ ತೆರೆಗಳ ಮಂಜುಳ ನಿನಾದ.



[illegible]

[illegible]




ಮುಂಚಪು

# ಕಾಳಿಂಗರಾಯರು ಮತ್ತು ಭೂಪೇನ್ ಹಜ಼ಾರಿಕಾ

**- ಪ್ರಸನ್ನ**



ಕನ್ನಡಿಗರಿಗೆ ಮರವೆ ಜಾಸ್ತಿ. ಕೆಲವೊಮ್ಮೆ ನಾವು ಮರೆಯಬಾರದ್ದನ್ನ ಸಹಿತ ಮರೆತುಬಿಡುತ್ತೇವೆ, ನಂತರದಲ್ಲಿ ಕನ್ನಡದ ದುಸ್ಥಿತಿಯ ಬಗ್ಗೆ ವ್ಯರ್ಥ ಪ್ರಲಾಪಿಸುತ್ತೇವೆ. ಕನ್ನಡಿಗರು ಮರೆತಿರುವ ಹಲವು ಸುಂದರ ಸಂಗತಿಗಳಲ್ಲಿ ದಿವಂಗತ ಪಿ.ಕಾಳಿಂಗರಾಯರ ಗಾಯನವೂ ಒಂದು. ಕಾಳಿಂಗರಾಯರ ಗಾಯನ ಕನ್ನಡದ ಸಮಕಾಲೀನ ಸಂಸ್ಕೃತಿಯ ಹಲವು ಮೊದಲುಗಳಲ್ಲಿ ಒಂದು. ನಮ್ಮ ಭಾಷೆಗಿರುವ ಇಂಪು, ನಮ್ಮ ಕಾವ್ಯಕ್ಕಿರುವ ಲಯ ಹಾಗೂ ಪಶ್ಚಿಮದಿಂದ ಬಂದ ಆರ್ಕೆಸ್ಟ್ರಾ ಇವೆಲ್ಲವನ್ನೂ ಮೇಳವಿಸಿ ಕನ್ನಡ ಗಾಯನ ಶೈಲಿಯೊಂದನ್ನು ರೂಪಿಸಿದವರು ಅವರು. ಇಂಥದ್ದೇ ಕೆಲಸವನ್ನು ದೇಶದ ಈಶಾನ್ಯ ಮೂಲೆಯಲ್ಲಿ ಸಾಧಿಸಿದ ಭೂಪೇನ್ ಹಜಾರಿಕ ಅವರ ಗಾಯನವನ್ನು ಸಂಭ್ರಮಿಸಿ, ಅವರಿಗೆ ಅಸ್ಸಾಮಿ ಸಂಸ್ಕೃತಿಯ ನಾಯಕ ಪಟ್ಟ ನೀಡಿದ್ದಾರೆ. ಇತರ ಭಾರತೀಯರ ಗಮನವನ್ನು ಭೂಪೇನ್ ಹಜ಼ಾರಿಕಾ ಅವರತ್ತ ಸೆಳೆಯುವುದರ ಮೂಲಕ ಅಸ್ಸಾಮೀಯರು ದೆಹಲಿಯ ಸಾಂಸ್ಕೃತಿಕ ಲೋಕಕ್ಕೆ ಲಗ್ಗೆ ಇಟ್ಟಿದ್ದಾರೆ. ನಾವು ಕನ್ನಡಿಗರು, ಸಣ್ಣ ಪುಟ್ಟ ಪ್ರಶಸ್ತಿಗಳನ್ನು ಸ್ಥಾಪಿಸಿಕೊಂಡು, ಅವುಗಳನ್ನ ನಮ್ಮ ನಮ್ಮಲ್ಲಿಯೇ ಹಂಚಿಕೊಳ್ಳುವ ಹುನ್ನಾರದಲ್ಲಿ ಪ್ರಶಸ್ತಿಗಳನ್ನು ಮತ್ತೂ ಸಣ್ಣದಾಗಿಸುತ್ತ ಕಾಲ ಕಳೆಯುತ್ತಿದ್ದೇವೆ.




ಕಾಳಿಂಗರಾಯರ ನೆನಪು ನನ್ನನ್ನ ಇಷ್ಟೊಂದು ಗಾಢವಾಗಿ ಕಾಡಲಿಕ್ಕೆ ಕಾರಣವಿದೆ. ಇತ್ತೀಚೆಗೆ ಕಾಳಿಂಗರಾಯರ ಗಾಯನವಿರುವ 'ರಾಜಹಂಸ' ಎಂಬ ಸಿ.ಡಿ.ಯೊಂದು ಮಾರುಕಟ್ಟೆಗೆ ಬಂದಿದೆ. ಆ ಧ್ವನಿಮುದ್ರಿಕೆಯನ್ನು ನಾನು ಆಗಾಗ ಕೇಳುತ್ತಿರುತ್ತೇನೆ. ಅಸಾಧಾರಣವಾದ ಗಾಯನವದು. ಕಾಳಿಂಗರಾಯರ ಗಾಯನದಲ್ಲಿ ಗೌಜು ಗದ್ದಲವಿಲ್ಲ, ಅವರ ಗಂಟಲಿಗೆ, ಕಿರುಚಿ, ಕೂಗಿ ಹೇಗಾದರೂ ಸರಿ ಕೇಳಿಸಿಕೊಂಡೇಬಿಟ್ಟೇನು ಎಂಬ ಹಠವಿಲ್ಲ. ಅಲ್ಲಿರುವ ಹೆಚ್ಚಿನ ಹಾಡುಗಳು ಕನ್ನಡದ ದೊಡ್ಡ ಕವಿಗಳ ಭಾವಗೀತೆಗಳು. ಹಾಗಾಗಿ ಭಾಷೆಯ ಬಳಕೆಯಲ್ಲಿ ಗಟ್ಟಿತನವಿದೆ. ಗಾಯನ ನಿಜಕ್ಕೂ ರಾಜಹಂಸದ ನೀರ ಮೇಲ್ಣ ಗತಿಯೇ ಸರಿ.-

ಅಳುವ ಕಡಲೊಳು ತೇಲಿ ಬರುತಲಿದೆ
ನಗೆಯ ಹಾಯಿ ದೋಣಿ

ಎಂಬ ಗೋಪಾಲಕೃಷ್ಣ ಅಡಿಗರ ಪದ್ಯ, ಜಿ.ಪಿ. ರಾಜರತ್ನಂ ಅವರ 'ನನ್ಹೆಂಡ್ತಿ ನುಗ್ಗಿದ್ದು...' ಎಂದು ಆರಂಭವಾಗುವ ಹೆಂಡಕುಡುಕ ರತ್ನನ ಪದ, ಬೇಂದ್ರೆಯವರ 'ಇಳಿದು ಬಾ ತಾಯಿ...' ಕುವೆಂಪು ಅವರ 'ಅನಂತದಿಂ ದಿಗಂತದಿಂ'... ಇತ್ಯಾದಿ ಭಾವಗೀತೆಗಳು 'ರಾಜಹಂಸ'ದಲ್ಲಿ ಅಡಕವಾಗಿವೆ. ಸೋಹನ್ ಕುಮಾರಿಯವರ ಬಳಿಯಲ್ಲಿ ಉಳಿದಿದ್ದ ಧ್ವನಿಮುದ್ರಿಕೆಯನ್ನು 'ಸಂಗೀತ ಸಾಗರ' ಅವರು ಸಂಸ್ಕರಿಸಿ ಪುನರ್ ಮುದ್ರಿಸಿದ್ದಾರೆ.

ಹಿಂದಿ ಭಾಷೆಯ ಗಾಯನಕ್ಕೆ ಗಟ್ಟಿಯಾದ ಜನಪ್ರಿಯ ಪರಂಪರೆಯೊಂದನ್ನು ಹಿಂದಿ ಸಿನೆಮಾ ಬಳುವಳಿಯಾಗಿ ನೀಡಿತು. ಅರವತ್ತರ-ಎಪ್ಪತ್ತರ ದಶಕದಲ್ಲಿ ಹಿಂದಿ ಚಿತ್ರಗೀತೆಗಳು ಅಸಾಧಾರಣವಾದ ಸಮನ್ವಯವನ್ನ ಸಾಧಿಸಿದವು. ಇತ್ತಕಡೆ ದೇಸಿ ಜಾನಪದ, ಅತ್ತಕಡೆ ಶಾಸ್ತ್ರೀಯ ಸಂಗೀತ, ಮತ್ತೊಂದು ದಿಕ್ಕಿನಿಂದ ಪಶ್ಚಿಮದ ವಾದ್ಯಮೇಳಗಳು, ಬೀಥೋವನ್ ಎಲ್ಲವನ್ನೂ ಒಳತಂದು ತನ್ನದೇ ಆದ ಅದ್ಭುತ ಲೋಕವೊಂದನ್ನ ಸೃಷ್ಟಿಸಿತು. ಕನ್ನಡ ಸಿನೆಮಾದ ಕೆಲವು ಹಾಡುಗಳಿಗೆ ಜನರನ್ನ ಸೆಳೆಯುವ ಶಕ್ತಿಯಿದೆ ನಿಜ. ಆದರೆ ಒಟ್ಟಾರೆಯಾಗಿ ಕನ್ನಡ ಚಲನಚಿತ್ರ ಸಂಗೀತ ಜನಪ್ರಿಯ ಗಾಯನ ಪದ್ಧತಿಯನ್ನು ರೂಢಿಸಲು ವಿಫಲವಾಗಿದೆ ಎಂದೇ ಹೇಳಬೇಕು. ಹಾಗಾಗಿ ರಂಗ ಸಂಗೀತದ ಹಿನ್ನೆಲೆಯಿಂದ ಬಂದ ಕಾಳಿಂಗರಾಯರು ಕನ್ನಡದ ಜನಪ್ರಿಯ ಗಾಯನಕ್ಕೆ ಮೂಲ ಪುರುಷ ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. □




# ನೀನು ಬಂದ ಕೂಡಲೇ ಎಷ್ಟೆಲ್ಲಾ ಮಾಡಲಿದೆ...

ನಮ್ಮೆಲ್ಲರ ಪ್ರೀತಿಯ ಹರೀಶನಿಗೆ,

ಹೊರಗೆ ಕೆಲಸವೆಂದು ಹೇಳಿ, ಮನೆಯಿಂದ ಹೊರಟ ನೀನು ಎಲ್ಲಿಗೆ ಹೋಗಿಬಿಟ್ಟೆ ಹರೀ? ಅಂದು ಆಗಸ್ಟ್ 13ರ ಬೆಳಿಗ್ಗೆ, ನೀನು ನಾಪತ್ತೆಯಾಗಿಬಿಟ್ಟೆ. ಮುಂದಿನ ಜೀವನದ ಬೆಳಕನ್ನೆಲ್ಲಾ ನಿನ್ನಲ್ಲಿ ಕಾಣುತ್ತಿದ್ದ ಅಮ್ಮ, ಅಪ್ಪನನ್ನು ಬಿಟ್ಟು ನೀನು ಹೋದುದಾದರೂ ಎಲ್ಲಿಗೆ? ನೀನು ಹೋದಂದಿನಿಂದ ನಾನು, ನಿನ್ನ ಭಾವ, ಅಣ್ಣ, ಅಮ್ಮ ಎಷ್ಟು ಜನ ಜ್ಯೋತಿಷಿಗಳು, ಶಕುನಕಾರರು, ಭವಿಷ್ಯಜ್ಞರ ಬಳಿ ಅಲೆದವು ಎಂದರೆ ಈ ಕಾಲುಗಳೆಲ್ಲಾ ಸೋತು ಸುಣ್ಣವಾದವು. ಅಮ್ಮ ಮಾಡಿದ, ಮಾಡುತ್ತಿರುವ ವ್ರತಗಳಿಗೆ ಲೆಕ್ಕವೇ ಇಲ್ಲ.

ನೀನಿಲ್ಲದೆ ಮೂರು ಗಣೇಶನ ಹಬ್ಬ, ದೀಪಾವಳಿ, ಸಂಕ್ರಾಂತಿ ಆಗಿಹೋದವು. ನಾನು ನಿನ್ನ ಬೆನ್ನಿಗೆ ಹಾಲು ತುಪ್ಪ ಹಚ್ಚದೇ, ನಾಗರ ಪಂಚಮಿಗಳು ಕಳೆದವು. ಅಭ್ಯಂಜನಕ್ಕಾಗಿ ನಿನ್ನ ತಲೆಗೆ ಎಣ್ಣೆ ಹಚ್ಚಿ



ಎಷ್ಟೊಂದು ದಿನಗಳಾಗಿ ಹೋದವು. ಎಷ್ಟೊಂದು ಜನ ಹಿರಿಯರು, ಪರಿಚಯಸ್ಥರು ಇಹಲೋಕದ ಯಾತ್ರೆಯನ್ನೇ ಮುಗಿಸಿದರು. ನಿನ್ನ ಸ್ನೇಹಿತರಿಗೆಲ್ಲಾ ಮದುವೆಯಾಗಿಹೋಯಿತು. ಕಾರ್ಗಿಲ್ ಯುದ್ಧ, ಏನೆಲ್ಲಾ ನಡೆದವು. ಇವು ಯಾವುದಕ್ಕೂ ಕರಗದೇ, ನಮ್ಮನ್ನೆಲ್ಲಾ ದುಃಖ ಸಾಗರದಲ್ಲಿ ಮುಳುಗಿಸಿ, ನೀನೇನು ಮಾಡುತ್ತಿರುವೆ ಸೋದರ? ನಮ್ಮಗಳ ಪ್ರಾರ್ಥನೆ, ನಿಟ್ಟುಸಿರು ನಿನಗೆ ತಾಗುತ್ತಿಲ್ಲವೆ?

ಬೆಳಿಗಿನಿಂದ ಸಂಜೆಯವರೆಗೂ ನೀನು ಇಷ್ಟಪಟ್ಟು ಹೋಗುತ್ತಿದ್ದ ಉದ್ಯೋಗ, ಸಂಜೆಯಲ್ಲಿ ಮಕ್ಕಳ ಜೊತೆಗೆ ಆಟ, ರಾತ್ರಿ ಮಕ್ಕಳಿಗೆ ಪಾಠ, ನಂತರ ಈ ವಯಸ್ಸಿನಲ್ಲಿ ನಾವೆಲ್ಲಾ ಪಡಸಾಲೆಯಲ್ಲಿ ಬರೆದುಕೊಂಡು ಆಡುತ್ತಿದ್ದ ಕುಂಟೋಬಿಲ್ಲೆ ಆಟ (ಮಕ್ಕಳು ಬರೆಯುತ್ತಿದ್ದ ಕುಂಟುವ ಮನೆಗಳು, ನಿನ್ನ ಕಾಲಿಗೆ ಸಾಲುತ್ತಲೇ ಇರಲಿಲ್ಲ), ಎಲ್ಲವನ್ನೂ ಬಿಟ್ಟು ಇದ್ದಕ್ಕಿದಂತೆ ಸುಳಿವೇ ಇಲ್ಲದಂತೆ ನೀನು ಹೋದುದಾದರೂ ಏಕೆ?

ಪುಟ್ಟಿ 7ನೇ ತರಗತಿ. ನೀನಿಲ್ಲದೇ ಅವಳ ಸಂಗೀತಾಭ್ಯಾಸ ಮಂದಗತಿಯಾಗಿದೆ. ನಿಂಬೆ ಗಿಡದಲ್ಲಿ ಹಣ್ಣು ಕಡಿಮೆಯಾಗಿದೆ. ಕರಿ ಬೇವಿನ ಗಿಡಕ್ಕೆ ಹುಳು ಬಂದಿದೆ. ಸಂಪಿಗೆ ಹೂ ಬಿಡುತ್ತಿದೆ. ಪಾರಿಜಾತವೊಂದು ಚೆನ್ನಾಗಿದೆ.

ಅಮ್ಮ ದಿನವೂ ರಾತ್ರಿ ನಿನಗಾಗುವಷ್ಟು ಅಡಿಗೆಯನ್ನು ಇಟ್ಟುಕೊಂಡು ಕಾಯುತ್ತಿರುತ್ತಾಳೆ. ಅಣ್ಣನಂತೂ ಮನೆಯ ಕಾಂಪೊಂಡಿನ ಗೋಡೆಗೆ ಒರಗಿ, ರಸ್ತೆಯ ತಿರುವನ್ನೇ ಬಗ್ಗಿ ನೋಡುತ್ತಾ ನಿಂತಿರುತ್ತಾರೆ. ಹೇಳುವುದನ್ನೇ ಮರೆತೆ, ಅಣ್ಣನ ಕಾಲಿಗೆ ಸಣ್ಣ ಶಸ್ತ್ರಕ್ರಿಯೆಯೊಂದು ಆಯಿತು. ಆಗೆಲ್ಲಾ ನೀನಿಲ್ಲದೇ ಎಷ್ಟೊಂದು ಅಧೈರ್ಯ ಅನುಭವಿಸಿದೆ. ಸಣ್ಣ ಪುಟ್ಟ ವಿಷಯಗಳಿಗೂ ನಿನ್ನ ತೀರ್ಮಾನವನ್ನೇ ಅವಲಂಬಿಸಿದ್ದ ನನಗೆ ನೀನಿಲ್ಲದೇ ದೊಡ್ಡ ಶೂನ್ಯ ಆವರಿಸಿಬಿಟ್ಟಿದೆ. ಯೋಚಿಸಿ, ಯೋಚಿಸಿ ತಲೆ ಎಲ್ಲ ಖಾಲಿಯಾಗಿದೆ.

ಹರೀ, ನೀನು ಮರಳುತ್ತಿ ಎಂದು ನಮಗೆಲ್ಲಾ ಗಾಢವಾದ ನಂಬಿಕೆಯಿದೆ. ಒಂದು ದಿನವೂ ಎಲ್ಲಿಗೂ ಹೋಗದ ನೀನು ಇಷ್ಟು ದಿನ ಹೊರಗೆ ಹೇಗಿರುವಿಯೆಂಬುದೇ ನಮಗೆ ಕಾಳಜಿಯಾಗಿದೆ. ಎಲ್ಲಿದ್ದರೂ, ಹೇಗಿದ್ದರೂ, ಈ ಕೂಡಲೇ ಬಂದುಬಿಡು. ನೀನು ಬಂದ ಕೂಡಲೇ ನಮಗೆ ಎಷ್ಟೊಂದು ಕಾರ್ಯಕ್ರಮಗಳಿವೆ... ಎಷ್ಟೆಲ್ಲಾ ಹರಕೆಗಳನ್ನು ತೀರಿಸಬೇಕು, ಯಾರಿಗೆಲ್ಲಾ ಹೋಗಿ ತಿಳಿಸಬೇಕು. ನೀನು ಬಂದ ನಂತರವೇ ಪಿಕ್‌ನಿಕ್ ಎಂದು ಮಕ್ಕಳು ಸುಮ್ಮನೆ ಎಲ್ಲೂ ಹೋಗದೆ ಇದ್ದಾರೆ. ಪ್ರಶಾಂತ, ಕರುಣಾ ಮೂರ್ತಿಯಾಗಿದ್ದ ನಿನ್ನಲ್ಲಿ ಈ ಕಾಠಿಣ್ಯವೇಕೆ? ನಿನ್ನ ಸಂಕಟಗಳೇನು?

ಗುಜರಾತಿನಲ್ಲಿ ನೋಡಿದೆಯಾ? ಎಂತಹ ಭೀಕರ ಸುದ್ದಿಗಳು, ದೃಶ್ಯಗಳು. ಅದನ್ನು ನೋಡಿದ ಮೇಲೂ ನಿನಗೆ ಬದುಕು ಎಷ್ಟೊಂದು ಕ್ಷಣಿಕ, ಅಸ್ಥಿರ ಎನಿಸುತ್ತಿಲ್ಲವೆ? ನಮ್ಮ ನೆನಪಾಗುವುದಿಲ್ಲವೆ? ಸಾಕು ನಿನ್ನ ವನವಾಸ. ಇಲ್ಲಿ ನೀನು ಮಾಡೋದು ಬೇಕಾದಷ್ಟಿದೆ. ತಡಮಾಡಿ ಅನಾಹುತ ಮಾಡಬೇಡ. ಈ ಅಕ್ಕನ ಅಕ್ಕರೆಯ ಕರೆಗೆ ಕಿವಿಗೊಟ್ಟು ಇಂದೇ ಬಂದು ಬಿಡು. ಮನೆಯ ಮುಂದೆ ಎಲೆಗಳೆಲ್ಲಾ ಉದುರಿ ಬೋಳಾಗಿ ನಿಂತ ಹೊಂಗೆ ಗಿಡ ಹಚ್ಚ ಹಸಿರಾಗುವುದನ್ನು ನೋಡೋಣ ಬಾ, ಬೇಗ......

ನಿನ್ನ ಅಕ್ಕ

**ಬೆಂಗಳೂರು** **ಕುಸುಮ**

# ಕಾಕಾ, ಹೀಗೆ ಕುಳಿತಿದ್ದವನು ಎದ್ದು ಎಲ್ಲಿ ಹೋದಿ?

ಪ್ರೀತಿಯ ಕಾಕಾ,

ನೀನು ಎಲ್ಲಿದ್ದೀಯೋ, ಹೇಗಿದ್ದೀಯೋ ಗೊತ್ತಿಲ್ಲ. ಮನೆ ಬಿಟ್ಟು ಹೋದಾಗಿನಿಂದ ಚಿಗವ್ವನ ಬದುಕು ಮೂರಾಬಟ್ಟೆಯಾಗಿದೆ. ನಿನ್ನ ಪ್ರೀತಿಯ ಮಗ-ನಿನ್ನ ಆರನೆಯ ಸಂತಾನವಾದ ವಿವೇಕಾನಂದನು ಮೊನ್ನೆ ವಿಪರೀತ ಜ್ವರದಿಂದ ಬಳಲಿ, ಚಿಕಿತ್ಸೆ ಇಲ್ಲದೇ ಸತ್ತುಹೋದ. ಅವನ ಅಗಲಿಕೆಯ ನೋವನ್ನು ಅಲ್ಪವಾದರೂ ಕಡಿಮೆ ಮಾಡಲು ನಾನು ಅವ್ವನನ್ನು ಕರದುಕೊಂಡು ಊರಿನವರೆಗೆ ಹೋಗಿದ್ದೆ. ಚಿಗವ್ವ ಬಲು ಗಟ್ಟಿಗಳು. ನೀನಿಲ್ಲದೆಯೂ ಮಕ್ಕಳನ್ನು ದಿಟ್ಟವಾಗಿ ಸಾಕುತ್ತಿದ್ದಾಳೆ. ಆದರೆ, ಮಗನ ಸಾವಿನಿಂದ ಅಪಾರವಾಗಿ ಬಳಲಿದ್ದಾಳೆ.

ಈಗ ಇರುವ ಐವರು ಮಕ್ಕಳನ್ನು ಸಾಕಲು ಹೆಣಗುತ್ತಿರುವ ಚಿಕ್ಕಮ್ಮನನ್ನು ನೆನಪಿಸಿಕೊಂಡರೆ ಕರುಳು ಚುರಕ್ ಎನ್ನುತ್ತದೆ. ಅವಳ ನೆರವಿಗೆ ನಾವಿದ್ದರೂ, ನೀನಿರುವಂತೆ ಆಗುವುದಿಲ್ಲ ಎಂಬುದು ನಮಗೂ ಗೊತ್ತು, ಚಿಕ್ಕಮ್ಮನಿಗೂ ಗೊತ್ತು. ಆದರೆ ಏನು ಮಾಡುವುದು? ನೀನು ಹೀಗೆ ಕುಳಿತಿದ್ದವನು ಎದ್ದು ಹೊರಟು ಹೋದಿ. ಅಡಿವೆಪ್ಪ ಮಾವನ ಮನೆಯಲ್ಲಿದ್ದ. ಅಲ್ಲಿ ಅತ್ತೆಯ ಕಾಟ ತಾಳದೇ ಓಡಿ ಬಂದಿದ್ದಾನೆ. ಆಕೆ ಅವನ ಕಿವಿಗೆ ಬಲವಾಗಿ ಹೊಡೆದುಬಿಟ್ಟಿದ್ದಾಳೆ. ಆದ್ದರಿಂದ ಕಿವಿ ಸೋರಿ ಕಿವುಡಾಗಿಬಿಟ್ಟಿದೆ. ಈಗ ಸರಿಯಾಗಿ ಕಿವಿ ಕೇಳುವುದಿಲ್ಲ. ಮೂರನೆಯವ ಮಲ್ಲಿಕಾರ್ಜುನ ಯಾರ ಕೈಗೂ ಸಿಗದೆ ಉಡಾಳನಾಗಿದ್ದಾನೆ. ಅವನನ್ನು ಹುಬ್ಬಳ್ಳಿಯ ದೊಡ್ಡಮ್ಮನ ಮನೆಯಲ್ಲಿಟ್ಟಿದ್ದವು. ಆದರೆ ಹರಮಾರಿಯಾದ ಅವನು ಅಲ್ಲಿ ಸರಿಯಾಗಿ ಇರಲಿಲ್ಲ. ಶಾಲೆಗೆ ಹೋಗಲಿಲ್ಲ. ದಿನವೂ ಹುಡುಗರೊಂದಿಗೆ ಜಗಳ ಮಾಡಿಕೊಂಡು ಬರುತ್ತಿದ್ದ. ಒಂದು ದಿನ ಅಂಗಿ ಹರಿದುಹೋದರೆ, ಇನ್ನೊಂದು ದಿನ ತಲೆ ಒಡೆದುಕೊಂಡು ಬಂದಿದ್ದ. ಹೀಗಾಗಿ ಹೆದರಿಕೊಂಡ ದೊಡ್ಡಮ್ಮ ಅವನನ್ನು ಊರಿಗೆ ಕಳುಹಿಸಿಬಿಟ್ಟಿದ್ದಾಳೆ. ಆದರೆ ಈಗವನು ಊರಲ್ಲಿ ಗೂಳಿಯಾಗಿಬಿಟ್ಟಿದ್ದಾನೆ. ಐದನೆ ಮಗನಾದವನ ಕಾಲುಗಳು ಒಡೆದುಹೋಗಿವೆ. ನಡೆಯಲು ಬಾರವು. ಹೀಗಾಗಿ ಕುಂಟನಾಗುವಂತಾಗಿದೆ. ಅವನಿಗೆ ಅಂಗವಿಕಲರ ವೇತನ ಕೊಡಿಸುವುದಕ್ಕಾಗಿ ಅಜ್ಜ ಪ್ರಯತ್ನ ನಡೆಸಿದ್ದಾರೆ. ಚಿಗವ್ವ ದಿನಾಲೂ ಕೂಲಿಗೆ ಹೋಗುತ್ತಾಳೆ. ಈಗ ಬೇಸಿಗೆಯಾದ್ದರಿಂದ ಎಲ್ಲಿಯೂ ಕೆಲಸ ಸಿಗದು. ಕೆಲಸ ಸಿಗದ್ದರಿಂದ ಉಪವಾಸವೇ ಗತಿಯಾಗುವ ಪ್ರಸಂಗ ಇದೆ. ಆದರೂ ತನ್ನ ಅಣ್ಣತಮ್ಮಂದಿರ, ಅಕ್ಕತಂಗಿಯರ ಸಹಾಯ, ನಮ್ಮಗಳ ಸಹಕಾರದಿಂದ ಅವರ ಜೀವನ ರಥ ಹೇಗೋ ಸಾಗಿದೆ.



ಚಿಗವ್ವ ನಿನ್ನನ್ನು ನೆನಪಿಸಿಕೊಂಡು ದಿನವೂ ಕಣ್ಣೀರಿನಲ್ಲಿ ಕೈತೊಳೆಯುತ್ತಾಳೆ. ನೀನು ಯಾಕೆ ಹೀಗೆ ಮಾಡಿದ? ಆರು ಜನ ಮಕ್ಕಳನ್ನು ದಯಪಾಲಿಸಿ ಹೀಗೆ ಮನೆ ಮಠ ತೊರೆದು


ಹೋಗುವುದು ಸರಿಯೆ? ನಿನಗೆ ಏನೇ ಕಷ್ಟ ಕಾರ್ಪಣ್ಯ ಇರಲಿ, ಅವುಗಳನ್ನೆಲ್ಲ ಬಗೆಹರಿಸಬಹುದು. ನಿನ್ನ ಹೆಂಡತಿ ಮಕ್ಕಳ ಕಷ್ಟಕ್ಕಿಂತ ಅವೇನೂ ದೊಡ್ಡವುಗಳಲ್ಲ ಎಂಬುದು ನಿನಗೆ ಅರಿವಾದರೆ ಸಾಕು.

ಈ 'ಕಾಗದದ ದೋಣಿ' ನಿನ್ನ ಕೈಸೇರಿ, ನಿನ್ನ ಕೈ ಹಿಡಿದ ಹೆಂಡತಿಯ, ನಿನ್ನ ಮುದ್ದುಮಕ್ಕಳ ನೆನಪಾಗಿ ನೀನು ಊರಿಗೆ ಬರುವಂತಾದರೆ... ಎಂಬ ಆಸೆಯಿಂದ ಇದನ್ನು ಬರೆಯುತ್ತಿರುವೆ. ಈ ಕಾಗದದ ದೋಣಿ ನಿನ್ನ ಕೈ ಸೇರುವಂತಾಗಲಿ.

ಹೊಳೆಹೊಸೂರು

ವೀರೇಶ ಕಂಬಾರ

# ತಿಮ್ಮೇಗೌಡ ಉರುಫ್ ಲಕ್ಷ್ಮಣಗೌಡ



ಅಪರಿಚಿತ ಆತ್ಮೀಯ ಲಕ್ಷ್ಮಣಗೌಡರೇ, ನಮಸ್ಕಾರಗಳು.

ನಾ...ನು ತಿಮ್ಮೇಗೌಡರ ಕಿರಿಯ ಸಹೋದ್ಯೋಗಿ. ಆಂ!... ತಿಮ್ಮೇಗೌಡರು ಯಾರೆಂದು ನಿಮಗೆ ಹೇಳಬೇಕಿದೆ. ಅದಕ್ಕಾಗಿ ಈ ಪತ್ರ.

ನೀವಾಗ, ಈಗಿನ ಏಳನೇ ತರಗತಿ. ವರ್ಷವೆಲ್ಲಾ ಶಾಲೆಗೆ ಬಂದ ನೀವು ಪರೀಕ್ಷೆಗೆ ಮಾತ್ರ ಬರಲಿಲ್ಲ... ಯಾಕೆ ಬರಲಿಲ್ಲವೋ ಈವರೆಗೂ ತಿಳಿಯಲಿಲ್ಲ. ಆಗ ಪರ ಊರಿನಲ್ಲಿ ಓದುತ್ತಿದ್ದ ತಿಮ್ಮೇಗೌಡರನ್ನು, ತಾಯಿಯ ಸಾವಿನ ಕಾರಣ, ಪರೀಕ್ಷಾ ಸಮಯದಲ್ಲೇ... ಶಾಲೆ ಬಿಡಿಸಿ ಊರಿಗೆ ಕರೆತಂದ್ರು ಅವರಪ್ಪ... ಮತ್ತೆ ಶಾಲೆಯ ವಿಷಯ ಯೋಚಿಸುವ ಲಕ್ಷಣಗಳೇ ಕಾಣಲಿಲ್ಲ ಮನೆಯವರ ವರ್ತನೆಯಲ್ಲಿ. ತಿಮ್ಮೇಗೌಡರಿಗೆ ಓದುವ ಹಂಬಲ... ಅದೇ ಹಂಬಲ, ಮುಗ್ಧತೆಯಿಂದಲೇ ಅವರೂರಿನ ಶಾಲೆಗೆ ಹೋಗಿ ಶಿಕ್ಷಕರೊಬ್ಬರ ಹತ್ತಿರ ತನ್ನ ವ್ಯಥೆ ತೋಡಿಕೊಂಡು ಅತ್ತರಂತೆ. ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ಬೇಡಿಕೊಂಡರಂತೆ. ಪರೀಕ್ಷೆಗೆ ನೀವು ಗೈರುಹಾಜರಾದ್ದರಿಂದ ಆ 'ಗುರುಬ್ರಹ್ಮರು' ತಿಮ್ಮೇಗೌಡರಿಗೆ ನಿಮ್ಮ ಸ್ಥಳದಲ್ಲಿ ಕುಳಿತು ಪರೀಕ್ಷೆ ಬರೆಯಲು ಹೇಳಿದರಂತೆ. ಅಂದಿನಿಂದ ತಿಮ್ಮೇಗೌಡರು ಲಕ್ಷ್ಮಣಗೌಡರಾದರು...ಅಪ್ಪಂದಿರೂ ದಾಖಲೆಗಳಲ್ಲಿ ಬದಲಾದರು. ತಿಮ್ಮೇಗೌಡರಿಗೆ ಓದಿನಲ್ಲಿದ್ದ ಆಸಕ್ತಿ ಅವರನ್ನು ಎತ್ತರಕ್ಕೇರಿಸಿತು. ಇದೀಗ ತಿಮ್ಮೇಗೌಡ/ಲಕ್ಷ್ಮಣಗೌಡ-ಇಪ್ಪತ್ತೈದು ವರ್ಷಗಳ ಸರ್ಕಾರಿ ಸೇವೆ ಮುಗಿಸಿ ಜಿಲ್ಲೆಯ 'ಉತ್ತಮ ಶಿಕ್ಷಕ' ಪ್ರಶಸ್ತಿ ವಿಜೇತ... ಉತ್ತಮ ಬರಹಗಾರ, ಅಂತೆಯೇ ಮೂರ್‍ನಾಲ್ಕು ಕೃತಿಗಳನ್ನು ಹೊರತಂದಿದ್ದಾರೆ... ಪ್ರತಿಕ್ಷಣ ನಿಮ್ಮ ನೆನಪು (ಅಪರಿಚಿತರಾದ) ಕಾಡುತ್ತದೆ ಅವರನ್ನು... ನಿಮಗಾಗಿ ಹಂಬಲಿಸುತ್ತಿದ್ದಾರೆ... ನಿಮಗೆ ಅತ್ಯಂತ ಕೃತಜ್ಞರಾಗಿದ್ದಾರೆ... ನೀವಿದ್ದೀರೋ ಇಲ್ಲವೋ... ಎಲ್ಲಿದ್ದೀರೋ... ಹೇಗಿದ್ದೀರೋ. ನಿಮಗೆ ವಿಷಯ ಮುಟ್ಟಿಸುವ ಆಸೆ ಹೊತ್ತು ಈ ಕಾಗದದ ದೋಣಿ ತೇಲಿಬಿಟ್ಟಿದ್ದೇನೆ.

ರಾಂಪುರಪಾಡು

ರುಕ್ಮಿಣಿ ಆರ್. ರಾವ್

ಚಿದಾನಂದ ಸಾಲಿ

# ಆಸೆಯೆಂಬ ತಥಾಗತನ ವೈರಿ



ಜಿ.ಸಿ. ದೇವರಾಜ್

## ಎದ್ದು ಕೂತಿತು 'ರಾತ್ರಿ'

ಹಗಲೆಲ್ಲ ಮಲಗಿದ್ದ 'ರಾತ್ರಿ', ಸಂಜೆಯಾಗುತ್ತಿದ್ದಂತೆ ಎದ್ದು ಕೂತು, ರಚ್ಚೆ ಹಿಡಿವ ಮಗುವಿನಂತೆ ಕಣ್ಣುಜ್ಜಿಕೊಂಡು, ಕೇರಿಯನ್ನೆಲ್ಲ ತುಂಬಿಕೊಳ್ಳತೊಡಗಿತು. ಮನುಷ್ಯರೆಂಬೋ 'ಪ್ರಾಣಿ'ಗಳಿಗೆ ರಾತ್ರಿಯಾಗಿ, ದೀಪಗಳು ಬೆಳಗಿದವು- ಒಂದೊಂದಾಗಿ. ಕಾಮಾಟಿಪುರಕ್ಕೆ ರಂಗಿರುವುದು ಮತ್ತು ರಂಗೇರುವುದು ಹೀಗೆ ರಾತ್ರಿಯಾದಾಗಲೇ. ಈ ಕಾಮಾಟಿಪುರವೆಂಬುವ ಸುಂದರ ಗಲ್ಲಿ ಮುಂಬೈ ಶಹರದಲ್ಲಿಯೇ ಜಗತ್ಪ್ರಸಿದ್ಧವಾದ ಸೂಳೆಕೇರಿ. ಸಲವತ್ತೈದರ ಪ್ರಾಯದ ಕಮಲಿಯಿಂದ ಹಿಡಿದು, ಹದಿಹರೆಯದ ಸುಜ್ಜಿಯವರೆಗೆ ವಿಧ ವಿಧದ 'ಹುಡುಗಿ'ಯರು ಬಾಡಿಗೆಗಿರುವ, ಅತೃಪ್ತ ಗಂಡಸರ ಅಘೋಷಿತ ಅಡ್ಡಾಗಳಿವು. ಈ

ಮತ್ತು ಇಂತಹ ಗಲ್ಲಿಗಳು ಹಳ್ಳಿ-ಊರು-ಪಟ್ಟಣಗಳಿಗೊಂದೊಂದು ಇರಲಿಕ್ಕಾಗಿಯೂ, ಮುಂಬೈಯ ಕಾಮಾಟಿಪುರಕ್ಕೆ ಮಾತ್ರ ತನ್ನದೇ ಆದ ಗತ್ತು, ಮತ್ತು, ತಾಕತ್ತು,... ಎಲ್ಲ ಇವೆ.

ದಂಧೆಯ ಅ,ಆ,ಇ,ಈ ಕೂಡ ಗೊತ್ತಿರದ, ಸುಮ್ಮನೆ ಹಸಿಗೂದಲ ಹೆಗಲ ಮೇಲೆ ಹರಡಿಕೊಂಡು ಪೇಲವವಾಗಿ ನಗುತ್ತ ನಿಲ್ಲುವ ಹೊಸ ಹುಡುಗಿಯರೂ, ಅರ್ಧ ಮೊಲೆ ಕಾಣುವಂಥ ಸಡಿಲ ಕುಪ್ಪಸ ತೊಟ್ಟು, ಸೆರಗನ್ನು ನಡುವಿಗೇ ಸುತ್ತಿಕೊಂಡು, ಬಂದ ವಿಟರನ್ನು 'ಸಾಮೇಲು, ತಾ ಮೇಲು' ಎಂದು ಮೈ ಮೇಲೆ ಬಿದ್ದು, ಅವರಿಗೆ ಆಯ್ಕೆಯ ಅವಕಾಶವನ್ನೇ ಕೊಡದೆ ಒಳಗೆಳೆದೊಯ್ಯುವ ವ್ಯವಹಾರ ನಿಪುಣೆಯರೂ ಒಟ್ಟಿಗೆ ವಾಸಿಸುವ ಈ ಗಲ್ಲಿಯ ಗೋಡೆಗಳಿಗೆ ನಿಮಿಷ ನಿಮಿಷಕ್ಕೂ ನೂರು ಸುಳ್ಳು ಹಿತದ ಸರಳುವಿಕೆಯ ಸಪ್ಪಳ ಕೇಳಿದ ರೂಢಿಯಿದೆ. ಮತ್ತು ಇಲ್ಲಿಯ ಬೀದಿನಾಯಿಗಳಿಗೆ ಕಾಲಿಗೆ ಜೋತುಬಿದ್ದ ಪುಟ್ಟ ಕಂದಮ್ಮನ ಅಳುವನ್ನು ನಿರ್ಲಕ್ಷಿಸಿ, ಮೋಹನ ಮುರಲಿಯ ನಾದಕ್ಕೆ ಸೋತವನಂತೆ ಸೂಳೆಯೊಬ್ಬಳ ಹಿಂದೆ ಹೋಗುವ ಪಾಪಿ ತಂದೆಯೊಬ್ಬನ 'ಅವಸರ'ವನ್ನು ಕಂಡು, ಕೂಲಾಗಿ ಲೈಟು ಕಂಬಕ್ಕೆ ಉಚ್ಚೆ ಹೊಯ್ಯುತ್ತ ನಿಂತುಬಿಡುವ ಪರಿಪಾಠವಿದೆ. ಆಗಾಗ ಈ ಬೀದಿನಾಯಿಗಳು, ಕಳ್ಳತನದಿಂದ ಚಟ ತೀರಿಸಲು ತಲೆಗೆ ಮುಸುಗೆಳೆದುಕೊಂಡು ಬರುವ ನಿರುದ್ಯೋಗಿ ಪದವೀಧರರನ್ನು ಕಂಡು ಮುಸಿ ಮುಸಿ ಹಲ್ಲು ಕಿಸಿಯುತ್ತವೆ.

ಬಾಳುವ ಹೂ ಬಾಡಲೇಬೇಕೆಂಬ ಕು.ಕವಿ (ಕುಡುಕ ಕವಿ)ಯ ನಶಾವಾಕ್ಯದಂತೆ, ಮೊನ್ನೆ ಮೊನ್ನೆ, ಕಾಮಾಟಿಪುರದ ನಿನ್ನೆಯವರೆಗಿನ ಅನಭಿಷಿಕ್ತ ಸಾಮ್ರಾಜ್ಞೆಯಾಗಿದ್ದ ಪಾರ್ವತಿಬಾಯಿ ನೆಗೆದುಹೋದಳೆಂಬಲ್ಲಿಗೆ, ಈ ಕಥಾನಕವು ಪ್ರಾರಂಭವಾಯಿತು...

ಸ್ಥಿತಿವಂತರಿಗೆ ನೆಂಟರಿಷ್ಟರ ಕೊರತೆಯುಂಟೇ ಜಗದಲ್ಲಿ? ಸುದ್ದಿ ಹರಡುತ್ತಲೇ, ದೂರದ ಕಲ್ಬುರ್ಗಿಯಿಂದಲೂ ಸಂಬಂಧಿಕರು ಬಂದಿಳಿದರು. ಒಳಗೊಳಗೆ ಬಾಯಲ್ಲಿ ಆಸಬಾರದ್ದು ಅಂದರು. ಹೊರಗೆ ಅವರವರ ಶಕ್ತ್ಯಾನುಸಾರ ಅತ್ತರು. 'ಕಳ್ಳ ಅಳು' ಅತ್ತು ಅತ್ತು 'ಮೆಲುಕು ಬ್ಯಾನೆ'ಯಾದಾಗ, 'ಅತ್ತವರೆಷ್ಟು ಅತ್ತರಂತ ಸತ್ತವರಿಗೆಲ್ಲಿ ಗೊತ್ತಾತಾದ?' ಎಂದುಕೊಂಡು ಒಬ್ಬೊಬ್ಬರು ಒಬ್ಬೊಬ್ಬರು ಪಕ್ಕದ ರೂಮಿನಲ್ಲಿ ಹೋಗಿ ಸೇರಿ, ಪವಡಿಸಿದ ನಂತರ ಗುಸು-ಗುಸು, ಪಿಸ-ಪಿಸ ಮಾತಾಡಿಕೊಂಡರು.

**ಮಾತಿನ ಕಥೆ:**

ತಂಗಿ ಪಾರ್ವತೀದು ಒಟ್ಟು ಆಸ್ತಿ- ಒಂದು ಮನೆ, ನಾಲ್ಕು ಸೈಟು, ಮನೆಯೊಳಗಿನ ಸರ್ವಸಂಪತ್ತು (ಕಸಬರಿಗೆಯೂ ಸೇರಿ)-ಎಲ್ಲ ಮಿನಿಮಂ ಇಪ್ಪತ್ತು ಲಕ್ಷವಾದರೂ ಆದೀತು. ಪಾರ್ವತಿಗೆ ಅಣ್ಣ-ತಮ್ಮದೀರು ಆಗಿ ಎಂದೋ ಹುಟ್ಟಿದ್ದೇ ಒಂದು ಘನಕಾರ್ಯವಾಗಿ, ಸದ್ಯಕ್ಕೊಂದು ಬಲವಾದ ಕಾರಣವೂ ಆಗಿ, ತಲಾ ಐದೈದು ಲಕ್ಷ ಬರುವುದನ್ನು ಪಡೆದೇ ಹೋಗಬೇಕು. ಇಲ್ಲದಿದ್ದರೆ ಊರಲ್ಲಿ ಜನ ನಮ್ಮನ್ನು ಹುಚ್ಚರಂತೆ ಕಾಣುವುದರಲ್ಲಿ ಅಚ್ಚರಿಯಿಲ್ಲ. ಊರೊಳಗೆ ಕರೆದುಕೊಳ್ಳದೆಯೂ ಇರಬಹುದು! ಅನಾಯಾಸ ಬಂತು, ಸರಿ. ಪೂರ್ವ ಜನ್ಮದಲ್ಲಿ ಕೈಗೊಂಡ ಪುಣ್ಯಕಾರ್ಯಗಳ ಪ್ರತಿಫಲ ಅಂತ ಭಾವಿಸಿ, ಊರಿಗೆ ನಕ್ಕಂತ ಹೋಗಬೇಕು; ಮಾತಿಗೆ ಮಾತಾಗಿ, ಕೈಕೈ ಮಿಲಾಯಿಸಬೇಕಾಗಿ ಬಂದರೆ ಮುಂಬೈಯ ಬಾಡಿಗೆ ಗೂಂಡಾಗಳ ಪಾದ ದರ್ಶನ ಪಡೆಯುವಂಥ ಸೌಭಾಗ್ಯ ದೊರೆತರೂ ಚಿಂತೆಯಿಲ್ಲ, ಶತಾಯ ಗತಾಯ ತಂಗಿ ಆಸ್ತಿಯನ್ನು ನೆಕ್ಕಿಯೇ ಹೋಗಬೇಕು. ಈ ನಡುವೆ 'ಅತ್ತೆಗೆ ಅಳಿಯನ ಚಿಂತೆಯಾದ್ರೆ, ಮಗಳಿಗೆ ಮಿಂಡಗಾರನ ಚಿಂತೆ' ಅನ್ನುವ ಹಾಗೆ, ಯಾರೂ, ಸವಿತಾ ಬಗ್ಗೆ ತಪ್ಪಿಯೂ ಕನಿಕರ ತೋರುವ ಸಾಹಸದ ಗೋಜಿಗೆ ಹೋಗಕೂಡದು.

**ಸವಿತಾ:**

ಸತ್ತುಹೋದ ಪಾರ್ವತಿಯ ಮುದ್ದಿನ ಸಾಕುಮಗಳು. ಕಾಮಾಟಿಪುರದ ಸದ್ಯದ ಫ್ರೆಶ್ ಸುಂದರಿ. ತಾನು

ಪಾರ್ವತಿಯ ಸ್ವಂತ ಮಗಳಲ್ಲ ಎಂಬುದರಿಂದ ಮೊದಲಾಗಿ, ತನ್ನ 'ಕಸದ ತೊಟ್ಟಿಯ ಜನ್ಮ ರಹಸ್ಯ'ದವರೆಗೆ ಬಹುಪಾಲು ಗುಟ್ಟಿನ ವಿಷಯಗಳನ್ನು ಅವರಿವರ ಮೂದಲಿಕೆಯ ಮಾತುಗಳಿಂದಲೇ ತಿಳಿದುಕೊಂಡುಬಿಟ್ಟಿರುವ ಜಾಣೆ ಬೇರೆ. ಹುಟ್ಟಿದಾರಭ್ಯ ಅಮ್ಮನ ಮಡಿಲಲ್ಲೇ ಆಯುಷ್ಯದ ಹೆಚ್ಚು ದಿನ ಕಳೆದಿರುವ ಹುಡುಗಿಗೆ, ಮುದುಕಿಯರ ಪ್ರಕಾರ 'ಇನ್ನೂ ತಲೆ ಮೇಲಿನ ಮಾಸು ಆರಿಲ್ಲ'. 'ಅಲಹಾಬಾದಿನಲ್ಲಿರುವ ಅಪ್ಪ'ನ 'ಸ್ವಂತ ಮಗ'ನ ಮದುವೆಗೆ ಹೋಗುವವರೆಗೆ ಗಟ್ಟಿ ಕಲ್ಲಾಗಿಯೇ ಇದ್ದ ಅಮ್ಮ, ಅಲ್ಲಿಂದ ಬರುವಷ್ಟು ಹೊತ್ತಿಗೆ ಅರ್ಧ ಹೆಣದಷ್ಟು ಮೆತ್ತಗಾಗಿ ಬಂದುದು, ಇವಳಿಗೆ ವಿಧಿಯ ಮೇಲೆ ವಿಪರೀತ ಕೋಪ ತರಿಸಿತ್ತು. ಈಗ ಅವಳು ಸತ್ತ ಮೇಲಂತೂ ಇರುವ ಒಂದೇ ಕೊಂಡಿಯೂ ಕಳಚಿದ ಅನುಭವ. ಸಂತೆಯ ಜನರ ಗಿಜಿಗಿಜಿಯ ಮಧ್ಯೆ ತಾನು ಏಕಾಕಿಯಾಗಿ, ಏಪಸ್ತಳಾಗಿ ನಿಂತಂತೆ ಭಾಸ.

ಅಮ್ಮನ ಅಂತ್ಯ ಸಂಸ್ಕಾರಕ್ಕೆಂದು ಆಗಮಿಸಿರುವ ಮಾವಂದಿರಲ್ಲಿ ದೊಡ್ಡವರ ಮಗನಾದ ದತ್ತುವನ್ನು ನೋಡಿದ ಅವಳಿಗೆ, ಗುಡ್ಡದಿಂದ ಜಾರಿ ಬೀಳುತ್ತಿರುವವಳಿಗೆ ಎಲ್ಲೋ ನಡುವೆ ಕುರುಚಲು ಗಿಡದ ಆಸರೆ ಸಿಕ್ಕಂತಾಗಿದೆ. ಸಾಕಷ್ಟು ಓದಿಕೊಂಡಿರುವ ದತ್ತು ಮಾಮನಿಗೆ ತನ್ನ ಮೇಲೆ ಕರುಣೆ ಮೂಡಿ, ಮದುವೆಯಾಗಿ ಕರೆದೊಯ್ಯಬಾರದೇ... ಎಂದು ಆಶೆಪಟ್ಟಿದ್ದೂ ಉಂಟು, ಹುಚ್ಚುಹುಡುಗಿಯ ಮನಸ್ಸು. ಆಶೆಪಟ್ಟದ್ದು ಮನಸ್ಸೋ, ವಯಸ್ಸೋ? ಸೂಕ್ಷ್ಮಮತಿಗಳಾದ ನೀವೇ ನಿರ್ಧರಿಸಬೇಕು. ಅಲ್ಲಾವುದ್ದೀನ್ ಮಹಾರಾಜ ತನ್ನ ಬಗ್ಗೆ ತೆಗೆದುಕೊಳ್ಳಬಹುದಾದ ತೀರ್ಮಾನದ ಬಗ್ಗೆ ಕುತೂಹಲ, ಧಾವಂತ, ಭಯಗಳು ಸೇರಿದ ಒಂದು ರೀತಿಯ ಭಾವನೆ ಅವಳಲ್ಲೀಗೀಗ ಚಿಗುರೊಡೆದಿದೆ.

## ಅಲ್ಲಾವುದ್ದೀನ:

ಸವಿತಾಳ ತಾಯಿ ಪಾರ್ವತಿಯ ಅನಧಿಕೃತ ಗಂಡ; ಆದರೆ ಸವಿತಾಳ ಅಪ್ಪ ಅಲ್ಲ. ಬದಲಿಗೆ ಶಬಾನಾಳ ಅಪ್ಪ. ಅವನಿಗೆ ತನ್ನ ಹೆಂಡತಿ ಸಾಕಿದ ಮಗಳನ್ನು, ಸವಿತಾ ಎನ್ನುವ ಹೆಸರಿನಿಂದ ಕರೆಯುವುದು ಇಷ್ಟವಿಲ್ಲದ ಮಾತು. ಅವನ ಅಧಿಕೃತ ಹೆಂಡತಿ, ಮಕ್ಕಳು ಅಲಹಾಬಾದಿನಲ್ಲಿ. ದುಡ್ಡು ಮತ್ತು ರಸಿಕತೆಗಳಿಗೆ ಏನೇನೂ ಕೊರತೆಯಿರದ ಉದಾರಿ. ಇವತ್ತಿಗೂ ಸುಮ್ಮನೆ ಕಣ್ಸನ್ನೆಗೆ ಹುಡುಗಿಯರು ಪಟ್ಟಂತ ಬಿದ್ದುಹೋಗಬೇಕು, ಅಂತಹ ಮೈ-ಮನಸ್ಸು ಹೊಂದಿದ ಮನ್ಮಥ ಕುಲಸಂಜಾತ! ಮಣ್ಣಿಗೆಂದು ಬಂದಿರುವ ಕಲ್ಬುರ್ಗಿಯವರು ಆಸ್ತಿಗಾಗಿ ಡಾವು ಹಾಕಿ ಕೂತಿರುವುದು ಗೊತ್ತು. ಅಷ್ಟೇ ಚೆನ್ನಾಗಿ, ಅವರಿಂದ ಒಂದು ಮುರಿದ ಅಲ್ಯುಮಿನಿಯಂ ಚಮಚೆಯನ್ನು ಕೂಡ ಒಯ್ಯಲಾಗದಂತೆ 'ಸೀದಾ' ಮಾಡಿಬಿಡುವ ಕಲೆಯೂ ಗೊತ್ತು.

ಶಬಾನಾಳನ್ನು ಯಾರೊಂದಿಗೂ ಕಳಿಸದೆ, ಯಾವ ನನ್ಮಗನಿಗೂ ಬಿಡಿಗಾಸನ್ನು ತೋರಿಸದೆ (ಮೂಸಿ ಸಹ!)-ಅದೇ ಆ ಮನೆಯಲ್ಲಿ ಇರಲು ಏರ್ಪಾಡು ಮಾಡಬೇಕೆಂಬುದು ಅವನ ಉದಾತ್ತ ವಿಚಾರ.

ಸದ್ಯಕ್ಕೆ ಶಬಾನಾಗೆ ಸುದ್ದಿ ಗೊತ್ತಾಗದ ಹಾಗೆ ನರ್ಸ್ ಲಿಲ್ಲಿ ಬಾಯಿ ಹೊಲಿದುಕೊಳ್ಳಬೇಕಷ್ಟೇ. ಇದಕ್ಕೆಲ್ಲ ಪರಮ ದಯಾಳುವೂ, ಕರುಣಾಳುವೂ ಆದ ಅಲ್ಲಾಹನ ಕೃಪೆಯ ಸಾಥ ಬೇಕು- ಹಾಗೆಂದು ಅಲ್ಲಾವುದ್ದೀನ್ ಬಲವಾಗಿ ನಂಬಿಕೊಂಡಿದ್ದಾನೆ.

## ಲಿಲ್ಲಿ:

ಅಲಹಾಬಾದಿನವಳು. ದುಡ್ಡಿಗಾಗಿ ಮಗನನ್ನೂ ಮಾರಿಬಿಡುವಂಥ ಧನದಾಹಿ ಸ್ವಭಾವ-ಅವಳಮ್ಮನ ಜೀನ್ಸ್‌ಗಳಿಂದ ಇವಳಿಗೆ ಹರಿದು ಬಂದಿದೆ...ಯಂತೆ! ಹುಟ್ಟು ಗುಣ ಸುಟ್ರೂ ಹೋಗೋದಿಲ್ಲವಲ್ಲ; ದುಡ್ಡಿಗಾಗಿ ರಿಸ್ಕಿ ವರ್ಕ್‌ಗಳನ್ನು ಹ್ಯಾಂಡ್ಲ್ ಮಾಡುತ್ತಾಳೀ ನರ್ಸ್. ಅಂಥದರಲ್ಲಿ ಅವಳಿಗೆ ಯಾರಿಗೂ ಇರದ ನಿಸ್ಸೀಮತೆ. ಪಾರ್ವತಿಗೆ ಅಲಹಾಬಾದಿನಲ್ಲಿ ಮದುವೆ ಮರುದಿನವೇ ಅನಾರೋಗ್ಯವಾಗುವುದರಿಂದ ಹಿಡಿದು, ಅವಳ ಹೆಣ ಬಂದು ಇಲ್ಲಿ ಮುಂಬೈಯ ಕಾಮಾಟಪುರದ ಗಲ್ಲಿಯಲ್ಲಿ ಬೀಳುವತನಕ ಅವಳನ್ನು ನೋಡಿಕೊಂಡೇ

ಬಂದ ಚತುರೆ. ಬಂದ ಕೆಲಸ ಅಚ್ಚುಕಟ್ಟಾಗಿ ಮುಗಿಸಿದರೂ, ಇನ್ನೂ 'ಮಜೂರಿ' ದೊರೆತಿಲ್ಲವಾಗಿ ಅಲ್ಲಾವುದ್ದೀನ ಮಹಾರಾಜರ ಕೈ ನೋಡುತ್ತ ನಿಂತಿದ್ದಾಳಷ್ಟೇ. ಬರಬೇಕಾದುದು ಬಂದುಬಿಟ್ಟರೆ ಮತ್ತೊಮ್ಮೆ ಈ ಕಡೆ ಕುಂಡೆ ತಿರುವಿ ಹೂಸೂ ಬಿಡುವವಳಲ್ಲ, ಅಂತಹ ಪಕ್ಕಾ ಲೆಕ್ಕಾಚಾರದಾಕೆ. ಕಾಲಕಾಲಕ್ಕೆ ಮಳೆ ಬಂದು ಜನರೆಲ್ಲ ಸೌಖ್ಯದಿಂದಿರುವುದು ಇಂಥವರಿಂದಾಗಿಯೇ ಅಂತೆ. ಹಾಗಂತ ಈ ನರ್ಸ್ ಲಿಲ್ಲಿಯ 'ಹಿಂದೆ-ಮುಂದೆ' ಗೊತ್ತಿರದ ಈ ಕಾಮಾಟಿಪುರದ ಗಬ್ಬು ಮುದುಕಿಯರು ತೀರ ಮಕ್ಕಳಷ್ಟು ಮುಗ್ಧರಾಗಿ ಮಾತಾಡಿಕೊಳ್ಳುತ್ತಾರೆ.

ಲಿಲ್ಲಿ ಮಾತ್ರ ದಿನವೂ ಸಂಜೆ ಪ್ರಾರ್ಥಿಸುತ್ತಾಳೆ: ''ಪರಲೋಕದಲ್ಲಿರುವ ತಂದೆಯಾದ ಯೇಸುವೇ, ಈ ಬಡಪಾಯಿ, ನಿರುದ್ಯೋಗಿ ಮುದುಕಿಯರಿಗೆ ಒಳ್ಳೆ, ಕೆಲಸ ಮಾಡುವಂಥ 'ತಲೆ'ಗಳನ್ನು ಕರುಣಿಸು. ಆಮೆನ್!''



## ಮುದುಕಿಯರ ಬಾಯಿ:

ಇವರದೆಲ್ಲ ಇಳಿಬಿದ್ದ ತೊಗಲು, ಗುಳಿ ಬಿದ್ದ ಕಣ್ಣು. ಮನೆಯಲ್ಲಿ ಇವರೆಂದರೆ ಸಾಕು, ಬರಬಾರದ ಬೈಗಳು. ವಯಸಿನಲ್ಲಿ 'ಉಂಯ್' ಅಂತ ದುಡಿ ದುಡಿದು(!) ಹಣ್ಣಾದವರೇ ಎಲ್ಲ. ಆದರೂ ಎಲ್ಲ ದುಡಿದು ದುಡ್ಡು ತರುವವರೆಗಿನ ಮಾತು. ಆಗೆಲ್ಲ ನಡೀತಿತ್ತು. ಈಗ ಎಲ್ಲವನ್ನೂ ಯಂಗ್‌ಸ್ಟರ್ಸ್ ನಡೆಸಿಕೊಂಡುಹೋಗುತ್ತಿದ್ದಾರೆ. ಇವರಿಗೆ ಮಾಡಲು ಕೆಲಸವಿಲ್ಲ; ಗಿರಾಕಿಗಳಂತೂ ಬರುವ ಹಾಗಿಲ್ಲ! ಮಾಡುವುದಾದರೂ ಏನು? ಮನೆಯಲ್ಲಿ ತಾಚಿಕಾರ ಬೇರೆ, ಸುಮ್ಮನೆ. ಬಾಣಂತಿಯರ ಆರೈಕೆ ಮಾಡುವ 'ಕೇರ್ ಟೇಕರ್' ಆಗಿ, ಅನೈತಿಕ ಪಿಂಡವನ್ನು ಅಬಾರ್ಷನ್ ಮಾಡುವ 'ಡಾಕ್ಟರಾ'ಗಿ, ಗಲ್ಲೀಲಿ ಯಾರೇ ಸತ್ತರೂ ಫ್ರೀಯಾಗಿ ಹಾಡಿ ಅಳುವ 'ರುಡಾಲಿ'ಗಳಾಗಿ... ಹಲವು ಅವತಾರಗಳನ್ನೆತ್ತುತ್ತಾರೆ! ಅವರಿವರ ಸುದ್ದಿ ಎಂದರೆ ಇವರಿಗೆ ಟೈಂಪಾಸಿಂಗ್ ಬಬ್ಬಲ್ ಗಮ್.

ಇವರ ಪ್ರಕಾರ-ಪಾರ್ವತಿ ಪುಣ್ಯವಂತೆ. ಸಣ್ಣ ವಯಸ್ಸಿಗೇ 'ಡಮ್' ಅಂದು ಇವೆಲ್ಲ 'ಕಿರಿಕಿರಿ'ಗಳಿಂದ ಪಾರಾದಳು. ಅಲ್ಲಾವುದ್ದೀನ್ ಎಂದರೆ ಅಲ್ಲಾನೇ ಸರಿ. ಇವತ್ತು ನಾಳೆ ಸ್ವಂತ ಮಕ್ಕಳನ್ನೇ ಸರಿಯಾಗಿ ನೋಡಿಕೊಳ್ಳುವವರಿಲ್ಲ; ಅಂಥದ್ದರಲ್ಲಿ ಸವಿತಾ ಉರುಫ್ ಶಬಾನಾಳಿಗೆ ಮದುವೆ ಮಾಡಿ, ಇಲ್ಲೇ ಇರುವ ಸಕಲ ಏರ್ಪಾಡೂ ಮಾಡುತ್ತಾನಂತೆ.

ಅಲಹಾಬಾದಿನ ನರ್ಸು-ಫ್ಲಾರೆನ್ಸ್ ನೈಟಿಂಗೇಲಳ ಅಪರಾವತಾರ. ಅಲಹಾಬಾದಿನಿಂದ ಮುಂಬೈ ತನಕ ಟ್ರೇನಿನಲ್ಲಿ ಅಸ್ವಸ್ಥ ಪಾರ್ವತಿಯ ಬೇಕು-ಬೇಡಗಳನ್ನು ನೋಡುತ್ತ ಬಂದುದು ಮತ್ತು ಈಗ ಅಂತ್ಯ ಸಂಸ್ಕಾರವಾಗುವವರೆಗೆ ತಾನು ಹೋಗುವುದಿಲ್ಲ ಎನ್ನುತ್ತಿರುವುದು, ಎಲ್ಲರಿಂದಲೂ ಸಾಧ್ಯವಾಗುವ ಮಾತಲ್ಲ... ಹೀಗೇ ಇನ್ನೂ ಮುಂತಾಗಿ.

ಈ ಮುದುಕಿಯರಿಗೆ ಸತ್ಯವೆಂಬುದು ಅವರ ಬಾಲ್ಯದಷ್ಟು ದೂರವಿರುವ ಸಂಗತಿ!

**ಸತ್ಯವೆಂಬ ಕಹಿಯು:**

ವಯಸ್ಸಿನಲ್ಲಿದ್ದಾಗ ಯಾವನೋ ಜೊತೆ ಊರಿಂದ ಮುಂಬೈಗೆ ಓಡಿಬಂದಿದ್ದ ಪಾರ್ವತಿಗೆ, ತನ್ನನ್ನು ಅವ ಬೇಕಾಗುವಷ್ಟು ಉಪಯೋಗಿಸಿಕೊಂಡು ದಂಧೆಯ ಮುದುಕಿಯೊಬ್ಬಳಿಗೆ ಮಾರಿ ಹೋದಾಗಲೇ, 'ಆಕಾಶ ಕಳಚಿ ತಲೆ ಮೇಲೆ ಬೀಳುವುದು' ಎಂದರೇನೆಂದು ತಿಳಿದಿದ್ದು. ಆ ಹೊತ್ತಿಗಾಗಲೇ ಹಲವು ಅನರ್ಥಗಳೂ ನಡೆದು, ನಂತರ ಅಲ್ಲಿಯ ಖಾಯಂ ಗಿರಾಕಿ ಅಲ್ಲಾವುದ್ದೀನನ ಮನಸು ಕದ್ದು ಅವನ ಹಿಂದೆ ಹೋದುದೇ ಕಾರಣವಾಗಿ ಅವಳ ಬದುಕಿಗೊಂದು ಹೊಸ ಅರ್ಥ ದೊರೆಯಿತು. ಥೇಟ್ ಸಂಸಾರವೊಂದಿಗರಂತೆ ಮನೆಯಲ್ಲಿದ್ದ ಅವರಿಗೆ ಬಹುಕಾಲದವರೆಗೂ ಮಕ್ಕಳಾಗಲಿಲ್ಲವಾದ್ದರಿಂದ ಈಕೆ, ಮನೆಮುಂದೆ ಯಾರೋ ಬಿಸಾಡಿಹೋಗಿದ್ದ ಹೆಣ್ಣು ಕೂಸೊಂದನ್ನು ಸಾಕಿಕೊಂಡಳು. ಮೊದಲೆಲ್ಲ ಇದಕ್ಕೆ ಸಾಕಷ್ಟು ಪ್ರತಿರೋಧ ವ್ಯಕ್ತಪಡಿಸಿದ ಅಲ್ಲಾವುದ್ದೀನ, ಕೊನೆಗೆ ತನ್ನ ಮಾತು ನಡೆಯದಾದಾಗ ಪಾರ್ವತಿಯು 'ಸವಿತಾ' ಎಂದು ಹೆಸರಿಟ್ಟಿದ್ದ ಆ ಕೂಸಿಗೆ 'ಶಬಾನಾ' ಅಂತ ಕರೆಯುವ ಮೂಲಕ ಮನಸ್ಸಿಗೆ ಸಮಾಧಾನ ಹೇಳಿಕೊಂಡು ಸರಿಮಾಡಿಕೊಂಡ.

ಈಗ ಹದಿನೆಂಟು ವರ್ಷಗಳ ನಂತರ ಶಬಾನಾ ಉರುಫ್ ಸವಿತಾ ಅವನ ಕಲ್ಪನೆ ಮೀರಿ ಸೊಗಸಾಗಿ ಬೆಳೆದುನಿಂತಿದ್ದಾಳೆ. ಆಹಾ! ಪಾರ್ವತಿಯೊಬ್ಬಳಿಲ್ಲದಿದ್ದರೆ ಸವಿತಾಳಿಗೊಬ್ಬ 'ಮಾಪಾಶ'ನನ್ನು ಹುಡುಕಿ ಮದುವೆ ಮಾಡಿಬಿಡಬಹುದಿತ್ತು.

ಅವಳೇನು ಸ್ವಂತ ಮಗಳೇ?!

ಇರಲು ಸಕಲ ವೈಭವಗಳಿಂದ ಕೂಡಿದ ಅದೇ ಮನೆ ಸಾಕಲ್ಲ? ತಾನು ವಾರ-ಹದಿನೈದು ದಿನಕ್ಕೊಮ್ಮೆ ಬಂದು ಹೋಗಬಹುದು. ಒಳ್ಳೇ ಜನ, ಇನ್ನೂ ತಂದೆ-ಮಗಳ ಸಂಬಂಧದ ಬಗ್ಗೆ ಅನುಮಾನಪಡುವಷ್ಟು ಕೆಟ್ಟವರಾಗಿಲ್ಲ. ಮೊದಲೆಲ್ಲ ಪಾರ್ವತಿಯಿದ್ದಳು; ಈಗ ಅದೇ ಸ್ಥಾನದಲ್ಲಿ ಶಬಾನಾ ಬರುವಂತಾಗಬೇಕು! ಎಂದು ಅಲ್ಲಾವುದ್ದೀನ್ ಬಾಯಲ್ಲಿ ನೀರು ಸುರಿಸಿಕೊಂಡು ಪಲ್ಲು ತುಟಿ ಸವರಿಕೊಂಡ. ಅದಕ್ಕಾಗಿ ಮುಹೂರ್ತವೂ ರೆಡಿಯಾಯ್ತು. ಅಲಹಾಬಾದಿನಲ್ಲಿ ತನ್ನ ಸ್ವಂತ ಮಗನ ಮದುವೆಗೆ ಪಾರ್ವತಿಯನ್ನು ಕರೆಸಿಕೊಂಡ. ಎರಡು ದಿನ ಚೆನ್ನಾಗಿ ನೋಡಿಕೊಂಡು, ಸೀದಾ ಮುಂಬೈ ತಲುಪಿದ ಮೇಲೆ ಪ್ರಾಣ ಬಿಡುವಂತೆ ತಕ್ಕ ಏರ್ಪಾಡು 'ಮಾಡಿಸಿದ'. ದಾರಿ ಮಧ್ಯೆಯೇ ಪ್ರಾಣ ಬಿಡದಂತೆ ನೋಡಿಕೊಳ್ಳಲು ಕೂಡ ಅದೇ ನರ್ಸ್ ಲಿಲ್ಲಿಯನ್ನು ನೇಮಿಸಿ, ಹಾರ್ದಿಕವಾಗಿ ಬೀಳ್ಕೊಟ್ಟ.

ಕಲ್ಬುರ್ಗಿಯವರೇನೂ ಕಡಿಮೆಯವರಲ್ಲ. 'ತಂಗಿ' ಓಡಿಹೋದಲಾಗಾಯ್ತು, ಅವಳ ವಿಳಾಸ ದೊರೆತ ಮೇಲೂ, ತಮ್ಮ ಪಾಲಿಗೆ ಅವಳು ಸತ್ತಂತೆ ಎಂದುಕೊಂಡರು. ನಿಜವಾಗಿಯೂ ಸತ್ತಾಗ ಮಣ್ಣಿಗಾದರೂ ಆಗೋಣ ಅಂತ ಓಡೋಡಿ ಬಂದವರಿಗೆ ಕಂಡಿದ್ದು ಪಾರ್ವತಿಯ ಹೆಣವೇ? ಅಲ್ಲ. ಲಕ್ಷ ಲಕ್ಷ ಝಣ-ಝಣ ಹಣ! ಅವರ್‍ಯಾರಿಗೂ ಶಬಾನಾಳ ಚಿಂತೆಯಿಲ್ಲ. ಈ ಪೋರಿಗೂ ಅಪ್ಪನ ಮನಸಿನೊಳಗಿನ ರಾಮಾಯಣದ ಕಥೆ ತಿಳಿದಿಲ್ಲ. ಸ್ವತಃ ಹುಡುಗಿಗೇ ಗೊತ್ತಿಲ್ಲದ ಮೇಲೆ ಮುದುಕಿಯರಿಗೆ ಗೊತ್ತಿರಬೇಕಂತ ಯಾರೂ ಬಯಸುವುದು ತಪ್ಪಾಗುತ್ತದೆ!





# ಸಾಲ್‌ಮಿಂಚು

ಸಂತ್ಯಾಗ ಮತಮತ್ತ ದಿಟ್ಟೇಯ ನೆಟ್ಟಾಕಿ ಏಕಾಂತದೊಳಗ್ಯಾಕ ಗಪ್ಪಾಗಿ ಕುಂತಿ?

ವಸುಂಧರ ದೇಸಾಯಿ

ತಿಳಿಗೊಳದಲ್ಲಿ ಸುಳಿದ ನಕ್ಷತ್ರ ಮೀನು-ನೀನು. — ಬಿ. ಎನ್. ಮಲ್ಲೇಶ್

ವಸಂತ- ಹಿಡಿದಿದ್ದಾನೆ ಬಣ್ಣದ ಛತ್ರಿ ಎಲ್ಲಿ ನೋಡಿದರಲ್ಲಿ. — ಎಸ್. ಎನ್. ಸುನಂದ

ಬೆಳದಿಂಗಳು ನೀನು ಮನೆಯೊಳಗೆ ಬರಲಾರೆ. ಅದಕ್ಕಾಗೇ ನಾನು ಬೀದಿಗೆ ಬಂದಿದ್ದೇನೆ.

ವಿ.ಕೆ. ಆಕಾಶ್

ಹೃದಯ ಅಳುಕಿದ್ದ ದಿನ, ಹುಡುಗ ಹಠಕ್ಕೆ ಬಿದ್ದಿದ್ದ. ಇನ್ನು ಪ್ರೀತಿ ಸಾಕೆಂದು ಎದ್ದು ಹೋದವನು ಚಂದ್ರಗ್ರಹಣ ಬಿಟ್ಟರೂ ಬರಲಿಲ್ಲ. — ಎಂ.ಸಿ. ಶೋಭಾ

ಅಪ್ಪ ಅಂದರೆ: ಶಾಲೆಯ ಮೊದಲ ದಿನ ಬಂದು ಗೇಟಿನವರೆಗೆ ವಿಶ್ವಾಸ ತುಂಬಿದವನು. ಕ್ರಮೇಣ ಹೆಸರಿನ ಹಿಂದೆ ಇನಿಶಿಯಲ್ ಆದವನು. — ಕು.ಸ. ಮಧುಸೂದನ


ನೀನು ಬೆನ್ನು ತಿರುಗಿಸಿ ಹೊರಟ ಮೇಲೆ, ಒಲೆಯ ಬೆಂಕಿ ಸದ್ದಿಲ್ಲದೆ ಆರಿದೆ. — ಪ್ರಭಾಕರ


ಬಿಸಿಲು ಅಲ್ಲಾಡುತ್ತಿಲ್ಲ, ಹೊರಗೆ ಎಲೆಗಳು ಅಲ್ಲಾಡಿವೆ. — ಸಿ.ವಿ. ಶೇಷಾದ್ರಿ, ಹೊಳವನಹಳ್ಳಿ

ಆಗಾಗ ನನ್ನೊಳಗೆ ನಿನ್ನ ಬರವಿನ ಸದ್ದು. — ಅಳಗುಂಡಿ ಅಂದಾನಯ್ಯ

ನೀನು ಬಂದ ಮೇಲೆ ನಮ್ಮನೆ ದೀಪದ ವೋಲ್ಟೇಜು ಹೆಚ್ಚಿದೆ. — ಇಂದ್ರಕುಮಾರ್ ಡಿ. ಹುಲ್ಲುಮನೆ

ಸಮಾಧಿಗಳ ನಿಶ್ಶಬ್ದವನ್ನು ಆಲಿಸುವ ಶಕ್ತಿ ಇತಿಹಾಸಕ್ಕಿಲ್ಲ. — ಅ. ವಿವೇಕಾನಂದ





ಎಂ. ಎಸ್. ವೇದಾ

# ಬಿಳಿಯೆಣ್ಣು, ದುಂಡವ್ವನ ದೆವ್ವ

ಮಾಮೇರಿ ಮಳೆ ವೂರಿಗೆ ವೂರೇ ಕೊಚ್ಚಿಕೊಂಡು ವೋಗುವಂತೆ ಜೊರ್ರ್ರೋ ಎಂದು ಹುಯ್ಯತೊಡಗಿದಂತೆ ಬಿಳಿಯೆಣ್ಣು, ಹಟ್ಟಿ ಆವರಿಸಿಕೊಂಡ ಕತ್ತಲಿಗೆ, ಹಟ್ಟಿಯ ಮ್ಯಾಲೇ ಕವುಚಿಕೊಂಡಿದ್ದ ಮೋಡಗಳಿಗೆ, ಮೋಡಗಳ ಸೀಳುವ ಕೋಲ್ಮಿಂಚುಗಳಿಗೆ, ಕೋಲ್ಮಿಂಚುಗಳು ಮೂಡಿಸುವ ಗುಡುಗಿನ ಸದ್ದಿಗೆ ಹೆದರಿಕೊಂಡು ಮೂಲೆ ಸೇರಿ ಕುಂತುಗೊಂಡಿತ್ತು. ಹನ್ನೆರಡು ಕಂಬದ ಹಟ್ಟಿಯ ಸೂರುಗಳಿಂದ ತೊಟ್ಟಿಗೆ ಬೀಳುತ್ತಿದ್ದ ನೀರ ಸದ್ದು, ಚಳಿ ಮಳೆಗೆ ಹೆಚ್ಚಿದ ಕೊಟ್ಟಿಗೆಯ ದನಕರುಗಳ ಸೊರಬರ ಸದ್ದು-ಬೇರ್‍ಯಾವ ಸದ್ದನ್ನೂ ಅವುಗಳ ಕಿವಿಗೆ ಹಾಯದಂತೆ ಮಾಡಿದ್ದವು. ಆ ಯೆಣ್ಣ ಮುಂದೆ ಆವಮ್ಮ ಬಂದು ಮೂತಿ ತಿವಿದಾಗಲೇ, 'ಯಾನೋ ತನಗ ಈವಮ್ಮ ಯೇಳ್ತಾ ಅವ್ಳೆ' ಎಂಬುದು ಅದಕ್ಕೆ ಅರಿವಾದದ್ದು.

''ಅದ್ಯಾವ್ ಸೀಮೆಯೋಳಮ್ಮಿ ನೀನು? ವುಯ್ತಾ ಇರಾ ಮಳಗಾ ಯಿಪಾಟಿ ಹೆದ್ರುಕಂಡ್ ಕುಂತೀರಾ ಯಾಸದ ಯೆಂಗ್ಸ ನಾ ಯಿವತ್ತೇ ಕಮ್ಮಿ ಕಂಡಿರಾದು. ಸರಿ ಬುಡು, ಬೇತೂರಿ ಗಂಡ ಹಾತವುಳ ಕಡ್ದು ಸತ್ತ ಅಂದಂಗಾಯ್ತು.'' ಮೊದಲಿಗೇ ಅವಳು ಹಂಗೆ ಕುಂತುಬುಟ್ಟದ್ದನ್ನು 'ಯಾಸ' ಎಂಬುದಾಗಿ ತಾನು ಪರಿಗಣಿಸಿರುವುದನ್ನು ತಲುಪಿಸಿ, ''ನೀನ್ ಗಂಡಾ ವರಕ್ ಹ್ವಾಗುವಾಗ, ಹಿತ್ಲಲ್ಲಿ ವಂದ್‌ಗಾಡಿ ಅಳ್ ವಣಾಕದೆ, ಮಳಾ ಬಂದ್ರಾ ಯೆತ್ ಹಟ್ಟಿಗ ಹಾಕ್ಕ ಅಂತ ಹ್ಯಾಳಿರ್‌ನಿಲ್ವಾ. ಯೆತ್ ಹಾಕಂಡ್ಯಾ ಗ್ರ್ಯಾಸ್ತಗಿತ್ತಿ? ನೀನೂ, ನಿಮ್ ಅತ್ತೆಯ್ನೋರೂ-ನಮ್ಮಗೋಳಾ ಕಾಸುಗ್ ಯಾಸ ಹಾಕೋರ್, ಅಣಿಗೇ ಕುಣಿಯೋರೂಂತ ಬಂದಾಗ ಲಬಲಬಾಂತ್ ಬಾಯ್ ಬಡ್ಕಂಡು ಯಾಸ ಆಕ್‌ಬುಟ್ರಿ, ನೀಯೆಂಥ ಗರ್ತಿಯಾ, ನೀ ಯಾವ ಸೀಮ ವಗ್ರ್ರನ ಮಾಡ್ತಿದ್ದೀಯಾ.''?

ಬಿಳಿಯೆಣ್ಣು ಅತ್ಯಂತ ಚೋಚಿಗಪಟ್ಟುಕೊಂಡು ಅವಳತ್ತ ತನ್ನ ದಿವೀನ ದೃಷ್ಟಿ ಹಾಯಿಸಿತ್ತು. ''ಟೇಜನ ಮ್ಯಾಲೆ ವೂರ ಜಾತ್ರ್ರಯ ನಾಟುಕಕ್ಕೆಂದು ಕಾಸಿಗಾಗಿ ಯಾಸ ಕಟ್ಟಲು ಬಂದೋಳ ಅವ್ವಾ! ಮಗುಳ ತನ್ನ ಗಂಡನ ಕೂಡೆ ತ್ವಾಟದ ಮನೆಯಾಗಿರಿಸಿ, ತನ್ನ ಹಟ್ಟಿಯ ವಕ್ಕೀ ತನ್ನ ಮ್ಯಾಲೇ ಜಬರ್‌ದಸ್ತು ತೋರುಸ್ತಾ ಇರೋಳು. ಹಿಂಗೂ ಉಂಟಾ ಸಿವ್ನೆ. ಹರ್ಕಥೆ ದಾಸ್ರು ಕಾಲ ಕೆಟ್ಹೋಗದೆ ಅನ್ನಾದು ದಿಟವೇ ಅನ್ನಬೇಕು ಇಂಥೋರ ನೋಡಿ, ಇಂಥದ್ನ ನೋಡಿ'', ಎಂದು ತನ್ನ ದಯನೀಯ ಪರಿಸ್ಥಿತಿಯನ್ನು ನೆನೆಪಿಸಿ ಕೊಳ್ಳುತ್ತಾ ಬಿಳಿಯೆಣ್ಣು ಅಂದುಕೊಂಡಿತ್ತು. ಯೆಂಥಾ ಯಡವಟ್ಟಿನ ಪರಿಸ್ಥಿತಿ ತಂದು?!

''ಅವ್ವಾ ತಾಯಿ ತಿಪುರಮ್ಮಣ್ಣೆ, ಯಾಸ ಆಕ್ಕಂಡು ಜೀವ್ನದ್ ಯಾಪ್ನೆ ಮಾಡ್ತಾಯಿರೋಳ್ ನಾನಲ್ಲ ಕವ್ವಾ. ನೀನೂ, ನಿನ್ ಮಗ್ಳೆಯಾ. ಆದಾ ನಾ ತೆಪ್ಪು ಅನ್ನಾಕಿಲ್ಲ. ವಟ್ಟೆ ಪಾಡ್‌ಗೋಸ್ಕರ ಯೆಲ್ಲಾ ಒಂದೊಂದ್ ತೆರಾ ಯಾಸ ಹಾಕ್ಕೋ ಬೇಕು. ಆದ್ರಾ ಜೀವುನ್‌ದಾಗೇ ಬ್ಯಾರೆಯೋರ ಹಟ್ಟಿ ವಡೀಯಾಂತ ಇಂಥ ಯಾಸ ಆಕ್‌ಬ್ಯಾಡಿ ಕಣ್ರ್ರವ್ವಾ ತಾಯೀರಾ. ನೀವ್ ವುದ್ಧಾರ ಆಗಾಕಿಲ್ಲ. ಯಾರ್ದೋ ಹಟ್ಟೀಗ್ ಬಂದು ಆ ಹಟ್ಯಾ, ಆ ಹಟ್ಟಿ ಯಾಸ್ತಿನೆಲ್ಲಾ ನಾಕ್ ದಿನದಾಗೇ ನಂದೇ ಅನ್ನಾಂತ ಧೈರ್ಯುವಾ ಮೆಚ್ಕಬ್ಯಾಕಾದ್ದೆ. ಶ್ಯಾನೆ ದಿನ ಇವೆಲ್ಲ ನಡಿಯಾಕಿಲ್ಲಾ ತಿಳ್ಕಾ ಅಮ್ಮಣ್ಣೆ,'' ಬಿಳಿಯೆಣ್ಣಗೆ ಯೇನೇನೋ ನುಡಿಯಬೇಕು ಅನ್ನಿಸಿತ್ತು. ಆದರೆ ವಟ್ಟೆಯ ಮಾತು ತುಟಿಗಿಳಿಯನಿಲ್ಲ.

ದಥಾರ್ರ್ರೆಂದು ಆನ ಗಾತ್ರದ ಕದವ ದೂಡಿಕೊಂಡು ಬಂದ ಕೃಷ್ಣಯ್ಯನ ಆಗಮನಕ್ಕೋ, ತೆಗೆದ ಕದದ ವಂದಿಗೆಯೇ ಹಟ್ಟಿವೊಳಗೆ ನುಗ್ಗಿಬಂದ, ಎರಚಲು ಮಳೆ, ಗಾಳಿಗೋ ಮೂಲೆ ಸೇರಿ ಕುಂತಿದ್ದ ಬಿಳಿಯೆಣ್ಣು ಗಡಗಡ ನಡುಗಿವೋಗಿತ್ತು. ಗೂಳಿಯಂಗೆ ಬಂದ ಯಜಮಾನನ ಮುಂದ ಈಯಮ್ಮ ಯಾನಾರಾ ಯೇಳಿದರೆ ತೀರೇವೋಯ್ತು. ಯಾನು, ಯತ್ತ ಅಂತ ಕ್ಯಾಳದೆಯೆ ತನ್ನ ಸ್ವಾಟೆ ತಿವುದು, ತಲ ಮೊಟಕಿ, ಮುಖ ಮುಸುಡಿ ನೋಡದೆಯಾ ದಪದಪ ಬಾರುಸಿಬುಡುತ್ತಾನೆಂಬುದನ್ನು, ಒಂದೆಲ್ಡು ವರ್ಷ ಗಳ ಅವಧಿಯ ಅನುಭೋಗದಿಂದ ಗಂಡನನ್ನು ಅರಿತಿದ್ದ ಬಿಳಿಯೆಣ್ಣು, ಅದಕ್ಕೆ ತಯಾರಾಗುತ್ತಿದ್ದಂತೆ,

''ಸ್ವಾಡಿ ಗೌಡ್ರ ನಿಮ್ ಮಹಾರಾಣ್ಯಾ. ಹಿತ್ಲಲ್ಲಿ ವಣಾಕಿರಾ ಅಳ್ಳಾ ತಂದ್ ವಳಕ್ ಆಕ್ಕಂಡ್ರ್ಯಾ ಅಂತ ಕ್ಯಾಳುದ್ರೆ, ವಳ್ಳೆ ದೆಯ್ಯ ಹಿಡ್ಡಿರೋ ಹಂಗೆ ಕುಂತಿರಾದಾ. ಮಳಗಾ ಅಂಜ್ ಕಂಡ್ ಯಾರಾರ ಹಿಂಗ್ ಮೂಲ ಹಿಡ್ಕಂಡು ಕುಂತಗಂಡರಾ. ಯಾಸ ಚೆನ್ನಾಗ್ ಆಕ್ತೋಳ್ ನೋಡ್ರಿ'', ತಿಪುರಮ್ಮಣ್ಣಿ ವರದಿ ವಪ್ಪಿಸಿಬುಟ್ಟಿದ್ದಳು.

''ಹಾವುನ್ ಜ್ವತೆ ಹಾದ್ರ ಮಾಡೋಳಂತೆ ಸೇದಾ ಅಗ್ಗುಕ್ಕೆ ಅಂಜ್ ಕಳಲಂತೆ. ಗಾದೇನೇ ಕ್ಯಾಳಿಲ್ವಮ್ಮಿ, ಹಂಗಾಯ್ತು'', ತಿಪುರಮ್ಮಣ್ಣಿಯ ಕಡಗಾ ಕಣ್ಣು ವೊಡೆದು ನುಡುದು, ''ಅಳ್ಳು ತಿಪ್ಪಾ ಸೇರುದ್ರ ನಿಮ್ ಅಪ್ಪನ್ ಮನಿಂದ ತಂದ ಯೇನೇ ಬಡ್ಡಿ ಕೂತ್ಕಂಡು ರಾಜ್‌ಭಾರ ಮಾಡಾಕೆ ನಿನ್ನ ಮದ್ವ ಮಾಡ್ಕಂಡು ತಂದಿವ್ನಿ ಅನ್ಕಂಡ್ಯಾ ಹೆಂಗೆ. ಅದ್ಸರಿ, ನಮ್ಮವ್ವಾ, ನಿಮ್ಮ ಪಿರೂತಿ ಅತ್ತೆಯ್ಯೋರು ಯೆಲ್ಲಿಗೋದ್ರು ಅಂತೀನಿ? ವುಸಾರಿಲ್ಲ ಔಸ್ತಿ ತರಾಕೋಗೋರೆ ಅಂದ್ಯಲ್ಲಮ್ಮಿ. ನಂಗೆ ತಿಳೀದೆ ಹ್ವಾದಾತ. ನಿಮ್ ಅತ್ತಿಗೆಮ್ಮೋರ್ಗೆ ವಸಾ ಸುದ್ದಿ-ಆದೇಯಾ ಯಾಸದೋಳ ತಂದು ಮನೇಲಿ ಇಟ್ಕಂಡೋವ್ನೆ-ಅನ್ನಾದ ಅರುವಿ ಅವಳ ಇಲ್ಲಿಗೆ ಕರ್ಕಂಬಂದು ಯಾಜ್ಯ ಮಾಡಾಕ್ ತಾನೇಯಾ ಆ ಮುದ್ಕಿ ಹ್ವಾಗಿರಾದು ಮಗ್ಳು ಹಟ್ಟೇಗಾ. ಅತ್ತೆ-ಸೊಸಾ ನನ್ ಹತ್ರುವೇ ಯಾಸ ಆಕಿ ನಾಟ್ಕ ಆಡ್ದರ್ಯಾ'', ಕೃಷ್ಣಯ್ಯನ ಯೆಜ್ಜ ತಾನು ಕುಂತ ಮೂಲೆಗೆ ಹತ್ರಹತ್ರವಾದಂತೆ ಬಿಳಿಯೆಣ್ಣು ಮತ್ತೂ ಬಿಳುಚಿಕೊಂಡು ಗಡಗಡ ನಡುಗತೊಡಗಿತ್ತು. ಅವುನ ಯೆಜ್ಜೆಗಳು ಅವುಳ ಮುಟ್ಟುವ ಮುಂಚೆಯೇ ಯಿಚಿತ್ರವಾದ ದೊಡ್ಡ ಸೊರವೊಂದನ್ನು ವರಡಿಸಿ, ಮೈಕೈಯ್ಯಾ ವದರುತ್ತಾ, ನೆಲುಕ್ಕೆ ವುಂಟಿಕೊಂಡಿತ್ತು. ''ಇದೂ ವಂದು ಯಾಸವಾ ಅಥ್ವ ಮೊಲ್ಲಾಗ್ಗರವ. ಆ ಸಿವುಂಗೇ ಗೊತ್ತು ಕಣ್ಣಪ್ಪಾ ಗೌಡ. ಲಗ್ಣಾಗಿ ಒಂದೆಲ್ಡು ವರ್ಸಾನೆ ಕಳದೋಗದೆ ಅಲ್ವಾ. ಹಟ್ಟಿ ತುಂಬಾ ವಾಡಾಡಾಕೆ ಒಂದ್ ಕುಡೀನಾ ಯೆತ್ ಕೊಡ್ಲಿಲ್ಲ. ಅತ್ತಿಯಂಗೆ ಬಿಳ್‌ಚ್ಕಂಡು ಮೊಲ್ಲಾಗ್ಗರ ಬಂದು ನಡೀಕ್ಕಂಡು ಬಿದ್ಗತ್ತದಲ್ಲಾ ಗೌಡ್ರ. ಆಡಂಗಿಲ್ಲ ಅನುಬೋಸೋ ಅಂಗಿಲ್ಲ. ಒಂದಾ



ಡುದ್ರೆ, ಯೆಚ್ಚು, ಒಂದಾಡುದ್ರೆ, ಕಡ್ಮಾ. ಇದ್ರ ಕುಟ್ಪಾ ಇಷ್ಟ್ ಜನಾ ಆದೆಂಗ್ ಬಾಳ್ವ ಮಾಡುದ್ರಿ ಗೌಡ್ರ. ನಾಕ್ ಜನುಕ್ಕಾ ಈ ಯಿಷ್ಯಾ ಗೊತ್ತಾದ್ರೆ ಗೌಡ್ರಟ್ಟಿ ಸೊಸಗಾ ಮೊಲ್ಲಾಗ್ಗರ ಅಂತ ವೂರಜನಾ ತಿಕಾ ಬಡ್ಕಂಡು ನಗಾಕ್ಕಿಲ್ವಾ'', ತಿಪುರಮ್ಮಣ್ಣಿಯ ಮಾತುಗಳು ತನ್ನ, ತನ್ನ ಹಟ್ಟಿಯ ಮಾನ ಮರುವಾದಿಯ ಬುಡಕ್ಕೇ ಯೇಟು ಹಾಕ ಬಯಸುತ್ತಿವೆ ಎಂಬ ಅರಿವು ಆದಾಗ ಕೃಷ್ಣಯ್ಯ ಯೆಚ್ಚುತ್ತುಕೊಂಡವನಾಗಿ;

''ಮುಚ್ಕಳ್ಳಮ್ಮಿ ತಿಕಾ ಬಾಯ. ಅದ್ಯಾವಳಮ್ಮಿ ಅವುಳ್ಗಾ ಮೊಲ್ಲಾಗ್ಗರ ಅಂದಿದ್ದು. ಅವುಳ್ಗಾ ಮೊಲ್ಲಾಗ್ಗರ ಗಿಲ್ಲಾಗ್ಗರ ಯಾನೂ ಇಲ್ಲ. ದೆಯ್ಯ ಹಿಡ್ಕಂಡದೆ, ದುಂಡವ್ವನ ದೆಯ್ಯ. ಅಷ್ಟೇಯಾ. ನಮ್ಮವ್ವ, ದೆಯ್ಯ ಬುಡ್ಸಾ ತಡಾ, ಪೂಜಾ ಹಾಕ್ಸಾಕೆ ನಮ್ಮಕ್ಕ ಅವ್ವಲ್ಲ ಸಿವಕ್ಕಾ, ಅವಳಾ ಕರ್ಕಂಬರಾಕೆ ಹ್ವಾಗೋಳೆ. ಮೊಲ್ಲಾಗ್ಗರ ಗಿಲ್ಲಾಗ್ಗರ ಂದ್ರಾ ನಾಲ್ಗ ಹರ್ದ್ ಹಾಕ್‌ಬುಡ್ತೀನಿ ಹುಸಾರ್'' ನುಡಿದವನಾಗಿ, ಬಿದ್ದ ಹೆಂಡತಿಯನ್ನ ವೊಮ್ಮೆ ಯೆಡ ಉಂಗುಷ್ಠದಿಂದ ಬೆಂಟಿ ನೋಡಿ, ಬಂದಂತೆಯೇ ಗಿರಕಿ ಚಡಾವು ಮೆಟ್ಟಿ, ಕೊಡೆ ಹಿಡಿದು ಹೊಂಟೆಬಿಟ್ಟಿದ್ದ. ಅಂವಾ ಹೊಂಟಿದ್ದು ತ್ವಾಟದ ಮನೆಗೆಯಾ ಎಂಬುದ ಅರಿತವಳಾಗಿದ್ದ ತಿಪುರಮ್ಮಣ್ಣ, ಕೃಷ್ಣೇಗೌಡರು ತನಗ ಬೋದರು ಎಂಬ ಮೂದೂಕವನ್ನೂ ಮೆಟ್ಟಿನಿಂತವಳಾಗಿ, ಖುಸಿ ಪಟ್ಟುಕೊಂಡವಳಾಗಿ, ''ಮೊಲ್ಲಾಗ್ಗರವೋ, ದೆಯ್ಯವೋ ಪಿಸಾಚಿಯೋ? ಯಾನೋ ವಂದು, ಈ ಬಿಳಿಯೆಣ್ಣ ಹಿಡ್ಕಂಡಿರಾಕೆ ತಾನೇ ಈ ಗೌಡ್ರ ನಾವ್ ಹಿಡ್ಕಳ್ಳಕ್ ಆಗಿದ್ದು'' ಎಂದು ತನಗೆ ತಾನೆ ಅಂದುಕೊಂಡು, ಬಿಳಿಯೆಣ್ಣನತ್ತ ನೋಡಿದರೆ ಅದು ಶಾಂತವಾಗಿ, ಮತ್ತೆ ಯಥಾಪ್ರಕಾರ ಮೂಲೆ ಹಿಡಿದು ಕುಳಿತುಕೊಂಡಿತ್ತು. ತಿಪುರಮ್ಮಣ್ಣಿ ಅರುವಾಗದೆ ಪಿಟಿಪಿಟಿ ಕಣ್ಣುಬುಟ್ಟು, ಅವಳತ್ತಲೇ ದೃಷ್ಟಿ ನೆಟ್ಟು ಕುಂತಳು.

ಬಿಳಿಯೆಣ್ಣೆಂಬೋ ಬಿಳಿಯಣ್ಣಿಗೂ ವಂದಲ್ಲ ಎರಡು ಹೆಸರುಗಳಿದ್ದವು. ಗಂಡನ ಮನೆಯಲ್ಲಲ್ಲ. ತವುರ ಮನೆಯಲ್ಲಿ! ಬೆಳ್ಳಗೆ, ದುಂಡದುಂಡಗೆ, ತುಂಬಿಕೊಂಡು ಕಣ್ಣೆಸರು ಆಗುವ ರೀತಿಯಿದ್ದ ಕೂಸನ್ನು ನೋಡಿ, ಅದೇ ತಾನೆ ವೂರ ಟೆಂಟಿಗೆ ಬಂದಿದ್ದ 'ಸಂಪತ್ತಿಗೆ ಸವಾಲ್' ಸಿನಿಮಾವನ್ನು ನೋಡಿಕೊಂಡು ದುರ್ಗವ್ವಾ, ಮಂಜುಳವ್ವಾ ಎಂಬ ಖುಸಿಯಲ್ಲಿ ವಾಲಾಡುತ್ತಿದ್ದ ಈರಣ್ಣ, ಕೂಸಿಗೆ ಮಂಜುಳಾ ಎಂದೇ ಹೆಸರಿಟ್ಟುಬುಟ್ಟಿದ್ದ. ''ಇದ್ಯಾವ ಸೀಮ ವುಚ್ಚು ಅಂತೀನಿ. ನನ್ನ ಕೂಸು ಲಕ್ಕುಸಣವಾಗಿ ಗಜಗೌರಿ ಇದ್ದಂಗದೆ. ಅದ್ಯಾರೋ ಸಿಲಮಾ ಯಿರೋಯನ್ನಂತೆ. ನೀವ್ ಯಾನಂತನಾರೂ ಕರ್ಕಳ್ಳಿ. ನಾ ಗೌರವ್ವ ಅಂತಾನೇ ಕರಿಯಾದು'', ಸಾಂತವ್ವ ಕಿರು ಕ್ವಾಣೆಯ ಕತ್ತಲಿಂದ ತನ್ನ ನಿಲುವ ಸೂಚಿಸಿದ್ದಳು. ಕೂಸು ಬೆಳೆಯುತ್ತಾ ಹೋದಂತೆ ಸಿಲಮಾ ವುಚ್ಚಿದ್ದವರು, ಗಂಡು ಹೈಕಳು, ಪಡ್ಡೆ ವುಡುಗರು ಮಂಜು ಮಂಜು ಎಂದೂ, ತಲೆ ನೆರೆತವರು ಧಾರ್ಮಿಕವಾದೋರು, ಹೆಂಗಸರು-ಗೌರಿ, ಗೌರಾ ಎಂದು ಕರ್‌ಕಂತಾ ಹೋಗಿದ್ದರು.

ಮಂಜು ಬೆಳೆಯುತ್ತಾವೋದಂತೆ, ಯೆಲ್ಲರಿಗೂ, ಅವಳ ಹೆಸ್ರ ಅವುರಪ್ಪ ಹಂಗಿಟ್ಟದ್ದು, ಅವಳವ್ವ ಗೌರವ್ವಾ ಅಂದದ್ದು-ಎಲ್ಲೂ ಸಾರ್ಥಕವಾದಂತೆ ಅನ್ನಿಸತೊಡಗಿತ್ತು. ನೋಡೋರ ಕಣ್ಣುಗಳಿಗೆ ತಂಪ ಕೊಡುವ ಅವುಳ ರೂಪು ಅವುಳ ಮುಟ್ಟಿದರ ಮುನಿ ಮಾಡಿಬುಟ್ಟಿತ್ತು. ಹಟ್ಟಿಯಿಂದ ಕಾಲು ವರ ಹಾಕಿದರೆ ಸಾಕು ವಯಸ್ಸು, ಹಿರೀರು ಯೆಂಬ ಮುಲಾಜೇ ಇಲ್ಲದೆ ಯೆಲ್ಲರ ಕಂಗಳೂ ಅವಳನ್ನು ದುರುಗುಟ್ಟಿ, ಮುಟ್ಟಿ, ತಟ್ಟಿ ಖುಸಿ ಹೊಂದುತ್ತಿದ್ದವು. ಪಡ್ಡೆ ಹೈಕಳ ಸಿಳ್ಳು, ನಗೆಸಾರ, ಲೇವಡಿ ಮಂಜುವನ್ನು ಮಂಜಿನಂತೆ ಭಯ, ಬೇಸರಗಳಿಂದ ಕರಗಿಸಿಬುಡುತ್ತಿತ್ತು. ಬೀದಿಗಿಳಿಯುವ ಯಾವ ಕಾರ್ಯವೂ ಅವುಳಿಗೆ ಒಲ್ಲದಂತಾಗಿತ್ತು. ''ನಾ ಯೆಲ್ಲೂ ವಾಗಲ್ಲ ಕಣವ್ವಾ.

ಯಾರಟ್ಟಿಗೂ ಬರಲ್ಲ ಕಣವ್ವಾ. ಗಂಡೈಕ್ಳು ನನ್ನ ಯಾನೇನೋ ಅಂತರೆ. ಮುಂದ್ಲ ಸಿಲಮಾ ಯಾವ್ದ ಮಂಜುಳಾಗೆ ಅಂತಾನೆ ಗುಂಡಣ್ಣ. ಅವುನ್ನ ಜ್ವತೆಗಾರ, ಆ ಸಿಲಮದಾಗೆ ಚೆನ್ನಾಗಿ ಮಾಡೀರಿ, ಈ ಸಿಲಮಾದಾಗೆ ಚೆನ್ನಾಗಿ ಮಾಡೀರಿ ಅಂತ ಕಣ್ಣ್ ವಡೀತಾನೆ'', ಮಂಜುವಿನ ವರಾತ ವಂದೇ ಆಗಿರುತ್ತಿತ್ತು. ಓದೋ-ಬರೆಯೋ ಆಸೆಗಾಗಿ, ಇಸ್ಕೂಲನ್ನು, ಗೆಳತಿಯರ ಹಿಂಡಿನಲ್ಲಿ ಮುದುರಿ ಸೇರಿಕೊಂಡು ಹೋಗಿ ಬಂದು ಬಿಟ್ಟಿರಲಿಲ್ಲವಾಗಿ, ಹಾಗೂ ಹೀಗೂ ವೂರಲ್ಲಿದ್ದ ಯೇಳನೇ ಕಳಾಸನ್ನು ಸೆಕೆಂಡ್ ಕ್ಲಾಸಲ್ಲಿ ಮಂಜು ಪಾಸು ಮಾಡಿದ್ದಳು.

ಮಗಳ ಕಾಯುವ ಕೆಲಸಕ್ಕಾಗಿ ಈರಣ್ಣ, ಒಂದೆಲ್ಡು ಬಾರಿ ಪಡ್ಡೆ ಹೈಕಳೊಂದಿಗೆ ಜಗಳಕ್ಕೆ ನಿಂತೂಕೊಂಡಿದ್ದ. ಮುಂದಿನ ವಂದೆರಡು ಜಿನಗಳಲ್ಲಿ ಅವನ ಹಟ್ಟಿಯ ನಾಡೆಂಚುಗಳು ಪುಡಿಪುಡಿಯಾಗುವಂತೆ ಕತ್ತಲಲ್ಲಿ ಕಲ್ಲು ತೂರಾಟ ನಡೆದಿತ್ತು. ''ಯೆಣ್ಣ್ ಯೆತ್ತಿರಾದು ಕನಪ್ಪಾ ನೀನು. ಪಡ್ಡೆ ಹೈಕ್ಳುದು ತೆಪ್ಪು ನಾನೂ ವಪ್ಕಂತೀನಿ, ನೀ ಈಗ ಯಾನೆ ಮಾಡುದ್ರೂ-ವಳಿತಾಗಲಿ ಕೆಡುಕಾಗ್ಲಿ-ಮಂಜುಳ್‌ನ ಹೆಸ್ರಿನ್ನೆ ಕೆಡುಸ್ತದೆ. ಕಂಡ್ರೂ ಕಾಣ್ನಲ್ಲ ಅನ್ನಂಗೆ ಯಿದ್ದುಬುಡು. ಮುಳ್‌ನ ಮ್ಯಾಲೆ ಬಟ್ಟೆ ಬರೆ ವಣಾಕಕ್ಕೆ ಹ್ವಾಗ ಕೆಲ್ಸ ಮಾಡ್‌ಬಾರ್ದು ಯೀರಣ್ಣ'', ಊರ ಹಿರಿಯರು ಈರಣ್ಣನಿಗೇ ಬುದ್ಧಿ ಹೇಳಿದ್ದರು. ಸಾಂತವ್ವನೂ ಅದಕ್ಕೆ ಧ್ವನಿ ಕೂಡಿಸಿದ್ದಳು.

ಮಂಜು ಹಿರೀದಾದ ಮ್ಯಾಲಂತೂ ಮುಗುದೆ ಹೋಗಿತ್ತು. ಹಿತ್ತಿಗೆ ಹೋಗುವ ಕೆಲ್ಸಕ್ಕೇ, ಬೆಳಗಿನ ಮುಂಜಾವು ಅಥವಾ ರಾತ್ರಿಯ್ ಕತ್ತಲನ್ನು ಬುಟ್ಟು ಬೆಳಕಿನಲ್ಲಿ ಅವಳೆಂದೂ ವರಕ್ಕೆ ತಲೆ ಹಾಕಲು ವುಮೇದು ತೋರಹೋಗಲಿಲ್ಲ. ಈರಣ್ಣ ಬಹಳ ಜರೂರಾಗಿಯೇ ತನ್ನ ಮಗಳಿಗೆ ಗಂಡು ಹುಡುಕಲು ಹೊಂಟಿದ್ದ. ಬಂದ ಗಂಡುಗಳಲ್ಲಿ ವಾಪಸ್ಸಾದವರು ಒಬ್ಬರೂ ಇರನಿಲ್ಲ. ಊರ ಮುಂದಲ ಮಾರಿಗುಡಿಯ ಪಡಸಾಲೆಯಲ್ಲೋ, ಅರಳಿಕಟ್ಟೆಯ ಮ್ಯಾಲೋ ಕುಂತ ಹೈಕಳು, ಮಂಜುವಿನ ಬಗೆಗೆ-ಒಳಿತೋ ಕೆಡುಕೋ-ನಾಕು ಮಾತುಗಳ ಆಡುವುದು, ಅದು ಹಂಗೇ ಹೋಗುತ್ತಿರುವ ಗಂಡಿನ ಮನೆಯೋರ ಕಿವಿಗೆ ಬೀಳುವುದು, ಅಂಥ ರೂಪಸ್ಥೆಯ ನಮ್ಮಟ್ಟಿಯಲ್ಲಿ ಬಾಳಿಸಾಕೆ ಆದಾತಾ ಎಂದು ಹೆದುರಿಕೊಳ್ಳುವುದು-ಹೀಂಗೆ ನಡೆದು ಬ್ಯಾರೆ ಬ್ಯಾರೆ ಕಾರಣಗಳನ್ನು ಕೊಟ್ಟು, ಮಂಜುವಿನ ಲಗ್ನದ ಮಾತು ದೂರ ದೂರವೇ ಹೋಗುತ್ತಿತ್ತು.

ಒಬ್ಬಳೇ ಮಗಳೆಂದು ಅಕ್ಕರಾಸ್ಥೆಯಿಂದ ಬೆಳೆಸಿದ್ದ ಈರಣ್ಣ, ಮಂಜುವಿನ ಬದುಕು ಹಿಂಗೆ ಮೂರಾಬಟ್ಟೆಯಾಗುತ್ತಿರುವ ಬಗೆಗೆ ತೀರಾ ಚಿಂತೆಗಿಟ್ಟುಕೊಂಡುಬುಟ್ಟಿದ್ದ. ವೊಮ್ಮೆಯಂತೂ ಚಿಂತೆ, ಆಕ್ರೋಸದ ರೂಪ ತಾಳಿ, ನಾಕೈದು ಹೈಕಳ ಮ್ಯಾಲೆ ಕೂಗಾಡಿ, ''ಬನ್ರುಡಾ, ಅದ್ಯಾರ್ ನನ್ ಹೆಣ್ಣಾ ಲಗ್ನ ಆಗ್ಬೇಕೂ ಅನ್ಕಂಡಿದ್ದೀರಿ ಮುಂದುಕ್ಕೆ ಬನ್ರುಡಾ. ಧಾರಾ ಯೆರ್ಕಟ್ಟು ಬುಡ್ತೀನಿ. ಪಾಪಿ ನನ್ ಮಕ್ಳಾ, ನನ್ ಯೆಣ್ಣ್ ನಿಮ್ಗೇನ್ ಅನ್ನಾಯ ಮಾಡಿತ್ರುಡಾ. ವೊಬ್ಬೊಬ್ಬ ರಾಗಿ ಕೊಚ್ಚ್ ಹಾಕ್ಬುಡ್ತೀನಿ. ಜೇಲ್‌ಗೋಗಿ ತೂಕದನ್ನ ತಿಂದ್ರೂ ಪರವಾಯಿಲ್ಲ'', ಕೈಗೆ ಸಿಕ್ಕವರನ್ನು ತದುಕಿಯೂ ಬುಟ್ಟಿದ್ದ.

ಅಂಥ ದಿನಗಳಲ್ಲಿಯೇ ಕೃಷ್ಣೇಗೌಡರು ಮಂಜುವ ನೋಡಲು ಆ ವೂರಿಗೆ ಬಂದದ್ದು. ಬಯಲುಸೀಮೆಯ ತಮ್ಮೂರಲ್ಲಿ ಬರೇ ಕಪ್ಪು, ಎಣ್ಣೆಗೆಪ್ಪು, ಸುಮಾರು ಬಿಳಿ ಇಂಥ ಬಣ್ಣದ ವುಡುಗಿಯರನ್ನೇ ಕಂಡು, ಉಂಡಿದ್ದ ಕೃಷ್ಣಪ್ಪ, ಮಂಜುವನ್ನ ತಟಕ್ಕನೆ ವಪ್ಪಿಕೊಂಡುಬುಟ್ಟಿದ್ದ. ಈರಣ್ಣನಿಗಾದರೋ, ಆಜಾನುಬಾಹುವಾಗಿ, ಕರಿಮುಖದಲ್ಲಿ ಗಿರಿಜಾಮೀಸೆಯ ಕೆಳಗೆ ಬಿಳಿಹಲ್ಲುಗಳ ತೋರಿಸುತ್ತಾ, ಪಾಳೇಗಾರನಂತೆ ಗಿರಕಿ ಚಡಾವು ಮೆಟ್ಟಿ ಸದ್ದು ಮಾಡಿಕೊಂಡು ಬಂದ ಗಂಡು, ಮೂರುಲೋಕದ ಗಂಡ


ನಂತೆಯೇ ಕಂಡುಬಂದಿದ್ದ. ಮಂಜುವಿನ ಮನದಲ್ಲಿ ಯಾನಿತ್ತು? ಯಾರೂ ಕೇಳನಿಕ್ಕೇ ವೋಗಿರಲಿಲ್ಲ.

ಮಾತುಕತೆಯಾಡಿಕೊಂಡು ವರಟ ಅವರಿಗೂ ಪಡ್ಡೆ ಹೈಕಳ ಮಾತು ಕಿವಿಗೆ ಬಿದ್ದಿದ್ದವು. "ಇದ್ಯಾನಾ ಸಿವಕ್ಕಾ...?", ವುಬ್ಬು ಹಾರಿಸಿದ್ದ ಅಕ್ಕನ ಕಡೆ ತಿರುಗಿ. "ಊರ್ ಬಳಸ್ಕಂಡ್ ನಿಂತಿರಾ ನಿನ್ ಚೆಂದುಕ್ಕ ಆ ಯೆಣ್ಣ ಯೇಗ್ಯತೆ ಬಗೆ ಹುಬ್ ಹಾರಿಸ್ದೀಯಾ ಗ್ರಾಸ್ತ? ಸರ್ದ್ಹೋಯ್ತು ಬುಡು. ಹೆಣ್ಣಿನ ಮನ್ಸ್ಯೋರು ವಪ್ಗಂಡೋರೆ. ಘಮ್ಮಂತ ಮದ್ವಾ ಆಗಿ ಒಂದ್ ನೇರ್ಪ್ ಆಗು. ಊರೋಟಿ ಗೂಳಿ ಹಂಗೆ ಬ್ಯಾಲಿ ಬ್ಯಾಲಿ ಹಾರಿದ್ದು ಸಾಕು. ಅವ್ವನೂ ನಿನ್ನೊತೆ ಎಷ್ಟಂತ ಏಗಾಳು. ನಿನ್ನ ಕಂಡೋರು, ಕ್ಯಾಳ್ದೋರು ನಿಂಗ ಯೆಣ್ಣ್ ಕೊಟ್ವಾರಾ? ಕರ್ಕೊಂಡು ಹ್ವಾಗಿ ಪಾಳ್ ಬಾವಿಗ್ ತಳ್ಳಾದ್‌ಬುಟ್ವು..."

ಕೃಷ್ಣೇಗೌಡರು, ಹೋಗಿ ಹೋಗಿ ಈ ಮನೆಯಾಳಿ ಹತ್ರ ಕ್ಯಾಳಿದೆನಲ್ಲ ಎಂದು ಬಾವಾಜಿಯತ್ತ ತಿರುಗಿದ್ದರೆ, ಬಾವಾಜಿ ಹೆಗಲ ಮ್ಯಾಲ ಟವೆಲ್ಲನ್ನು ಬಾಯಿಗಚ್ಚಿಕೊಂಡು ಮುಸಿಮುಸಿ ನಗುವ ತಡೆಯುತ್ತಿದ್ದರು.

ಸಾಂತವ್ವ, ಮಗಳ ಈ ಗಂಡಿಗೆ ಕೊಡುವುದರ ಬಗೆಗೆ ಹಿಂದು ಮುಂದ ನೋಡಿದ್ದಳು. "ಇನ್ನೊಸಿ ದಿನಾ ನೋಡಾಂವ ತಡರಿ. ನಮ್ ಹೆಣ್ಣ್ಗಾ, ಆ ಗಂಡ್ಗೂ ಈಡುಕಾಡಿದ್ದದಾ. ಇದು ನೋಡಿದ್ರ ಮುಟ್ಟುದ್ರೆ ಮುನಿಯಂಗೆ ಆತ್ತದೆ. ಅದ ನೋಡುದ್ರೆ, ಯಾರ ಮ್ಯಾಲೆ ಯಾಳ್ಳಿ, ಯಾರ ಮ್ಯಾಲೆ ಬೀಳ್ಳಿ ಅನ್ನಾ ಮದರಸ ಸುರಿಸ್ಕಂಡು ಬರಾ ವಂಟಿ ಸಲ್ಗ ಇದ್ದಂಗದೆ. ನಮ್ ಮಾನ, ಮರ್ವಾದಿ, ಹೆತ್ ಸಂಕ್ಟ ಅನ್ಕಂಡು ನಮ್ಮಣ್ಣ ಆ ವುಡುಗಂಗೆ ಜ್ವತೆ ಮಾಡಾದು ಸರ್ರ್ಯಾ?"

"ನಿಂದೊಳ್ಳೆ ಕಣಮ್ಮಿ. ಯೆಣ್ಣ ಬಂದಾಗ ಕಣ್ ಮುಚ್ಕಂಡ್ರು, ಅನ್ನಂಗೆ. ಗಂಡೋರ ವಪ್ಗೆ ಬರ್ಲಿ ಸಿವಾಂತ ಬಾಯಿಗ್ ಅಕ್ಕಿ ಕಾಳ್ ಆಕ್ಕಂಡು ಹಗ್ಲೂ ನಾತ್ಳಿ ನಾ ಜಪ ಮಾಡ್ತಾ ಅವ್ನಿ.



ಇವುಳೊಬ್ಬು ತೆಗೆದ್ಬು ಕ್ಯಾತೆಯಾ. ನಿಂಗೇನು ಗೊತ್ತಾದಾತು, ನಾಕ್ ಗ್ವಾಡೆವಳ್ಗೆ ಇರಾ ಹೆಂಗುಸ್ಗೆ? ವರಗಡೆ ತಲ ಯೆತ್ಕಂಡು ವಾಡಾಡಾ ಗಂಡ್ಸು ನಂಗೊತ್ತು ನನ್ನ ಯತೆ. ನಾಳ ಜಿನಾ ಅವುಳ್ ಲಗ್ನುವೇ ಆಗ್ದೆ ನಿಂತೋದ್ರು, ನಾ ಸಿವುನ್ನ ಪಾದ ಸೇರ್ಕಂಡಿ. ಮುಂದುನ್ ಗತಿ ಯೇಚಿಸಿದ್ದೀಯಾ. ಈ ಜನಗೋಳು ಕುರಾಕುರಾ ಅಂತ ಬೀದೀನಾಗೆ ಯೆಳದಾಕ್‌ಬುಡ್ತಾರೆ ಕಣಮ್ಮಿ. ಇಂಥ ರೂಪಸ್ಥೆ ಕಾಯಾಕೆ ಅಂಥ ಪಾಳೇಗಾರನಂಥೋನೆ ಬೇಕು ಕ ತಗಾ. ಲಗ್ನ ವಂದ್ ಆಗ್ಲಿ. ಯೆಲ್ಲ ಸರೋಯ್ತದೆ."

ಕೃಷ್ಣೇಗೌಡ ಮತ್ತು ಮಂಜುವಿನ ಲಗ್ನದಿಂದ ಈರಣ್ಣನ ಹಟ್ಟಿಯಲ್ಲಿ ಯೆಲ್ಲವೂ ಸರಿವೋಗಿತ್ತು. ಮಗಳ, ಅಳಿಯನೊಂದಿಗೆ ಕಳುಸಿಕೊಟ್ಟು ಈರಣ್ಣ, ಎಷ್ಟೋ ವರ್ಷಗಳ ನಂತರ ಕಣ್ಣ ತುಂಬಾ ನಿದ್ದೆ ಮಾಡಿದ ಸುಖ ಅನುಬೋಸಿದ್ದ. ಮಂಜುವಿನೊಡನೆ ಬಂದಿಳಿದಿದ್ದ ಕೃಷ್ಣೇಗೌಡನನ್ನು ಕಂಡು ವೂರ ಜನಗಳಿಗೆ, ಅದ್ಯಾಕೋ ರಾಮನವಮಿಯಲ್ಲಿ ಬರುವ ಹರ್ಕಥೆ ದಾಸರು ಯೇಳುವ ಕಥೆಗಳಲ್ಲಿನ ರಾಕ್ಷಸರು ಮತ್ತು ದ್ಯಾವತೆ ಒಟ್ಟಿಗೇ ನೆನಪಾಗೆ ಬಂದುಬುಟ್ಟಿದ್ದರು.

ಮಂಜು ಗಂಡನೂರಿಗೆ ಬಂದಾಗ ಯಾರೂ ಅವುಳ ಹೆಸರ ಕೇಳಿರಲಿಲ್ಲ. ಕೃಷ್ಣಯ್ಯನ ಪಕ್ಕ ದಂತದ ಬೊಂಬೆಯಂತೆ ಸೋಭಿಸಿದ ಅವಳಿಗೆ, ವೂರವರು 'ಬಿಳಿಯೆಣ್ಣು' ಎಂದು ನಾಮಕರಣ ಮಾಡಿಬುಟ್ಟಿದ್ದರು. ಗೌಡ್ರುಟ್ಟಿ ಸೊಸೆಯ,- ಬಿಳಿಯೆಣ್ಣ- ರೂಪು, ಗುಣಗಳ ಜೊತೆಗೇ ಅವುಳ ಪಾಪ-ಪುಣ್ಯಗಳೂ ಆ ವೂರ ಜನಗೋಳ್ ಬಳಿಯಲ್ಲಿ ಲೆಕ್ಕಾಚಾರವಾಗಿಬುಟ್ಟಿದ್ದವು. ''ಗಿಳಿ ಯಂಗಿರಾದಲ್ಲ, ಅಂಸ, ಅಂಸ ಇದ್ದಂಗದೆ, ಇಂಥ ರಣದ್ದಿಗಾ ಯೆಣ್ಣು ಕೊಡಾದು. ಯಾನ್ ಪಾಪ ಮಾಡಿತ್ತೋ ಕಾಣೆ.''

ಆ ಪಾಪ ಬಿಳಿಯೆಣ್ಣಗೆ ಯಿಪರೀತ ವಾಗಿಯೇ ಇತ್ತು. ವಸಾ ಹೆಡ್ತಿಯೆಂದಾದರೂ ಅವುಳ ಮುಂದ ಪ್ರೀತಿಯಿಂದ ಮಾತಾಡದ, ಕೂರದ, ನಗದ ಕೃಷ್ಣೇಗೌಡ, ಒರಟುತನ, ಕ್ವಾಪ, ಆಕ್ರೋಶ, ಆವೇಶ ಇತ್ಯಾದಿಗಳನ್ನೆಲ್ಲಾ ಯಾವ ಎಗ್ಗೂ ಇಲ್ಲದೆ ತೋರುತ್ತಾ, ವಾರ-ವಪ್ಪತ್ತು ಕಳಿಯುವಷ್ಟರಲ್ಲಿ ಅಲ್ಲಿ ತಾನು ವುಣ್ಣಬೇಕಾದ ಭಾಗ್ಯವೇನು ಎಂಬುದ ಬಿಳಿಯೆಣ್ಣಗೆ ಬ್ರಮ್ಮಾಂಡ ರೂಪದಾಗೇ ತೋರುಸಿಬುಟ್ಟಿದ್ದ. ಗಂಡನ ವುಸಿರೂ ಸಹ ಬಿಳಿಯೆಣ್ಣು ಮುದುರಿಕೊಳ್ಳುವಂತೆ ಮಾಡತೊಡಗಿತ್ತು.

ವೂರಲ್ಲಿ 'ಬಿಳಿಯೆಣ್ಣು' ಎಂದು ನಾಮಕರಣವಾದೊಡನೆಯೇ ಕೃಷ್ಣೇಗೌಡನಿಗೆ ತನ್ನ ಒಟ್ಟಾರೆ ಕರಿಯತನ ಚುಚ್ಚಿ ಚುಚ್ಚಿ ಯೆಚ್ಚರಿಸಿತ್ತು. ಆ ಯೆಚ್ಚರಿಕೆ, ಬಿಳಿಯೆಣ್ಣ ಮೇಲಣ ತನ್ನ ಗಂಡಸ್ತನದ ಯೆಲ್ಲಾ ಆಗುಹೋಗುಗಳನ್ನು ನಿಯಂತ್ರಿಸುವಂತೆ ಮಾಡಿಬುಟ್ಟಿತ್ತು. ಬಿಳಿಯೆಣ್ಣ ಬದುಕು ಕತ್ತಲಿಂದ, ಕತ್ತಲ ಪಾತಾಳ ಕೂಪಕ್ಕೇ ಬಿದ್ದುಕೊಂಡಂತಾಗಿತ್ತು. ಅಲ್ಲಿಗೆ ಬೀಳುತ್ತಿದ್ದ ಬೆಳಕ ಕಿರಣಗಳೆಂದರೆ ಅತ್ತೆಯ್ಯಾ, ಅತ್ತಿಗೆಮ್ಮಾ ಇಬ್ಬುರೆ.

ಅತ್ತೆಯ್ಯನಿಂದುಲೆ ಬಿಳಿಯೆಣ್ಣಗೆ ತನ್ನ ಗಂಡುನ ಪ್ರತಾಪಗಳೆಲ್ಲಾ ಸಾಂಗವಾಗಿ ಸುದ್ದಿಯಾಗಿದ್ದು. ''ವಂದ್ ಹೆಣ್ಣು, ಹೆಂಡ್ರು ಅಂತ ಬಂದಮ್ಯಾಗೇನಾರಾ ಸರಿ ಆಯ್ತ ನಂಥಾಕವ್ವಾ ಮದ್ವಾ ಮಾಡಿದ್ದು. ನಾವೇಯಾ ನಿನ್ ತಲ ಮ್ಯಾಗೆ ಕಲ್‌ಚಪ್ಪಡಿ ಯೆಳದ್ ಬುಟ್ವೋ'', ಅತ್ತ-ಸೊಸ ಇಬ್ಬರೂ ಅಳುವುದ ವೊಮ್ಮೆ ಕಂಡಿದ್ದ ಕೃಷ್ಣೇಗೌಡ, ''ಸರಿಯಾಗದ ಜ್ವತೆ. ಅಳ್‌ಗಣ್ಣಿ, ನಿದ್ದಗಣ್ಣಿ ನೀ ಇದ್ ಮನಾ ಆಳು ಅಂತ. ವಬ್ರುಲ್ಲ ಇಬ್ರುಬ್ರು ಸೇರ್ಕಂಡಾರೆ ಕಪ್ಪಾ ನಮ್ಮಟ್ಟಿ ಆಳ್ ಮಾಡಾಕ'' ಎಂದು ರೇಗಿದ್ದ.

ಉಟ್ಟು ನಲಿಯಬೇಕಾದ ಚಿಕ್ಕಾಪುಟ್ಟ ಯೆಣ್ಣು, ತಳ-ತುದಿ ಸಿಗದ ಯೇಚ್ನೆಯಲ್ಲಿ ಮುಣುಕಿ, ನಾಕಾರು ಬಾರಿ ಹುಸಾರು ತಪ್ಪಿಸಿಕೊಂಡು ಮತ್ತೂ ಸುಣ್ಣದಂಗೆ ಬಿಳುಚಿಕೊಂಡು ಬುಟ್ಟಿತ್ತು. ಇತ್ತಿತ್ತಲಾಗಿ, ಗಂಡ ತನ್ನ ಹತ್ತಿರ ಬರುತ್ತಾನೆಂಬುದೇ ಅದುಕ್ಕೆ ಹೆದರಿಕೆ ತರಿಸಿ, ಗ್ಯಾನ ತಪ್ಪಿ ದಡಕ್ಕನೆ ಉಂಟಿಕೊಂಡು ಬುಡುವ ರೋಗವೂ ಬಂದುಬುಟ್ಟಿತ್ತು. ಅದೇ ಜಿನಗಳಲ್ಲಿ ಶಿವಕ್ಕ ಬಂದಿದ್ದವಳು ಬಿಳಿಯೆಣ್ಣ ಸ್ಥಿತಿ ಕಂಡು ಛೀಮಾರಿ ಹಾಕಿದ್ದಳು. ''ನಿಮ್‌ಗೋಳಾ ಯೇಗ್ಯತೆಗೆ, ಮನ ತುಂಬಿಸ್‌ಕಂಡಿರಾ ದ್ಯಾವತೆಯಂಥ ಯೆಣ್ಣ ಬಾಳ್ಸಾ ಆಟವಾ ಇದು. ಅದಾ ಯೆಣ್ಣ ಅನ್ಕಂಡಿದ್ದರ್‍ಯೋ ದನ ಅನ್ಕಂಡಿದ್ದರ್‍ಯೋ. ನಿಮ್ಗಾ ಬಾಳ್ಸಕೆ ಆಗಾಕಿಲ್ಲಂದ್ರೆ, ನಮ್ಮಟ್ಟಿಗೆ ಕರ್ಕವೋಯ್ತಿನಿ. ಹೂವಂಗಿದ್ದ ವುಡ್ಗಿಯಾ ಮಾಡಿರಾ ಚೆಂದಾ ನೋಡಲ್ಲ.''


''ನಿಂಗ್ಯಾಕೆ ಇಲ್ಲುದ್ ವುಸಾಬರಿ, ನಮ್ಮಟ್ಟಿ ಯೆಣ್ಣಾ ಯೆಂಗಾರಾ ಮಾಡ್ತೀವಿ, ನಿನ್ನಟ್ಟಿ ವಗ್ಗನ ಮಾಡ್ಕ ಹ್ವಾಗು'', ಕೃಷ್ಣಯ್ಯನೇನೂ ಕಡಿಮೆಯಿಲ್ಲದ ನುಡಿಕೊಟ್ಟಿದ್ದ. ''ಅಲ್ವಾ ಮತ್ತಾ ಇದ್ದದ್ ಇದ್ದುಂಗೆ ಯಾಳುದ್ರೆ, ಎದ್ ಬಂದು ಯೆದೀಗ್ ತಾನೇ ವದಿಯಾದು. ಬುದ್ಧ್ ಮಾತು ಯಾಳೋರ ಜ್ವತೆ ತಾನೇಯಾ ಗುದ್ದಾಡದು ಇದು ನಮ್ಮಪ್ಪನ್ ಹಟ್ಟಿ ಕಲಾ, ಹ್ವಾಗು ಅನ್ನಾಕೆ ನಿಂಗ ಅಕ್ಕಿಲ್ಲ. ಇವತ್‌ಗೂ ನಾ ಯಾನಾರ ಪಾಲು

ಪರೀಕತ್ತು ಅಂತ ವಂಟ್ರೆ, ಇಲ್ಲೆಯಾ ಅಡ್ಡಗ್ವಾಡೆ ಆಕ್ಕಂಡು ಕುಂತ್‌ಬುಡಾ ಅಕ್ಕು ನಂಗದೆ.'' ಬಿಳಿಹೆಣ್ಣಿಗೆ ಹೆಂಗಾರ, ಏನಾದ್ರೂ, ನ್ಯಾಯ ವದಗಿಸಲೆಂದೇ ತನ್ನ ಮೈಯ್ಯ ಎಮ್ಮೆ ಚರ್ಮ ಮಾಡ್ಕಂಡು ಬ್ಯಾರೆ ರೂಟನ್ನೇ ಯಿಡಕಂಡು ಬುಟ್ಟಿದ್ದಳು ಸಿವಕ್ಕ. ''ನೀ ತಾನಾ ಯಾನವ್ವ. ಈಗ್ಲಾರಾ ವಸಿ ನಿನ್ ಸೊಸಿ ಬೆನ್ ಕಟ್‌ಬ್ಯಾಕು ಕವ್ವಾ. ಯೆದ್ರುಕಂಡ್ ಕುಂತ್ರ ಯೆಂಗ ಅಂತೀನಿ. ನೀವಿಬ್ರೂ ವಂದಾದ್ರೆ ಅಂವಾ ಏನ್ ತರ್ಕಳ್ಕ್ಯಾದ್ದು ಅಂತೀನಿ.'' ಅವ್ವನಿಗೂ ಬುದ್ಧಿ ಯೇಳಿದ್ದಳು. ಮಗಳ ಮಾತಿನಲ್ಲಿ ಅವ್ವನಿಗೆ ದಿಟವೇ ಕಂಡಿತ್ತು. ಅಲ್ಲಿಂದಾಚೆಗೆ ಕೃಷ್ಣೇಗೌಡ ಅನ್ನಲಾರದ, ಆಡಲಾರದ ಪರಿಸ್ಥಿತಿ ಹಟ್ಟಿಯಲ್ಲಿ ಉಂಟಾಗಿತ್ತು.

ಹಬ್ಬ-ಹರಿದಿನ, ಕುಂಕುಮ-ಅರಿಸಿನ, ಪೂಜೆ-ಪುನಸ್ಕಾರಗಳಿಗೆ ಅವ್ವಾ, ತನ್ನೊಡನೆ ತನ್ನ ಸೊಸೆಯನ್ನೂ ಸಾಂಗವಾಗಿ ಸುಂಗಾರ ಮಾಡಿಸಿಕೊಂಡು ಹೊರ ಕರಕೊಂಡು ವೋಗುವ ಪರಿಪಾಟಲು ಆರಂಭಿಸಿಕೊಂಡಿದ್ದಳು. ಮಾರಿಗುಡಿ, ಊರ ದ್ಯಾವರ ಗುಡಿ, ರಾಮನಮಮಿ ಹರ್ಕಥೆ-ಹಿಂಗೆ ವಂದಲ್ಲ ವಂದಕ್ಕೆ ದಿನವೂ ಅತ್ತೆ-ಸೊಸೆಯರು ವೊಲ್ಡುವುದ ವೂರ ಜನಾ ಕಣ್ಣಿಗೆ ಅಬ್ಬ ತಂದುಕೊಂಡು ನೋಡಿ ಖುಸಿ ಪಟ್ಟುಕೊಂಡರೆ, ಕೃಷ್ಣೇಗೌಡನ ಕಣ್ಣು ಕಿಸುರಾಗತೊಡಗಿತ್ತು. ಯೇನೇನೂ ಮಾತಾಡುವ ಹಂಗಿರನಿಲ್ಲ. ''ನಿನ್ ಯೆಂಡ್ರು ಜ್ವತೆ ವಾಡಾಡಾಕೆ ಈ ವಯಸ್ನಾಗೆ ನಂಗೇನ್ ವುಮೇದು, ಖುಸಿಯಾ? ನೀನೇ ಕರ್ಕ ವಾಡಾಡು. ನಿಂಗ ಅದೆಲ್ಲಾದಾದು, ದಿನುಕ್ ವೊಬ್ಬೊಬ್ಬರ ಕುಟ್ಟಾ ಹ್ವಾಗೋನ್ಗೆ ಹೆಡ್ತಿಯಾ ವಾಡಾಡಿಸಾಕೆ ಯೆಲ್ಲಿದ್ದದು ಟೇಮು? ಅದ್ರು ಮ್ಯಾಗೂ ದೂಸ್ರ ಮಾತಾಡಿದ್ರ್ಯೋ ಮಗಾ, ವುತ್ರವಾ ನಾ ಕೊಡಂಗಿಲ್ಲ, ಸಿವಕ್ಕ ಬತ್ತಳೆ, ಕೊಡ್ತಳೆ.'' ಅವ್ವ ಮಗನ ಕುಟ್ಟಾ ಯೆಚ್ಚು ಮಾತಾಡದೆ ಸರಿಯಾದ ಧಮಕಿಯನ್ನೇ ನಾಕು ಮಾತುಗಳಲ್ಲಿ ಕೊಟ್ಟಾಗ ಕೃಷ್ಣೇಗೌಡ ತುಟಿ ಹಲ್ಲುಗಳೆರಡನ್ನೂ ಕಚ್ಚಿಕೊಂಡಿದ್ದ.

ಅತ್ತೆಯ್ಯನೊಂದಿಗೆ ವರ ವೋಗುವ, ಬೆಳಕು ಕಾಣುವ ಖುಷಿ ಬಿಳಿಯೆಣ್ಣ ಕಂಗಳಲ್ಲಿ ವಂದಿಷ್ಟು ಬೆಳಕಿನ ಕಿರಣಗಳ ತೂರಿಸಿದ್ದು ದಿಟವೇ. ಇದ್ದುದರಲ್ಲಿಯೇ ತೃಪ್ತಿ ಕಾಣುವ ಯೆಣ್ಣುಮಕ್ಕಳ ಸ್ವಭಾವ ಕೊಂಚ ಯೆಚ್ಚೇ ಬಿಳಿಯೆಣ್ಣಲ್ಲಿ ಇದ್ದದ್ದು ಅದಕ್ಕೆ ಮುಖ್ಯ ಕಾರಣವಾಗಿತ್ತು.


ಇಂಥದ್ದೆ ಒಂದು ದಿನ ಅತ್ತೆ-ಸೊಸೆಯರು ರಾಮನಮಮಿ ಹರ್ಕಥೆಗೆ ಆಜರಾಗಿದ್ದರು. ಹರ್ಕಥೆ ದಾಸರು ಪಂಚಪಾಂಡೋರ ಕಥೆಯ



ಕಥೆ ಮಾಡುತ್ತಿದ್ದರು. ''ಯಾವ ಮಹಾರಾಣಿ, ಯಾವ ಮೂರುಲೋಕದ ಗಂಡರ ಹೆಂಡತಿ, ಯಾವ ಮಹಾನ್ ವಂಶದ ಸೊಸೆ, ಅಂತಹ, ಅಂತಹಾ ದ್ರೌಪದಿಯ ಸೀರೆಯನ್ನ ದುಶ್ಯಾಸನ ತನ್ನ ಅಗ್ರಜನ ಆಣತಿಯಂತೆ ಸೆಳೆಯ ತೊಡಗಿದ್ದಾನೆ. ದ್ರೌಪದಿ ಶ್ರೀಕೃಷ್ಣನಿಗೆ ಮೊರೆ ಇಟ್ಟಿದ್ದಾಳೆ, ಕೃಷ್ಣಾ ಭಕ್ತ ಬಾಂಧವ...'' ಹರ್ಕಥೆಯ ಕೇಳುತ್ತಾ ಬಿಳಿಯೆಣ್ಣ ಕಣ್ಣುಗಳಿಂದ ದ್ರೌಪದಿಗಾಗಿ ನೀರು ಪಟ ಪಟ ಸುರಿಯ ತೊಡಗಿತ್ತು. ಹಟ್ಟಿಗೆ ವಾಪಸ್ಸಾಗುವಾಗ ಅತ್ತೆ ಸೊಸೆಯರು ಎಂದಿನಂಗಿರಲಿಲ್ಲ. ''ಅಲ್ಲಾ ಈ ಗಂಡುಸ್ರು, ಯಾವ ಕಾಲದಾಗೆ, ಯಾವ ಯೆಣ್ಣ ನೆಮ್ದಿಯಾಗಿ ಬಾಳ್ಸೋರೆ ನೋಡಾ ತಾಯಿ? ಪಾಂಡೇರಂತ ಗಂಡುಸ್ರೆ ಹೆಡ್ತಿಯ ಜೂಜಾಟಕ್ಕೆ ಬಾಜಿ ಕಟ್ಬುಟ್ರು, ತಮ್ ಯೆದುರ್ಗೆಯಾ ತಮ್ಮ ಹೆಡ್ತಿಯ ಸೀರ್‍ಯಾ ಸೆಳೀತಾ ಇದ್ರ ಧರ್ಮಕರ್ಮಾಂತ ಮೂಗ್ ಮುಚ್ಕಂಡ್ ಕುಂತಿಗಂಡ್ರು'', ಅತ್ತೆ ಯೇಳುತ್ತಾ ಬಂದ ಮಾತುಗಳ ಬಿಳಿಯೆಣ್ಣು ಕಣ್ಣು ತುಂಬಿಕೊಂಡ್ ಕೇಳಿಕ್ಕಂಡು ಬರುತ್ತಿತ್ತು. ''ಆ ದ್ವಾಪ್ರೋರ ಯುಗುಕ್ಯಾಕ್ ಹ್ವಾದಯ್ಯ ಅಂತೀನಿ. ಮೊನ್ನೆ ಮೊನ್ನ ಒಂದ್ ಮುವೊತ್ ವರುಸದ್ ಕಥಾ ಯಾಳ್ತಿನಿ ಕೇಳ್ ತಾಯಿ ಇಲ್ಲಿ. ನಮ್ ಮಾರಿಗುಡಿ ಪೂಜಾರಯ್ನನ್ನ ಕಂಡಿದ್ದೀಯಲ್ಲ ಆವಯ್ಯನ್ ಹೆಡ್ತಿ ದುಂಡವ್ವ ಅಂತ ಇದ್ಳು. ತೀರ್ಕಂಡು ಈ ಉಗಾದಿಗೆ ಎಲ್ಡು ವರ್ಸ ಆಯ್ತು ಅನ್ನು. ನಾನೂ ಲಗ್ಣಾಗಿ ಬಂದು ವಸ್ದು. ಉಗಾದಿ ಮಾರ್‍ನೆ ವರ್ಸ ದುಡುಕು ಅವಲ್ಲ, ಆವೊತ್ ಯಾನಾ ಯಿಡೀs ವೂರ್‍ಗ್ ವೂರೇ ಇಸ್ಪೇಟು. ದುಂಡವ್ವನ ಗಂಡ, ವಸ್ಸಾಗಿ ಮದ್ವ ಆಗಿ ಕರ್ಕಂಬಂದಿರಾ ಯೆಣ್ಣ ಯೇಳೇಳಾ ಯೆಳ್ಕಂಡ್ ಬಂದು ಅದೇ ಮಾರೀಗುಡಿ ಪಡಸಾಲ ಮ್ಯಾಲೆ ನಿಲ್ಸಿ, 'ನನ್ನೆಡ್ತಿಯಾ ಅರಾಜ್ ಆಕ್ತಾ ಇವ್ನಿ' ಅಂದ.

ಮಾರೀಗುಡಿ ಪೂಜಾರಯ್ಯ ಬಂದ್ ನೋಡ್ದೋನು, ಅವುನ್ ಕೆಂಪು ವಸ್ತ್ರದಾಗೆ ಮಂಗಳಾರತಿ ದುಡ್ನ ಗಂಟು ಗಂಡುನ್ ಮೊಕುಕ್ ಎಸ್ದಿದ್ದೇಯಾ, ಆ ಯೆಣ್ಣ ಬಿಡಿಸ್ಕಂಡ.

ವಾರ ವಪ್ಪೊತ್ತು ಕಾದ. ಯೆಣ್ಣ ಕರ್ಕಂಡು ಈವಯ್ಯನ ಹಟ್ಟಿಗ್ ಹ್ವಾದ. ಈ ಗ್ರಾಸ್ತ ಯಾನನಾ ಬೈಕು, 'ಅರಾಜ್ ಅಂದ್ರೆ ಅರಾಜ್. ನಿನ್ಸಟ್ಟಿಯಾಗೆ ಇಟ್ಕ ಹ್ವಾಗು ಅಂದ.' ದುಂಡವ್ವ 'ಕರ್ಕಂಡ್ ಹ್ವಾಗಿ ನೀವೇಯಾ. ಮಾರೀಗುಡಿ ಜಗಲಿ ಸಾರಿಸ್ಕಂಡು ಮರ್ವಾದೆಯಾಗಿ ಬದಿಕಂತೀನಿ. ಮತ್ತ ಈ ಗಂಡನ್ ಜ್ವತೆ ಅಂವಾ ಕರ್ಕಂಡ್ರು, ನಾ ಹ್ವಾಗಾಕಿಲ್ಲ' ಅಂತ ಕಣ್ಣೀರ್ ಹಾಕ್ಕಂತು. ಮಾರೀಗುಡೀಲಿ ದುಂಡವ್ವಂಗೆ ತಾಳಿ ಕಟ್ಟ ಲಗ್ಣ ಆದ. ಮಕ್ಕಳಾದ್ದೋ ಮರಿ ಆದ್ದೋ, ಅವ್ರೆಲ್ಲಾ ಪ್ಯಾಟೆಯಾಗೆ ದೋಡ್ ದೋಡ್ ಕೆಲ್ಸದಾಗೆ ಅವ್ರೆ.''



ಇದಾದ ನಾಕು ತಿಂಗಳಿಗೆ ವರಗಡೆ ತನ್ನ ಲೀಲೆಗಳ ನಡೆಸಿಕೊಂಡು ಹ್ವಾಗುತ್ತಿದ್ದ ಕೃಷ್ಣೇಗೌಡ, ಒಂದು ರಾತ್ರಿಯ ಸರೋತ್ತಿನಲ್ಲಿ ಯೆಡ, ಬಲ ಒಂದೊಂದು ಯೆಣ್ಣುಗಳ ಇಟ್ಟುಕೊಂಡು

ಕದ ತಟ್ಟಿದ್ದ. ಕದ ತೆರೆದ ಬಿಳಿಯೆಣ್ಣು, ಮತ್ತೂ ಬಿಳುಚಿಕೊಂಡು 'ಬ್ಬೆಬ್ಬೆ' ಎಂದು ಅತ್ತೆಯ್ಯನ ಬಳಿ ಓಡಿವೋಗಿತ್ತು. 'ಅತ್ತೋ ಅದ್ಯಾರ ಕಾಣೆ. ಇಬ್ರು ವಮ್ಮದಿರಾ ಕರ್ಕಂಡ್ ಬಂದೋರೆ.' ಗಡಬಡಿಸಿ ಮ್ಯಾಲೆದ್ದ ಅವ್ವ ಯಾನನ್ನೂ ಕ್ಯಾಳಬ್ಯಾಕಿರನಿಲ್ಲ. 'ಯಿಲ್ಲೆ ನಾಟ್ಕ ಯಿತ್ತು ಕವ್ವಾ. ಬ್ಯಾರೆಲ್ಲೂ ಇಳ್ಕಲ್ಲಕ್ಕೇ ಜಾಗಿಲ್ಲ ಅಂತಂದ್ರು. ಅದ್ಕಾ ಕರ್ಕಂ ಬಂದಿವ್ನಿ'. ಮತ್ತೆಯೂ ಪ್ರಶ್ನಿಸಿ, ಇರಾ ಮರ್ಯಾದಿಯ ಕಳಕೊಳ್ಳಲು ಅವ್ವ ತಯಾರಿರಲಿಲ್ಲ.

ಬಂದೋರು ಇಳ್ಕಳ್ಕಕ್ಕೆ ಜಾಗ ಯಿರದೆ ಬಂದೋರಲ್ಲ, ಭದ್ರ ಆಗಿ ಅಲ್ಲೇ ಠಿಕಾಣಿ ವೂಡ್ಕ್ಕೇ ಬಂದೋರು ಅಂಬುದ ತಿಳಿಯಲು ಯೆಚ್ಚಿನ ಕಾಲಯೇನೂ ಬೇಕಿರನಿಲ್ಲ. ಅವ್ವಾ, ಅತ್ತೂ ಕರದೂ ಮಾಡಿ, ಕನಿಷ್ಟಾ ಬಿಳಿಯೆಣ್ಣ ಯೆದುರು, ನಾಟ್ಕದೋಳ ಜತೆಯ ಮಗನ ರಾಸಲೀಲೆ ನಡಿಯಾದು ಬ್ಯಾಡವೆಂದು, ಬಂದವರಲ್ಲಿ ಮಗಳು ಅನ್ನಿಸಿಕೊಂಡೋಳ, ತ್ವಾಟದ ಮನೆಗೆ ಸಾಗ ಆಕುವಲ್ಲಿ ಯಶಸ್ಸು ಕಂಡುಕೊಂಡಿದ್ದಳು. ಅವ್ವಾ ಅನ್ನಿಸಿಕೊಂಡೋಳು, ಅವ್ವನಿಗೇ ಅತ್ತೆಯಾಗಿ, ಹಟ್ಟಿಯ ಯೆಲ್ಲಾ ಯವಾರಗಳಲ್ಲೂ ತಲೆಹಾಕತೊಡಗಿದ್ದಳು. 'ವರಗಡೆ ಯೇನೋ ನಡಸಿಕೊಂಡು, ಹಟ್ಟಿಯಾಗೆ ದೂರ್ವಾಸನಂಗೆಯಾದ್ರೂ, ಅವರೆ' ಎಂದುಕೊಂಡು ನೆಮ್ಮದಿಯಲ್ಲಿದ್ದ ಬಿಳಿಯೆಣ್ಣಗೆ, ಈ ಬೆಳವಣಗೆಗಳೆಲ್ಲಾ ಅವುಳ ಬದುಕನ್ನು ಮತ್ತೂ ಬಗ್ಗಡ ಮಾಡತೊಡಗಿದ್ದವು. ಇದ್ದಕ್ಕಿದ್ದಂತೆಯೇ ಅವುಳ ನಡೆ-ನುಡಿಗಳು ಯಿಪರೀತದ ಸ್ಥಿತಿ ತೋರತೊಡಗಿದ್ದವು. ಅದಕ್ಕೆ ಮೊಲ್ಲಾಗ್ಗರ, ದೆಯ್ಯ, ಪೀಡೆ, ಗಾಳಿ, ಪಿಶಾಚಿ - ಏನೆಲ್ಲಾ ಹೆಸರುಗಳು ವುಟ್ಟಿಕೊಂಡಿದ್ದವು. ಬಿಳಿಯೆಣ್ಣೆ ಅದಕ್ಕೂ ವುತ್ತರ ಕೊಟ್ಟಿದ್ದಳು:

ಹಿಂಗೆಯೇ ವಂದು ದಿನ ವದರಾಡಿ, ಅರಚಾಡಿ, ಯೆದ್ದೂಬಿದ್ದೂ ಆಕ್ಲಾಸಯಕ್ತ ಮಾಡುತ್ತಿದ್ದ ಬಿಳಿಯೆಣ್ಣ ಮುಂದೆ-ಕೃಷ್ಣೇಗೌಡ ನಿಲ್ಲವಾಗಿ-ವೂರ ಒಂದಷ್ಟು ಮಂದಿ ಕೂಡಿಕೊಂಡಿದ್ದರು. "ನೀ ಯಾರ ತಾಯಿ, ಯಾನ್ ಬ್ಯಾಕಾಗಿದ್ದುದು ನಿಂಗಾ? ನೀ ಏನ್ ದೆಯ್ಯವಾ, ದೇವ್ತೆಯಾ, ಗಾಳಿಯಾ, ಗಂಟಲಾ?", ಸಾನು ಭೋಗರ ಅವ್ವಾ ಭೋ ಹುಸಾರಾಗಿ ಬಿಳಿಯೆಣ್ಣ ಮುಂದ ಪ್ರಶ್ನಗಳ ವಗೆದಿದ್ದರು. ಅತ್ತೆಯ್ಯಾ ಮೈಯೆಲ್ಲಾ ಕಿವಿಯಾಗಿ ಸೊಸೆಯನ್ನ ಕಣ್ಣಗ ತುಂಬಿಕೊಂಡಿದ್ದರು. ಬಿಳಿಯೆಣ್ಣ ಬಾಯಿಂದ ವುತ್ತರ ಸರಾಗವಾಗಿ ಬಂದಿತ್ತು.

"ನಾ ದುಂಡವ್ವ"

"ಯಾವ ದುಂಡವ್ವನಾ...?"

"ಮಾರೀಗುಡಿ ಪೂಜಾರಪ್ಪನ್ ಯೆಂಡ್ರು"

"ಅಯ್ಯೋ ನನ್ ತಾಯಿ ಸತ್ ಎರಡೊರ್ಸದ ಮ್ಯಾಕೆ ಯಾಕವ್ವಾ ಈ ರೂಪದಾಗೆ ಕಾಣಸ್ಕಂಡಿದ್ದಿ. ನಿಂಗೇನ್ ಕಮ್ಮಿ ಮಾಡಿದ್ದನೂ ಪೂಜಾರಯ್ಯ?"

"ಅವ್ರು ದ್ಯಾವ್ರು. ಅವ್ರದ್ದೇನೂ ತೆಪ್ಪಿಲ್ಲ. ನಂಗೇಯಾ ಈ ಬಿಳಿಯೆಣ್ಣ ನ್ವಾಡಿ ಭೋ ಆನಂದ ಆಯ್ತು, ಅದ್ಕ ಅವುಳ್ ತಾವ ಬಂದೀನಿ."

"ನನ್ನ ಕಂದುನ್ನ ದುಃಖುದ್ ಪಾಡು ನಿಂಗ ಆನಂದ ತಂತಾ ತಾಯಿ", ಅವ್ವ ಗೋಳೋ ಎಂದು ಅಳುತ್ತಾ ಮಧ್ಯದಲ್ಲಿ ಬಾಯಿ ಹಾಕಿದ್ದಳು. ಬಿಳಿಯೆಣ್ಣಂದ ಅದಕ್ಕೆ ವುತ್ತರವೇನೂ ಬಂದಿರನಿಲ್ಲ. ಮೈಕೈ ವೊಮ್ಮೆ ಝಾಡಿಸಿ ದೊಪ್ಪೆಂದು ಸುಸ್ತಾಗಿ ಬಿದ್ದುಕಂಡಿತ್ತು.

ಅವ್ವಾ ಸಿವಕ್ಕನ ಕರತರಲು ವೂರಿಗೆ ಹೋಗಿದ್ದಳು. ಅವಳ ಪಯಣಕ್ಕೆ ಯೆರಡು ವುದ್ದೇಶಗಳಿದ್ದವು. ವಂದು, ಬಿಳಿಯೆಣ್ಣಗೆ ಯಿಡಿದಿರುವ ದುಂಡವ್ವನ ದೆಯ್ಯವ ವೋಡಿಸಲು ಪೂಜಾ-ಪುನಸ್ಕಾರ, ತಡಾ ಇತ್ಯಾದಿಗಳ ಮಾಡಿಸುವುದು. ಮತ್ತೊಂದು, ಹಟ್ಟಿ ವೊಕ್ಕಿ ಕುಂತುಬುಟ್ಟಿರುವ ನಾಟಕದ ಯಮ್ಮಗೋಳಾ ಹಟ್ಟಿ

ಬುಟ್ಟು ವೋಡಿಸುವ ಕಾರ್ಯದ್ದು. ಸಿವಕ್ಕ, ಅವ್ವನ ಕುಟ್ಟಿಯೇ ಜರೂರಾಗಿ ತವರೂರಿಗೆ ಓಡಿ ಕೊಂಡು ಬಂದಿದ್ದಳು. ತಾನು ನಡೆಸಲು ಬಂದ ಯೆರಡೂ ವುದ್ದೇಶಗಳ ಕಾರ್ಯಕ್ರಮವನ್ನು ಏಕಕಾಲಕ್ಕೆ ಆರಂಭಿಸಿಕೊಂಡಿದ್ದಳು. ಮೊದಲ ಪೂಜೆ ಪುನಸ್ಕಾರ ಕೃಷ್ಣೇಗೌಡನಿಗೆ ಸಂದಿತ್ತು.

''ಇದೇನ ಇದು ಸಿವಕ್ಕಾ'', ಕೈಯ್ಯಲ್ಲಿ ಪತ್ರ ವೊಂದನ್ನ ಯಿಡಕೊಂಡು ಕೃಷ್ಣಯ್ಯ ಪಂಚೆ ಯೆತ್ತಿಕ್ಕಂಡು ವೋಡಿ ಬಂದಿದ್ದ. ''ಅದ್ಯಾಕ, ವರುಸಕ್ ವಂದ್ ಮೂಟ ಭತ್ತ ಕೊಟ್ಟೂ ಕೊಟ್ಟೂ, ಯಾಳನೆ ಕಳಾಸ್ ತಂಕಾ ನಿನ್ನಾ ಅಪ್ಪಯ್ಯ ವಾದ್ಸಿ ಪ್ಯಾಸ್ ಮಾಡಿಸಿಲ್ಲವಾ. ನೀನಾ ವಾದ್ದ್ಯಾ ತಿಳೀತದೆ'', ಸಿವಕ್ಕ ಬಿಳಿಯೆಣ್ಣ ತಲಗೆ ಯೆಣ್ಣೆ ಅಚ್ಚುತ್ತಾ ನಿಸೂರಾಗಿ ನುಡಿದಿದ್ದಳು. ''ನಿಂಗ ಯಾಳ್ನೆ ಕಡೆ ಸನಿ ಯೆಗ್ಲು ಯೇರ್ಕಂಡಿರಬೇಕ್ ನೋಡು'', ಕೃಷ್ಣೇಗೌಡ ಅರಚಿದ್ದ. ''ತಿಕಾ ಹರ್ಕಬ್ಯಾಡಾ ಕಪ್ಪಾ ಕೃಷ್ಣಯ್ಯ, ಬೀದೀಲಿ ಹಾದೀಲಿ ವಾಗೋರೆಲ್ಲ ಬಂದು ನಮ್ ಹಟ್ಟೀಲಿ ತಮ್ ದರ್ಬಾರಾ ಮಾಡ್ಬೋದು ಅಂದ್ರೆ, ಮನಮಗಳಾಗಿ ನಂಗೆ ಯೆನ್ನೆಸ್ಟ್ ಅಕ್ ಇದ್ದದು ನೀನಾ ಲೆಕ್ಕ ಹಾಕ್ಕ. ಮೊದ್ಲೆ ವಂದ್ಸಲ ಯೆಚ್ಚರಿಸಿದ್ದಿ ನಾನು. ನಾಯಿ ಬಾಲುಕ್ಕೆ ದೆಬ್ಬೆ ಕಟ್ಟುದ್ರೆ ನ್ಯಾರಾಯ್ತದ್ಯೆ ಅನ್ನಂಗೆ ನೀನು ನಾಯಿಬಾಲವೇ ಆಗೋದಿ. ಸನಿ ಯಾರ್ ಹೆಗ್ಲ ಯಾರ್ಕಂಡದೇಂತ ಆ ಸಿವ ಹೇಳ್ತನೆ ಹ್ವಾಗು ಕಂದಾ. ಕೋಲ್ಪ್ಗೆ ಹಾಕ್ತಿವ್ನಿ. ಯೆಲ್ಲದ್ರಾಗೂ-ತ್ವಾಟ, ಗದ್ದ, ಹಟ್ಟಿ-ವಂದೂ ಬುಡದೆ ಇರಂಗೆ ಅರ್ಧರ್ಧ ಪಾಲ ಯೆತ್ ನನ್ನ ಕಡ ಕೊಟ್ಟ್ ಬುಡ್ತಾ ಯಿರಬ್ಯೆಕು. ನಾನೂ, ಯಾನಾ ನಮ್ ತವುರ ಕುಡಿ ವಂದೆ ಅದೆ. ಯೆಲ್ಲಾ ಅವುಂಗೇ ಇರ್ಲಿ, ಬಾಳ್ಲಿ ಬದುಕ್ಲಿ ಅಂತ ಯೆಲ್ಲಾ ಬುಟ್ಟು ಇಷ್ಟ್ ದಿನಿನ್ ತಂಕಾ ಯಿದ್ದಿ. ಯಾಳೋರ್ ಕ್ಯಾಳೋರ್ ಯಾರೂ ಇಲ್ವಾ ನಿಂಗ. ಮರ್ವಾದಿ ಮಾನು ಕ್ಕಾರಾ ರವಷ್ಟು ಅಂಜ್ಕಬ್ಯಾಡವಾ? ಕಟ್ಕಂಡ್ ಯೆಣ್ಣಾ ಮೂಳಚಕ್ಕ ಮಾಡಿ ಹಟ್ಟಿಯಾಗ್ ಅವ್ವನ್ನ, ತ್ವಾಟಧ್ ಮನೆಯಾಗೆ ಮಗಳನ್ನಾ ಇಟ್ಕಂಡು ನಿನ್ ಆಟ ತೋರುಸ್ತಿದ್ದಯಾ. ಇಸ್ ನನ್ನಾಟನೂ ನೀ ನೋಡಬ್ಯೆದು. ಒಬ್ಬರಾಟವೇ ನೋಡಾಕ್ ಏನ್ ಚಂದ'', ಸಿವಕ್ಕ ನುಡುದು, ಯೆರಡನೆ ಮಾತಿಗೆ ಯಾಪ್ತಿಯೇ ಇಲ್ಲದಂತೆ ಒಳಹೋಗಿದ್ದಳು.

ದೆಯ್ಯವ ಓಡಿಸಲು ಪೂಜಾ ಪುನಸ್ಕಾರ ಮಾಡಿಸಲು ಬಂದ ಸುಕ್ಕುಗಟ್ಟಿದ ಪೂಜಾರಯ್ಯನ ಕಂಗಳಿಂದ ಕಂಡೂ ಕಾಣದ ಹಾಗೆ ನೀರ ಹನಿ ವಸರುತ್ತಿತ್ತು. ''ವರಗಡಾ ಇರಿ, ಒಂದ್ ಪೂಜಾ, ತಡಾ ಹಾಕ್ತೀನಿ. ನ್ವಾಡಂವಾ, ನನ್ ಕುಟ್ಟಿ ಯಾನಾರಾ ದುಂಡಿ ಮಾತಾಡಾಳ ಅಂತ'', ಪೂಜಾರಯ್ಯ ಸಿವಕ್ಕ ಮತ್ತು ಅವ್ವನಿಗೆ ಹೇಳಿದ್ದ. ಗುಡಿವೊಳಗೆ ಬಿಳಿಯೆಣ್ಣು, ಪೂಜಾರಯ್ಯ ಇಬ್ಬರು ಮಾತ್ರ ವುಳಕಂಡಿದ್ದರು.

''ನೀನ್ ಯಾರಾ ತಾಯಿ?'', ಪೂಜಾರಯ್ಯ ಕೇಳಿದಾಗ ಬಿಳಿಯೆಣ್ಣು ಪಿಟಪಿಟಿ ಕಣ್ಣು ಬುಡ್ತಿತ್ತು. ''ನೀ ಯಾರಂತ ನಂಗೊತ್ತದ ಕ ತಾಯಿ, ಗೌಡ್ರಟ್ಟಿ ಸೊಸ ಮಂಜುಳವ್ವ ಅಲ್ಲವಾ ತಾಯಿ. ಯಾವ್ ದೆಯ್ಯವೂ ಇಲ್ಲ, ಯಾವ ಗಾಳೀನೂ ಯಿಲ್ಲ, ಯೆಲ್ಲಾ ಭ್ರಮ ಅಲ್ವಾ ತಾಯಿ. ಜನಗೋಳ್ಗೆ ಬುದ್ಧಿ ಯಿಲ್ಲಾ ನಿಂಗೂ ಬುದ್ಧಿಯಿಲ್ವಾ ಅಂತೀನಿ. ಸತ್ತೋರ್ ತಿಕಾ ತೆಂಕ್ಲೋ, ಬಡಕ್ಲೋ ಅನ್ನಂಗೆ. ಸತ್ತ್ ಮ್ಯಾಕೆ ಯಾನಾದರೂ ಅಂತ ಯಾರುಗ್ ತಾನ ಗೊತ್ತು ಯಾಳು. ನಮ್ ನಮ್ ಭ್ರಮಗ, ದೆಯ್ಯ ಆಯ್ತುದೆ. ಪೀಡ ಆಯ್ತುದ, ಪಿಸಾಚಿ ಆಯ್ತುದೆ ಅನ್ಕಳ್ಳದು ಅಷ್ಟೇಯಾ ಅಲ್ವಾ?''

ಬಿಳಿಯೆಣ್ಣು ವುತ್ತರ ಕೊಡದೆ ಪೂಜಾರಯ್ಯನ ಮಾತುಗಳಿಗೆ ಹೌದೆಂದು ತಲೆಯಾಡಿಸಿತ್ತು. ''ಮತ್ತ ದುಂಡವ್ವ ನಾನು ಅಂತ ಯಾಕ್ ಹಂಗ್

ವಾಲಾಡಿಯಾ?'', ಪೂಜಾರಯ್ಯ ಪಟಕ್ಕನೆ ಕೇಳಿದಾಗ ಬಿಳಿಯೆಣ್ಣು ಗಾಬರಿಯಾಗಿ, ವುತ್ತರ ವಳಿಯದೆ, ಕಣ್ಣುಗಳಿಂದ ನೀರ ಸುರಿಸಲು ಆರಂಭಿಸಿತ್ತು. ಪೂಜಾರಯ್ಯ ಸುಮ್ಮನ ಕುಂತಿತ್ತು. ಎಷ್ಟೋ ವತ್ತಿನ ಮ್ಯಾಲೆಯೇ ಅವುಳ ಅಳ ನಿಂತಿದ್ದು.

''ನಂಗ ದುಂಡವ್ವ ಆಗ್ಬೇಕು ಅಂತ ಅನ್ನುಸ್ತದೆ ಕಣ್ ಪೂಜಾರಯ್ಯ'', ಬಿಳೀಹೆಣ್ಣು ಮೂಗು ಸೊರೆಯುತ್ತಾ ಮೊದಲ ಮಾತು ಆಡಿದಾಗ ಪೂಜಾರಯ್ಯ ಬೆಚ್ಚಿಬಿದ್ದಿದ್ದ.


''ನಾನೂ ದುಂಡವ್ವನ ಹಂಗೇ ಆಗ್ಬೇಕು. ನನ್ನೂ ನಮ್ ಯಜಮಾನ್ರು ಅರಾಜ್ ಹಾಕ್ ಬುಡಬೈಕು. ನಿನ್ನಂಥ ವೊಬ್ ವಳ್ಳೆ ಮನ್ಷಾ ನನ್ನ ಕೊಂಡ್ಕಬೈಕು. ಅವುರ್ ಕುಟ್ಟಾ ನನ್ನ ಮದ್ವಾ ಆಗ್ಬೇಕು. ಹಂಗಾರೂ ನಂಗೆ ನೆಮ್ದಿ ಸಿಗ್ಬೇಕು. ಅವ್ರು ಕೊಡಾ ಕ್ವಾಟ್ಲೆಗೆ ಯಿರೋಧ ಮಾಡಾಕೆ ನಂಗ್ಯಾನೂ ಗೊತ್ತಿಲ್ಲ. ಆದ್ಕಾ ದೆಯ್ಯ ಬಂದೋಳಂಗೆ ಆಡ್ತಿವ್ನಿ ಅಯ್ಯ.''


''ಆದ್ರ ಯೆಷ್ಟ್ ದಿನಾಂತ ನೀನು ಹಿಂಗೆಯಾ ನಿನ್ ಮೈಯ್ಯಲ್ಲಿರಾ ಸತ್ವಾ ಅರಚಾಡಿ, ಕಿರುಚಾಡಿ, ವದರಾಡಿ, ವದ್ದಾಡಿ ಕಳಕಂತಾ ಹ್ವಾದಯಿ. ವಾಗ್ಲಿ ಅಂದ್ರ, ಆ ಟೇಮ್‌ಗೆ ನಿನ್ನ ಗಂಡ ನಿನ್ನ ಬುಟ್ಟು ಹ್ವಾಗ್ ಬುಡಬೋದು. ಮತ್ತಾ ನಾಳೀಕೆ ಯತಾಪ್ರಕಾರ ನಿನ್ ಮ್ಯಾಲೆ ಆರಾಡಕ್ಕೆ ಬತ್ತನೆ. ಮನ್‌ಸಾ ಯಾನೇನೋ ಆಸ ಪಡ್ತನೆ. ಅವೆಲ್ಲಾ ಯಿಡೇರದಾವಾ ಕೂಸು. ಒಬ್ರು ಬದುಕ್‌ನಂಗೇ ಇನ್ನೊಬ್ರು ಬದ್ಕೂಕ ನಡದಾತಾ? ಐದ್ ಬೆಳ್ಳು ವಂದೇ ಸಮುಕ್ ಇದ್ದದಾ? ಇಲ್ಲ. ದುಂಡಿ ಹಂಗೆ ನಾನು ಆಗ್ಬೇಕು ಅಂದ್ರಾ, ದುಂಡಿ ಬದ್ಕು ನಂಗೆ ಬ್ಯಾಕು ಅಂದ್ರೆ, ಹಂಗೇ ನಡದು ಹೋದಾತ ಮಗಾ. ನಾವ್ ನಾವ್ ಯಾನೇನು ತಂದಿದ್ದೇವೊ ಬುತ್ತಿಯಾ, ಅದ್ನೇ ಬಿಚ್ಕಂಡ್ ತಿನ್ನಬೈಕು ನ್ವಾಡು. ಹಂಗಂತ ಕೈ ಕಟ್ಕಂಡು ಕುಂತ್ಕಾ ಅನ್ನಾಕಿಲ್ಲ ನಾನು. ಸಿವಕ್ಕ, ಅವ್ವಾ ಯಿಬ್ರೂ ನಿನ್ ಕಡ್ಕಾ ಅವ್ರೆ. ನಿನ್ ಗಂಡ್ನ ಯೆಂಗೆ ಯಿರೋಧಿ ಮಾಡ್ ಬೋದೋ, ನೀ ಯೆಂಗ ಮರ್ವಾದಿ, ನೆಮ್ದಿಯಾಗಿ ಬಾಳಾಟ ಮಾಡ್‌ಬೋದೋ ಅದುಕ್ ತಕ್ಕಂತ ನಡ್ಕಾ. ಅಲ್ದೆ ವಾದ್ರೆ ಅವ್ವಾನೂ ಆಲ್ ಕೊಡಕಿಲ್ವಂತೆ. ನಮ್ಮ ನಮ್ ಬದ್ಕಾ ವುಳಿಸ್ಕಳ್ಕ ರವಷ್ಟಾದರೂ ಯೆಣ್ಣ್ ಮಕ್ಳಾ ಬಾಯಿ ಕಲ್ತಕಬೈಕು. ಯಿರೋಧ ಮಾಡಾದ ಕಲ್ತಬೈಕು. ಹಂಗಾರ ಉಳ್ಗಾಲ. ಯಿಲ್ಲಾಂದ್ರೆ ಸುಟ್ಟ್‌ಬುಟ್ಟು ಪೊಟ್ಟ್ನ ಕಟ್ಟ್‌ಬುಡ್ತಾರೆ. ಕಣವ್ವಾ.''


ಅತ್ತೆಯ್ಯಾ, ಸಿವಕ್ಕರ ಜ್ವತೆಗೂಡಿ ಹಟ್ಟಿ ಕಡೆ ನಡೆದ ಬಿಳಿಯೆಣ್ಣ ಮೊಕದಲ್ಲಿ ವಂದಷ್ಟು ಕೆಂಪು ಮೂಡಿತ್ತು. ಅದು ಕ್ರಮೇಣ ಅವುಳ ಬಿಳಿಮೈಯ್ಯ ಇಡಿಯಾಗಿ ಆವರಿಸುತ್ತಾ ಹೋಯಿತು.

ಮಗಳ ಸಾಯುವ [illegible] ತಾರಗ್ಗ ಬಂಡೆಯ ಭಾರ [illegible] [illegible] ಜಗತ್ತಿಗೆ ನಿಂತುಕೊಂಡಿದ್ದ. ಮುಂದಿನ ತಂದೆಯರು ಜೀವನದಲ್ಲಿ ಅವನ ಪತ್ರಿಯ ನಾಟಕಗಳು ಪ್ರತಿಕೃತಿಯಾಗುವಂತೆ ಕತ್ತಲಲ್ಲಿ ಕಲ್ಲು ತೂರಾಟ ನಡೆದಿತ್ತು.

ಎಂ. ಎಸ್. ವೇದಾ.







# ಬುದ್ಧ ಕವಿತೆ

## ಕಾವ್ಯ ಧಾರಾವಾಹಿ -2

ಕೆ. ಎ. ತಿರುಮಲೇಶ್

---

ಅನೋಮಾ ತೀರದಲ್ಲಿ ನಾನು
ಬಟ್ಟೆ ಬದಲಿಸಿದೆ

★

ನಿಲ್ಲು! ನಿಲ್ಲೆಂದ ಅಂಗುಲಿಮಾಲ (ಆತ
ಬೆಂಬತ್ತಿ ಸುಸ್ತಾಗಿದ್ದ)
ನನಗಿನ್ನು ಬೇಕಾದ್ದು (ಲೆಕ್ಕ ಹಾಕುತ್ತ)
ಒಂದೇ ಒಂದು ಬೆರಳು ಈಗಾಗಲೇ
999!
ನಾನು ನಿಂತೇ ಇದ್ದೇನೆ-ಎಂದ ಬುದ್ಧ
ನೀನು ನಿಲ್ಲುವುದ ಕಲಿತುಕೋ
ಸ್ಥಿರವಾಗು ಬಂಡೆಯ ಹಾಗೆ! ಸಮುದ್ರದ
ತಲ್ಲಣವಾಗುವುದು ಬೇಡ-ಕೊಳದ
ಆಳವಾಗು ನಿರಾಳವಾಗು!
ಅಲ್ಲಿಯೂ ಮಳೆಯ ಹನಿ ಬಿದ್ದಾಗ ಅಲೆಗಳೇಳುತ್ತವೆ
ಅವು ಯಾರನ್ನೂ ಹೊಡೆದು ಅಪ್ಪಳಿಸುವುದಿಲ್ಲ

★

ಯಾಕಿಷ್ಟು ಚೆಲುವು ಬಯಲಲ್ಲಿ
ಯಾಕಿಷ್ಟು ಮಿದುವು ಹೂವಲ್ಲಿ
ಯಾಕಿಷ್ಟು ಸುಖವು ಹಾಡಲ್ಲಿ
ಸುಜಾತ!

ನಾನು ಸಿತಾರದ ತಂತಿಯ ಅತಿಯಾಗಿ ಬಿಗಿದಿದ್ದೆ

ಹದಮಾಡು! ಹದಮಾಡು!
ನೃತ್ಯಕ್ಕೆ ಸರಿಮಾಡು ವ್ಯಕ್ತ ಮಧ್ಯಮದಲ್ಲಿ ಹಾಡು
ಈ ವೈಶಾಖಿಯ ರಾತ್ರಿ ದೀರ್ಘವಾಗಿರುತ್ತದೆ

★

ಉತ್ಥಾನಪಾದಗಳ ಬುದ್ಧನಿರಬೇಕು. ಬರೀ ಪುಟ್ಟ ಪಾದಗಳ
ಬುದ್ಧನಿದ್ದರೆ ಹೇಗೆ ಇಷ್ಟೊಂದು ದೊಡ್ಡ ಮಹಿಮನಿಗೆ
ಎಂದೆ ಆತನು ಕಾಲುಗಳನಿಟ್ಟಲ್ಲಿ ಖಂಡಾಂತರ!
ನೆಲ ಆಕಾಶ ಒಂದೆ. ಸಾಗರದ ತಳ ಕಂಡೆ. ಮೋಡಗಳು
ಮೈಯ ಹೊದ್ದಿರುತ್ತವೆ. ನಕ್ಷತ್ರಗಳು ಕೆಳಗಿಳಿದು ಪ್ರಭಾವಳಿಯ
ಹಿಡಿದಿರುತ್ತವೆ. ನಾವಿವನನ್ನು ರಾಯಗಿರಿಯ ಮಹಾ
ಗ್ರಾನೈಟ್ ಶಿಲೆಯಿಂದ ಕಡಿದು ತೆಗೆಯುತ್ತೇವೆ.
ಸಾವಿರ ಶಿಲ್ಪಿಗಳು ಹಗಲಿರುಳು ಕೂತು ಕೆತ್ತುತ್ತಾರೆ - ಅವರು



ಜಪಾನದಿಂದ ಬರುತ್ತಾರೆ
ಚೈನಾದಿಂದ ಬರುತ್ತಾರೆ
ಬೋಟುಗಳಲ್ಲಿ ಹೋಗಿ ಹಣೆಯಿಡುತ್ತಾರೆ
ಅವನ ಪಾದಗಳಲ್ಲಿ

ನಾವು ಕೆಫೆಗಳಲ್ಲಿ ಕ್ಲಬ್ಬುಗಳಲ್ಲಿ ರಿಸೋರ್ಟುಗಳಲ್ಲಿ
ಕಚೇರಿಗಳಲ್ಲಿ ಬೀದಿಗಳಲ್ಲಿ ಫುಟ್ ಪಾತುಗಳಲ್ಲಿ
ಬಿಸಿಲಿಗೆ ಮಳೆಗೆ
ಬುದ್ಧನಿದ್ದಾನೆಂಬ ಧೈರ್ಯದಲ್ಲಿ




ಸಕ್ಕರೆ ಮೂಟೆಯಾಗಿದ್ದರೆ ಕರಗಿಹೋಗುತ್ತಿದ್ದ ನೀರಲ್ಲಿ
ಸಕ್ಕರೆಗಿಂತ ಸಿಹಿ
ಬೆಣ್ಣೆಮುದ್ದೆಯಾಗಿದ್ದರೆ ಕರಗಿಹೋಗುತ್ತಿದ್ದ ಬಿಸಿಲಲ್ಲಿ
ಬೆಣ್ಣೆಗಿಂತ ಮಿದು ನಮ್ಮ
ಕಲ್ಲಿನ ಬುದ್ಧ


ಮೇಲಿದ್ದಾರೆ, ತಲೆಯ ಮೇಲಿದ್ದಾರೆ, ಹೊಟ್ಟೆ ಮೇಲೆ ಹೊಡೆ-
ಯುತ್ತಾರೆ. ಕಿವಿಗೆ ತೂತು ಕೊರೆಯುತ್ತಾರೆ. ಕಣ್ಣ ರೆಪ್ಪೆಗಳ
ತೆರೆಸುತ್ತಾರೆ. ಅವರು ಬುದ್ಧನ್ನ ಬಿಡಿಸುತ್ತಿದ್ದಾರೆಯೆ
ಕಲ್ಲನ್ನ ಕೆತ್ತುತ್ತಿದ್ದಾರೆಯೆ-ಒಬ್ಬೊಬ್ಬರಿದ್ದಾರೆ ಒಂದೊಂದು ಕಡೆ.
ಇಡಿಯಾದ ಬುದ್ಧನ್ನ ಯಾರು ಕಂಡಿದ್ದಾರೆ?

ಆಮೇಲೆ ನಾವು ಹದಿನಾರು ಚಕ್ರಗಳ ಟ್ರಕ್ಕಿನಲ್ಲಿ
ಎಳೆದಿದ್ದೇವೆ ಅವನನ್ನು ತಾರ್‌ನಾಕದ ದಾರಿಯಲ್ಲಿ
ಗಲಿವರನ ಎಳೆವಂತೆ ಲಿಲಿಪೂಶಿಯನರು
ಜನ ನಿಂತು ನೋಡಿದ್ದಾರೆ ಅಚ್ಚರಿಯಲ್ಲಿ
ಇಷ್ಟೊಂದು ದೊಡ್ಡ ಬುದ್ಧನ್ನ ಹೇಗೆ ನಿಲ್ಲಿಸುವಿರಿ
ಸರೋವರ ಮಧ್ಯದಲ್ಲಿ

ಬುದ್ಧ ಮಲಗಿದ್ದ ಆಕಾಶ ನೋಡುತ್ತ
ಇಡೀ ದಾರಿಯ ಉದ್ದ

ಆಮೇಲೆ ಅವ ಹುಸೇನ್ ಸಾಗರದಲ್ಲಿ ಎದ್ದ
ಏನೂ ಆಗದವನಂತೆ
ತನ್ನ ಟೋಗಾದ ನಿರಿಯ ಸರಿಪಡಿಸಿಕೊಂಡವನಂತೆ
ಸಹಜ






# ಆರ್ಯ

## ಸ್ಕೂಟರ್ ಕಳ್ಳ

ಸ್ಕೂಟರ್ ಡೀಲರ್ಸ್ ಎಂಡ ಸರ್ವಿಸಸ್ ಇಂಟರನ್ಯಾಶನಲದ ಪ್ರೊಪ್ರೈಟರ್ ಚೆನ್ನಪ್ಪ ಮುತ್ತಪ್ಪ ಶೆಟ್ಟರು, ಮದನೂರು ಶಹರದ ಕಳ್ಳಕೆರೆ ಮಾಫಿಯಾ ಧೂಳೀಪಟ ಮಾಡಿ ಇತ್ತೀಚೆಗೆ ಪ್ರಾಮಾಣಿಕತೆಗೆ ರಾಜ್ಯಪ್ರಶಸ್ತಿಯ ಪೊಲೀಸ್ ಪದಕದಿಂದ ಸನ್ಮಾನಿತರಾದ ಡಿ.ಎಸ್.ಪಿ. ದುಂಡಪ್ಪ ಭೀಮಪ್ಪ ಪಾಟೀಲರು, ಶೆಟ್ಟರ ಮಾರ್ಬಲ್ ಟೈಲ್ಸ್ ಆಚ್ಛಾದಿತ ಟೆರೇಸ್‌ನಲ್ಲಿ, ಹಳೇ ನೆನಪಿನ ಮಿಕ್ಸಚರ್ ಮೆಲ್ಲುತ್ತಾ ಗುಂಡುಪಾನ ಮಾಡುತ್ತಿದ್ದರು. ನಾಗೂರಿನ ಸರಕಾರೀ ಗಂಡುಮಕ್ಕಳ ಸಾಲೆಯಲ್ಲಿ ಕಬ್ಬಡ್ಡಿಯೊಂದಿಗೆ ಬೆಳೆದ 45 ವರ್ಷಗಳ ಚಡ್ಡೀ ದೋಸ್ತರು. ಮಾತಿನ ಹಳಿಯೂ ಗುಂಡಿನ ಗತಿಗೆ ಸಮಾನಾಂತರವಾಗಿ, ಹೆಚ್ಚಾಗಿ ಕಾಲೇಜು ಸ್ಟೇಶನಿಗೇ ಬಂದು ನಿಲ್ಲುವುದು ಎಂದಿನ ಪದ್ಧತಿ.

ಪಾಟೀಲರು ಬಡ್ತಿಗೊಂಡು ಕೆಲವರ್ಷದ ಮೇಲೆ ಮರಳಿ ನಾಗೂರಿಗೆ ಬಂದಿದ್ದರು. ಬಂದ ಸಂಜೆಗೇ ಮುಹೂರ್ತ ನೋಡಿ, ತೀರ್ಥಪಾನ ಶುರುವಾಗಿತ್ತು. ''ಫೋನ್ ಬಂದರೆ ಡ್ಯೂಟಿ ಮ್ಯಾಲೆ ಹೋಗ್ಯಾರೆ ಅಂತ ಬೊಗಳು'' ಎಂದು ಜವಾನನಿಗೆ ಒದರಿ ಬಂದಿದ್ದರು.




ಚೆನ್ನಪ್ಪ ಶೆಟ್ಟರು ಪೀಟರ್ ಬಗ್ಗಿಸಿ, ''ಸೋಡಾ ಹಾಕಲೇನು'' ಅಂದಾಗ ಪಾಟೀಲರು, ''ಹೇ ಬಿಡ. ಯಕೋ ಎಸಿಡಿಟಿ. ಏನು ಚಲೋ ಕೆಲಸ ಮಾಡಬೇಕೆಂದರೂ, ಈ ಪೀಡಾ, ಪೊಲಿಟೀಶನ್ನು ಕಾಡತಾವ. ನಾ ದಾದ ಮಾಡಾವ ಅಲ್ಲ....ನೀ ಕೂಡಾ ಪೀಟರ ತಗೊಳ್ಳಲ್ಲ.'' ಚೆನ್ನಪ್ಪ ಶೆಟ್ಟರು ತ್ರಿ ಎಕ್ಸ್ ಬಗ್ಗಿಸುತ್ತಾ ''ನನ್ನದು ಎಂದೂ ಈ ಮೂರು ಯಕ್ಷ ಬಿಟ್ಟು ಬೇರಿಲ್ಲ'' ಎನ್ನುತ್ತಾ ಮೂರು ಯಕ್ಷನ ಮೂವತ್ತು ಮಾಡಿ ಗ್ಲಾಸ್ ತುಂಬಿದರು. ಪಾಟೀಲರು, ''ಮತ್ತೆ ನಿಂದು ಹೆಂಗ ನಡೆದೈತಿ? ಚಿಯರ್ಸ!'', ಚೆನ್ನಪ್ಪರು ''ಚಿಯರ್ಸ ಚೆನ್ನಾಗಿ ನಡೆದೈತಿ. ನೀ ಲೋಕಾಯುಕ್ತ ಆಗಿ ಬಂದಿಲ್ಲ ನೋಡು! ನನ್ನ ನಸಿಬು. ಭೇಷಾತಲೇ ನೀ ಬಂದು. ಎಷ್ಟು ವರ್ಷಾತು!... ಹೀರೋ ಹೊಂಡಾದ್ದು ಡಿಸ್ಟ್ರಿಕ್ಟ್ ಏಜನ್ಸಿ ಸಿಕ್ಕೈತಿ. ಹ್ವಾದ ವರ್ಷ ಸಾಂಟ್ರೋ ತಗೊಂಡೆ. ಸ್ಕೂಟರ್ ಸಾಕವ್ವಾ ಅಂದರ ಈಕೆ ಮಾರಾಯತಿ ಬಿಡಾಣಲ್ಲ. ಆದರೂ ಮೊದಲ ಈ ಸ್ಕೂಟರ್ ಹತ್ತಿದ ಮಜಾ ಇದರಾಗ ಇಲ್ಲಪಾ. ಪಾಟೀಲರು ಚಾರ ಮಿನಾರ್ ಹಚ್ಚಿ ನಕ್ಕು, ''ಕ್ಲಾಸಿಗೆ ಲೇಟಾತೇದು ಬೀಸು ಬರೋ ಹುಡುಗ್ಯಾರಿಗೆ ಲಿಫ್ಟ್ ಕೊಟ್ಟು, ಉಸ್ಸನ್ನುತ್ತಾ ಕೂಡ್ಲೋ ಗಡಿಬಿಡಿಯಲ್ಲಿ ಎಲ್ಲೋ ಅವರ ತೋಳುಗೀಳು ತಾಗಿದಾಗ

ಜುಂ ಅನ್ನೋ ಪುಳಕ. ಆಗೀಗ ಕತ್ತು, ಕಿವಿಗೆ ಅವರ ಉಸಿರು ಪೂಸುವ ಝುಂಕ, ಈ ಸ್ಯಾಂಟ್ರೋ, ಗಿಂಟ್ರೋದಾಗ ಹೆಂಗ ಗೀಟಬೇಕು?''

ಮೂವತ್ತರ ಯಕ್ಷ ತೊಂಭತ್ತಕ್ಕೆ ನಿಧಾನ ಗರಿಯೇರಿದಾಗ, ಹಳೇ ಮುತ್ತಪ್ಪ ಕಾಲೇಜಿನ ಗುಡಿರಸ್ತೆ, ಬಾವಿಗಳಲ್ಲಿ, ಉಡ್‌ಲ್ಯಾಂಡ್ ಹೋಟೆಲಿನ ಹಸಿರು ಆಕಾರದ ಪಾರ್ಕಿಂಗ್ ಜಾಗ, ವಿವೇಕಾನಂದ ಉದ್ಯಾನ ಇತ್ಯಾದಿ ವಗೈರೆಗಳು ಮೂಡಿ ಚಕ್ ಚಕಾಗ ಹತ್ತಿದುವು. ಪಾಟೀಲರು, ''ಮತ್ತೆ ಬಾಯಾರು...'' ಅನ್ನುವಾಗ ಚೆನ್ನಪ್ಪರ ಧರ್ಮಪತ್ನಿ ಮಾಲತಿ, ಬಂಗಾರ ಬಳೆ ನಿನಾದಗಳೊಡನೆ ನಸುನಗು ಚೆಲ್ಲುತ್ತಾ, ''ತಗೋರಿ ಬಿಸಿ ಪಕೋಡಾ... ಬಹಳ ಕುಡೀ ಬ್ಯಾಡ್ರಿ ಮತ್ತ. ಮುಂಜಾನೆ ಮೇಸ್ತ್ರಿ ಮೆಕಾನಿಕ ಇಬ್ರೂ ಇಲ್ಲ ಮರೀಬ್ಯಾಡ್ರಿ...'' ಎನ್ನುತ್ತ ನಗು ಬೀರಿ ಒಳನಡೆದರು. ಚೆನ್ನಪ್ಪ ಶೆಟ್ಟರು ಗಂಭೀರ ವದನರಾಗಿ, ''ಏ ಯಪಾ ಹಳೇ ಕತೀ ಎಲ್ಲಾ ಬಿಚ್ಚಿ ತಗೀಬ್ಯಾಡಾ ಮತ್ತ ಈಕಿ ಇದಿರಿಗೆ. ತಿಳಿದರ ಹರದು ತಿಂದಾಳು!'' ಅಂತ ನಕ್ಕರು.

ಕತೆ ಆಗೂದೇ ಹಳೇದಾದಾಗ. ಚೆನ್ನಪ್ಪನ ಹಳೇ ವೆಸ್ಪಾ ಸ್ಕೂಟರಿನ ಹಾಗೆ. ನಾಗೂರಿನಲ್ಲಿ ಅದೊಂದು 'ಫೇಮಸ್' ಸ್ಕೂಟರ್ ಆಗಿತ್ತು. ಬಹಳ ದಿನ. ಚೆನ್ನಪ್ಪ 5.10 ಅಡಿಯ ಸುಂದರಾಂಗ. ಮಹಾತ್ಮಾ ಗಾಂಧೀ ಹೇರ ಕಟ್ಟಿಂಗ ಸಲೂನದಲ್ಲಿ ದಿಲೀಪಕುಮಾರ ಶೈಲಿ, ಕ್ರಾಪ್



ಶ್ರೀಪಾದ್

ಕಟ್ಟಿಂಗ್ ಮಾಡಿದಾಗ ಅಪೂಟನ ಸುಂದರ. ಬಿ.ಎಸ್.ಸಿ ಸೆಂಕೆಂಡ್‌ನಲ್ಲಿ ಸರಾಸರಿ 5 1/2 ಹೈಟಿನ ಸಹಕುಮಾರರ ನಡುವೆ. ಸಹಜವಾಗಿ ಹುಡುಗಿಯರು ಪಲ್ಲೂ ಸರಿಮಾಡುವ ನೆಪದಲ್ಲೂ ಕದ್ದು ಮುಚ್ಚಿ ಚೆನ್ನಪ್ಪನನ್ನು ಮಿಟುಕಿ ನೋಡಿದಾಗ, ಅವನಿಗೆ ಗಂಟಲಲ್ಲಿ ಕಚಗುಳಿಯಾಗುತ್ತಿರಲು, ಕೆಮಿಸ್ಟ್ರಿಯ ಕ್ಲಾಸಿಫಿಕೇಶನ್ಸ್, ಜೂವಾಲಜೀಯ ಲ್ಯಾಟಿನ್ ನಾಮಕರಣಗಳು ಕನ್‌ಫ್ಯೂಸ್ ಆಗುತ್ತಿದ್ದುವು. ಪಾಪದ ಚೆನ್ನಪ್ಪ ನಾಚಿಕೆ ಪ್ರವೃತ್ತಿಯವನಾಗಿದ್ದರೂ, ಈ ಸತತ ಕಮಲ ನೇತ್ರಗಳ ದೃಷ್ಟಿಪಾತಗಳು ದಿಲೀಪ ಕ್ರಾಪಿನ ತಲೆಯೊಳಗೆ ಮೆಲ್ಲಗೆ ತೆರೆಯಾಗತೊಡಗಿದುವು. ಅದರಲ್ಲೂ


ಜಕಣಾಚಾರಿ ಸಿನೇಮಾದ ಬೇಲೂರ ಬಾಲೆಯ ಝೇರಾಕ್ಸ ಕಾಪೀಯಂತಿದ್ದ ಮಾನಸಿಯ ಲಾವಣ್ಯ, ಚಂಚಲ ನಡೆಯ ವೈಯಾರ, ನೋಟುಬುಕ್ ಪುಟಗಳಲ್ಲೆಲ್ಲಾ ಮೂಡತೊಡಗಿದುವು. ಅಂತಿರಲಾಗಿ ಚೆನ್ನಪ್ಪನ ತಂದೆ ಚನವೀರ ಶೆಟ್ಟರ ಹೊಲದಲ್ಲಿ ಬೆಳೆದ ವರಲಕ್ಷ್ಮೀ ಹತ್ತಿಗೆ ಅಪಾರ ರೇಟು ಬಂದಿತ್ತು. 'ಸಾಹುಕಾರರು ಗೋಣಿತಟ್ಟು ತುಂಬಿ ರೊಕ್ಕ ಬ್ಯಾಂಕಿಗೆ ಡಿಪಾಜಿಟು ಮಾಡುತ್ತಾರೆ' 'ಪಕ್ಕದ ಬೆಳಗಾಂ ಕ್ಲಬ್ಬಿನಲ್ಲಿ ಇಸ್ಪೀಟು ಇತ್ಯಾದಿ ಆಡುತ್ತಾರೆ' ಇತ್ಯಾದಿ ಶ್ರೀಮಂತಿಕೆಗೆ ಕುಮ್ಮಕ್ಕು ಕೊಡುವಂತಹ ಗುಸುಗುಸು ಊರಲ್ಲಾಯಿತು. ಕಾರಣ, ಚೆನ್ನಪ್ಪ ''ಅಫಾ, ರೊಕ್ಕ ಈಡೈತಿ. ನನಗೊಂದು ಸ್ಕೂಟರ ಕೊಡಿಸಲ್ಲ'' ಎಂದಾಗ ತಂಟೆ ತಕರಾರಿಲ್ಲದೆ ಸಾಂಕ್ಷನ್ ಆಯಿತು, ಒಂದು ಸೆಕೆಂಡ್ ಹಾಂಡ್ ವೆಸ್ಪಾ ಸ್ಕೂಟರ್! ಸುಂದರಾಂಗ ಚನ್ನಪ್ಪ, ಅದನ್ನು ವಿಕ್ಟೋರಿಯಾ ಗಾರೇಜಿನಲ್ಲಿ ರೀಕಂಡಿಶನ್ ಮಾಡಿದಾಗ ತುಂಬ ಖುಷಿಗೊಂಡ.

ವೆಸ್ಪಾ ಸ್ಕೂಟರ್, ದೂರದ ಸಿದ್ದೇಶ್ವರ ಬಡಾವಣೆಯಿಂದ ಲೇಟಾಗಿ ಕ್ಲಾಸಿಗೆ ಬರುತ್ತಿದ್ದ ಮಿಸ್ ಮಾನಸಿಗೂ ಅನುಕೂಲವಾಯ್ತು. ವಾಚಕರೆ, ಅರ್ಥವಾಯ್ತಲ್ಲ, ಅಡಸೂರ ಕ್ರಾಸಲ್ಲಿ 'ಚಂದವ್ವ ಮಾನಸಿ ಲೇಟಾಗಿ ಬರಲಿ' ಎಂದು ಕಲ್ಲೇ ಕುಡಿ ಹಣುಮಪ್ಪಗೆ ಹರಕೆ ಹೊರುತ್ತ, ಲಿಫ್ಟ್ ಕೊಡಲು ಚನ್ನಪ್ಪ ಕಾಯುತ್ತಿರುತ್ತಿದ್ದ. ಇದೇ ರೀತಿ ಮುಂದುವರಿಯುತ್ತ, ಲೇಟಾದಾಗ ಮಾನಸಿ ಮನೆ ಹತ್ತಿರ ಡ್ರಾಪ್ ಮಾಡಲು, ಸ್ಟಿಚ್ಚಿಂಗ್ ಕೊಟ್ಟು ವಾರವಾದ ಟೇಲರನಿಂದ ಬ್ಲೌಸ್ ಪಿಕ್‌ಅಪ್ ಮಾಡಲು, ಬಿಸಿಲಲ್ಲಿ ಸುಸ್ತಾದಾಗ ವಿವೇಕಾನಂದ ಪಾರ್ಕಿನ ಅಶೋಕ ಮರದ ನೆರಳಲ್ಲಿ ವಿಶ್ರಾಂತಿ ಮಾಡುತ್ತ ಹರಟೆ ಹೊಡೆಯುವುದು ಇತ್ಯಾದಿ ತ್ಯಾದಿಗಳಲ್ಲಿ ಚೆನ್ನಪ್ಪನ ಪ್ರೇಮದ ಬಳ್ಳಿ ಮಳೆಯಲ್ಲಿ ನಾಚಿಕೆ ಮುಳ್ಳಿನಂತೆ ಹಬ್ಬಿಕೊಂಡಿತು. ಎಷ್ಟು ದೃಢವಾಯಿತೆಂದರೆ ಗೆಳೆಯರು ಶೀಟಿ ಹೊಡೆಯುವುದು, ಕಾರಿಡಾರಿನಲ್ಲಿ ಹಿಂದಿನಿಂದ ಹುಡುಗಿಯರು ಕೊಕ್ ಎನ್ನುವುದು, ಊರ ಹಿರೇರು ಓರೆಕಣ್ಣಿಂದ ದುರುಗುಟ್ಟಿ ನೋಡುವುದು ಇದ್ಯಾವುದಕ್ಕೂ ಚೆನ್ನಪ್ಪ ಕ್ಯಾರ್ ಮಾಡಲಿಲ್ಲ.... 'ಎಲ್ಲಾ ವೆಸ್ಪಾದ ಮಹಿಮೆ' ಅಂದುಕೊಂಡು ಪಿಲಿಯನ್ ಸೀಟನ್ನು ನವುರಾಗಿ ಸವರುತ್ತಿದ್ದ. ಅಮಾಸೆಗೆ ಗಾಡಿಗೆ ಸೇವಂತಿಕೆಗೆ ಮಾಲೆ ಹಾಕಿದಾಗ, ರವಿವಾರ ಅವಲಕ್ಕಿ ನಂತರ ತಾಸು ಸೋಪು ಹಾಕಿ ''ನನ್ನ ವೆಸ್ಪಾ' ಅಂತ ಅದಕ್ಕೆ ಸ್ನಾನ ಮಾಡಿಸಿದಾಗ, ತನ್ನದೇ ಬಾತ್ ಟೆವೆಲ್‌ನಿಂದ ಅದನ್ನು ಚಕಚಕ ಬೆಳಗಿದಾಗ, ಕ್ಲಾಸಿನ ನೋಟು ಬುಕ್ಕಿನಂತೆ, ಸ್ಕೂಟರ್‌ನ ಬಾಡಿ ಮೇಲೆಲ್ಲಾ ಮಾನಸಿಯ ಫೋಟೋ ಕ್ಲಿಕ್ಕಾಗತೊಡಗಿತು; ಗೇರ್, ಬ್ರೇಕ್, ಸ್ಟಾರ್, ಟೈರ್, ಅದರಲ್ಲೂ ಮುಖ್ಯವಾಗಿ ಸೈಡ್ ಮಿರರ್. ಯಾಕೆಂದರೆ, ಮಾನಸಿ ಕಾಣುವಂತೆ ಕದ್ದು ಕನ್ನಡಿಯನ್ನು ಬಾಗಿಸಿದ್ದು ಆಕೆಗೂ ಗೊತ್ತಾಗಿ ನಕ್ಕಳು ಎನ್ನುವುದು ಗೊತ್ತಾದಾಗ...

''ಅಲ್ಲೋ ಚೆನ್ನ್ಯಾ, ಅಷ್ಟು ತಲೆ ಕೆಡಿಸಿಕೊಳ್ಳುವಂಥಾದ್ದೇನಿತ್ತು! ಆ ಮಾನಸಿಯಲ್ಲಿ ಏನು ಸ್ಪೆಶಲ್ ಕಂಡ್ಯೋ? ಆ ಜಾನಕೀ, ಮೀರಾ ಆಕಿಗೇನು ಕಡಿಮೆ ಇದ್ದರೇನು? ಇವರೊಡನೆ ಕ್ಯಾಂಟೀನ್ ಕಟ್ಟೀ ಮ್ಯಾಗ ನೀ ಅಷ್ಟು ಬಿರುಸು ಆಡಿದ್ದು ಯಾಕೋ ಬರೋಬರಿ ಇದ್ದಿದ್ದಿಲ್ಲ'' ಎಂದು ಪಾಟೀಲ 3ನೇ ಪೀಟರನ್ನು ಬಗ್ಗಿಸುವಾಗ, 'ಆಂ' ಎಂದು ಚೆನ್ನಪ್ಪ ಧರೇಗಿಳಿದು ಪಕೋಡಾಕ್ಕೆ ಕೈ ಹಚ್ಚಿದ. ''ಏ ಪಾಚ್ಯಾ ನನಗೆ ಖರೇನ ತಲೆತುಂಬ ಹುಯ್ಯೆಂದು ಆಕಿ ತುಂಬಿಬಿಟ್ಟಿದ್ದಳು. ಬೇರಾರೂ ಬೇಕಿದ್ದಿಲ್ಲ. ಬೇರೇನೂ ಬೇಡಿದ್ದಿಲ್ಲ. ನನಪ್ಪ ವೆಸ್ಪಾ ಕೊಟ್ಟು ನನ್ನ ಧನ್ಯ ಮಾಡಿದ. ವೆಸ್ಪಾ ಆಕೀನ ಕೊಡ್ತು... ಆದರೆ ಯಣ್ಣಿ, ಯಾಕೋ ಬಾಯ್ಬಿಟ್ಟು ನನ್ನ ಪ್ರೇಮಾನ ಆಕಿಗೆ ಹೇಳೋಣ ಅಂದರೆ ಬನೀನು ಹಿಂಡೋ ಹಂಗೆ ಬೆವರು ಬರ್ತಿತ್ತು... ಶ್ಯು ಶ್ಯು...!!

ಪಾಟೀಲರು, ''ಬನ್ನಿ ವೈನಿ'' ಎನ್ನುತ್ತಿರುವಂತೆ ಮಾಲತವ್ವ ಸಂಭ್ರಮದಿಂದ ಉಳ್ಳಾಗಡ್ಡೀ ಭಜಿ ತಂದಿದ್ದಳು. ''ಇಷ್ಟು! ಯವ್ವಾ!...'' ''ತಗೋರಿ ಇವರಿಗೆ ಇದೆಂದರೆ ಪ್ರಾಣ. ನಿಮಗೂ ಅಂತ ಹೇಳುತ್ತಿರುತ್ತಾರೆ... ಕೈ ಹಚ್ಚರಿ. ಏನೂ ಗಡಬಿಡಿ ಇಲ್ಲ... ರೀ ಮೇಸ್ತ್ರಿ, ಮೆಕಾನಿಕ ನಾಳೆ ಇರತಾರೆ. ಫೋನ್ ಮಾಡಿದ್ದೆ... ಏನಾರ ಬೇಕಾದರ ಒದರ್ರೀ...'' ಎಂದು ಕರ್ಚೀಫಿನ ಮಲ್ಲಿಗೆ ಶೆಂಟ್ ಟೆರೇಸ್‌ನಲ್ಲಿ ನಸುಚೆಲ್ಲಿ ಮಾಲತಿ ನಿರ್ಗಮನಗೊಂಡಂಥವಳಾದಳು.

ಫಜೀತಿ ಬಂದದ್ದು 'ಮಾನಸಿಯ ಮನಸ್ಸಿನಲ್ಲೇನಿದೆ' ಎಂಬ ಹುಳ ಚೆನ್ನಪ್ಪನ ಮಿದುಳನ್ನು ತವಳತೊಡಗಿದಾಗ. 'ಪ್ರೀತಿಸುತ್ತಿದ್ದರೆ ಆವಳೇಕೆ ಹೇಳುತ್ತಿಲ್ಲ?' 'ಹೇಳುತ್ತಿಲ್ಲವೆಂದರೆ ಪ್ರೀತಿಸುತ್ತಿಲ್ಲವೆಂದೇ?', 'ಹಾಗಾದರೆ ಏನು ಕಾರಣವಿರಬಹುದು?', 'ಹಾಗಿದ್ದಾಗ ನಾನಾಗಿ ಹೇಗೆ ಕೇಳಲಿ?' 'ಕೇಳಿ ಇಲ್ಲವೆನಿಸಿಕೊಂಡರೆ!', ಎಂಬಿತ್ಯಾದಿ ವಿಚಾರ ಗೊಂದಲದ ಬಲೆಯಲ್ಲಿ ಚೆನ್ನಪ್ಪ ಚಡಪಡಿಸುತ್ತಿದ್ದರೂ, ಸ್ಕೂಟರ್ ಸ್ನೇಹದ ಮೀಟರ್ ತಿರುಗುತ್ತಲೇ ಇತ್ತು. 'ಸ್ಕೂಟರ್ ಸಂಗದಲ್ಲಿ ಈ ಕುರಿತು ಏನಾದರೂ ಸಂಜ್ಞೆ ಸಂಕೇತಗಳು ಸಿಗಬಹುದೇ?' ಸೈಡ್ ಮಿರರ್‌ನಲ್ಲಿ ಅಂಥ ವಿಶೇಷ ಕಣ್ಣು ತುಟಿ ಸಂಜ್ಞೆ ಕಾಣಲಿಲ್ಲ. ಟೆಲಿಫೋನ್, ನೀರು ಪೈಪು ಕೆತ್ತಿದ ಅರೆ ಡಾಂಬರು ರಸ್ತೆ ಧಡಿಕೆಯಲ್ಲಿ ಸೋಂಕಿದ ತೋಳ ಒಣ ಸ್ಪರ್ಶದಲ್ಲಿ ರಸ್ತೆಯಲ್ಲಿ ಮಂದಿಯಿಲ್ಲದಾಗ ಹಗುರಾಗಿ ತನ್ನ ಭುಜ ಹಿಡಿದ ಮಾನಸಿಯ ನಿರ್ವಿಕಾರ ಹಸ್ತದಲ್ಲಿ, ಕತ್ತಿಗೆ ಒಮ್ಮೊಮ್ಮೆ ಪೂಸುವ ಆಕೆಯ ಒಣ ಉಸಿರಲ್ಲಿ, ಎಲ್ಲೆಲ್ಲೂ ಪ್ರೇಮ ಸಂಜ್ಞೆ ಮೂಡದೆ ಇರುವಾಗ, ಇನ್ನೊಂದೆಡೆ ನೆರೆಕರೆ, ಸಹವ್ಯಾಪಾರಸ್ಥರ ಗುಸುಗುಸು ಗುಮಾನಿ, ಹಿತರಕ್ಷಕರೆಂಬುವವರ ಆಪ್ತಗುಪ್ತ ಸಲಹೆ ಸಾತತ್ಯದಿಂದ ವ್ಯಸ್ತಗೊಂಡ ಮಾನಸಿಯ ಅಪ್ಪ ಕಾಕಂದಿರು, ಚೆನ್ನಪ್ಪ ನೋಡು ನೋಡುತ್ತಿರುವಂತೆ ಆಕೆಯ ಲಗ್ನ ಮಾಡಿಸಿಯೇ ಬಿಟ್ಟರು!



ಬಲೂನಿನಂಥ ಕೋಮಲ ಹೃದಯದ ಚೆನ್ನಪ್ಪ ಬಕೆಟ್ ಕಣ್ಣೀರು ಸುರಿಸಿದರೂ ಶಾಂತಿಗೊಳ್ಳದೆ, ವೆಸ್ಪಾದಲ್ಲಿ ಕೂತು, ಕಳೆದ ಕನಸಿನ ಮಾನಸಿಯನ್ನು ಬಯ್ಯುತ್ತಿದ್ದ. ರಸ್ತೆ, ಗಲ್ಲಿ, ತೋಪು, ಪಾರ್ಕುಗಳಲ್ಲಿ ಕಿಲೋ ಕಿಲೋ ಮೀಟರ್ ಬುರ್ರೆಂದು ಡ್ರೈವ್ ಮಾಡಿದಾಗ ಒಂದೀಟು ಅವನ ಮನಸ್ಸಿಗೆ ಗೇರು ಬೀಳುತ್ತಿತ್ತು. ಸ್ಕೂಟರಿನ ಕನ್ನಡಿ, ಸೀಟು, ಗೇರು, ಬ್ರೆಕ್‌ಗಳನ್ನೆಲ್ಲಾ ಕೇಳಿದ ಚೆನ್ನಪ್ಪ, 'ಹೀಗೇಕಾಯ್ತು?' 'ಈ ನೆನಪಿನ ಚಾದರಿಂದ ಹೊರಗೆಂತು ಬರಲಿ?' 'ಅಥವಾ ಏಕೆ ಬರಬೇಕು? ಇಂಥಾ ನಿಷ್ಕರುಣ ಜಗತ್ತಿಗೆ?!...'

ಕಾಲೇಜು ಚಕ್ಕರ ಹೊಡೆದು ಗುಡೀಬಸವನಂತೆ ಸ್ಕೂಟರ್‌ನಲ್ಲಿ ದಿನವೆಲ್ಲಾ ತಿರುಗಿದರೆ ಅಪ್ಪ ಚನವೀರ ಸಾಹುಕಾರರಿಗೆ ಸಿಟ್ಟು ಬರುವುದಾಗಲೀ, ಚಹದ ನೆಪದಲ್ಲಿ ಗೆಳೆಯರು ಕನಿಕರದಿಂದ, 'ಮರೆತು ಬಿಡಲೇ. ನೀ ಸಂಜಯ ಖಾನ್, ನಿನ್ನಂಥವಗೆ ಡಜನ್ ಹಣ್ಣು ಸಿಗ್ತಾವು. ಹೊಡಿ ಸಿಗರೇಟು' ಎನ್ನುವುದಾಗಲೀ, ಮೆಕಾನಿಕ್, 'ಸಾಹೆಬ್ರೆ, ಗಾಡಿ ಪೂರ್ತ ಬಾದ್ ಆಗೈತಿ. ಮೊದಲೇ ಸೆಕೆಂಡ್ ಹ್ಯಾಂಡ್, ಇಂಜೆನ್ ಪೂರ್ತಿ

ರೀಕಂಡೀಶನ್ ಆಗ್ಬೇಕು. ಕೊಟ್ಟು ಹೊಸ ಮಾಡೆಲ್ ಕೊಂಡುಕೊಳ್ರಲಾ, ಏನು ಪುಲ್ಲಿಂಗ್ ಐತರೀ' ಎನ್ನುವುದಾಗಲೀ, ಅದಕ್ಕೆ ಶ್ರುತಿ ಹಿಡಿದು ಗೆಳೆಯರು, 'ಹಂಗ ಮಾಡಲೇ, ಇದನ್ನು ಗುಜರೀಗೆ ಕೊಡು. ತೂಕದ ಮ್ಯಾಗ ತಗೋತಾರ' ಅಂತ ನಗುವುದಾಗಲೀ ಮಾನವ ಸಹಜ...

ಶೆಟ್ಟರು ಚುರುಮುರಿಯ ಕಂಪಿಗೆ ಧರೆಗಿಳಿಯುತ್ತ, ಈಟು ಮೆಲುಕಾಡಿ, "ಏ ಪಾತ್ಯಾ, ನೀ ಒಬ್ಬ ಸಂವೇದನೆಯಿಂದ ನನ್ನ ಕಂಡಿ ನೋಡು. ನನ್ನ ದುಗುಡದ ಆಳ ನೋಡಿ, ವೆಸ್ಪಾದಿಂದ ಹೃದಯದವರೆಗೆ ಹಾಸಿದ್ದ ಮಾನಸಿಯ ಸ್ಮೃತಿಪಟಲ ನೋಡಿ, ಮಾತಿಲ್ಲದೆ ಬರೇ ನನ್ನ ಭುಜ ತಬ್ಬಿ ಸಾಂತ್ವನ ಮಾಡುತ್ತಿದ್ದೆ. ಸ್ಕೂಟರ್ ಮಾರಿಬಿಡು ಎಂದು ನೀ ತಪ್ಪಿಯೂ ಅಂದಿದ್ದಿಲ್ಲ... ನನ್ನ ಭಗ್ನ ಪ್ರೀತಿಯ ಅದೊಂದೇ ಕೊಂಡಿ ಉಳಿದಿತ್ತು. ಕ್ರೂರವಾಗಿ ಅದನ್ನು ಹೆಂಗ ದೂರಮಾಡಲು ಬರುತ್ತಿತ್ತು?" ಪಾಟೀಲ ಸಾಂತ್ವನದಲ್ಲಿ ಚೆನ್ನಪ್ಪನ ಬೆನ್ನು ಸವರಿ, ಪೀಟರ್‌ಗೆ ಸೋಡಾಭಿಷೇಕ ಮಾಡಿ, ಎರಡು ಚಾರ್ ಮಿನಾರ್ ಹೊಗೆದ.

"ನೀರುಗೀರು ಏನಾರ ಬೇಕಾದರ ರೀ, ಕರೀರಿ ಮತ್ತೆ. ಇನ್ನೀಟು ಭಜಿ ಕರಿಯಾಕ ಹತ್ತೇನು" ಎಂದು ಮಾಲತವ್ವನ ರಾಗ ತೇಲಿ ಬಂತು. ಚೆನ್ನಪ್ಪ, "ನೀ ಇಂದು ಬಂದಿ ನೋಡು. ಬಾಳ ಖುಷಿಯಾಯ್ತು. ನಿನಗೆ ಸರ್ಕಾರೀ ಪದಕ ಬಂದು ಪೇಪರೆಲ್ಲಾ 'ಅಪರೂಪದ ಪ್ರಾಮಾಣಿಕ ಅಧಿಕಾರಿ' ಎಂಬಿತ್ಯಾದಿ ವರದಿ ಬಂದಾಗ ನನಗೆ, ಮಾಲತಿಗೆ ಭಾಳ ಖುಷಿಯಾಗಿತ್ತು. ಟೆಲಿಗ್ರಾಂ ಕೂಡಾ ಕೊಟ್ಟಿದ್ದೆ. ಪಾಟೀಲ: "ಥೇಂಕ್ಸ್... ಹೂಂ ಹೊಡಿ ಇನ್ನೊಂದು ಗುಂಡು." ಚೆನ್ನಪ್ಪ ಗುಂಡಿಡಿದ.

'ನಾಳೆ ರೊಟ್ಟಿ ಬಡಿಯಾಕಾದ್ರೂ ಯಾರೇನು ಬ್ಯಾಡ ನಿನಗೆ? ನಾ ಶಿವನ ಹಂತ್ಯಾಕ ಹೋದರೆ ನಿನ್ನ ನೋಡಾರ ಯಾರು ಅದಾರೆ? ನಿನ್ನ ಲಗ್ನ ಮಾಡೇ ತೀರತೇನ. ನಮ್ಮ ನೀಲುವಿನ ಹುಡುಗಿ ಮಾಲತಿ ಚಲೋ ಗುಣವಂತಿ. ಪಸಂದ ಅದಾಳೆ' ಅಂತ ತಾಯೀ ಉವಾಚ. ಆದರೆ, 'ಕಾಲೇಜು ಚಕ್ಕರ್ ಹೊಡಿದಿ. ದನದ್ಹಂಗ ವಯಸ್ಸಾತು. ಮುಂದಿನ ಅಂಗಡೀ ಪೂಜ ಒಳಗ ನಿನ್ನ ಲಗ್ನ ಮಾಡೇ ತೀರಾವ. ಮತ್ತ ಈಗ ಬೇಕಾರ ಕೂಡ ಬ್ಯಾಡಾ. ನಾಳಿಂದ ಅಂಗಡಿ ನೋಡಕೋ...' ಅಂತ ಅಪ್ಪನ ಒದರಾಟ. 'ನಿಮ್ಮ ಠೋಕ ಕಿರುಕುಳ ಅಂಗಡಿ ಮೆಟ್ಲ ನಾ ಕಾಲಿಡೂದಿಲ್ಲ. ಬೇಕಂದರೆ ಸ್ಕೂಟರ್ ಏಜನ್ಸಿ ಕೊಡಿಸಿ' ಅಂತ ಮಗ ಚೆನ್ನಪ್ಪ ಚರ್ಚೆ ವಾಗ್ವಾದ. ಸಾಮೂಹಿಕ ಸಲಹೆ, ಮನೆ ಬಿಟ್ಟು ಓಡ್ಯಾನು ಎಂಬ ಹೆದರಿಕೆಗಳ ಮೇರೆಗೆ, ಚೆನ್ನಪ್ಪಗೆ ಕೈನೆಟಿಕ್ ಹೊಂಡಾದ ಏಜೆನ್ಸಿ ತೆಗೆಸಿ ಹೊಸ ಶೋರೂಂ ಮಾಡಿಸಿಕೊಟ್ಟರು ಸಾಹುಕಾರ ಚನವೀರ ಶೆಟ್ಟರು.

ವಾಚಕರೇ, ಆದ್ರೆ ಎಂಥ ಮಾರಾಯ್ರೇ! ಚೆನ್ನಪ್ಪ ಅದೇ ಆಟಾರೀ ವೆಸ್ಪಾ ಸ್ಕೂಟರ್‌ನಲ್ಲೇ ಅಡ್ಡಾಡುವವ! ಹೊಸ ಶೋರೂಂನಲ್ಲಿ, ಮಿನಿಸ್ಕರ್ಟ್ ಪೋಸ್ಟರ್‌ಗಳ ನಡುವೆ ಚಕ್ ಬಿಂಬಿಸುವ ಹೊಂಡಾಗಳ ನಡುವೆ, ಕೆಟ್ಟ ದೃಷ್ಟಿ ಬಟ್ಟನಂತೆ ಚೆನ್ನಪ್ಪನ ವೆಸ್ಪಾ!... ಮತ್ತೆ, ಸರ್ವಥಾ ಲಗ್ನಕ್ಕೆ ತಾನು ಒಪ್ಪುವವ ಅಲ್ಲ ಅಂತ ಖಂಡತುಂಡ ಕಡ್ಡಿ ಮುರಿದ ನಿರ್ಣಯ ಚೆನ್ನಪ್ಪಂದು.

ಪಾಟೀಲ: "ನೀ ಹೋಂಡಾ ಅಂಗಡಿ ತೆಗೆದು 6 ವರ್ಷ ಆಗಿತ್ತಲ್ಲ, ನಾ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ನಾಗೂರಿಗೆ ಮತ್ತೆ ಬಂದಾಗ? ನೀ ಕಾಲೇಜು ಬಿಟ್ಟು 7 ವರ್ಷ ಆಗಿತ್ತು. ಆಗಲೇ ನಿನಗೆ ಹೊಟ್ಟೆ ಬರಾಕ ಹತ್ತಿತ್ತು. ಒಂದೆರಡು ಬಿಳಿಗೂದಲು ಕೂಡಾ. ಅಷ್ಟರಾಗ ನೀ ಲಗ್ನಾ ಆಗಿ ಮೂರು ಹಡೆದಿರಬೇಕೆಂದುಕೊಂಡಿದ್ದೆ... ಮತ್ತೆ!"

ಚೆನಪ್ಪ; "ಬಿಡೋ ಯಣ್ಣಾ, ಮತ್ತ ಯಾಕ ಆ ನೆನಪು ತಗೀತಿ?... ಏ ಆ ಮಾನಸಿ

ಎಲ್ಲದಾಳೆಂತ ನಿನಗೇನಾರ ಪತ್ತೆ ಹತ್ತಿತೇನು? ಶ್ಯ... ಆಕಿ ಲಗ್ನಾಗಿ ಹೋದವಳು ಹಕ್ಕಿ ವಲಸೆ ಹೋದ ಹಂಗೆ ಎಲ್ಲಿ ಮಾಯವಾದಳೋ!... ಈಗ ಎಲ್ಲಿ ಅದಾಳೋ!... ವಿಚಿತ್ರ ಅನಿಸತದ..."

ಪಾಟೀಲ; "ಈ ಮಾಲತಿಬಾಯಿ ನಿಂದು ಹೆಂಗ ನಡೆದೈತಿ? ಹುಡ್ರು ಆಡಾಕ ಹೋಗ್ಯಾ ವೇನು?"

ಚೆನ್ನಪ್ಪ: "ನಡೆದೈತೋ... ಚೆಂದಾಗಿ ನೋಡ ಕೋತಾಳೆ. ನನ್ನ ಕಾಳಜೀ ಮಾಡತಾಳೆ. ಹುಡ್ರೂ ಚಲೋ ನಡದಾವ... ಆಕಿಗೂ ನಾಲ್ಕು ಮಂದಿ ಮನೆಗೆ ಬರುತ್ತಿರಬೇಕು... ಮನ್ಯಾಗ ನಗು ತುಂಬಿರ ಬೇಕು. ನೀ ಬಂದಿದ್ದು ಖುಷಿಯಾಗ್ಯಾಳ." ಪಾಟೀಲ: "ಮತ್ತೆ ನಿನ್ನ ಸ್ಕೂಟರ್ ಪುರಾಣ ಆಕಿಗೆ ಹೇಳಲ್ಲೇನು?" ಚೆನ್ನಪ್ಪ: "ಮಾರಾಯ ಅದೊಂದು ಮಾಡಬ್ಯಾಡ. ಪುಣ್ಯಕ್ಕೆ, ಈತನಕ ಆಕಿ ಕಿವಿಗೆ ಅದು ಬಿದ್ದಿಲ್ಲ. ನಸೀಬು.. ಶ್ಯ"...


ಪಾಟೀಲ: "ಹಂಗ ತಿಳಕೊಂಡೀ? ಮತ್ತೆ ಸ್ಕೂಟರ್ ಪತ್ತೆ ಏನಾರ ಹತ್ತಿತೇನು?" ಚೆನ್ನಪ್ಪ, "ಹೋಗೋ ಮಾರಾಯ, ಸರ್ಕಲ್ಲ ನಿನಗೇ ಆಗಿದ್ದಿಲ್ಲ. ಹೋದದ್ದು ಹೋಗೇ ಬಿಡ್ತು, ಮರಳಿನ್ಯಾಗ ತೀರ್ಥ ಬಿದ್ಹಂಗ!!...

ಇಂತಿರಲಾಗಿ, ಅಂದು ಕೈನೆಟಿಕ್ ಹೊಂಡಾದ ವ್ಯಾಪಾರ ಬೆಳೆದಂತೆ ಚೆನ್ನಪ್ಪನ ವೆಸ್ಪಾ ಸ್ಕೂಟರಿನ ವಯಸ್ಸು ಬೆಳೆಯುತ್ತ ಹೋಯಿತು. ಪ್ರತಿಷ್ಠಿತ ಗಿರಾಕಿ ಗೆಳೆಯರ, ಶೀಟಿ ಹೊಡೆಯುವ ಕಾಲೇಜು ಹುಡುಗರ, ಸ್ವತಃ ಹೊಂಡಾದ ರೀಜನಲ್ ಡೈರೆಕ್ಟರು ಅನೇಕಾನೇಕ ಉಪದೇಶಿಸಿದರೂ, ನೆರಳಿನಂಥ ವೃದ್ಧ ವೆಸ್ಪಾದ ಬೆನ್ನು ಬಿಡಲಿಲ್ಲ ಸಾಹುಕಾರ ಚೆನ್ನಪ್ಪನವರು. ಅವ್ವ, ಮಗನ ಲಗ್ನ ಆಗಿಲ್ಲಂತ ಕೊರಗುತ್ತ ಎರಡೆರಡು ಕೌದಿ ಹೊಡೆದು ವಾಲಗತೊಡಗಿದರು. ಅಪ್ಪ, ವಯಸ್ಸಿನ ಕೆಮ್ಮಿನ ಪಲ್ಲವಿಯೊಡನೆ, "ಸಂಸಾರ ಬೆಳೆಸಪ್ಪಾ. ಶೆಟ್ಟರ ಮನೆತನ ಉಳಿಸಪ್ಪಾ ಮಗಾ"



ಅಂತ ಮುಂಜಾನೆ ಸಂಜೆ ಅಲಾರಾಂದಂತೆ ಹೇಳುವವರು... ಇಂಥಾ ಸಂದರ್ಭದಲ್ಲಿ ಸರ್ಕಲ್ ಆಗಿ ಚೆನ್ನಪ್ಪನ ದೋಸ್ತ ಪಾಟೀಲ ನಾಗೂರಿಗೆ ಬಂದದ್ದು. ಊರಿನ ಹುಡುಗ ಬಂದ ಎಂದು ಊರಿನ ಮಂದಿ ಖುಷಿಗೆ ಮೀರಿ ಚೆನವೀರ ಶೆಟ್ಟರ ಮನೆಗೂ ಸಂಭ್ರಮ. ಮತ್ತೆ ಚೆನ್ನಪ್ಪಗೆ ಲಗ್ನಾಗಲಿಕ್ಕೆ ದೋಸ್ತ ನಾಲ್ಕು ಮಾತು ಮನವರಿಕೆ ಮಾಡತಾನ ಎಂದು ಒಂದು ಒಳ ಆಸೆ. ಆದರೆ ಗೆಳೆಯನ ಮನದಾಳದ ನೋವನ್ನು ಅರಿತ, ಸೂಕ್ಷ್ಮ ಸಂವೇದನಾಶೀಲ ಪಾಟೀಲ ಲಗ್ನ ವಾಗೆಂದು ಎಂದೂ ಬುದ್ಧಿ ಹೇಳಹೋಗಲಿಲ್ಲ...

ಇಂಥಾ ಧೀರೋದಾತ್ತ ಪೊಲೀಸ್ ಗೆಳೆಯ ಸರ್ಕಲ್ ಆಗಿ ಬಂದಾಗಲೇ ಈ ದುರ್ಘಟನ ನಡೆಯಬೇಕೇ ಮಹಾಶಯರೇ! ಕನ್ನಡ ಸಿನೇಮಾ ದಲ್ಲೂ ಸಿಗದಂಥ ಅಪೂರ್ವ ವಿಧಿಯ ವಿಪ ರ್ಯಾಸ! ಒಂದು ಸಂಜೆ ರಿಕ್ಷಾ ಸ್ಟ್ಯಾಂಡ್‌ನಲ್ಲಿ ವೆಸ್ಪಾ ಪಾರ್ಕ್ ಮಾಡಿ, ಉರುವಿ ಹೋಟೆಲ್‌ನಲ್ಲಿ ಒಂದು ಮಸಾಲೆ ದೋಸೆ ತಿಂದು, ಮಾಮೂಲು 2 ಕಿ.ಮೀ. ವಾಕಿಸಿ ಬರುತ್ತೇನೆಂದು ಚೆನ್ನಪ್ಪ ಹೋಗಿ ಹೊರಳಿ ಬಂದಾಗ, ಅಹೋ! ವೆಸ್ಪಾ ಸ್ಕೂಟರ್ ಮಾಯವಾಗಿತ್ತು! ಪ್ರಾಯಃ ಅವನಪ್ಪ, ಕಡಿಮೆ ಕೊಬ್ಬಿನಾಂಶದ ಆಹಾರ ಕುರಿತ ರೇಡಿಯೋ ಭಾಷಣವನ್ನು ಗಂಭೀರವಾಗಿ ಅಡುಗೆ ಮನೆಯೊಳಗೆ ತಂದದ್ದರಿಂದ, ಚೆನ್ನಪ್ಪನ ಹೃದಯದ ಪಂಪುಗಳು ಸರಾಗ ಕೆಲಸ ಮಾಡುತ್ತಿದ್ದಿರಬೇಕು. ಆದರೂ ಚೆನ್ನಪ್ಪ ಗುಟ್ಟಾಗಿ ಅತ್ತ. ಮಾನಸಿಯ ಸ್ಕೂಟರ್ ಪ್ರಣಯದ ಫ್ಲಾಶ್‌ಬ್ಯಾಕ್, ಫಿಲಂ ಲೂಪಿನಂತೆ ತಿರುಗಿದ್ದೇ



ತಿರುಗಿದ್ದು. ಆದರೂ ಕಣ್ಣೊರಸಿಕೊಂಡಾಗ ಒಂದು ಭರವಸೆ. ಸರ್ಕಲ್ ಪಾಟೀಲ, ಹೆಂಗಾರ ಸ್ಕೂಟರು ಮರಳಿ ತಂದು ಕೊಡಿಸುತ್ತಾನೆ ಅಂತ.

ಪದ್ಧತಿ ತೀರ ಪೊಲೀಸ್ ಎಫ್.ಐ.ಆರ್ ಮಾಡಿದ ಚೆನ್ನಪ್ಪ. ಸರ್ಕಲ್ ಗುಟ್ಟಾಗಿ ಸಂತೈಸುತ್ತ ಬಾಜೂ ನಿಂತಿದ್ದ. ಕಾರಕೂನ, ಕಾನ್‌ಸ್ಟೇಬಲ, ''ಸಾಹುಕಾರ್ರೆ ಆ ಸ್ಕೂಟರ್ ಹೊಗಲಿ ಬಿಡ್ರಿ ಈಟು ಭಾಧ ಆಗಿತ್ತು'' ಅಂದಾಗ ಚೆನ್ನಪ್ಪ ಒದರಾಡಿಬಿಟ್ಟ. ಸಿಟ್ಟಿಗಿ ಸರ್ಕಲ್ ಕೂಡ ಹುಬ್ಬೇರಿಸಿ, ''ಈಡಿಯಟ್, ಬೊಗಳಬೇಡ, ಡ್ಯೂಟಿ ಮಾಡು'' ಅಂತ ಕಾನ್‌ಸ್ಟೇಬಲಿಗೆ ಒದರಿದಾಗ ಚೆನ್ನಪ್ಪನ ಆಸೆಯ ಗ್ರಾಫ್ ಮೇಲೇರಿತು.

ದಿನ ಕಳೀತು. ಪಾಟೀಲ ಪ್ರಾಮಾಣಿಕ ಟೆರರ್ ಎಂಬ ಖ್ಯಾತಿಯೂ ಬೆಳೀತು. ಚೆನ್ನಪ್ಪನ ಹೊಂಡಾ ವ್ಯಾಪಾರ ಕೂಡಾ. ಆದರೆ ಕ್ಯಾಲೆಂಡರ್ 3-4 ಸಾಲೆ ಹರಿದರೂ ಸ್ಕೂಟರ್ ನಾಪತ್ತೆ. 'ಖೋಟಾ ನಸೀಬು' ಎಂದು ಚೆನ್ನಪ್ಪ ದುಗುಡಿದ. 'ಇಂಥಾ ಬಬ್ಲರೆ ಸಂಗತಿ. ಹಲ್ಕಟ್, ನನ್ನ ಸರ್ವಿಸ್‌ನಲ್ಲೇ ಹಿಂಗಾಗಿಲ್ಲ' ಎಂದು ಪಾಟೀಲ ದುಃಖಿಸಿದ... ಇದರ ಚರ್ಚೆ ನಡೆಯುತ್ತಿದ್ದುದು ಆಗ ಪಾಟೀಲನ ಹಿಂದೋಟದಲ್ಲಿ. ಸಂಜೆ ಇಬ್ಬರು ಗೆಳೆಯರು ಸೇರಲೇಬೇಕು. ಆಗಲೇ ಪಾಟೀಲಗೆ ಪೀಟರ ಮಿತ್ರ. ಚೆನ್ನಪ್ಪಗೆ ಮೂರು ಯಕ್ಷ. 60 ಜಂಪಿಸಿ 90 ಆದಾಗ, 120 ಆದಾಗ ಮಿತ್ರನಿಗೆ ವಯಸ್ಸಾಗುತ್ತಿದ್ದುದನ್ನು ಕಂಡು ಕಳಕಳಿಸುತ್ತಿದ್ದ ಪಾಟೀಲ, ಸಣ್ಣಾಗಿ, ''ಚೆನ್ಯಾ ಸಾಕಿನ್ನು ಅಳೂದು... ಗಂಡಸು ಎದಿ ಗಟ್ಟಿ ಮಾಡಿಕೊಳ್ಳಬೇಕು... ಎಲ್ಲಾ ಶಿವನ ಕೈಯಾಗ... ಲಗ್ನಾಗಿ ಬಿಡಲ್ಲ. ಇಲ್ಲಾಂದ್ರ ಅವು ಅವ್ವ ಅಪ್ಪ ಕಣ್ಣೀರು ಹಾಕೇ ಸಾಯ್ತಾವೆ...'' ಇತ್ಯಾದಿ ವಿವಿಧ ಧಂದಸ್ಸಿನಲ್ಲಿ ದಿನಾ ರಗಳಿಸಿದಂತೆ, ಗುಂಡಿನ ಕಂಡೀಶನಿಂಗ್‌ನಲ್ಲಿ ಗುಜ್ಜರಿ, ಕಳ್ಳಭಟ್ಟಿ, ಗಲ್ಲಿ ಸಂದುಗಳನ್ನೆಲ್ಲಾ ತಪಾಸಿಸಿ ಸೋತಿದ್ದ. 'ಹಲ್ಕಟ್ ನಾಲಾಯಕ್ ಇದ್ದೀರಿ' ಎಂದು ಹಲವಾರು ಕಾನ್‌ಸ್ಟೇಬಲ್ಲು ಬೈಸಿಕೊಂಡರೂ ವೆಸ್ಪಾ ನಾಪತ್ತೆ. ಹೀಗಿರುತ್ತಿರಲಾಗಿ ಚೆನ್ನಪ್ಪನ ಸ್ಕೂಟರ್ ಸಿಗುವ ಆಸೆಗೂ ಪೆನಶನ್ ಆಗಿಬಿಡ್ತು. ಚನ್ನಪ್ಪನೇ ಖುದ್ದಾಗಿ ಮಂಗಲ ಹಾಡಿದ. ಇನ್ನು ಅದು ಹೋಗೇಹೋಯ್ತು ಕಾಣಸ್ತದ ... ಶಿವ ಶಿವಾ..'', ಕೊನೆ ಪೆಗ್‌ಗೆ ಎರಡು ಕಂಬನಿ ಸೇರಿಸಿ...

ಅಂತೂ ಕೊನೆಗೆ ಮಾಲತಿಯನ್ನು ಲಗ್ನವಾಗುವೆನೆಂದು ಮುದ್ದಿನ ಮಗ ಚೆನ್ಯಾನ ಒಪ್ಪಿತ ಪಡೆದ ಅವ್ವನ ಆನಂದ ಬಾಷ್ಪ ಜೋಡು ಕೌದಿ ತೊಯ್ದಾಗ, ಕೂದಲಿಗೆ ಮೆಹಂದಿ ಹಚ್ಚದೇ ಹತ್ತು ವರ್ಷ ಎಳೆಯಲಾದದ್ದು, ಅಪ್ಪನ ಕೆಮ್ಮು ಕಡಿಮೆಯಾಗಿ, ಬರಲಿರುವ ಮೊಮ್ಮಗನ ಹೆಸರಲ್ಲಿ ಕೋ-ಆಪ್, ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟು ತೆರೆಯುತ್ತಿರಲು, ಒಂದರೆಡು ಬಾರಿ ಅಚಾನಕ್ ಆಗಿ ಕಂಡ ಮಾಲತಿಯ ಬೆಳದಿಂಗಳಂಥ ನಸುನಗು ಇತ್ಯಾದಿ ವಗೈರೆಗಳಲ್ಲಿ ಚೆನ್ನಪ್ಪನ ಮನಸ್ಸೂ ಹಗುರಾಯ್ತು. ನೀಲವ್ವನ ಮಗಳು ಮಾಲತಿಯೊಡನೆ, ನಾಗೂರಿನ 10 ಕಿಲೋ ಅಕ್ಕೀ ಪಾಳಿನ ತೂರಾಟದಲ್ಲಿ ಲಗ್ನ ಅರ್ಥಟಾಗಿ ನಡೆದು, ಸಂಜೆ ಊರಿನ ಅಧ್ಯರಿಗೆ,

ಪುಲಾವ್ ಜಲೇಬಿಯ ರಿಸೆಪ್ಶನ್ನೂ ನಡದು ಚೆನ್ಯಾನ ಸಂಸಾರ ನೌಕೆ ಸುರಳೀತವಾಗಿ ತೇಲ ತೊಡಗಿತು. ಅಕ್ಕೀಕಾಳಿನಲ್ಲಿ ಪಾವುಕಿಲೋ ಖುಷಿಯಲ್ಲಿ ಪಾಟೀಲನೇ ಹಾರಿಸಿದ್ದ, ಪ್ರಿಯವಾಚಕರೇ...

ಮಾಲತಿ ರೊಟ್ಟಿ ತಟ್ಟುವ ತಾಳದಲ್ಲಿ 'ಬಂಗಾರದ ಜಿಂಕೆ' ಸಿನೇಮಾ ಹಾಡು ಸಣ್ಣಾಗಿ ತೇಲಿಬರುತ್ತಿತ್ತು. ಮತ್ತೇನೂ ಬಾಯಿ ಆಡಿಸಾಕ ತಂದಿರಬೇಕು. ಗೆಜ್ಜಿ ಸಪ್ಪಳ. ವಯಸ್ಸಾದರೂ, ಬಸುರಿಯದ್ದಾಗ ಚೆನ್ನಪ್ಪ ಕೊಟ್ಟಿದ್ದ ಗೆಜ್ಜಿ ಮತ್ತೆ ಬಿಚ್ಚೇ ಇಲ್ಲ! ಸ್ಕೂಟರ್ ಸ್ಮೃತಿಯಲ್ಲಿ ಓಲಾಡುತ್ತಿದ್ದ ಚೆನ್ಯಾ, ಆಕೆ ಬಂದದನ್ನು ಗಮನಿಸಲಿಲ್ಲ. ರಾತ್ರಿಯನ್ನು ರೊಮ್ಯಾಂಟಿಕ್ ಮಾಡುತ್ತ ಹುಣ್ಣಿಮೆ ಚಂದ್ರ ಮೂಡಿಬರುತ್ತಿದ್ದ. ಚೆನ್ನಪ್ಪ ಮೂರು ಯಕ್ಷರ ನೂರಿಪ್ಪತ್ತರಲ್ಲಿದ್ದ ಅಥವಾ ಲೆಕ್ಕ ಮರೆತಿತ್ತು. ಗ್ಲಾಸ್‌ನಲ್ಲಿ ಮತ್ತ ಸ್ಕೂಟರ್ ಮಿಂಚಿ ಮಾಯವಾಯ್ತು. ''ಪಾಟ್ಯಾ... ಎಲ್ಲಾ... ಎಲ್ಲಾ ಚಲೋ ನಡೀತು. ಆದರೆ ಒಂದು ಒಂದು ಒಗಟು ಮಾತ್ರ ಬಗೆಹರೀಲಿಲ್ಲ... ಆ...ಆ... ಸ್ಕೂಟರ್ ಯಾಕ ಮಾಯ ಆಯ್ತು?... ಎಲ್ಲಿ ಮಾಯ ಆಯ್ತು?... ಹೆಂಗ ಮಾಯ ಆಯ್ತು...?! ವಿಚಿತ್ರ ಅನಸತದ... ಕೊಡೊಂದು ಚಾರ್ ಮಿನಾರ್... ಎಂದೂ ಹೊಡೆದೇ ಇಲ್ಲ.''

ಪಾಟೀಲ ಸಿಗರೇಟು ಕೊಟ್ಟು ಕಡ್ಡಿ ಹಚ್ಚುತ್ತ ಕೆಲ ಕ್ಷಣ ಚೆನ್ಯಾನ, ಮೈಸೂರಿನ 'ದೀಪಬಾಲೆ'ಯಂಥ ಕಣ್ಣು ದಿಟ್ಟಿಸಿದ... ಕಣ್ಣು ಏನೋ ಯಾಚಿಸಿ ಕೇಳುವಂತಿದ್ದುವು. ಪೀಟರನ ಕತ್ತು, ಕೊನೆ ಹತ್ತು ಹನಿ ಗ್ಲಾಸಿಗೆ ಸುರಿದು ಐಸ್ ಸಿದ... ''ನಿನ್ನ ಸಂಸಾರಕ್ಕೆ ಚೀಯರ್ಸ್ ಚೆನ್ಯಾ...'' ಎಂದ. ಸಣ್ಣಾಗಿ ಚೆನ್ಯಾನ ಕೈ ಹಿಡಿದು, ''ಸ್ಕೂಟರನ್ನು ನಾನೇ ಹಾರಿಸಿದ್ದೆ. ಕಾನ್‌ಸ್ಟೇಬಲಿಗೆ ಹೇಳಿ ಗುಜರಿಗೆ ಹಾಕಿಸಿದ್ದೆ.''


''ಚೆನ್ನಪ್ಪ ಕ್ಷಣ ದಿಗ್ಭ್ರಾಂತನಾದ. ಬಿಸಿನೀರು ಸ್ನಾನಗೊಂಡ ಕೂಸಿನಂತೆ ಮುಖ ಬಿಳಿಚಿತ್ತು. ಪಾಟೀಲ, ಖಾಲಿ ಪೀಟರ ಬಾಟಲಿ ಒಳಗೆ ಕಡ್ಡಿ ಬೆಂಕಿ ತೂರಿದಾಗ, ಬೆಂಕಿಯ ನೀಲಿ ದೆವ್ವ ನಗುತ್ತ ಪುಸ್ಸೆಂದಿತು. ಚೆನ್ಯಾನ ಕಣ್ಣು ದಿಟ್ಟಿಸಿದಾಗ ಚಂದ್ರ ಮಿಂಚಿಸಿದ. ಫಳ್ಳೆಂದು ಎರಡು ಹನಿ ಚೆನ್ಯಾನ ಗ್ಲಾಸಿನೊಳಗೆ ಬಿದ್ದು ಮಾಯವಾಯ್ತು... ಚೆನ್ನಪ್ಪ ಎದ್ದು ವಾಶ್ ಬೇಸಿನ್ನಿಗೆ ಹೋಗಿ ಮುಖ ತೊಳೆದು ಬಂದ... ಪಾಟೀಲನ ಗ್ಲಾಸಿನಿಂದ ಗುಟುಕು ಪೀಟರ್ ಹೀರಿದ...


ಬಾಗಿಲಲ್ಲಿ ನಿಂತಿದ್ದ ಮಾಲತಿ ಪಾಟೀಲನತ್ತ ನಸುನಕ್ಕು, ತನ್ನೆರಡು ಮಿನಿ ಕಂಬನಿಗಳನ್ನು ಮಲ್ಲಗೆ ಸೆಂಟಿನ ಕರ್ಚೀಫಿನಿಂದ ಒರಸಿಕೊಂಡಳು. ಚೆನ್ನಪ್ಪನ ಬೆನ್ನು ಪೂಸಿ'' ಬೇಕಾದರ ಇನ್ನೊಂದು ತಗೋರಿ... ಆಮ್ಯಾಗ ಊಟಕ್ಕೇಳ್ರಿ... ನಿಮ್ಮ ಸ್ಪೆಶಲ್ ಶ್ಯಾವಗೀ ಖೀರ್ ಮಾಡೀನಿ'' ಎಂದಳು.

---

ಫಜೀತಿ ಬಂದದ್ದು 'ಮಾನಸಿಯ ಮನಸ್ಸಿನಾಳ್ನೇನಿದೆ' ಎಂಬ ಹಾಡು ಚೆನ್ನಪ್ಪನ ಮಿದುಳನ್ನು ಕೆದಕತೊಡಗಿದಾಗ. 'ಪ್ರೀತಿಸುತ್ತಿದ್ದೆ ಇವಳೇಕೆ ಹೇಳುತ್ತಿಲ್ಲ?'

[illegible]





## ಉಮಾ ಹೆಗಡೆ


# ಬೇರಿಲ್ಲದವರು

ಬಿಸಿಲು ಮಚ್ಚಿನ ಮೇಲೆ ನಿಂತು ಅಸು ದೂರದವರೆಗೆ ದೃಷ್ಟಿ ಹಾಯಿಸಿದಳು. ಕಾಂಪೌಂಡಿನಂಚಿನಲ್ಲಿದ್ದ ತೆಂಗಿನ ಮರದ ಗರಿಗಳು ಗಾಳಿಗೆ ಪರಪರಗುಟ್ಟ ತೂನೆಯುತ್ತಿದ್ದವು. ಗರಿಗಳೆಡೆಯಿಂದ ಹೊಮ್ಮುವ ಬಿಸಿಲಿನ ರೇಖೆಯಿಂದಾಗಿ ಅವಳ ಮೈಮೇಲೆ ನೆರಳು ಬೆಳಕಿನ ಚಿತ್ತಾರ ಬರೆಯುತ್ತಿದ್ದವು. ಹಾಗೇ ಹಿಂಭಾಗಕ್ಕೆ ತಿರುಗಿದಳು. ದೂರದ ಆಲದ ಮರದಲ್ಲಿ ಈಗ ಹಣ್ಣಿನ ಕಾಲ. ಹಾಗಾಗಿ ಹಕ್ಕಿಗಳ ಸಂಸಾರವನ್ನು ದಿಟ್ಟಿಸುತ್ತಿರುತ್ತಾಳೆ. ಅಥವಾ ಖಾಲಿ ಇರುವಾಗಲೆಲ್ಲ ಹಾಗೆ ಕುಳಿತು ಶೂನ್ಯದೊಡನೆ ಸಂವಾದ ನಡೆಸುತ್ತಿರುತ್ತಾಳೆ. ಇತ್ತೀಚೆಗಂತೂ ಆ ಬಿಸಿಲು ಮಚ್ಚು, ಆ ತೆಂಗಿನ ಹೆಡೆಗಳು, ಆಲದ ಮರ ಅವಳ ಸಂಗಾತಿಗಳಾಗಿಬಿಟ್ಟಿವೆ.

ಇನ್ನೇನು ಸ್ವಲ್ಪೇ ಹೊತ್ತಿನಲ್ಲಿ ಮಕ್ಕಳು ಮನೆಗೆ ಬರುತ್ತವೆ. ಆಗ ಸ್ವಲ್ಪ ಹೊತ್ತು ಮನೆಯಲ್ಲೂ ಹೀಗೇ ಗಿಜಗಿಜಿ, ಒಬ್ಬರ ಮೇಲೆ ಮತ್ತೊಬ್ಬರ ದೂರು, ಮಾಡಿಟ್ಟ ತಿಂಡಿಗೆ ತಕರಾರು. ಹುಟ್ಟುವಾಗಲೇ ಬಂಗಾರದ ಚಮಚವನ್ನ ಬಾಯಲ್ಲಿಟ್ಟು ಬಂದವರಂತೆ ಆಡುತ್ತವೆ. ಅವರ ಲೆಕ್ಕದಲ್ಲಿ ಅಮ್ಮ ಎಂದರೆ ತಿಂಡಿ ಮಾಡುವದಕ್ಕೇ ಇರುವವಳು ಅಂತ ಲೆಕ್ಕ. ಪಾಪ ಹಸಿದೂ ಬರುತ್ತವೆ. ಅದಂತೂ ನಿಜ. ಆದರೂ... ಆಮೇಲೆ ಹೋಮ್‌ವರ್ಕ್. ಸ್ವಲ್ಪ ಹೊತ್ತು ಆಟ, ಕಾರ್ಟೂನ್, ಎಲ್ಲವೂ ಗಡಿಯಾರದ ಮುಳ್ಳಿನ ನೇರಕ್ಕೇ ಆಗಬೇಕು. ಇದು ಸುಧೀಂದ್ರ ಕಲಿಸಿದ ಶಿಸ್ತು. ಅವನ ಆರ್ಡರ್ ಕೂಡಾ. ಮಕ್ಕಳು ಆಡಲು ಹೋದಾಗಲೇ ಮನೆಗೆ ಬೇಕಾದ ತರಕಾರಿ ಹಣ್ಣು ತರುತ್ತಾಳೆ. ಆಮೇಲೆ ಬಿಡುವಾದಾಗ ಓದುತ್ತಾಳೆ. ಆದರೂ ಇತ್ತೀಚೆಗೆ ಏಕೋ ಖಾಲಿ ಖಾಲಿ ಅನಿಸುತ್ತದೆ. ಬೆಳಗಿನಿಂದ ಸಂಜೆಯವರೆಗೆ, ಮಕ್ಕಳು, ಗಂಡ ಹೊರಗೆ ಹೋದಾಗ ಅವಳು ಮನೆಯಲ್ಲಿಯೇ ಇರುತ್ತಾಳೆ. ಆದರೂ ಏನೆಂದು ಹೇಳಲಾರದ ತಲ್ಲಣ. ಮನಸ್ಸು ಎಲ್ಲೆಲ್ಲೋ ಅಲೆಯುತ್ತದೆ. ಹಾಯಿಯಿಲ್ಲದ ದೋಣಿಯಾಗಿ ಗಾಳಿ ಬೀಸಿದೆಡೆ ಅಲೆಯುತ್ತಾಳೆ.

ಹಾಗೆ ಮಕ್ಕಳ ಬರವನ್ನ ಕಾಯುತ್ತ ನಿಲ್ಲುವಾಗೆಲ್ಲ ಅವಳಿಗೆ ತಾನು ಶಾಲೆಗೆ ಹೋಗುವ ದಿನಗಳ ನೆನಪಾಗುತ್ತದೆ.

ಅಮ್ಮಮ್ಮನಿಗೆ ತಾನು ದೊಡ್ಡವಳಾದ ಮೇಲೂ ಶಾಲೆಗೆ ಹೋಗುವದು ಸರಿಬರುತ್ತಿರಲಿಲ್ಲ. ಅವಳಿಗೇನಿದ್ದರೂ ತನ್ನ ಪಡಚಾಕರಿ ಮಾಡಿಕೊಂಡು ತನ್ನ ಹಿಂದೆ ಹಿಂದೇ ತಿರುಗುತ್ತಿರಲಿ ಅಂತ ಆಸೆ. ಆಗೆಲ್ಲ ಆಯಿ ಮತ್ತು ಅಮ್ಮಮ್ಮನಿಗೆ ಸಣ್ಣ ಜಟಾಪಟಿ ಆಗುತ್ತಿತ್ತು. ಕಡೆಗೆ ಅಮ್ಮಮ್ಮನ ಮಾಮೂಲೀ ಸೊಲ್ಲು, ''ಆನೂ ನೋಡ್ತಿ, ಕೂಸು ಯಷ್ಟ




ಪುಸ್ತಗ ಮಗಚ ಹಾಕೀರೂವ ಕಂಡವ್ರ ಮನೆ ಪಾತ್ರ ತೊಳ್ಳೂದೇನು ತಪ್ಪತಿಲ್ಲೆ.''
''ಕಂಡವ್ರ ಮನೆ ಹೇಳಿ ಯಂತಕ್ಕ ಹೇಳ್ತೀ, ತಮ್ಮತಮ್ಮನೆ ಕಸಮುಸ್ರೆ ಮಾಡೂದಕ್ಕೂ ಕೂಸ್ನ ಶಾಲೀಗೆ ಕಳ್ಸದಕ್ಕೂ ಗಂಟ ಹಾಕಡಿ. ಅದೂ ನಾಲ್ಕಕ್ಷರ ಕಲೀಲಿ. ನಾಲ್ಕ ಜನ್ರ ನೋಡ್ಲಿ'' ಎಂದು ಆಯಿ, ಇದು ಮಾಮೂಲಿ ಆಗಿತ್ತು. ಹೀಗೆಂದಮಾತ್ರಕ್ಕೆ ಅಮ್ಮಮ್ಮನಿಗೆ ಅನುವನ್ನು ಕಂಡರಾಗುತ್ತಿರಲಿಲ್ಲ ಅಂತಲ್ಲ. ಇಂಥ ಜಟಾಪಟಿಯ ನಡುವೆಯೇ ಶಾಲೆಗೆ ಕಳಿಸುವಾಗ ಅಮ್ಮಮ್ಮ ಅಂಗಳದಂಚಿನ ನಂಜಪ್ವ ಮೊಗ್ಗನ್ನೋ, ಮಳೆಗಾಲದ ದಿನಗಳಲ್ಲಿ ಜಾಜಿ ದಂಡೆಯನ್ನೋ ಮಾಡಿ ಮುಡಿಸದೇ ಕಳಿಸುತ್ತಿರಲಿಲ್ಲ. ಅಬ್ಬಲಿಗೆಯಂತೂ ಸೈಯೇ. ಜೋರು ಮಳೆಯಲ್ಲಿ ಮಾತ್ರ ಎರಡು ಮೂರು ತಿಂಗಳು ಹೂಗಳಿಲ್ಲ. ಮಲೆನಾಡಿನ

ಮಳೆಯೇ ಹಾಗೆ. ಕವಣೆ ಕಲ್ಲು ಬೀಸಿದಂತಹ ಬಿರುಮಳೆಗೆ ಹೂಗಳಿರಲಿ, ದೊಡ್ಡ ದೊಡ್ಡ ಮರಗಳೂ ಬುಡ ಮೇಲು. ಆಮೇಲೆ ಮತ್ತೆ ಎರಡಕ್ಕೆ ನಾಲ್ಕಾಗಿ ಚಿಗುರಿ ಕದಿರು ಕದಿರಾಗಿ ಹೊರಡುವ ಮೊಗ್ಗಿನ ಗುಚ್ಛ. ಬಿಗಿಯಾಗಿ ಎರಡು ಜಡೆ ಹೆಣೆದು, ಕೆಂಪು ರಿಬ್ಬನ್ನನ್ನು ಮಡಿಸಿಕಟ್ಟಿ, ನಾಲ್ಕು ಎಸಳಿನ ಗೊಂಡೆ, ಅದರ ಮೇಲೆ ಆಯಾ ದಿನದ, ಶ್ರಾಯದ ಹೂಗಳ ದಂಡೆ ಏರಿಸಿ ಕಳಿಸುತ್ತಿದ್ದಳು. ಅಮ್ಮಮ್ಮ ದಂಡೆ ಮಾಡುವಾಗ ಅಕ್ಕನ ಪಾಲಿನ ದಂಡೆಗೆ ಒಂದು ಮೊಗ್ಗಾದರೂ ಕಡಿಮೆ ಇರಲೇಬೇಕು. ಅಮ್ಮಮ್ಮ ಪಿಸುದನಿಯಲ್ಲಿ ಹೇಳುತ್ತಿದ್ದಳು, ''ಕೂಸೇ ಆಯಿ ಯಂತದೇ ಹೇಳ್ಲಿ, ನೀನು ಗಂಡ್ ಹುಡ್ರ ಹತ್ರ ಜಾಸ್ತಿ ಮಾತಾಡಡ. ನಾಳೇಗೆ ಅಷ್ಟೆ ಸಾಕು, ನಾಕ ಜನ್ರ ಬಾಯೀಗೆ ಬೀಳೂಲೆ'' ಅಂತ.

ಆಯಿ ಮತ್ತು ಅಮ್ಮಮ್ಮನಿಗೆ ಸದಾ ಜಟಾಪಟಿ ನಡೆಯುತ್ತಿತ್ತು. ಹಾಗೆಯೇ ಎಷ್ಟೋ ಸಾರೆ ಅನ್ಯೋನ್ಯವಾಗಿಯೂ ಇರುತ್ತಿದ್ದರು. ಹೆಚ್ಚಾಗಿ ಅವರ ನಡುವೆ ಅಮ್ಮಮ್ಮನ ಮಗಳು ಶಾರದತ್ತೆಯ ಸಂಬಂಧವಾಗಿ ಜಗಳ ಆಗುತ್ತಿತ್ತು. ಜಗಳದ ಕೊನೆಯಲ್ಲಿ ಅಮ್ಮಮ್ಮ ನಾಲ್ಕು ಹನಿ ಕಣ್ಣೀರು ಹಾಕಿದರೆ ಅದೇ ಅಖೈರು. ಆಯಿಯ ಹತ್ತಿರ, ಯಾವ ಕಾರಣವೂ ಸಿಗದಿದ್ದರೆ ತನ್ನನ್ನೇ ನೆಪಮಾಡಿಕೊಂಡು ಜಗಳ ತೆಗೆಯುವ ಅಮ್ಮಮ್ಮನಿಗೂ, ಮಂಡೆಬಾಚಿ, ದಿನವೂ ತಪ್ಪದೇ ಹೂವಿನ ದಂಡೆ ಮಟ್ಟು, ಮುಡಿಸಿ, ಎಲ್ಲ ಮುಗಿಯಿತು ಅನ್ನುವಾಗ ಜಡೆಕಟ್ಟಿದ ಮಂಡೆಯ ಮೇಲಿಂದ ಮತ್ತೊಮ್ಮೆ ಎರಡು ಸಾರೆ ಹಣಿಗೆ ಆಡಿಸುವ ಶಾಸ್ತ್ರ ಮಾಡಿ ಸಂಭ್ರಮಿಸುವ ಅಮ್ಮಮ್ಮನಿಗೂ ತಾಳೆ ಆಗುತ್ತಿರಲಿಲ್ಲ. ಆ ಕಿರುಮಂಡೆ ಬಾಚುವ ಶಾಸ್ತ್ರವನ್ನಂತೂ ಅವಳು ತಪ್ಪಿಯೂ ಮರೆಯುತ್ತಿರಲಿಲ್ಲ. ಒಂದೊಂದು ಸಾರೆ ಬೆಳಗಿನ ಹೊತ್ತು ಶಾಲೆಗೆ ಹೊರಡುವಾಗ ತಡವಾಗಿಬಿಟ್ಟರಂತೂ ಈ ಕಿರುಮಂಡೆ ಶಾಸ್ತ್ರ ಎಂದು ಜುಟ್ಟು ಹಿಡಿದು ಎಳೆಯುವ ಅಮ್ಮಮ್ಮನನ್ನು ಕಂಡರೆ ಅವಳಿಗೆ ತುಂಬಾ ಸಿಟ್ಟು ಬರುತ್ತಿತ್ತು. ಆಗೆಲ್ಲ ಅಮ್ಮಮ್ಮ ಹೇಳುತ್ತಿದ್ದಳು, ''ಅಪೀ, ಹಂಗೆಲ್ಲ ಹಟ ಮಾಡಡ. ಹಾಂಗೆ ಕಿರುಮಂಡೆ ಬಾಚದ್ರೆ ಗಂಡ ವಪಾಕೆ ಬಾಳಸ್ತನಿಲ್ಯಡ. ಹೆಂಗಸ್ರಿಗೆ ಗಂಡ ಇದ್ರೆ ಯಲ್ಲವ. ಇಲ್ಲದ್ರೆ ಆ ಜನ್ಮ ಕುನ್ನೀಗೆ ಕೊಟ್ರೂ ಬೇಡ'' ಎನ್ನುತ್ತಿದ್ದಳು. ಆಗ ಅನು ನಾಚಿಕೊಂಡು, ''ಇಶ್ಶೀ, ಅಮ್ಮಮ್ಮ ಯಲ್ಲದಕ್ಕೂ ಗಂಡ್ನ ಸುದ್ದೀನೇಯಪ, ಕವಳ ಸುಣ್ಣ ಹೆಚ್ಚಾಗಿ ಕೆಂಪಾರೂ ನೀ ಹೇಳೂದು ಗಂಡ್ನ ಸುದ್ದೀ ನೇಯ. ಬಡ ಬಡ ಜಡೆ ಹೆಣ್ಕೆ'' ಅನ್ನುತ್ತಿದ್ದಳು.

ಒಮ್ಮೊಮ್ಮೆ ಹಾಗೆ ಬಾಚುವಾಗ ಏನನ್ನಾದರೂ ನೆನಸಿಕೊಂಡು ಎರಡು ಹನಿ ಕಣ್ಣೀರು ಹಾಕುವದೂ ಇತ್ತು. ಆಗೆಲ್ಲ ಆಯಿ ಹಲ್ಲು ಮಸೆಯುತ್ತಲೇ ಬರುತ್ತಿದ್ದಳು. ''ಬರೀ ಆ ಕೂಸ್ನ ಮುಂದೆ ಕಣ್ಣೀರ್ ಹಾಕಿ ಹೆದ್ರಸಡಿ. ಬರ್‌ಬರಿತೆ ಕಣ್ಣೀರ್ ಹಾಕ್ತಿರಪ. ಯಾರಾರೂ ನೋಡೀರೆ ಆನೇ ಯಂತ ಮಾಡಿದ್ನೋ ಅಂಬಂಗೆ'' ಎಂದರೆ ಅಮ್ಮಮ್ಮನೂ ಬಿಡುತ್ತಿರಲಿಲ್ಲ, ''ಸಾಕೇ ಸಾಕು. ಕುಂಬ್ಳ ಕಾಯಿ ಕದ್ದವ್ರ ಕತೆ ಮಾಡಡ. ಕುರಬರೀತೆ ಕಾಲ್ ಕೆದ್ರಕಂಡ ಬಪ್ಪಾಂವ ಆನೋ ನೀನೋ. ನಿನ್ಗೆ ಸಾಣೆಬಾರಾ ಹಾಕಂವ ಯನ್ನ ಮಗ್ನೆ ಸೈ. ಹಗ್ದ ಮಡ್ಕೆ ಕುಣಸ್ತ ಅಂದ್ರೆ ಕುಡ್ತೆ ನೀರೀಗೆ ಬಾಯ ಕಳೀತ್ಯಲೆ, ಆಗ ಅನೇಯ ಬಿಡ್ಸಲೆ ಬರವ್ವು. '' ಆಗ ಕಣ್ಣೀರು ಹಾಕುವದು ಆಯಿಯ ಸರದಿ. ''ಆನು ಈ ಮನೆ ಹೊಸ್ಲ ಹೊಕ್ಕಿದಾರಿಬ್ಬಿ ಇದೇ ಗೋಳು ನೋಡ್ದಿ. ವನ್ನಂದ್ ಸಾರಿ, ಜೇವಾರು ಯಂತಕ್ಕೆ ಇದ್ದನ ಹೇಳಿ ಕಾಣ್ತು'' ಎನ್ನುತ್ತಿದ್ದಳು. ಹೀಗೇ ಸಾಗುತ್ತಿತ್ತು. ಆದರೆ ಅಮ್ಮಮ್ಮನ ಅಳು ಯಾವಾಗಲೂ ಒಂದೇ ಕಾರಣಕ್ಕಿರುತ್ತಿತ್ತು. ''ನಮ್ಮಂಬವ್ವೆ ಹೇಳಿ ಕೈಯೆತ್ತಿ ಕೊಡ್ವ ಅಂದ್ರೆ ಯಂತನು ಕೊಡ್ಪಾಂಗಿಲ್ಯೇss... ಬೇರೆಯವ್ಕೆ ಸಾಯ್ಲಿ, ಯನ್ನ ಹೊಟ್ಟೆಲ್ಲಿ ಹುಟ್ದ ಮಗ್ಳೀಗ್ ಸಹ. ಯನ್ನ ಜನ್ಮಕ್ಕಿಷ್ಟು ಬೆಂಕಿ ಹಾಕ''

ಎಂದು ಶುರು ಮಾಡುತ್ತಿದ್ದಳು ಅಥವಾ ಹಾಗೆ ಹೇಳಿ ಮುಗಿಸುತ್ತಿದ್ದಳು. ಆಯಿ ತಿಂಗಳಲ್ಲಿ ನಾಲ್ಕು ದಿನ ಹೊರಗೆ ಕೂತಾಗ ಮಾತ್ರ ಅಮ್ಮಮ್ಮನಿಗೆ ಪುರಸೊತ್ತಿಲ್ಲ. ಆದರೂ ಮಂಡೆ ಬಾಚುವದು, ಜಡೆ ಹೆಣೆದ ಮೇಲೆ ಕಿರುಮಂಡೆ ಬಾಚುವ ಶಾಸ್ತ್ರವನ್ನು ಮಾತ್ರ ಎಷ್ಟೇ ಗಡಿಬಿಡಿಯಲ್ಲೂ ಬಿಡುತ್ತಿರಲಿಲ್ಲ. ಹೀಗೇ ಅವಳ ಶಾಲೆಯ ದಿನಗಳ ನೆನಪಿನ ಜತೆ ಅಮ್ಮಮ್ಮನ ದೈನಂದಿನ ಕೆಲಸ, ಅವರ ಮಾತುಕತೆಯ ಭಾಗವಾಗಿ ಬರುವ ತಾನು, ಏನೆಲ್ಲ ನೆನಪಾಗುತ್ತದೆ.

ಅನು ತನಗರಿವಿಲ್ಲದಂತೆ ಬೆನ್ನಲ್ಲಿ ಹರಡಿ ನಿಂತ ಕೂದಲನ್ನ ಮುಟ್ಟಿ ಮುಟ್ಟಿ ನೋಡಿಕೊಂಡಳು. ನಗುಬಂತು. 'ಕಿರುಮಂಡೆ ಬಾಚದ್ರೆ ಗಂಡ ವಪಾಕೆ ಬಾಳಸ್ತನಿಲ್ಲೆ?' ಎಂಬ ಅಮ್ಮಮ್ಮನ ಮಾತು ನೆನಪಾಯಿತು. ಈಗವಳು ಕೂದಲನ್ನ ಕತ್ತರಿಸಿ ಕ್ಲಿಪ್ ಹಾಕುತ್ತಾಳೆ.

"ಮಮ್ಮೀ ಎಷ್ಟೊತ್ತೆ ಕರೆಯೋದು" ಎಂದು ಮಗ ಕಿರುಚಿದಾಗಲೇ ಎಚ್ಚರ. "ಬಂದೆ" ಎಂದು ಗೇಟಿನೆಡೆ ಓಡಿದಳು.

ಮತ್ತೆ ಅದೇ ದೈನಂದಿನ ಕೆಲಸ. ಮಕ್ಕಳಿಗೆ ತಿಂಡಿ, ಕುಡಿಯಲು ಹಾಲುಕೊಟ್ಟು, ಅವರ ಜಗಳ ದೂರುಗಳನ್ನ ಸುಧಾರಿಸಿ, ತನ್ನ ಸಂಜೆಯ ಕೆಲಸವನ್ನು ಮುಗಿಸಿ, ಮಕ್ಕಳ ಜತೆ ತಾನೂ ಏನಾದರೂ ಓದುವಾ ಅಂತ ಕುಳಿತರೆ, ಮತ್ತೆ ಅದೇ ಹಳೆಯ ನೆನಪುಗಳ ಹಾಳೆಗಳು ಪರಗುಟ್ಟುತ್ತವೆ. ಅವಳ ಮದುವೆಯ ದಿನಗಳು ನೆನ್ನೆ ಮೊನ್ನೆಯ ಘಟನೆಗಳಂತೆ ಕಾಣುತ್ತದೆ.

ಸುಧೀಂದ್ರ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಇಂಜಿನಿಯರ್ ಆಗಿದ್ದ. ಅವನ ಜತೆ ಅನೂಳ ಮದುವೆಯೆಂದಾಗ ಅವಳಿಗೆ ಸ್ವರ್ಗ ಮೂರೇ ಗೇಣು ಎನ್ನುವಂತಾಗಿತ್ತು. ಮಾತು ಮಾತಿಗೂ, 'ಅನೂ, ಅನೂ' ಎಂದು ಸಿನಿಮಾ ಹೀರೋನ ಹಾಗೆ ಸುತ್ತು ಹೊಡೆಯುವ ಗಂಡ ಈಗಿನ ಸುಧೀಂದ್ರನೇ ಆಗಿದ್ದನೇ, ಅವಳಿಗೇ ನಂಬಲಾಗುತ್ತಿಲ್ಲ. ಆ ದಿನಗಳು ಅದೆಷ್ಟು ಬೇಗ ಕಳೆದುಹೋದವು ಅನಿಸಿತು. ಮದುವೆಯಾದ ಹೊಸತರಲ್ಲಿ ಯಾರದೋ ಮನೆಯ ಪಾರ್ಟಿಗೆ ಹೋಗುವುದಿತ್ತು. ಆಗ ಸುಧೀಂದ್ರ, ಎಣ್ಣೆ ಹಚ್ಚಿಕೊಂಡು ಬಿಗಿಯಾಗಿ ಜಡೆ ಹೆಣೆದುಕೊಳ್ಳುತ್ತಿದ್ದ ತನಗೆ ಕೂದಲನ್ನ ಕತ್ತರಿಸಿ ಕ್ಲಿಪ್ ಹಾಕಲು ಒತ್ತಾಯಿಸಿದ್ದ. ಬಹುಶಃ ಒತ್ತಾಯವೆಂಬ ಶಬ್ದ ಈಗ ಸೇರ್ಪಡೆಯಾಗುತ್ತಿದೆ. ಏಕೆಂದರೆ ಆಗ ಅವನು ಏನು ಹೇಳಿದರೂ ತನಗೆ ಪ್ರಿಯವಾಗುತ್ತಿತ್ತು. ಸುಧೀಂದ್ರನ ಅಕ್ಷದ ಸುತ್ತ ಪರಿಭ್ರಮಿಸುವ ನಕ್ಷತ್ರ ಲೋಕದಲ್ಲಿ ತಾನು ವಿಹರಿಸುತ್ತಿದ್ದೆ. ಆಕರ್ಷಣೆಯ ಮಾದಕ ಲೋಕ ಅದು. ಮತ್ತೊಂದು ಭಿನ್ನ ಮಾತಿಗೆ, ವಿಚಾರಕ್ಕೆ ಅವಕಾಶವಿಲ್ಲದ ಶೂನ್ಯ ಲೋಕ. ಅವನ ಜಗತ್ತೂ ಸಹ ಆವಾಗ ಹಾಗೇ ಇದ್ದಿತ್ತೇನೋ. ಆದರೆ ಅವಳು ಆ ಬಗ್ಗೆ ಏನೂ ಹೇಳಲಾರಳು. ಅವಳಿಗೆ ಕೂದಲನ್ನ ಕತ್ತರಿಸುವಾಗ ತಾನೇನೋ ಆಧುನಿಕವಾಗುತ್ತಿದ್ದಂತೆನಿಸಿ ಒಳಗೊಳಗೇ ಖುಷಿಯೇ ಆಗಿತ್ತು. ಸುಧೀಂದ್ರ ಹೇಳಿದ್ದ, "ಅನೂ, ಬೇಜಾರಾಯ್ತಾ. ಯೂ ಮಸ್ಟ್ ಚೇಂಜ್, ಪ್ಲೀಸ್." ಮದುವೆಗೆ ಮುಂಚೆ ಸಾಮಾನ್ಯವಾಗಿ ತನ್ನ ಓರಗೆಯವರೆಲ್ಲ ಹಾಕುವಂಥ ಉದ್ದ ಲಂಗ, ರವಿಕೆ ತೊಟ್ಟು, ಮುಂಗುರುಳನ್ನ ಚೂರೇ ಚೂರು ಕತ್ತರಿಸಬೇಕೆಂದರೂ ಮನೆಯಲ್ಲಿ ಬೈಯ್ಯಬಹುದೆಂಬ ಭಯದಿಂದಿದ್ದವಳಿಗೆ, ಇಲ್ಲಿ ಸುಧೀಂದ್ರನೇ ಬ್ಯೂಟಿ ಪಾರ್ಲರಿಗೆ ಕಳಿಸುತ್ತಿದ್ದಾನೆ. ನಿಜವಾಗಲೂ ತನ್ನಂಥ ಪುಣ್ಯವಂತೆಯೇ ಮತ್ತೊಬ್ಬರಿಲ್ಲ ಅನಿಸುತ್ತಿತ್ತು.

ತಾನು ಬೆಂಗಳೂರಿಗೆ ಬಂದು ಹೊಸ ಸಂಸಾರ ಹೂಡಿದಾಗ ಆಯಿಯೇ ಬಂದು ಎಲ್ಲ ಸಾಮಾನು ಜೋಡಿಸಿಕೊಟ್ಟು ಹೋಗಿದ್ದಳು. ಆಗ ದಿನಾ ಉಡಲೆಂದು ಹತ್ತಿಯ ವಾಯಲ್ ಸೀರೆಯ ಬದಲು ಬೆಂಗಳೂರಿನಲ್ಲಿರುವವಳೆಂದು ಎರಡು ಟೆರಿಕಾಟ್ ಸೀರೆಗಳನ್ನು ಕೊಡಿಸಿದ್ದಳು. ಅವೆಲ್ಲ

ಈಗ ಎಲ್ಲಿ ಹೋದವೋ. ಸೀರೆಯ ಬದಲು ಡ್ರೆಸ್‌ಗಳು ಬಂದವು. ದಪ್ಪ ಹಗ್ಗದಂಥ ಎರಡೆಳೆ ಕರಿಮಣಿ ಸರ ಹೋಗಿ ನಾಜೂಕಾದ ಚೈನ್ ಸರಕ್ಕೆ ತಾಳಿ ಹಾಕಿಸಿಕೊಂಡಳು. ಇಂಥ ಬದಲಾವಣೆ ಗಳಿಂದ ಅವಳ ಹುಟ್ಟಿದೂರಿನಲ್ಲಿ ಹುಯಿಲೆಬ್ಬಿಸಿದ್ದಳು.

ಇಂಥ ಬದಲಾವಣೆಗೆಲ್ಲ ಸಣ್ಣಪುಟ್ಟ ಮಾತುಗಳೂ ಬಂದವು. ಆದರೆ ಗಂಡನ ಹೆಸರನ್ನು ಹಿಡಿದು ಕರೆದಾಗ ಮಾತ್ರ, ಸುಧೀಂದ್ರನ ಆಯಿ ಯಿಂದ ಹಿಡಿದು ಅಮ್ಮಮ್ಮನ ವರೆಗೆ ಎಲ್ಲರೂ ಇವಳದು ಅತಿಯಾಯಿತು ಎಂದವರೇ. ಗಂಡಂದಿರಿಂದ 'ಯಮ್ಮನೆದು, ಯಮ್ಮ ಪ್ರಾಣ' ಎನ್ನಿಸಿಕೊಳ್ಳುತ್ತಿದ್ದವರಿಗಂತೂ ಹೆಂಡತಿಯಾದವಳು ಗಂಡನ ಹೆಸರ್ಹಿಡಿದು ಕರೆಯುವದು ಮಹಾ ಪಾತಕವೆನಿಸಿದ್ದು ನಿಜ. ಅಮ್ಮಮ್ಮ ಕರೆದು ಹೇಳಿ ದ್ದಳು "ತಂಗಿ ನೀ ಯಂತದೇ ಹೇಳು, ಗಂಡ್ನ ಹೆಸ್ರ ಹಿಡ್ದು ಕರದ್ರೆ, ಗಂಡನ ಆಯುಸ್ಸೇ ಕಡ್ಮ ಆಗ್ತಡ. ಹಿರಿಯವ್ವ ಯಂತದಕ್ಕೆ ಮಾಡಿಟ್ಟಿದ್ರೋ ಹೇಳು? ನಮ್ಮ ವಳ್ಳೇದಕ್ಕೇಯ. ಯಷ್ಟಂದ್ರೂ ನಾವು ಹೆಂಗಸ್ರು. ತಗ್ಗೀ ಬಗ್ಗೀ ನಡದ್ರೇ ವಳತು. ಶಾಲೆ ಕಲ್ತರೆ ಈ ನಮ್ನಿ ಮಳ್‌ರೂಪು ಶುರು ಅನ್ತು ಹೇಳೇಯ ಹಿಂದಕ್ಕ ಶಾಲೆಗೆ ಕಳಸ್ತಿದ್ದವಿಲ್ಲೆ" ಎಂದು ಉಪದೇಶ ಮಾಡಿದ್ದಳು. ಹಾಗೆ ಹೇಳಲು ಸುಧೀಂದ್ರನೇ ಹೇಳಿದ್ದಾನೆಂದು ಹೇಳಲು ಬಾಯಿ ತೆರೆದವಳು ಸುಮ್ಮನಾದಳು. ಯಾಕೆಂದರೆ ತನಗೋ ಆಧುನಿಕತೆಯ, ಗಂಡನ ಸಮಸಮ ನಡೆಯುವ, ಸ್ವಾತಂತ್ರ್ಯದ ಕಡೆ ದಾಪುಗಾಲು ಹಾಕುತ್ತಿದ್ದ ಭ್ರಮೆಯಲ್ಲಿ ಯಾವುದೂ ಕಿವಿಗೆ ಬೀಳುತ್ತಿರಲಿಲ್ಲ. ಈ ಭ್ರಮೆ ಅನ್ನುವ ಶಬ್ದ ಕೂಡಾ ಇತ್ತೀಚೆಗೆ ತನ್ನ ಶಬ್ದಕೋಶದಲ್ಲಿ ಸೇರ್ಪಡೆಯಾಗಿದ್ದು. ತಾನಾವಾಗ ಪೇಟೆಯಲ್ಲೇ ಹುಟ್ಟಿ ಆಧುನಿಕತೆಗೆ ಸಹಜವಾಗಿ ತೆರೆದುಕೊಂಡವರಿಗಿಂತ ಹೆಚ್ಚಾಗಿ ಆಧುನಿಕವಾಗಿ ಕಾಣಲು ಪೈಪೋಟಿ ಮಾಡುತ್ತಿದ್ದೆ ಅಂದುಕೊಂಡಳು.

ಮದುವೆಯೂ ಅಷ್ಟೆ. ಲಾಟರಿ ಹೊಡೆದ ಹಾಗೆ. ತನ್ನಕ್ಕ ಗಿರಿಜೆ ಯಾವಾಗಲೂ ಅಲವತ್ತು ಕೊಳ್ಳುವ ಹಾಗೆ ಹುಡುಗಿಯರಿಗೆ ಮದುವೆ ಯೆಂದರೇ ಒಂದು ಲಾಟರಿ. ಏನೂ ಆಗ ಬಹುದು. ತನ್ನನ್ನು ಆಯ್ಕೆ ಮಾಡುವಾಗ ಸುಧೀಂದ್ರನ ಶರತ್ತು ಏನೂ ಇರಲಿಲ್ಲ. 'ಎಲ್ಲ ಅಪ್ಪ ಅಮ್ಮ ಹೇಳಿದಂಗೆ' ಎಂದಿದ್ದ. ಅತ್ತೆ ಹೇಳಿದ್ದರು, 'ಯಮ್ಮನೆ ಸುಧೀಂದ್ರಂಗೆ ಕೂಸು ಪಾಸಪ್ಪೆ ಇಲ್ಲೆ. ಯಂಗ್ಳೂ ಸುಮಾರು ನೋಡಿದ್ಯೋ. ಕೂಸು ನೋಡ್ಲೆ ಚಲೋ ಇರವಡ. ಕಲ್ತಿದ್ದೂ ಅಗವಡ. ಹಾಂಗೇಳಿ ನೌಕರಿಯಲ್ಲಿ ಮಾಡಸ್ತವಿಲ್ಲೆ. ಯಂಗಕ್ಕ ಮತ್ತ ಯಂತ ಇಲ್ಲೆ. ಕೂಸು ಯಮ್ಮನೀಗೆಲ್ಲ ಹೊಂದ ಕೆಂಡಹೋದ್ರ ಸಾಕು" ಎಂದಿದ್ದರು. ಆದರೆ ಈ 'ಯಮ್ಮನಿಗೆ ಹೊಂದಕಂಡ್‌ಹೋದ್ರ ಸಾಕು' ಎನ್ನುವ ತೀರಾ ಸಣ್ಣ ಮಾತು ಎಷ್ಟು ವಿಸ್ತಾರವಾದ ಆಳವಾದ ಅರ್ಥವನ್ನು ಹೊಂದಿದೆ ಎನ್ನುವದು ಈಗ ತಿಳಿಯುತ್ತಿದೆ.

ಮದುವೆ ಮುಗಿದಾಗ ಮನೆಯವರೆಲ್ಲರಿಗೆ ಏನೋ ಧನ್ಯರಾದ ಭಾವ. ಅಮ್ಮಮ್ಮನಂತೂ ಎಷ್ಟು ಸಂಭ್ರಮಿಸಿದ್ದಳೆಂದರೆ, 'ಕೂಸೇ ನಿನ್ನ ಪೂರ್ವಜನ್ಮದ ಪುಣ್ಯಕ್ಕೇಯ ಇಂಥ ವರ್ಪ ಗಂಡ ಸಿಕ್ಕಿದ್ದು' ಎನ್ನುವಾಗ ತಾನು ತಪ್ಪದೇ ಕುಡಿಮಂಡೆ ಬಾಚಿದ್ದರಿಂದಲೇ ಇಂಥ ಗಂಡ ಸಿಕ್ಕಿದ್ದಾನೆ ಎಂಬಂತಹ ಭಾವವಿತ್ತು. ಆಗ ಆಯಿ ಸಹ ಬಿಡದೇ, "ನೋಡಿ ಆಗ, ತಂಗಿ ಶಾಲೇಗೆ ಹೋಪುಕಾರೆ ಬೇಡ, ಕಳ್ಸಡ ಹೇಳಿ ಯನ್ನ ಜೀವ ತಿಂದ್ರಿ. ಆನು ಹಟಮಾಡಿ ಶಾಲೇಗೆ ಕಳ್ಸಿದ್ದಕ್ಕೆ ಇಷ್ಟ ವಪ ಸಂಬಂಧ ಸಿಕ್ತು" ಎಂದು ಹಂಗಿಸಿದ್ದಳು.

"ಅನೂ, ಅನೂ ಬಾಗ್ಲ ತೆಗೆಯೇ, ರೂಮಲ್ಲಿ ಕೂತು ಏನು ಮಾಡ್ತಾ ಇದ್ದೀಯಾ? ಆಗ್ಲಿಂದ ಹಾರ್ನ ಮಾಡ್ತಾ ಇದೀನೀ." (ಬೆಂಗಳೂರಿನ ಮನೆಯಲ್ಲಿ ನಮ್ಮ ಆಡುಭಾಷೆಯನ್ನ ಆಡುವಂತಿಲ್ಲ.)

"ಓ ಬಂದೆ, ಬಂದೆ" ಎಂದಳು.

"ಅಲ್ಲಾ ಅನೂ ನನ್ನ ಟೈಮಿಂಗ್ ನಿನ್ಗೆ ಗೊತ್ತು. ದಿನಾ ಮಾಡೋ ಕೆಲ್ಸ ಇಷ್ಟೊಂದು

ಕೇರ್‌ಲೆಸ್. ಛೆ! ನಮ್ಮ ಆಫೀಸಿನ ಪ್ಯೂನ್ ಶಿವಣ್ಣನೇ ಸರಿಯಪ್ಪ. ಯೇನು ಚಕ್ ಚಕ್ ಅಂತ ಮಾಡ್ತಾನೆ. ಸರಿ ಸರಿ ಜಾಗ ಬಿಡು.'' ಎನ್ನುತ್ತಾ ಒಳಬಂದ. ಅಲ್ಲ ಸುಧಿ, ಈ ''ಅಂತ ಏನೋ ಹೇಳಲು ಹೊರಟಳು. ಆದರೆ ಯಾವ ವಾಕ್ಯವೂ ಬಾಯಿಂದ ಹೊರಡಲಿಲ್ಲ. ತಾನಿನ್ನುಮೇಲೆ 'ಸುಧೀ, ಸುಧೀಂದ್ರ ಎಂದು ಕರೆಯಬಾರದು, 'ರೀ, ಏನೂಂದ್ರೆ' ಅಂತಲೇ ಕರೆಯಬೇಕು ಅಂದುಕೊಂಡಳು. ಅವಳಿಗೆ ತೆರೆದ ಗೇಟಿನಿಂದ ಹಾಗೇ ಓಡಿಹೋಗಿಬಿಡಬೇಕೆನಿಸಿತು. ಆದರೆ ಹೋಗುವದಾದರೂ ಎಲ್ಲಿಗೆ? ಮತ್ತೆ ಗಡಿಬಿಡಿಯಿಂದಲೇ ಒಳಬಂದು ಚೂರುಪಾರು ಉಳಿದ



ಅಡುಗೆ ಕೆಲಸ ಮುಗಿಸಿ, ಸರಿಯಾಗಿ ಎಂಟೂವರೆಗೆಲ್ಲ ಟೇಬಲ್ ರೆಡಿ ಮಾಡಿದಳು.

ಮಗಳು ಅನುಷ, ಈ ಊಟ ಬೇಡ ಬೇರೆಯದನ್ನ ಬಡಿಸು ಅಂತ ಹಟ ಹಿಡಿದಳು. ಅನೂಗೆ ಯಾಕೋ ರೇಗಿಹೋಯಿತು. ಗದರಿದಳು. ಆಗ ಸುಧೀಂದ್ರನೇ, ''ಹಾಗಲ್ಲ ಮರೀ, ಹೀಗೆ'' ಎಂದಾಗ ಮಗಳಿಗೆ ಖುಷಿ ಆಯಿತು.

ಅನು ಯೋಚಿಸುತ್ತಾಳೆ. ಯಾಕೆ ಹೀಗಾಗುತ್ತಿದೆ. ಯಾರಾದರೂ ನೇರವಾಗಿ ಅವಳನ್ನ ಪ್ರಶ್ನಿಸಿದರೆ ಅವಳಲ್ಲಿ ಉತ್ತರವಿಲ್ಲ. ನಿಜಕ್ಕೂ ಅವಳಿಗೆ ಮಾಡಲಾರದಷ್ಟು, ಬಿಡುವಿಲ್ಲದಷ್ಟು ಕೆಲಸವಿಲ್ಲ. ಬರೀ ಮನೆಯ ಚಾಕರಿಯಷ್ಟೆ. ಆದರೂ ಅವಳಿಗೆ ಇತ್ತೀಚೆಗೆ ಏನೋ ಆಯಾಸ. ಯಾರಲ್ಲಿಯೂ ಹೇಳಲಾರಳು. ಆವಾಗಿನ ಅನು ತಾನಲ್ಲ ಅನಿಸಿತು. ಹಾಗಿದ್ದರೂ ಸುರಳೀತವಾಗಿರುತ್ತಿತ್ತೋ ಏನೋ! ಕಳೆದ ಆ ದಿನಗಳಲ್ಲಿ ಇದು ಸುಧೀಗೆ ಇಷ್ಟ. ಈ ಬಣ್ಣ, ಈ ಹೂವು, ಈ ಸೀರೆ, ಹೀಗೇ... ಆದರೆ ಈಗ... ಸುಧೀಂದ್ರನೂ ಮೊದಲಿನಂತಿಲ್ಲ. ಆಗೆಲ್ಲ ನಾನು ರಾಜ ನೀನು ರಾಣಿ ಎಂಬಂತಿದ್ದ. ತಮ್ಮಿಬ್ಬರಾಚೆ ಏನಿತ್ತು.? ಏನೂ ಇರಲಿಲ್ಲ. ಆವಾಗೆಲ್ಲ ತಾವಿಬ್ಬರಿದ್ದೆವು. ಈಗ ಹಾಗಲ್ಲ. 'ತಾನು, ತಾನೊಬ್ಬನೇ' ಎಂಬಂತಾಡುತ್ತಾನೆ. ತಾನು ಕೂಡಾ ನಿಧಾನವಾಗಿ ಹೇಳಹೆಸರಿಲ್ಲದಂತೆ ಕಳೆದುಹೋಗುತ್ತಿದ್ದೇನೆ.

ಕೆಲವೇ ದಿನಗಳಲ್ಲಿ ರಾಜ ರಾಣಿಯ ಜತೆ ರಾಜಕುಮಾರ ಬಂದ. ಅದೇ ಟಿಪಿಕಲ್ ಸೆರೆಲ್ಯಾಕ್‌ನೊಂದಿಗೆ ಬೆಳವಣಿಗೆ, ಆಮೇಲೆ ರಾಜಕುಮಾರಿ, ಅರಮನೆ, ನಾಯಿ, ಹೂದೋಟ, ಕಾರು. ಜಾಹಿರಾತುಗಳಲ್ಲಿ ಬರುವ ಸುಖೀ ಕುಟುಂಬದ ಹಾಗೆ. ಸುಧೀಂದ್ರ ಈ ಎಲ್ಲವನ್ನೂ ಪಡೆಯುವ ಪೈಪೋಟಿಯಲ್ಲಿ ರೇಸಿನ ಕುದುರೆಯಂತೆ ಓಡುತ್ತಿದ್ದ. ಆಗೆಲ್ಲ, ತಾನು ಮಾಡಿದ್ದು, ಇದು ತನ್ನಿಂದಾಯಿತು, ಎಂಬಂತಹ ಮಾತುಗಳಿಂದ ತನ್ನ ಅಸ್ತಿತ್ವವನ್ನೂ ಡಿಪೋಸಿಟ್ ಮಾಡುತ್ತಾ ನಡೆದ. ಆದರೆ ತಾನೇನು ಮಾಡಬೇಕು? ನಿಮ್ಮೊಂದಿಗೆ ನಾನೂ ಇದ್ದೇನೆ ಎನ್ನಲು ಅವಳ ಹತ್ತಿರ ಏನಿದೆ. ಯಾರೊಂದಿಗಾದರೂ ದುಃಖ ತೋಡಿಕೊಳ್ಳುವಾ ಎಂದರೆ ಏನೆಂದು ಹೇಳುವದು? ಹೆಣ್ಣಾದವಳಿಗ ಇನ್ನೇನು ಬೇಕು ಎಂದಾರು. ಅಥವಾ ಹುಚ್ಚು ಹಿಡಿದಿದೆಯೇನೇ ಎನ್ನಬಹುದು. ಅದಕ್ಕಿಂತ ಹೆಚ್ಚಾಗಿ ಎಷ್ಟು ಕೊಬ್ಬು ಎನ್ನಬಹುದು. ಹಾಗಾಗಿ ಇತ್ತೀಚೆಗೆ ಅವಳು ಮೌನಿಯಾಗುತ್ತಿದ್ದಾಳೆ.

ಈ ಮಧ್ಯೆ ಅನೂಗೆ ಊರಿಂದ ಕಾಗದ ಬಂದಿತ್ತು. ಅವಳ ಆಯಿ ಬರುತ್ತೇನೆಂದವಳು ಬರಲಾಗದಿದ್ದಕ್ಕೆ ಅಲವತ್ತುಕೊಂಡಿದ್ದಳು. 'ಮಳೆಗಾಲ ಶುರುವಾಗಿದೆ, ಗದ್ದೆ ನೆಡುವದು, ತೋಟಕ್ಕೆ ಮದ್ದು ಹೊಡೆಯುವದು ಶುರುವಾಗಿದೆ. ಕೆಲಸದ ಭರಾಟೆಯಲ್ಲಿ ಮುಕುಳಿ ತುರಿಸಲೂ ಪುರಸೊತ್ತಿಲ್ಲದ ದಿನ' ಎಂದೆಲ್ಲಾ ಬರೆಸಿದ್ದಳು. ಹೌದು ಅಮ್ಮನಿಲ್ಲದಿದ್ದರೆ ಅಲ್ಲಿ ಅಪ್ಪನ ಕೈಕಾಲೇ ಆಡುವದಿಲ್ಲ. ಅಲ್ಲಿಯ ವ್ಯವಸ್ಥೆಯೇ ಅಂಥದ್ದು. ಗಂಡು ಮಕ್ಕಳೇನೋ ಇದ್ದಾರೆ. ಆದರೂ ಆ ಮನೆಯ ವಹಿವಾಟಿನಲ್ಲಿ ಹೇಗೋ ಆಯಿ ಕೂಡಾ ಮುಖ್ಯಳಾಗಿಬಿಡುತ್ತಾಳೆ. ಏನೋ ಗೊತ್ತಿಲ್ಲ. ಆದರೆ ತಾನು ಬರೀ ಸುಧೀಂದ್ರನ ಆಶ್ರಿತಳು. ಬರೀ ಮಿಸೆಸ್ ಸುಧೀಂದ್ರ ಮಾತ್ರ. (ಮೊದಲೆಲ್ಲ ಯಾರಾದರೂ ಹೆಸರು ಕೇಳಿದರೆ ಅನು ಸುಧೀಂದ್ರ ಅನ್ನಲು ಅದೆಷ್ಟು ಹೆಮ್ಮೆ ಅನಿಸುತ್ತಿತ್ತು!)

ಇತ್ತೀಚೆಗೆ ಬಿಡುವಿರುವಾಗಲೆಲ್ಲ ಅವಳು ಬಿಸಿಲುಮಚ್ಚಿನ ಮೇಲೆ ಹತ್ತಿ ಸುಮ್ಮನೇ ಕೂತಿರುತ್ತಾಳೆ. ಅದೊಂದು ಚಟವಾಗಿಬಿಟ್ಟಿದೆ. ಮನೆಯ ಹಿಂದಿನ ಆ ದೊಡ್ಡ ಮೈದಾನ, ಅಲ್ಲಿ ಆಡುವ ಮಕ್ಕಳು, ಅದೇ ದೊಡ್ಡ ಆಲದ ಮರ, ಆ ಮರದ ಮೇಲೆ ಸದಾ ಗಿಜಿಗುಡುವ ಹಕ್ಕಿಗಳು, ಎಂದಾದರೊಮ್ಮೆ ಹಲ್ಲು ಕಿಸಿದು ಹೆದರಿಸುವ ಮಂಗ. ಹಾಗೇ ಈ ಕಡೆ ತಿರುಗಿದರೆ ಮನೆಯೆದುರಿನ ದೊಡ್ಡ ರಸ್ತೆ. ಅದರಲ್ಲಿ ಹೋಗಿ ಬರುವ ವಾಹನಗಳು. ಅದರ ಮೇಲೆ ಕುಳಿತು ಸವಾರಿ ಮಾಡುವ ತರತರದ ಜನರು. ಯುನಿಫಾರ್ಮ್‌ನಲ್ಲಿ ಹೋಗುವ ಸ್ಕೂಲ್ ಮಕ್ಕಳು. ತರಕಾರಿಯವರು, ಚಿಂದಿ ಆಯುವವರು, ತರಹಾವರಿ ಜನರ ಲೋಕವೇ ತೆರೆಯುತ್ತದೆ. ಹಾಗೆ ಕುಳಿತು ನೋಡುವಾಗ ವಾಹನಗಳಲ್ಲಿ ಗಂಡನ ಹಿಂದೆಯೋ, ಪಕ್ಕದಲ್ಲಿ ಕುಳಿತೋ ಹೋಗುವ ಅಸಂಖ್ಯ ಹೆಂಗಸರಲ್ಲಿ ತನ್ನನ್ನು ಹುಡುಕುತ್ತಾಳೆ.

ಸುಂದರವಾಗಿ ಮೇಕಪ್ ಮಾಡಿಕೊಂಡು, ತುಟಿಗೆ ಲಿಪ್‌ಸ್ಟಿಕ್ ಬಳಿದು, ಟೂವ್ಹೀಲರಿನಲ್ಲಿ ಗಂಡಸಿನ ಹಿಂದೆ ಕುಳಿತು, ಮುಂದಿರುವ ಗಂಡಸಿನ ಹೊಟ್ಟೆಯನ್ನ ಬಳಸಿ ಹಿಡಿದು ಹೋಗುವ ಹೆಚ್ಚಿನ ಹೆಂಗಸರ ಮುಖದಲ್ಲಿ ಅದೆಷ್ಟು ಆತ್ಮವಿಶ್ವಾಸ, ಭದ್ರತೆಯ ಭಾವ.

ಆ ದಿನ ಮಕ್ಕಳ ಮಾರ್ಕ್ಸ್ ಕಾರ್ಡ್ ನೋಡಿ ಸುಧೀಂದ್ರ ರೇಗಿದ್ದ, ''ಯಾಕೆ ಅನೂ, ಇತ್ತೀಚೆಗಂತೂ ನೀನು ಒಂಥರಾ ಇರ್ತೀಯ. ಅಲ್ಲss ಸುಸ್ತಾಗಿ ಆಫೀಸಿಂದ ಬಂದ್ರೆ, ಮನೆಲ್ಲೂ ಗೋಳು. ನಾನು ಇಷ್ಟೆಲ್ಲ ಮಾಡೀದೀನಿ ಛೆ, ನಿನಗೇನಾಗಿದೆ ಅಂತ. ಬೆಳಗಿಂದ ಸಂಜೀವರೆಗೂ ಕಡ್ದು ಗುಡ್ಡೆ ಹಾಕೋದು ಏನಿರುತ್ತೆ, ಅಬ್ಬಬ್ಬ ಅಂದ್ರೆ... ಅಲ್ಲ ಕಣೆ, ನನ್ನ ಮಕ್ಕಳನ್ನ

ಗಮನಿಸೋವಷ್ಟು ಪುರಸೊತ್ತಿಲ್ಲಾಂದ್ರೆ.... ಕರ್ಮ ಕರ್ಮ''. ಅವಳಿಗೆ ಗೊತ್ತು, ಈಗ ಗದರುವ ಸುಧೀಂದ್ರ ರಾತ್ರಿ ರಮಿಸುತ್ತಾನೆ. 'ಯಾಕೆ ಅನು, ಮೈ ಹುಷಾರಿಲ್ವ. ಡಾಕ್ಟ್ರಿಗೆ ತೋರಿಸ್ಕೋಬಾರ್ದ' ಅಂತ. ಆಗ ಅವಳಿಗೆ ಜೋರಾಗಿ ಇದ್ದಷ್ಟು ಶಕ್ತಿ ಹಾಕಿ, 'ಯಲ್ಲಾದಕ್ಕೂ ಡಾಕ್ಟ್ರ ಹತ್ರ ಔಷ್ದಿ ಇರುತ್ತೆ!' ಅಂತ ಕೂಗಬೇಕು ಅನಿಸಿದೆ. ಆದರೆ ಧ್ವನಿ ಹೊರಬರುವದೇ ಇಲ್ಲ.

ಇತ್ತೀಚೆಗೆ ಇಂಥ ಪ್ರಸಂಗಗಳಲ್ಲಿ ಅವಳೂ ಗೊಣಗುತ್ತಾಳೆ. ಆಗೊಮ್ಮೆ ಸುಧೀಂದ್ರ ಹೇಳಿದ್ದ, "ಗೊಣಗೋದು ಯಾಕೆ, ಏನು ನಿನ್ನ ತೊಂದ್ರೆ?'' ಧ್ವನಿಯಲ್ಲಿ ಕಾಠಿಣ್ಯವಿತ್ತು. ಅದಕ್ಕಿಂತ ಹೆಚ್ಚಾಗಿ ತನ್ನ ಮಕ್ಕಳ ಯೋಗಕ್ಷೇಮಕ್ಕಾಗೇ ನೀನಿರಬೇಕಾದ್ದು ಎಂಬಂತಹ ಆರೋಪವಿತ್ತು.

ಇಂತಹುದೇ ಪಿರಿಪಿರಿ, ಜಗಳ ರಾಗ ಮಾಮೂಲಿ ಆಯಿತು. ಸುಧೀಂದ್ರನೂ ಇತ್ತೀಚೆಗೆ ಹೆಲ್ತ ಕ್ಲಬ್, ಫ್ರೆಂಡ್ಸು ಅಂತ ಹೊರಗೇ ಕಳೆಯುತ್ತಿದ್ದ. ಅದಾದ ಮೇಲೆ ಅದೇನೋ ದೊಡ್ಡ project ಬೇರೆ. ಒಟ್ಟಿನಲ್ಲಿ ಅವನ ಧೈತ್ಯ ಬೆಳವಣಿಗೆಯ ಮುಂದೆ ಅನು ಇರಲೇ ಇಲ್ಲ.

ಅನು ಎಷ್ಟೋ ಸಾರೆ ಯೋಚಿಸುತ್ತಾಳೆ. ಮೊದಮೊದಲು ತುಂಬಾ ಪ್ರಿಯವಾದ, ತನ್ನಂತಹ ಭಾಗ್ಯವಂತರಿಲ್ಲ ಎನ್ನಿಸುವಂತಹ ಕ್ರಿಯೆಗಳೇ ಇಂದು ಅವಳಿಗೆ ಏನೋ ಒತ್ತಡದ ಹುನ್ನಾರ ಎನಿಸುತ್ತಿದೆ. ಇಂತಹ ವಿಷಯವನ್ನ ಯಾರ ಹತ್ತಿರವೂ ಹೇಳಿಕೊಳ್ಳುವಂತಿಲ್ಲ. ಹೇಳಲು ಏನಿದೆ. ಸಾಕ್ಷಿ ಇಲ್ಲದೇ ಕೋರ್ಟ್ ಹತ್ತಿದಂತೆ, ದುಃಖ ಅಂದರೆ ಯಾರಾದರೂ ನಗುತ್ತಾರೆ ಅಷ್ಟೆ. ಗಂಡ ಕುಡಿದು, ಜೂಜಾಡಿ, ದೈಹಿಕ ಹಿಂಸೆ ಕೊಡುತ್ತಾನೆ ಎಂದರೆ ಯಾರಾದರೂ ಹೌದಪ್ಪ ಅನ್ನಬಹುದು. ಅದೇನೂ ಇಲ್ಲದಾಗ ಈ ವ್ಯವಸ್ಥೆಯಲ್ಲಿ ದುಃಖ ಎಂದು ಸಾಬೀತುಪಡಿಸುವುದಾದರೂ ಹೇಗೆ?

ಎಷ್ಟೋ ಸಾರೆ ಸುಧೀಂದ್ರನನ್ನು ನೋಡಿ ಅವಳಿಗೆ ಅನುಕಂಪ ಆಗುತ್ತದೆ. ಅವನೂ ಆಫೀಸಿನಲ್ಲಿ ಕೆಲಸದ ಒತ್ತಡ ಅನುಭವಿಸುತ್ತಿರುತ್ತಾನೆ. ಎಷ್ಟೋ ಸಾರೆ, ತನ್ನನ್ನೇ ನಿಂದಿಸಿಕೊಳ್ಳುತ್ತಾಳೆ. ಹಾಗಾದರೆ ಬದಲಾದವನು ಸುಧೀಂದ್ರನಲ್ಲ. ಅವನು ಮೊದಲೂ ಹಾಗೇ ಇದ್ದ. ಆದರೆ ತನಗೆ ಅರಿವಿರಲಿಲ್ಲ ಅಷ್ಟೆ. ಬದಲಾದವಳು ತಾನು. ಅವಳು ಸಣ್ಣವಳಿರುವಾಗ ಅಮ್ಮಮ್ಮ ಏನೆಲ್ಲ ಹೇಳಿಕೊಟ್ಟಿದ್ದಳು, ಒಟ್ಟಿನಲ್ಲಿ ಅವಳು ಮನೆವಾರ್ತೆಯ ಪಾಠಗಳನ್ನ ಅರೆದು ಕುಡಿಸುತ್ತಿದ್ದಳು. ಆದರೆ ತಾನು ಹೀಗೇಕೆ? ಅವಳು ಹೇಳಿಕೊಟ್ಟಂತೆ ಯೋಚಿಸಲೂ ಮನಸ್ಸು ದಂಗೆ ಏಳುತ್ತದೆ.

ಈ ನಡುವೆ ಅನು ಅಮ್ಮನ ಮನೆಗೆ ಮಕ್ಕಳೊಟ್ಟಿಗೆ ಹೋಗಿದ್ದಳು. ಅವಳಕ್ಕ ಗಿರಿಜೆಯೂ ಮಕ್ಕಳೊಟ್ಟಿಗೆ ಬಂದಿದ್ದಳು. ನಾಲ್ಕು ದಿನ ಮನೆಯ ಸೂರು ಹಾರಿಹೋಗುವಷ್ಟು ಗೌಜಿ. ಅಕ್ಕ-ತಂಗಿಯರಂತೂ ಮಾತಾಡಿದ್ದೇ ಮಾತಾಡಿದ್ದು. ಮದುವೆಗೆ ಮುನ್ನ ಸುಮಾರು ವರ್ಷ ಮಾತುಬಿಟ್ಟವರು ಈಗ ಕಷ್ಟ ಸುಖ ಹೇಳಿಕೊಂಡಿದ್ದೇ ಹೇಳಿಕೊಂಡಿದ್ದು. ಅವಳೇನೋ ಹೇಳಿಕೊಂಡಳು, ಆದರೆ ಇವಳೇನು ಹೇಳಿಕೊಳ್ಳಬೇಕು? ಮಾತು ಅಮ್ಮಮ್ಮನ ಕಡೆ ತಿರುಗಿತು.

ಅನ್ನಪೂರ್ಣೆಗಿಂತ (ಅನು) ದೊಡ್ಡವಳಾದ ಗಿರಿಜೆಯನ್ನ ಕಂಡರೆ ಅಮ್ಮಮ್ಮನಿಗೆ ಆಗುತ್ತಿರಲಿಲ್ಲ. ಅವಳು ಏನಾದರೂ ನೆಪ ಮಾಡಿಕೊಂಡು ಬೈಯ್ಯುತ್ತಿದ್ದಳು. ಒಮ್ಮೆಯಂತೂ ಗಿರಿಜೆ, 'ಅಮ್ಮಮ್ಮ ಹುಳ್ಕಿ' ಎಂದು ಸಿಟ್ಟು ಮಾಡಿದ್ದಳು. ಆಗ ಅಮ್ಮಮ್ಮ ಆವೇಶ ಬಂದವಳಂತೆ ಕಣ್ಣೀರು ಹಾಕುತ್ತಾ, 'ಅಮ್ಮಮ್ಮ ಹುಳ್ಕಿ ಹುಳ್ಕಿ ಹೇಳ್ತಿಯಲೆ, ನೀ ಸರಿ ಇದ್ದ್ಯೋ, ಮನ್ನೇಯ ಆನು 'ತಂಗಿ ಹೇಳಡ' ಹೇಳಿ ಧರ್ಮಸ್ಥಳದ ದೇವರಾಣೆ ಹಾಕಸ್ತೆ. ನೀನು ಕೇಳ್ದಿಯೋ? ಯಲ್ಲ ಹೋಗಿ ಅಮ್ಮಂಗೆ ಚಾಡಿ ಹೇಳ್ತೆ, ಮನೆ ಕುರುಕ್ಷೇತ್ರ ಆಗ್ಹೋತು. ಅಷ್ಟಕ್ಕೂ

ಅನು ಯಂತ ಮಾಡಿದ್ದಿ ಶಾರದೆಗೆ? ಬರೀ ನಾಲ್ಕು ಮುಷ್ಟಿ ಹುಳಿಪುಡಿ, ನಾಲ್ಕೇ ನಾಲ್ಕು ಕೊಂಬು ಅರಿಷ್ಣ ಕೊಟ್ಟಿದ್ದ ಹೌದು. ಅನೇನು ಸಾಮ್ರಾಜ್ಯ ಕೊಟ್ಟಿದಿದ್ನೋ. ನಿನ್ನಪ್ಪ ಪಾಲ ಹರ್ದು ಕೊಟ್ಟಿದ್ನೋ, ನಿನ್ನ ಆಯಿ ಅದನ್ನೇ ಹಿಡ್ಕಂಡು ತಲೆ ಮೇಲೆ ಜರಿತಲೆ ಯಂದು ಹೇಳೂದು ಮೂರು ಕಾಸು ಹೇಳಿ ಇದ್ದಿದ್ರೆ... ಸುಟ್ಟಬಿದ್ದ ಜನ್ಮ ಎಂದು ಗೋಳಾಡಿದ್ದಳು.

ಆಯಿ ಅಮ್ಮಮ್ಮನ ಜಗಳದಲ್ಲಿ ಯಾವಾಗಲೂ ಗಿರಿಜೆ ಆಯಿಯ ಪರವಾಗಿಯೂ, ಅನ್ನಪೂರ್ಣೆ ಅಮ್ಮಮ್ಮನ ಪರವಾಗಿಯೂ ಇರುತ್ತಿದ್ದರು.

ಅಮ್ಮಮ್ಮ ಯಾರಾದರೂ ನೆಂಟರು ಮನೆಗೆ ಬಂದರೆ ಅನ್ನಪೂರ್ಣೆಯನ್ನು ಎದುರೆದುರೇ ಹೊಗಳುತ್ತಿದ್ದಳು. 'ಗಿರಿಜೆ ಹಂಗಲ್ಲ' ಎಂದೂ ಸೇರಿಸುತ್ತಿದ್ದಳು. ಆಗೆಲ್ಲ ಗಿರಿಜೆಗೆ ಎಲ್ಲಿಲ್ಲದ ಸಿಟ್ಟು.

ಹೀಗೆ ದೊಡ್ಡವರಿಗೆ ಒಳ್ಳೆಯವಳೆನಿಸುವ ಸ್ಪರ್ಧೆಯಲ್ಲಿ ಅನು ಗೆದ್ದಿದ್ದಳು. ಗಿರಿಜೆ ಸೋತು, ಇಬ್ಬರೂ ಮಾತು ಬಿಟ್ಟಿದ್ದರು. ಈಗ ಮಾತಾಡುವದು ಗಿರಿಜೆಯ ಸರದಿ, ಅವಳಿಗೆ ಮಾತಾಡಿದಷ್ಟೂ ಕಡಿಮೆ. ಅವಳು ಹೇಳಿದ್ದಳು ''ತಂಗಿ ವಂದ ಮನೆ ದೋಸೆ ಕನ್ನಾರೆ, ವಂದ್ ಮನೆ ದೋಸೆ ಬಂಡಿ ಕನ್ನು. ಯನ್ನ ಕತೆ ಮತ್ತ್ಯಾತದು, ಯಮ್ಮನೆಯವ್ವು, ಬರೀ ಇಸ್ಪೀಟಾಡ್ರವೆ, ಮನೆಲ್ಲಿ ಯೇನಾರು ತಿಥಿ, ದೇವಕಾರ್ಯ ಆದರೆಂತೂ, ಮನೆಲ್ಲೆ ಇಸ್ಪೀಟ್ನ ಮಂಡ ಹಾಕ್ರೊ. ಅನೇನು ಮದ್ಯನಾಂಗಿಲ್ಲೆ ಬಿಡು. ಆದ್ರೂ...'' ಅನೂ ಏನು ಹೇಳಿಯಾಳು? ಅವಳ ದುಃಖವನ್ನ, ಸಾಬೀತು ಮಾಡುವುದಾದರೂ ಹೇಗೆ?

ಅನೂಗೆ ಚೆನ್ನಾಗಿ ನೆನಪಿದೆ; ಅನು ಮದುವೆಯಾದಾಗ ಎಲ್ಲರಿಗಿಂತ ಹೆಚ್ಚು ಹೊಟ್ಟೆ ಉರಿಸಿದ್ದು ಗಿರಿಜೆಯನ್ನ. ತನ್ನ ಸುಖಕ್ಕೆ ವೈಭವಕ್ಕೆ ಮನಸ್ಸಿನಲ್ಲೇ ಕರುಬಿದರೂ ಬಾಯಿಬಿಟ್ಟು ಹೇಳಿದ್ದಳು ''ತಂಗೀ ಯಲ್ಲದಕ್ಕೂ ಯೋಗ ಬೇಕೆ, ಏನೇ ಹೇಳು ನಿನ್ನ ನಸೀಬು ಚಲೋ ಇದ್ದು'' ಹಾಗೆ ಹೇಳುವಾಗ ತನ್ನದು ಖೊಟ್ಟೀ ನಸೀಬ ಎಂದು ಅದೆಷ್ಟು ಅಲವತ್ತುಕೊಂಡಿದ್ದಳು.

ಅವರು ಅದೆಲ್ಲ ನೆನಪಿಸಿಕೊಂಡು ಮಾತಾಡುವಾಗ ''ಇಲ್ಲೆ ಅಕ್ಕಯ್ಯ, ಪರಿಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆ ಇದ್ದಿಕ್ಕು ಆದ್ರೆ...'' ಅಂತ ಹೇಳಲು ಹೊರಟಿದ್ದಳು. ಆದರೆ ತನ್ನ ಮಾತು ಅಕ್ಕನವರೆಗೆ ಮುಟ್ಟಲಿಕ್ಕಿಲ್ಲ ಎನಿಸಿ ಅನು ಮೌನಿಯಾದಳು.





ವಿವೇಕ ಶಾನಭಾಗ

ಕಥನ ಕುತೂಹಲ

# ಮೊದಲ ಪುಟಗಳು


ಒಂದು ಪುಸ್ತಕವನ್ನು ಎತ್ತಿಕೊಂಡಾಗ, ಬೆನ್ನುಡಿಯ ನಂತರ ಓದುವುದು ಪುಸ್ತಕದ ಮೊದಲ ಪುಟಗಳನ್ನು. ಅದರಲ್ಲೂ ಲೇಖಕರ ಮಾತುಗಳನ್ನು. ಇವುಗಳನ್ನು ಎರಡು ಮಾತು, ಮೊದಲ ಮಾತು, ಅರಿಕೆ, ಓದುವ ಮುಂಚೆ ಹೀಗೆಲ್ಲ ನಾನಾ ರೀತಿಯಿಂದ ಕರೆದಿದ್ದಾರೆ. ಇವೆಲ್ಲವೂ ಆ ಲೇಖಕರ ಒಳಗನ್ನು ಒಂದಿಷ್ಟು ತೋರಿಸುವ ಚಿಕ್ಕ ಕಿಂಡಿಗಳು. ಲೇಖಕನ ಸಾಹಿತ್ಯಿಕ ನಂಬಿಕೆಗಳು, ಸ್ನೇಹಿತರು, ತುಂಟತನ, ಅಸಮಾಧಾನ, ಸರೀಕರ ಜೊತೆಯ ಜಗಳಗಳು ಇತ್ಯಾದಿಗಳೆಲ್ಲ ಇಲ್ಲಿ ಸ್ವಂತ ಮಾತುಗಳ ಲೇಪದೊಡನೆ ಕಾಣಸಿಕೊಳ್ಳುತ್ತವೆ. ಇವೆಲ್ಲ, ಬರಹಗಾರನ ಬಗ್ಗೆ ಅವನ ಕೃತಿಗಳಿಂದ ಹೊರತಾದ, ಮಿಂಚಿನಂಥ ಒಂದು ನೋಟ ಒದಗಿಸುವ ಸಾಲುಗಳು. ಯಾವ ಪುಸ್ತಕ ಎತ್ತಿಕೊಂಡರೂ, ಅದನ್ನು ಓದುವ ಇರಾದೆ ಇಲ್ಲದಾಗ್ಯೂ ಈ ಮೊದಲ ಮಾತುಗಳತ್ತ ಒಮ್ಮೆ ಕುತೂಹಲದ ಕಣ್ಣು ಹಾಯುತ್ತದೆ.

ಕಾಲ ಕಳೆದಂತೆ ಈ ಮುನ್ನುಡಿಗಳೆಲ್ಲ ಹೆಚ್ಚು ಹೆಚ್ಚು ಆಸಕ್ತಿಪೂರ್ಣವಾಗಿ ತೋರುತ್ತವೆ. ಹಳೆಯ ಪುಸ್ತಕಗಳನ್ನು ತಿರುವಿ ಹಾಕುತ್ತ ಆ ಮೊದಲ ಮಾತುಗಳನ್ನು ಬರೆದ ಸಂದರ್ಭವನ್ನು ಊಹಿಸುವುದು, ಅವುಗಳ ಮಹತ್ವವನ್ನು ಈಗ, ಕಾಲದ ಈ ತುದಿಗೆ ನಿಂತು ನೋಡುವುದು ಒಂದು ವಿಶೇಷವಾದ ಅನುಭವ. ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಸಂಕಲನಕ್ಕೆ ಅವರೇ ಬರೆದ ಮಾತುಗಳು, ತಿರುಮಲೇಶ್ ತಮ್ಮ 'ಮಹಾಪ್ರಸ್ಥಾನ' ಸಂಕಲನಕ್ಕೆ ಬರೆದ ಮುನ್ನುಡಿಗಳನ್ನು ಈಗ ಗಮನಿಸುವ ಮಹತ್ವದ ಬಗ್ಗೆ ಮತ್ತೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸದ್ಯ ಚಾಲ್ತಿಯಲ್ಲಿರುವ ಪಂಥವನ್ನೋ, ಕಥನಕ್ರಮವನ್ನೋ ಪರೀಕ್ಷಿಸುವ, ಅವುಗಳಿಗೆ ಸವಾಲೊಡ್ಡುವ ಇಂಥ ಮುನ್ನುಡಿಗಳಿಗೆ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನವಿದೆ. ಇಂಥ ಮುನ್ನುಡಿಗಳನ್ನೂ, ಮೊದಲ ಮಾತುಗಳನ್ನೂ ನೋಡುತ್ತ ಹೋಗುವುದರಿಂದಲೇ, ಕೇವಲ ಈ ದಾಖಲೆಗಳ ಮೇಲಿನಿಂದಲೇ, ಪ್ರಚಲಿತವಾದುದಕ್ಕಿಂತ ಭಿನ್ನವಾದ ಇನ್ನೊಂದು ಸಾಹಿತ್ಯ ಚರಿತ್ರೆಯನ್ನು ಕಾಣಿಸುವುದು ಸಾಧ್ಯವಿದೆ. ಇಂಥದ್ದಕ್ಕೆ ವೈಯಕ್ತಿಕವಾದ ತುರ್ತು ಮತ್ತು ಸಹಾನುಭೂತಿಯ ಸ್ಪರ್ಶ ಇರುವುದು ಸಾಧ್ಯವಿದೆ. ಸಾಹಿತ್ಯಪ್ರಿಯರೆಲ್ಲರ ಮನಸ್ಸಿನಲ್ಲಿ ಇಂಥದೊಂದು ಚರಿತ್ರೆ ಇದ್ದೇ ಇರುತ್ತದೆ ಎಂದು ನನ್ನ ನಂಬಿಕೆ.

'ನಾನಲ್ಲ' ಎಂಬ ತಮ್ಮ ಕಥಾ ಸಂಕಲನವನ್ನು ಕಿ.ರಂ. ನಾಗರಾಜ ಮತ್ತು ಟಿ.ಎನ್. ಸೀತಾರಾಮರಿಗೆ ಅರ್ಪಿಸಿ ಅದಕ್ಕೆ ಲಂಕೇಶ್ ಬರೆದ ಕೆಲವು ಸಾಲುಗಳನ್ನು ಗಮನಿಸಿ:

ಎಲ್ಲವೋ ಹುಡುಗರೆ, ನೀವು ನನ್ನ ಜೊತೆ
ಹಾಳಾಗುವುದು ಖರೆ,
ನೀವಲ್ಲದೇ ಉಂಡು ತೇಗುವ ಜಾಣರು
ನನಗೆ ಗುರಿಯಾಗುವರೆ?

ಈ ಇಷ್ಟೇ ಮಾತುಗಳಲ್ಲಿ ಲಂಕೇಶ್, ಆ ಹೊತ್ತಿನಲ್ಲಿ ಜೀವನದ ಬಗೆಗಿನ ಅವರ ನಿಲುವು, ತಮಗೆ ಮತ್ತು ತಮ್ಮ ಸ್ನೇಹಿತರಿಗೆ ಯಾವುದು ಪ್ರಿಯ, ಆ ಸ್ನೇಹಿತರು ಯಾವ ರೀತಿಯವರು, ತಾವು ಯಾವುದನ್ನು ಜೀವನದಲ್ಲಿ ಮಹತ್ವದ್ದೆಂದು ಭಾವಿಸುತ್ತಾರೆ-ಮುಂತಾದ ಎಲ್ಲವನ್ನೂ ಹೇಳಿದಂತಿದೆ. ಅಂತೆಯೇ ಅವರು ಪುಸ್ತಕವೊಂದನ್ನು ಅರ್ಪಿಸುತ್ತ ಬರೆದ, 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಗೋಪಾಲಕೃಷ್ಣ ಅಡಿಗರಿಗೆ' ಎಂಬ ಮಾತು ಮುಂದೆ ಹಲವು ಹತ್ತು ರೀತಿಯಲ್ಲಿ ಅಡಿಗರನ್ನು ಹೊಗಳುವುದಕ್ಕೂ, ತೆಗಳುವುದಕ್ಕೂ ಬಳಕೆಯಾಯಿತು.


ಪ್ರವೀಣ

'ಕಾನೂರು ಹೆಗ್ಗಡಿತಿ'ಗೆ ಕುವೆಂಪು ಬರೆದ ಅರಿಕೆ ಆ ಇಡೀ ಕಾದಂಬರಿ ಹೇಗಿರಬಹುದು ಅನ್ನುವುದರ ಕಲ್ಪನೆ ಕೊಡುವಂತಿದೆ. 'ಕಾದಂಬರಿಯೆಂದರೆ ಕರತಲ ರಂಗಭೂಮಿ; ಅಂಗೈ ಮೇಲಣ ನಾಟಕಶಾಲೆ' ಎಂದು ಶುರುವಾಗುವ ಈ ಒಂದೂವರೆ ಪುಟದ ಮಾತುಗಳನ್ನು ಓದುತ್ತಿದ್ದಂತೆ ಥಟ್ಟನೆ ಹಲವು ಚಿತ್ರಗಳು ಕಣ್ಣಮುಂದೆ ನಿಲ್ಲುತ್ತವೆ. ರಸಾಸ್ವಾದನೆಯ ಬಗ್ಗೆ ಹೇಳುತ್ತ, ಈ ಕೃತಿಯ ಓದಿಗೆ ಅನುವಾಗುವುದಕ್ಕೆ ಬೇಕಾದ ತಯಾರಿಯತ್ತ ಗಮನ ಸೆಳೆಯುವಂತೆ ಕುವೆಂಪು ಈ ಮಾತುಗಳನ್ನು ಹೇಳುತ್ತಾರೆ: 'ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ... ಹೊಸ ಊರಿಗೆ ಹೋಗುವವರು ಅಲ್ಲಿಯ ಜನ ಮತ್ತು ಜೀವನದ ವಿಚಾರವಾಗಿ ತಟಕ್ಕನೆ ಯಾವ ನಿರ್ಣಯಗಳನ್ನೂ ಮಾಡಿಕೊಳ್ಳದೇ, ಸ್ವಲ್ಪಕಾಲ ತಾಳ್ಮೆಯಿಂದಿದ್ದು, ಕ್ರಮೇಣ ಬಳಕೆಯಿಂದ ಜನರನ್ನೂ, ಜೀವನವನ್ನೂ ಪರಿಚಯ ಮಾಡಿಕೊಳ್ಳುವಂತೆ ಈ ಕಾದಂಬರಿಯ ಅರಣ್ಯಜಗತ್ತನ್ನು ಪ್ರವೇಶಿಸುವ ವಾಚಕರು ವರ್ತಿಸಬೇಕಾಗುತ್ತದೆ. ಎಂದರೆ ಮೊದಲನೇ ಸಾರಿ ಓದಿದೊಡನೆ ಎಲ್ಲವನ್ನೂ ಪೂರೈಸಿದೆವು ಎಂದುಕೊಳ್ಳುವವರು, ಮೋಟಾರಿನಲ್ಲಿ ಕುಳಿತು ಒಂದೂರಿನ ಪೂರ್ವದ್ವಾರದಿಂದ ಒಳನುಗ್ಗಿ, ಅದರ ಬೀದಿಗಳನ್ನು ಸರ್ರನೇ ಸಂಚರಿಸಿ, ಪಶ್ಚಿಮ ದ್ವಾರದಿಂದ ಹೊರಹೊರಟು ಆ ಊರಿನ ಪೂರ್ಣ ಪರಿಚಯ ಮಾಡಿಕೊಂಡಿದ್ದೇವೆ ಎನ್ನುವವರಂತೆ ಹಾಸ್ಯಾಸ್ಪದರಾಗುತ್ತಾರೆ.'

ಮೊದಲ ನುಡಿಗಳು, ಕೆಲವೇ ಸಾಲುಗಳಲ್ಲಿ, ಲೇಖಕನ ವ್ಯಕ್ತಿತ್ವದ ಒಂದು ಅಂಶವನ್ನು ಹೊಳೆಯಿಸುತ್ತವೆ ಎಂದು ನನ್ನ ಭಾವನೆ. ಮಾಸ್ತಿಯವರ ಮುನ್ನುಡಿಗಳನ್ನು ಗಮನಿಸಿದರೆ, ಅವರ ನಿರ್ಭಾವ, ಸಮಚಿತ್ತ ವ್ಯಕ್ತಿತ್ವದ ಒಂದು ಎಳೆಯ ದರ್ಶನವಾಗುತ್ತದೆ. ಓದುಗರ ಜೊತೆ ಅವರು ಕೈಗೊಳ್ಳುವ ಸಂವಾದದ ರೀತಿಯ ಪರಿಚಯವಾಗುತ್ತದೆ. ಬೇಂದ್ರೆಯವರ ಪುಸ್ತಕಗಳಲ್ಲಿ, ಅವರು ಓದುಗರ ಸಹೃದಯತೆಯ ಬಗ್ಗೆ ಕೊಟ್ಟ ಮಹತ್ವದ ಅರಿವಾಗುತ್ತದೆ.

ಶಂಕರ ಮೊಕಾಶಿಯವರ ಪ್ರತಿಯೊಂದೂ ಪುಸ್ತಕದ 'ಲೇಖಕರ ನುಡಿ'ಗಳು ಅತ್ಯಂತ ವಿಶಿಷ್ಟವಾಗಿವೆ. 'ಗಂಗವ್ವ ಗಂಗಾಮಾಯಿ'ಯಲ್ಲಿ, 'ಕನ್ನಡದಲ್ಲಿ ಮೊದಲು ಪರಂಪರೆ ನಿರ್ಮಾಣವಾಗಲಿ, ಆಮೇಲೆ ಅದನ್ನು ಮುರಿಯುವ ಸೊಗಸೇ ಬೇರೆ' ಎಂದು ಬರೆದ ಅವರು, 'ನಟನಾರಾಯಣ' ಕಾದಂಬರಿಯ ಮೊದಲ ಮಾತುಗಳನ್ನು 'ಉಪೋದ್ಘಾತ' ಎಂದು ಕರೆದು, 'ಅಗತ್ಯವಿಲ್ಲ. ಗ್ರಂಥವೇ ಅದರ ಉಪೋದ್ಘಾತ' ಅನ್ನುತ್ತಾರೆ. ಮುಂದೆ ಅಂಥ ಪಾಶ್ಚಾತ್ಯ ಪ್ರೇಮವನ್ನು ಉದಾಹರಣೆಗಳ ಸಹಿತ ಖಂಡಿಸುತ್ತಾರೆ. ಮೊಕಾಶಿಯವರ ಹಾಗೆ ನೇರವಾಗಿ, ದಿಟ್ಟವಾಗಿ, ತತ್‌ಕ್ಷಣದ ಸನ್ನಿವೇಶಕ್ಕೆ ಪ್ರತಿಕ್ರಿಯೆಯೆಂಬಂತೆ ಬರೆದ ಮುನ್ನುಡಿಗಳು ಬಹಳ ಕಡಿಮೆ.

ಹೀಗೆ ಇಂಥ ನೂರಾರು ಆಸಕ್ತಿಕರ ಉದಾಹರಣೆಗಳು ಕನ್ನಡದಲ್ಲಿ ದೊರೆಯುತ್ತವೆ. ಮೊದಲ ಮಾತುಗಳನ್ನು ಬರೆಯುವುದರ ಮೂಲಕ ಹೇಗೋ, ಹಾಗೆಯೇ ಬರೆಯದೇ ಇರುವುದರ ಮೂಲಕವೂ ಲೇಖಕ ಏನನ್ನೋ ಹೇಳಲು ಬಯಸುತ್ತಿರುತ್ತಾನೆ.


**Sugal Tourism Development (P) Ltd.**

**13-16, Saritha Complex, K.G. Road,**
**Next to Majestic Theatre,**
**Bangalore - 560 009.**
**PH:2873451, 2878045**

*14/01, 02, Karnic Road,*
*Shankarapuram,*
*Near National College,* **Bangalore**
*Ph:6610126,6613115*

*email:Sugalblr@Satyam.net.in*

**FOR ALL YOUR**

INTERNATIONAL/ DOMESTIC AIR TICKET INTERNATIONAL PACKAGE

**PH:2878045,2873451**

AUTHORISED RAILWAY AGENTS
FOR ALL YOUR TRAIN TICKETS PH:2265120,2265121

**Publishers of:**


**TRAIN TIMES**
A QUARTERLY PUBLICATION ON TRAINS IN SOUTHERN RAILWAY
Rs.20/- PER COPY

**SUGAL TIME TABLES**
A MONTHLY PUBLICATION ON DOMESTIC AIR SCHEDULES,
Rs.30/- PER COPY
ANNUAL SUBSCRIPTION Rs.300/-

ಶತಮಾನದ ಮೆಲುಕು - 15

## ಕೃಷ್ಣ ಕೊಲ್ಹಾರ ಕುಲಕರ್ಣಿ

# ಜ್ಞಾನಾರ್ಜನೆ



ಬಡಿಗೇರ್

ಕಾಲೇಜಿನಿಂದ ಹೊರಬಿದ್ದು, ಪ್ರಾಧ್ಯಾಪಕ ಅನಂತ ದೇಶಪಾಂಡೆ, ದಾದರದ ಸಮುದ್ರ ದಂಡೆಗುಂಟ ಬರುವಾಗ ಸಂಧ್ಯಾಕಾಲದ ಸಂಕ್ರಮಣದಲ್ಲಿ ಅರುಣ ಕಿರಣಗಳಿಂದ ಸಾಗರರಾಜ ಹೊನ್ನ ಬಣ್ಣಕ್ಕಿಳಿದಿದ್ದ. ತೆರೆಗಳ ಅಲೆದಾಟವನ್ನು ನೋಡುವಾಗ ಪ್ರಾಧ್ಯಾಪಕರ ಮನಸ್ಸು ಇನ್ನಷ್ಟು ಉಲ್ಲಸಿತವಾಗಿತ್ತು. ಹಾಗೆಯೇ ಕ್ಷಣ ಹೊತ್ತು ಅಲ್ಲಿ ನಿಂತು, ಅಪಾರ ಪಯೋನಿಧಿಯನ್ನು ನೋಡಿ, ಕಾಲೇಜು ಜೀವನದ ವಿಚಿತ್ರ ಸಂತಸವನ್ನನುಭವಿಸುತ್ತ ಮನೆಯ ಕಡೆಗೆ ಹೊರಳಿದಾಗ, ದಾರಿಯಲ್ಲಿನ

ಮಲ್ಲಿಗೆಯ ಮಾದಕ ವಾಸನೆ ಅನಂತನನ್ನು ಕರೆದು ನಿಲ್ಲಿಸಿತು. ಇಪ್ಪತ್ತೈದು ಪೈಸೆ ಕೊಟ್ಟು ಮಾಲೆಯೊಂದನ್ನು ಕಟ್ಟಿಸಿ, ಅಲ್ಲಿಯೇ ಒಂದು ಸಲ ತೃಪ್ತಿ ತೀರುವಷ್ಟು ಆಘ್ರಾಣಿಸಿ, ಕೋಟಿನ ಜೇಬಿಗೆ ಸೇರಿಸುತ್ತ, ಸುಶೀಲೆಯ ತುರುಬಿನಲ್ಲಿ ಅದರ ವಾಸ್ತವ್ಯವನ್ನು ಕಲ್ಪಿಸುತ್ತ, ಮುಂದೆ ಹೆಜ್ಜೆ ಹಾಕಿದ. ಅದೊಂದು ಹೊಸ ವಿಷಯವೇನಲ್ಲ. ಆದರೂ ಸುಶೀಲೆಯನ್ನು ನೆನೆಸಿದಷ್ಟೂ ಮನಸ್ಸಿಗೆ ಆಮೋದ. ಅವಳನ್ನು ಮನದಾಳದಲ್ಲಿ ಚಿತ್ರಿಸಿಕೊಂಡಷ್ಟೂ ಹೆಚ್ಚಿನ ಸಂತೋಷ ಯಾವಾಗಲೂ. ಅಂತೆಯೇ ನಾಲ್ಕು ಹೆಜ್ಜೆ ಮುಂದೆ ಬಂದು ಸೇಬನ್ನು ಕೊಂಡಾಗಲೂ, ಗಲ್ಲಕ್ಕೆ ಒತ್ತಿಕೊಳ್ಳುತ್ತ, ಸುಶೀಲೆಯ ಚಿತ್ರವೇ ಕಣ್ಣ ಮುಂದೆ.

ಹಿಂದೂ ಕಾಲನಿಯಲ್ಲಿಯ ಮನೆ ಸಮೀಪಿಸಿದಾಗ ಮುಗಿಲ ಮಾರಿಗೆ ರಾಗರತಿಯ ನಂಜೇರಿ, ಸಂಜೆಯಾಗಿ, ಸುಶೀಲೆಯ ಬಿಸಿಯುಸಿರು ತನ್ನ ಎದೆಯಾಳದಲ್ಲಿ ಇಳಿದಂತೆ ಭಾಸ. ಹೌದು, ತುಂಬು ಬಸಿರಿಗೆ ಒಂದೆರಡೇ ತಿಂಗಳು ಕಡಿಮೆ. ಸುಶೀಲೆ ರತಿಯನ್ನು ಮೀರಿಸಿದ್ದಳು. ಅವಳ ಕುರಿತು ನೂರೆಂಟು ಯೋಚನೆಗಳು. ಆ ಯೋಚನೆಗಳಗುಂಟ ತನ್ನ ಸಾರ್ಥಕ್ಯಜೀವನ, ತಾನು ಬಯಸಿದ್ದನ್ನು ಪಡೆದದ್ದು, ಅದನ್ನೆಲ್ಲ ನೆನೆಸಿ ಎಷ್ಟೋ ಸಲ ತೃಪ್ತಿಯನ್ನನುಭವಿಸಿದರೆ, ಮತ್ತೊಮ್ಮೆ ತಾಯಿಯಿಲ್ಲದ ಸುಶೀಲೆ ಬಸಿರು-ಬಯಕೆಯಲ್ಲಿ ಪಟ್ಟ ಬವಣೆಯನ್ನು ನೆನೆಸಿ, ನನ್ನ ತಾಯಿಯಾದರೂ ಇದ್ದಿರಬಾರದೇ ಎಂದು ವ್ಯಥೆ ಪಟ್ಟಿದ್ದಾನೆ. ಅವಳಿಗೆ ಯಾವ ಕೊರತೆಯೂ ಅನಿಸದಂತೆ ಅವಳ ಬಯಕೆಗಳನ್ನು ತೀರಿಸಿದ ಸಮಾಧಾನವೂ ಅವನಿಗಿದೆ.

ಅನಂತನಿಗೆ ತಕ್ಕ ಹೆಂಡತಿ ಸುಶೀಲಾ. ಗಂಡನನ್ನು ಸಂತೋಷಪಡಿಸುವಲ್ಲಿ ಅವಳು ಕೂಡ ಹಿಂದೆ ಬಿದ್ದಿಲ್ಲ. ಅವನು ಬಂದ ದಾರಿಯ ಅರಿವು ಅವಳಿಗಿದೆ. ಅಂತೆಯೇ ಅವರ ಸಂಸಾರ ತಿಳಿಯಾಗಿದೆ. ಇಂಪಾದ ರಾಗದೊಂದಿಗೆ ಜುಳು ಜುಳು ಹರಿಯುತ್ತಿದೆ. ತಿಳಿಯ ಕೆಳಗಿನ ಬಗ್ಗಡವಾಗಲೀ, ರಾಗದ ಹಿಂದಿನ ಗೊಗ್ಗರುದನಿಯಾಗಲೀ ಅಲ್ಲಿ ಪ್ರವೇಶಿಸಿಲ್ಲ.

ಕಾಲಿಂಗ್ ಬೆಲ್‌ನ ದನಿ ಕೇಳಿ ಅವರೇ ಬಂದರೆಂದು ಎದ್ದುಬಂದು, ಬಾಗಿಲು ತೆರೆದ ಸುಶೀಲೆಯನ್ನು ಗಟ್ಟಿಯಾಗಿ ಅಪ್ಪಿಕೊಳ್ಳುತ್ತ, ಹಿಂಗಾಲಿನಿಂದ ಕದ ಮುಚ್ಚಿ, "ಹಲ್ಲೋ ಹೌಆರ್‌ಯು?" ಎಂದು ಮುತ್ತು ಕೊಟ್ಟು ಒಳಬಂದಾಗ ಸುಶೀಲೆ ಮುಗುಳು ನಗೆ ಬೀರಿ ಒಳಗೆ ಹೋದಳು. ಕ್ಷಣ ಹೊತ್ತು ಆರಾಮ ಖುರ್ಚಿಯಲ್ಲಿ ಒರಗಿ, ಬಟ್ಟೆ ಬದಲಿಸುವಷ್ಟರಲ್ಲಿ ಚಹ ತಂದಳು. ಚಹದ ಕಪ್ಪನ್ನು ಅವಳ ಕೈಯಿಂದ ತೆಗೆದುಕೊಂಡು. ಟೇಬಲ್ ಮೇಲಿಟ್ಟು, ಅವಳನ್ನು ಬದಿಗೆ ಕರೆದು ತೊಡೆಯ ಮೇಲೆ ಕೂರಿಸಿಕೊಂಡು, ಅದೇ ತಂದ ಮಲ್ಲಿಗೆಯ ಮಾಲೆಯನ್ನು ಮುಡಿಸಿ, ಮತ್ತೊಮ್ಮೆ ತೃಪ್ತಿಯಾಗುವಷ್ಟು ಅದರ ವಾಸನೆಯನ್ನು ಆಘ್ರಾಣಿಸಿ ಚಹ ಗುಟುಕರಿಸಿದ. ಅನಂತನ ಮುಖದ ಮೇಲೆ ಪರಿಪೂರ್ಣ ಸಂತೃಪ್ತಿ ತುಂಬಿ ತುಳುಕಾಡುತ್ತಿತ್ತು. ಅದನ್ನು ನೋಡುತ್ತ ಸುಶೀಲಾ, ಹಾಗೇ ಕುಳಿತುಕೊಂಡಿದ್ದಳು. ತುಟಿ ಬಿಚ್ಚದಿದ್ದ ಹೆಂಡತಿಯನ್ನು ಕಂಡು ಅನಂತನಿಗೆ ಮರುಕ್ಷಣವೇ ಅಸಮಾಧಾನ.

"ಯಾಕ-ಆರಾಮ ಇಲ್ಲೇನು?"

"ಆರಾಮು...ಇದ್ದೀನಿ..." ತುಟಿ ಸವರಿದಳು. ಮತ್ತೆ ಕ್ಷಣಹೊತ್ತು ಮೌನ. ಆಮೇಲೆ ಯಾಂತ್ರಿಕವಾಗಿ ಎದ್ದು, ಬದಿಯ ಟೇಬಲ್ ಮೇಲಿದ್ದ ಕಾಗದ ಒಂದನ್ನು ತಂದು ಗಂಡನ ಕೈಗಿತ್ತಳು.

'ಯುವರ್ ಫಾದರ್ ಸೀರಿಯಸ್' ಎಂದಿಷ್ಟೇ ಇತ್ತು ಅದರಲ್ಲಿ. ಮನೆಯ ವಿಳಾಸದೊಡನೆ

ಊರಿನಿಂದ ಬಂದ ಎಕ್ಸ್‌ಪ್ರೆಸ್ ತಂತಿ. ಅದನ್ನು ಓದಿ ಅನಂತನ ಶರೀರದಲ್ಲೆಲ್ಲ ಒಂದು ಕ್ಷಣ ರಕ್ತ ಹೆಪ್ಪುಗಟ್ಟಿರಬೇಕು. ಕದಲದೇ ಹಾಗೆಯೇ ಒರಗಿದ್ದನು. ಮರುಕ್ಷಣ, ಎದುರಿಗಿದ್ದ ಹೆಂಡತಿಯತ್ತ ಹೊರಳಿ,

''ಯಾವಾಗ ಬಂದಿತು?'' ಎಂದು ಕೇಳಿದ.

''ಅದು... ನೀವು ಕಾಲೇಜಕ್ಕ ಹೋದರೆಲಾ ನಿಮ್ಮ ಬೆನ್ನ ಹಿಂದ ಬಂತು...''

ಪ್ರತಿಯಾಗಿ ಅನಂತ ಏನೂ ಹೇಳಲಿಲ್ಲ. ಗಡಿಯಾರ ನೋಡಿದ. ಏಳೂವರೆಯಾಗಿತ್ತು.

''ಸರಿ, ರಾತ್ರಿಯ ಮೇಲಿಗೆ ನಾನು ಊರಿಗೆ ಹೋಗ್ತೀನಿ'' ಎಂದು ಹೇಳಿ, ಸಹೋದ್ಯೋಗಿ ವಿಶ್ವನಾಥನನ್ನು ಕಾಣಲು ಮಾತುಂಗಾಕ್ಕೆ ಹೋದ. ಅವನನ್ನು ಭೇಟಿಯಾಗಿ ತಂತಿಯ ವಿಷಯವನ್ನು ತಿಳಿಸುತ್ತ, ರಜೆಗಾಗಿ ಮರುದಿನ ಕಾಲೇಜಿನಲ್ಲಿ ಕೊಡಲು ಚೀಟಿಯನ್ನು ಬರೆದುಕೊಟ್ಟ. ಹಾಗೆಯೇ ತುಸು ಹಣ ಹೆಚ್ಚಿಗಿರಲೆಂದು ವಿಶ್ವನಾಥನಿಂದ ಕೈಗಡ ಕೇಳಿದ. ಆದರೆ ಎರಡು ದಿನಗಳ ಹಿಂದೆಯೇ ವಿಶ್ವನಾಥನು ತನ್ನ ಭಾವ ಮೈದುನನ ಶಾಲೆಯ ಫೀಗಾಗಿ ಇದ್ದಷ್ಟು ಹಣವನ್ನು ಆತನಿಗೆ ಕಳಿಸಿಬಿಟ್ಟಿದ್ದನು. ಅನಂತ ಬರಿಕೈಯಿಂದ ಮನೆಗೆ ಹಿಂತಿರುಗಬೇಕಾಯಿತು.

ಅನಂತನ ವರ್ತನೆ ಸುಶೀಲಾಗೆ ಅರ್ಥವಾಗಲಿಲ್ಲ. ತಂತಿ ನೋಡಿದಾಕ್ಷಣ ಅವನು ಎದ್ದು ಹೊರಗೆ ಹೋಗಿಬಿಟ್ಟಿದ್ದೂ, ಹಾಗೆಯೇ ತಿರುಗಿ ಬಂದುದೂ, ಬಂದವನು ಯಾವ ಮಾತನ್ನೂ ಆಡದೆ ಆರಾಮ ಖುರ್ಚಿಯಲ್ಲಿ ತಲೆಗೆ ಕೈಹಚ್ಚಿ ಕುಳಿತುಕೊಂಡುದು ವಿಚಿತ್ರವೆನಿಸಿತ್ತು. ತನ್ನ ಮದುವೆಯಾದಂದಿನಿಂದ ಮಾವನವರ ಸುದ್ದಿಯೇ ಇರಲಿಲ್ಲ. ಅನಿರೀಕ್ಷಿತವಾಗಿ ಇಂದು ಅವರಿಂದ ತಂತಿ ಬಂದಾಗ ಗಂಡ ಇಷ್ಟು ಚಡಪಡಿಸುತ್ತಿರುವುದು ಅವಳನ್ನು ಗೊಂದಲಕ್ಕೀಡುಮಾಡಿತ್ತು. ಅದಕ್ಕಿಂತ ಹೆಚ್ಚು ಆಶ್ಚರ್ಯ, ಅನಂತ, ಊರಿಗೆ ಹೋಗುತ್ತೇನೆ ಎಂದು ಹೇಳಿದ್ದು. ಅದು ನೆನಪಾದಾಗ ಮಾವನವರ ಮೇಲೆ ಕ್ಷಣ ಹೊತ್ತು ಸಿಟ್ಟು ಬರುತ್ತಿದೆ. ಮರುಕ್ಷಣ ಕನಿಕರ... ಯಾವುದನ್ನೂ ಬಾಯಿ ಬಿಚ್ಚಿ ಹೇಳುವಂತಿಲ್ಲ. ತುಸು ಸಮಯದ ನಂತರ 'ಅಡುಗೆ ಆಗಿದೆ' ಎಂದು ಅನಂತನನ್ನು ಕರೆದಳು.

ಅನಂತ ಮೌನವಾಗಿ ಊಟಕ್ಕೆ ಬಂದು ಕೂತ. ಊಟ ಮಾತಿಲ್ಲದೆಯೇ ಮುಗಿಯಿತು. ಗಂಡನ ವಿಷಣ್ಣ ಭಾವವನ್ನು ಅರಿತ ಸುಶೀಲೆ,

''ಅಲ್ಲ... ಹೀಂಗ್ಯಾಕ ಮಾಡ್ತೀರಿ... ಹೋಗೋದು... ಇತ್ತಂದರ ಹೋಗಿ ಬರ್ರಿಲಾ... ಅದಕ್ಯಾಕಿಷ್ಟು ವಿಚಾರ...'' ಎಂದಳು.



ಅಂಚೆ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿರುವ ಕೃಷ್ಣ ಕೊಲ್ಹಾರ ಕುಲಕರ್ಣಿ ನಾಟಕ, ಸಣ್ಣಕತೆ, ಐತಿಹಾಸಿಕ ಸಂಶೋಧನೆ ಎಲ್ಲದರಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡ ಸಜ್ಜನ ಸಾಹಿತಿ. ಹುಟ್ಟಿದೂರು ಕೊಲ್ಹಾರಕ್ಕೆ ಹತ್ತಿರವಾದ ಚಾರಿತ್ರಿಕ ಮಹತ್ವದ ಸ್ಥಳ ಬಿಜಾಪುರದ ರೋಚಕ ಇತಿಹಾಸವನ್ನು ನಿಕಟವಾಗಿ ಬಲ್ಲ ಕುಲಕರ್ಣಿಯವರು 70ರ ದಶಕದಲ್ಲಿ ಬರೆದ ಮುಂಬೈ ಪರಿಸರದ ಕಥೆ ಇದು. 'ಹೊಟ್ಟೆ ಬಟ್ಟೆ ಕಟ್ಟಿ' ತಂದೆ-ತಾಯಿ ಮಕ್ಕಳನ್ನು ಓದಿಸುವುದು, ಓದಿ 'ಅಭಿವೃದ್ಧಿ' ಹೊಂದಿದ ಮಕ್ಕಳು ತಮ್ಮ 'ಕೈಲಾದ ಮಟ್ಟಿಗೆ' ಹೆತ್ತವರ ಋಣ ತೀರಿಸಲು ಹೆಣಗುವ ಬಹಳ ಬಳಸಿಬಿಟ್ಟ ಜೀವನ ಸಂದರ್ಭವೊಂದು ಇಲ್ಲಿ ಕಥೆಯಾಗಿದೆ. ಆದರ ಹೆಚ್ಚು ಗಮನಕ್ಕೆ ಬಾರದೇ ಹೋದ ಮಗ್ಗಲುಗಳನ್ನು ಪರಿಗಣಿಸಿ, ಕತೆ ಹೆಣೆದಿರುವುದು ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಸೂಕ್ಷ್ಮ ನಿರೀಕ್ಷಣೆಗೆ ಸಾಕ್ಷಿ.

ನಮಗೆ ಈ ಕಥೆಯನ್ನು ಕೊಟ್ಟ ಶ್ರೀನಿವಾಸ ಹಾವನೂರರಿಗೆ ಕೃತಜ್ಞತೆ.

ಅದಕ್ಕೆ ಪ್ರತಿಯಾಗಿ ಅನಂತ ಏನೂ ಹೇಳದೆಯೇ ಕೈತೊಳೆದುಕೊಂಡು ಹೊರಗೆ ಬಂದು ಕುಳಿತ. ಸುಶೀಲಾ ಆತನ ಹಿಂದಿನಿಂದ ಬಂದು ಅವನ ಕೈಯಲ್ಲಿ ಮೂವತ್ತೈದು ರೂಪಾಯಿಗಳನ್ನಿಡುತ್ತ ಹೇಳಿದಳು, ''ಇದಷ್ಟು ಹೆಚ್ಚಿಗೆ... ನಿಮ್ಮ ಹತ್ತಿರ ಇರಲಿ, ಅಲ್ಲಿಯ ಪರಿಸ್ಥಿತಿ ಹ್ಯಾಂಗದನೋ ಏನೋ... ಸಾಧ್ಯ ಇತ್ತಂದರ ಅವರನ್ನು ಇಲ್ಲಿಗೇ ಕರೆದುಕೊಂಡು ಬಂದು




ಬಿಡಿರಿ.'' ಸೂಟ್‌ಕೇಸಿಗೆ ಅವನ ಬಟ್ಟೆ ಬರೆಗಳನ್ನು ತುಂಬುತ್ತ, ''ಸುದ್ದಿ ಇವಕ್ಕ ತಮ್ಮ ಸುಖಾನೂ ಗೊತ್ತಿಲ್ಲ ಮಂದೀ ಮಕ್ಕಳ ವಿಚಾರಾನೂ ಇಲ್ಲ... ಸುಮ್ನ... ಇಲ್ಲಿಗೆ ಬಂದಿದ್ರ ಆಗ್ತಿದ್ದಿಲ್ಲ... ದಿಕ್ಕಿಲ್ಲದವರ ಹಾಂಗ ಅಲ್ಲಿ ಬೀಳೂಂತ ಯಾರು ಹೇಳಿದ್ದರು...?'' ತನಷ್ಟಕ್ಕೆ ಗೊಣಗಿಕೊಳ್ಳುತ್ತಿದ್ದ ಅವಳ ಮಾತುಗಳು ಅನಂತನಿಗೆ ಕೇಳಿಸುತ್ತಿದ್ದರೂ, ಪ್ರತಿಯಾಗಿ ಏನೂ ಮಾತನಾಡಲಿಲ್ಲ. ಬಟ್ಟೆ ಬದಲಿಸಿ, ಸೂಟ್‌ಕೇಸ್ ತೆಗೆದುಕೊಂಡು, ಮನೆಯ ಹಾಗೂ ಅವಳ ದೇಹ ಪ್ರಕೃತಿ ಬಗ್ಗೆ ಎಚ್ಚರಿಕೆಯಿಂದಿರಲು ಹೇಳಿ ಮನೆ ಬಿಟ್ಟು ಹೊರಟಾಗ ರಾತ್ರಿ ಒಂಬತ್ತು ಹದಿನೈದಾಗಿತ್ತು.

ವಿಕ್ಟೋರಿಯಾ ಟರ್ಮಿನಸ್ ಮುಟ್ಟಿ, ಟಿಕೇಟು ಕೊಂಡು, ಪ್ಲಾಟ್‌ಫಾರ್ಮ್ ಮೇಲೆ ಬಂದಾಗ ಗಾಡಿ ಬಿಡಲು ಹದಿನೈದು ನಿಮಿಷಗಳು ಉಳಿದಿದ್ದವು. ಸಂಪ್ರದಾಯದಂತೆ ಒಬ್ಬ ಹಮಾಲನನ್ನು ಹಿಡಿದು, ಎರಡು ರೂಪಾಯಿ ಕೊಟ್ಟು, ಕೂರಲು ಪ್ರಶಸ್ತ ಸ್ಥಳ ದೊರಕಿಸಿ, ಬೆವರಿದ ಮುಖವನ್ನು ಕೈವಸ್ತ್ರದಿಂದ ಒರೆಸಿ ಕೊಳ್ಳುತ್ತ, ತನ್ನ ಸ್ಥಳದಲ್ಲಿ ಕುಳಿತುಕೊಳ್ಳುವಾಗ ಗಾರ್ಡನ್ ವಿಸಲ್ ಕೇಳಿಸಿತು ಮರುಕ್ಷಣ ಗಾಡಿ ಮುಂಬಯಿ ಬಿಟ್ಟು ಹೊರಟಿತು.

ಸಾಮಾನ್ಯವಾಗಿ ಇರಬೇಕಾದಷ್ಟು ಗದ್ದಲ ಇಂದು ಮದ್ರಾಸ್ ಮೇಲ್‌ನಲ್ಲಿ ಇದ್ದಿರಲಿಲ್ಲ. ಕೈಕಾಲುಗಳು ಸರಿದಾಡಲು ಆಸ್ಪದವಿದ್ದಿತು. ಹೀಗಿರುವುದೇ ಅಪರೂಪ. ಅನಂತ ನೀಳವಾಗಿ ಕಾಲು ಚಾಚಿ, ಬೆನ್ನು ಹಿಂದಕ್ಕೆ ಆತುಗೊಂಡು, ಕೈಯಲ್ಲಿದ್ದ ವಾರಪತ್ರಿಕೆ ಓದಲು ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ. ತಂತಿ ನೋಡಿದಾಗಿನಿಂದ ತಂದೆಯ ಚಿತ್ರವೇ ಕಣ್ಣೆದುರಿಗೆ ನಿಂತಿತ್ತು. ಇಷ್ಟರವರೆಗೂ ಅಸ್ಪಷ್ಟವಾಗಿ ಕಾಣುತ್ತಿದ್ದ ಚಿತ್ರ ಈಗ ಗಾಡಿಯಲ್ಲಿ ಕುಳಿತಾಗಿನಿಂದ ಸ್ಪಷ್ಟವಾಗಿ ಕಾಣುತ್ತಿದೆ. ಆದರೆ ಅದನ್ನು ನೋಡುವ ಧೈರ್ಯ ಅವನಲ್ಲಿಲ್ಲ. ಅದನ್ನು ಮರೆಯಲು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದವು. ಹೀಗೆಯೇ ಇನ್ನೂ ಎಷ್ಟು ಹೊತ್ತು ಕಳೆಯುವುದು ? ನಾಳೆ ಸಾಯಂಕಾಲದವರೆಗೂ ಎಂದು ನೆನಪಾದಾಗ ಅನಂತನಿಗೆ ಕ್ಷಣ ಹೊತ್ತು ಏನೂ ತೋಚಲಿಲ್ಲ. ಕೈಯಲ್ಲಿಯ ಪತ್ರಿಕೆಯನ್ನು ಬದಿಗೆ ಇಟ್ಟು ಸ್ತಬ್ಧನಾಗಿ ಕುಳಿತ. ಈಗಿನ್ನೂ ರಾತ್ರಿ ಹನ್ನೆರಡು ಪೂರ್ತಿಯಾಗಿಲ್ಲ. ಗಾಡಿ ಲೋಣಾವಳ ಸಮೀಪಿಸುತ್ತಿದೆ... ಕಣ್ಣು ಮುಚ್ಚಿ ಸ್ತಬ್ಧನಾಗಿ ಕುಳಿತಿರುವೆನೆನ್ನುವಾಗಲೇ ಹಿಂದಿನಿಂದ ವಿಚಾರಗಳ ತೆರೆಗಳೇ ಏರಿ ಬರುತ್ತಿವೆ. ಮತ್ತೆ ತಂತಿಯ ನೆನಪು, ಅದರ ಹಿಂದೆಯೇ ತಂದೆಯವರ ನೆನಪು. ಅದರೊಂದಿಗೆ ಇನ್ನೇನೇನೋ ನೆನಪಾಗುತ್ತಿರುವಂತೆ ಜೇಬಿನಲ್ಲಿದ್ದ ತಂತಿಯನ್ನು ಇನ್ನೊಮ್ಮೆ ತೆಗೆದು ಓದಿದ.

'ಯುವರ್ ಫಾದರ್ ಸೀರಿಯಸ್' ಎಂದಿಷ್ಟೇ ಇದೆ. ವಾಸ್ತವಿಕವಾಗಿ ಇರಬೇಕಾದ 'ಸ್ಟಾರ್ಟ್ ಇಮ್ಮೀಡಿಯಟ್‌ಲಿ' ಎಂದಾಗಲೀ 'ಸೀ ಫೇಸ್' ಅಥವಾ ಇನ್ನೇನೂ ಇಲ್ಲ. ಬಹುಶಃ ಬೇರೊಂದು ಕೆಲಸಕ್ಕಾಗಿ ತಂದೆಯವರು ಹೇಳಿ ಬರೆಸಿದ್ದಾಗಿರ ಬೇಕು. ಇಲ್ಲವೇ ಮತ್ತೇತಕ್ಕಾದರೂ ನನ್ನ ಅವಶ್ಯ ಕತೆ ಇದ್ದಿರಬೇಕೆ? ಎಂದೂ ಒಂದು ವಿಚಾರ.

ತಂದೆಯವರು ಆಸ್ವಸ್ಥರಿದ್ದು ಎಷ್ಟು ದಿನ ಗಳಾಗಿರಬೇಕು. ಈಗ ಅವರು ಯಾರ ಮನೆಯಲ್ಲಿರಬೇಕು? ಅವರ ಶುಶ್ರೂಷೆಯನ್ನು ಈಗ ಯಾರು ಮಾಡುತ್ತಿರಬಹುದು? ಒಂದರ



ಹಿಂದೊಂದರಂತೆ ವಿಚಾರಗಳ ಮಾಲೆಯೇ ಸಿದ್ಧವಾಗುತ್ತಿದೆ. ಆ ಮಾಲೆಯಲ್ಲಿಯೇ ನಾಲ್ಕು ವರುಷಗಳ ಹಿಂದೆ ತೀರಿಕೊಂಡ ಅನಂತನ ತಾಯಿಯ ಚಿತ್ರವೂ ಕಣ್ಣೆದುರಿಗೆ ಬಂದು ನಿಲ್ಲುತ್ತಿದೆ. ಆಗ ಇನ್ನಷ್ಟು ಭಯವೆನಿಸುತ್ತಿದೆ. ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡನು. ಒಂದೆರಡು ಗಂಟೆ ಹಾಗೆಯೇ ನಿದ್ರೆ ಹತ್ತಿದರೆ... ಆದರೆ ನಿದ್ರೆ ಹತ್ತಬೇಕಲ್ಲ. ಕಣ್ಣು ಮುಚ್ಚಿದಷ್ಟು ತಾಯಿ, ತಂದೆ, ಮನೆಯ ಚಿತ್ರವೇ ಇಡಿಯಾಗಿ ನಿಲ್ಲುತ್ತಿದೆ. ಕಣ್ಣು ತೆರೆದು ಕಿಟಕಿಯ ಹೊರಗಡೆ ತಲೆಹಾಕಿ ಕುಳಿತುಕೊಂಡರೆ ಅಲ್ಲೇನಿದೆ ಕತ್ತಲೆ... ಹಗಲಾಗಿದ್ದರೆ ಏನಾದರೂ ಕಾಣಬಹುದಿತ್ತು. ಗಾಢ ಅಂಧಕಾರ. ಸಹ್ಯಾದ್ರಿಯ ಉನ್ನತ ಬೆಟ್ಟಗಳೂ ಆ ಕತ್ತಲೆಯಲ್ಲಿ ಕರಗಿಹೋಗಿವೆ. ಆ ದಿಸೆಯತ್ತ ನೋಡಿದಾಗ ಇನ್ನಷ್ಟು ಭಯವಾಗಿ, ಹೃದಯ ಕಂಪಿಸಿದಂತೆ ಭಾಸ. ತಿರುಗಿ ಕಿಟಕಿಯ ಒಳಗಡೆ ತಲೆ ತಂದುಕೊಂಡು ಕಣ್ಣು ಮುಚ್ಚಿಕೊಂಡು ಕುಳಿತ. ಆ ಕತ್ತಲೆಗಿಂತ ಕಣ್ಣು ಮುಚ್ಚಿದಾಗ ಕಾಣುವ ಸ್ಪಷ್ಟ ಚಿತ್ರಗಳೇ ಎಷ್ಟೋ ಲೇಸು ಎಂದುಕೊಂಡಿರ ಬಹುದು.

ಸ್ಮೃತಿಪಟಲದ ಮೇಲೆ ಹಾಯ್ದು ಅಸಂಖ್ಯ ಚಿತ್ರಗಳಲ್ಲಿಯ ಒಂದು ಚಿತ್ರ... ಬಹಳ ದಿನಗಳ ಹಿಂದಿನದು. ಆ ವರುಷ ಅನಂತ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಂಡಿದ್ದ. ಅಲ್ಲಿಯವರೆಗೂ ಕಲಿಸುವದು ಅಸಾಧ್ಯವೆಂದಿದ್ದಾಗಲೂ ತಂದೆ-ತಾಯಿಗಳು ಕಷ್ಟಪಟ್ಟು ಕಲಿಸಿದ್ದರು. ಅದಕ್ಕೂ ಮೊದಲು ಅನಂತ ಕೇಳಿ ತಿಳಿದ ವಿಷಯ-ಅನಂತ ಹುಟ್ಟಿದಾಗಿನಿಂದ ತಾಯಿಗೆ ಜಡ್ಡು. ಬಾಣಂತನ ದಲ್ಲಾದ ಹೆಚ್ಚು ಕಡಿಮೆಯಿಂದಲೋ ಅಥವಾ ಆ ಅಶಕ್ತತನದಲ್ಲಿ ಮುಂದೆ ಒಂದರ ಹಿಂದೊಂದು ಎರಡು ಸಲ ಗರ್ಭಪಾತವಾದ್ದರಿಂದಲೋ... ಅಂದಿನಿಂದ ಅನಂತನ ತಾಯಿ ನರಳುತ್ತಿದ್ದಳು. ಕಡು ಬಡತನದಿಂದಾಗಿ ಯೋಗ್ಯ ಔಷಧೋಪ ಚಾರ ಕೊಡಿಸುವ ಸಾಮರ್ಥ್ಯವೂ ಇರಲಿಲ್ಲ. ನರಳುವದು ನಾಲ್ಕು ದಿನ ಚೆನ್ನಾಗಿರುವುದು ಅವರಿಗೆ ರೂಢಿಯಾಗಿಬಿಟ್ಟಿತ್ತು. ವಯಸ್ಸಾದಂತೆ ನರಳುವುದು, ಹೆಚ್ಚಾಗಿ, ಅನಂತ ಮ್ಯಾಟ್ರಿಕ್ಕಿಗೆ ಬರುವಷ್ಟರಲ್ಲಿ ಅವರು ಪೂರ್ತಿ ಹಾಸುಗೆ ಹಿಡಿದಿದ್ದರು. ಜೊತೆಗೆ ಮನೆಯ ಪರಿಸ್ಥಿತಿ ತೀರ ಕೆಟ್ಟಿತ್ತು. ಸುಂಕದ ಕಟ್ಟೆಯಲ್ಲಿ ಗುಮಾಸ್ತರಾಗಿದ್ದ ಅವನ ತಂದೆಯವರ ಅರವತ್ತು ರೂಪಾಯಿ ತಿಂಗಳ ಆದಾಯದಲ್ಲಿ, ತಾಯಿಯ ಕಾಯಿಲೆ ಗಾಗಿಯೇ ಆದಾಯದ ಕಾಲುಭಾಗ ಪ್ರತಿ

ತಿಂಗಳೂ ಖರ್ಚಾಗುತ್ತಿತ್ತು. ಉಳಿದುದರಲ್ಲಿ ಸಂಸಾರ. ಒಂದೇ ಹೊತ್ತು ಊಟ ಮಾಡಿದ ದಿನಗಳೂ ಸಾಕಷ್ಟಿವೆ. ಆ ಸಮಯದಲ್ಲಿಯೇ ಅನಂತ ಮ್ಯಾಟ್ರಿಕ್ ಪರೀಕ್ಷೆ ಪಾಸಾದದ್ದು ಎಲ್ಲರಿಗೂ ಸಮಾಧಾನ ತಂದಿತ್ತು. ತಿಂಗಳೊಪ್ಪತ್ತಿನಲ್ಲಿ ಮಗನಿಗೆ ಒಂದು ನೌಕರಿ ಸಿಕ್ಕರೆ ತಾಯಿ ತಂದೆಗಳಿಗೆ ಸ್ವರ್ಗ ದೊರಕಿದಷ್ಟು ಸಂತೋಷ, ಅನಂತನಿಗಾದರೋ ಮುಂದೆ ಕಲಿಯುವ ಆಶೆ. ಸಂಸಾರದ ಪರಿಸ್ಥಿತಿಯಲ್ಲಿ ಮುಂದೆ ಓದುವುದು ಅಸಾಧ್ಯ. ನೌಕರಿಗಾಗಿ ಅರ್ಜಿ ಹಾಕತೊಡಗಿದ. ಐದಾರು ತಿಂಗಳುಗಳಲ್ಲಿ ರಿಸರ್ವ ಬ್ಯಾಂಕಿನಲ್ಲಿ ಗುಮಾಸ್ತೆ ಕೆಲಸಕ್ಕೆ ಆರ್ಡರೂ ಬಂದಿತು. ಮುಂಬಯಿಗೆ ಬಂದು ಹಾಜರಾದ. ಹುಚ್ಚು ಹಿಡಿದಂತಾಗಿದ್ದ ತಂದೆ ಸಮಾಧಾನದ ಉಸಿರು ಬಿಟ್ಟರು. ಊಟದ ಪ್ರಶ್ನೆಯೊಂದು ಬಗೆಹರಿಯಿತಲ್ಲದೆ, ಇನ್ನಾದರೂ ಯೋಗ್ಯ ಡಾಕ್ಟರರಿಗೆ ತೋರಿಸಿ ಔಷಧೋಪಚಾರ ಮಾಡಿಸಿದರೆ ಹೆಂಡತಿಗೆ ಗುಣವಾಗುವ ಆಶೆ. ಡಾಕ್ಟರರೂ, 'ಈಗಲೂ ಕ್ರಮವಾಗಿ ಎರಡು ವರುಷ ಔಷಧೋಪಚಾರ ನಡೆದರೆ ಗುಣವಾಗುತ್ತದೆ' ಎಂದಿದ್ದರು.


ಮಗನಿಗೆ ನೌಕರಿಯಾದ ಸುದ್ದಿ ಕೇಳಿಯೇ ತಾಯಿಯ ಬೇನೆ ಅರ್ಧ ಗುಣವಾಗಿತ್ತು. ಅವರಿಗೂ ನೂರೆಂಟು ಕನಸುಗಳು... 'ವರುಷದಲ್ಲಿ ತಿರುಗಿ ಏಳುವೆ... ಮಗ... ಸೊಸೆ... ಸುಂದರ ಸಂಸಾರ'. ಜೀವನದುದ್ದಕ್ಕೂ ಅನುಭವಿಸಿದ ಯಾತನೆಗಳನ್ನು ಕ್ಷಣ ಮಾತ್ರ ಆಕೆ ಮರೆತುಬಿಟ್ಟಿದ್ದಳು.

ಮುಂಬಯಿಗೆ ಬಂದ ಅನಂತನ ಮೊದಲ ತಿಂಗಳ ಸಂಬಳ ಅವನ ವ್ಯವಸ್ಥೆಗೆ ಆಯಿತು. ಮರು ತಿಂಗಳಿನಿಂದ ಊರಿಗೆ ಸ್ವಲ್ಪ ಹಣ ಕಳಿಸ ಹತ್ತಿದನು. ಹಾಗೆಯೇ ಕಳಿಸಿದ್ದರೆ ವರುಷಾರು ತಿಂಗಳಲ್ಲಿ, ಹದಗೆಟ್ಟ ಸಂಸಾರ ಒಂದು ರೂಪಕ್ಕೆ ಬರುವಂತಿತ್ತು. ಆದರೆ ಅನಂತನ ವಿಚಾರವೇ ಬೇರೆ: 'ತಂದೆಯವರಿಂದ ಮುಂದೆ ಕಲಿಸುವುದು ಸಾಧ್ಯವಾಗದಿದ್ದರೆ ಅಷ್ಟಕ್ಕೆಯೇ ನಾನೇಕೆ ಬಿಡಬೇಕು...ಫೀ...ಪುಸ್ತಕಕ್ಕೆ ನನ್ನ ಸಂಬಳದಲ್ಲಿ ಆದೀತು. ಇಷ್ಟು ದಿನ ಅನುಭವಿಸಿದಂತೆ ಇನ್ನು ನಾಲ್ಕೈದು ವರುಷ ನಾನು ಇಲ್ಲಿ, ಅವರು ಅಲ್ಲಿ ಕಷ್ಟಪಟ್ಟರೆ... ಒಂದು ಬಿ.ಎ. ಅಥವಾ ಎಂ.ಎ. ಆಗದಿದ್ದೀತೆ?'

ಮರುವರುಷ ಸಾಯಂಕಾಲದ ಕಾಲೇಜಕ್ಕೆ ಹೆಸರು ಹಚ್ಚಿದ. ಮುಂಬಯಿಯಲ್ಲಿ ಊಟ, ವಸತಿ, ಬಟ್ಟೆಯಾಗಿ, ಕಾಲೇಜ್ ಫೀ-ಪುಸ್ತಕವೂ ತನ್ನ ಸಂಬಳದಲ್ಲಾಗಬೇಕು. ಅಷ್ಟಾಗಿ ಮನೆಗೆ ಕಳಿಸುವುದು ಅಸಾಧ್ಯ. ಮುಂದಿನ ದಿನಗಳಲ್ಲಿ ಒಂದು ಪೈಸೆಯನ್ನೂ ಮನೆಗೆ ಕಳಿಸುವುದಾಗಲಿಲ್ಲ. ಆಗೊಮ್ಮೆ ತಂದೆಯವರು ಪತ್ರ ಬರೆದಿದ್ದರು.

''... ನೀನು ಕಾಲೇಜಕ್ಕೆ ಹೆಸರು ಹಚ್ಚಿದ ವಿಷಯ ತಿಳಿಯಿತು. ನೀನು ಬಯಸಿದಷ್ಟು ಕಲಿಸುವುದು ತಂದೆಯಾದ ನನ್ನ ಕರ್ತವ್ಯ. ಅದು ನನ್ನಿಂದ ಸಾಧ್ಯವಾಗಲಿಲ್ಲ. ಇನ್ನು ನಿನ್ನ ದಾರಿಯನ್ನು ನೀನೆಯೇ ಕಂಡುಕೊಳ್ಳುವಾಗ ನಾನು ಮಧ್ಯೆ ಬರಬಾರದು. ಆದರೆ ಪರಿಸ್ಥಿತಿ ಇದಕ್ಕ ತೀರ ವಿರುದ್ಧವಿದೆ. ಮನೆಯಲ್ಲಿ ನಿನ್ನ ತಾಯಿ ಹಾಸುಗೆ ಹಿಡಿದದ್ದು ನಿನಗೆ ತಿಳಿದ ವಿಷಯ. ಅವಳಿಗೆ ಔಷಧೋಪಚಾರ ಮಾಡಿಸುವುದು ನಮ್ಮ ಮೊದಲ ಕರ್ತವ್ಯ. ಆಮೇಲೆ ನಮ್ಮ ದಿನನಿತ್ಯದ ಸಂಸಾರವನ್ನು ಒಂದು ರೂಪಕ್ಕೆ ತರುವುದು. ಅದರರ್ಥ ನಾವು ಮೂವರೂ ಹೊಟ್ಟೆ ತುಂಬ ಉಂಡು, ಮೈಮುಚ್ಚುವಷ್ಟು ಬಟ್ಟೆಯಾಗಬೇಕು. ನನ್ನ ಆದಾಯ ನಿನಗೆ ತಿಳಿದೇ ಇದೆ. ಆದುದರಿಂದ ಕೆಲವು ವರುಷಗಳನ್ನು ಬಿಟ್ಟು ಸಾಧ್ಯವಾದರೆ ಅನಂತರ ನೀನು ಕಾಲೇಜಕ್ಕೆ ಹೋಗಿದ್ದರೆ ಸೂಕ್ತವಾಗುತ್ತಿತ್ತು ಎಂದು ನನ್ನ ವಿಚಾರ.''

ಆದರೆ ಅನಂತನ ದೃಷ್ಟಿಯಲ್ಲಿ ಈ ಸಂಸಾರ ತಾಪತ್ರಯ ಎಂದಿಗೂ ಮುಗಿಯಲಾರದ್ದು. ಅದು ಮುಗಿಯಲಿ ಎಂದು ಕುಳಿತರೆ ಕಳೆದು ಹೋಗುವ ವಯಸ್ಸು ಮತ್ತೆ ಬಾರದು. ನಾಲ್ಕೈದು



ವರುಷ ಬಿಟ್ಟು ಕಾಲೇಜಕ್ಕೆ ಹೋಗುವುದೆಂದರೆ ಅಭ್ಯಾಸದ ರೂಢಿಯೂ ತಪ್ಪಿಬಿಡುತ್ತದೆ. ಇಷ್ಟು ವರುಷ ಅನುಭವಿಸಿದ್ದೇವೆ... ಇನ್ನು ನಾಲ್ಕೇ ವರುಷ... ನಾಲ್ಕು ವರುಷ ಕಷ್ಟಪಟ್ಟರೆ...

ಇದಕ್ಕೆ ಪ್ರತಿಯಾಗಿ ತಂದೆಯವರು, ''ಇಷ್ಟು ವರುಷ ಅನುಭವಿಸಿದ್ದೇವೆ. ಇನ್ನೂ ನಾಲ್ಕು ವರುಷ ಹೀಗೆಯೇ ಇರೋಣ ಎನ್ನುವ ನಿನ್ನ ಅಭಿಪ್ರಾಯಕ್ಕೆ ಏನು ಹೇಳಬೇಕೋ ತಿಳಿಯದಾಗಿದೆ. ನಾಲ್ಕೈದು ವರುಷ ಬಿಟ್ಟು ಕಾಲೇಜಕ್ಕೆ ಹೋಗುವುದೆಂದರೆ ನಿನ್ನ ವಯಸ್ಸು ಹಾಳಾಗುತ್ತದೆ... ಅಭ್ಯಾಸದ ರೂಢಿ ತಪ್ಪುತ್ತದೆ. ಅದೂ ನಿಜ... ಸರಿ. ದೈವೇಚ್ಛೆ. ನಿನ್ನ ಮನಸ್ಸಿಗೆ ಬಂದಂತೆ ಮಾಡು. ಆದರೆ ಒಂದು ಮಾತು-ಕಲಿಯಬೇಕು ಎನ್ನುವ ಆಶೆ ಇದ್ದವನಿಗೆ ಕಾಲದ ಮಿತಿ ಇಲ್ಲ. ಸದ್ಯದ ಮಟ್ಟಿಗೆ ನೀನು ಕಾಲೇಜಕ್ಕೆ ಹೋಗುವುದು ಜ್ಞಾನಾರ್ಜನೆಗಾಗಿ ಅಲ್ಲ. ನಿನ್ನ ವೈಯಕ್ತಿಕ ಸುಖಕ್ಕಾಗಿ ಎಂದೇ ಕಾಣುತ್ತದೆ'' ಎಂದು ಬರೆದಿದ್ದರು.

ಅನಂತ ಅದಕ್ಕೆ ಪ್ರತ್ಯುತ್ತರ ರೂಪದಲ್ಲಿ, ನಿಮ್ಮಿಂದ ಕಲಿಸುವುದಂತೂ ಆಗಲಿಲ್ಲ... ದಯಮಾಡಿ ಈಗ ನನ್ನನ್ನು ನಿಲ್ಲಿಸಬೇಡಿ. ನಾಲ್ಕೈದು ವರುಷಗಳ ಮಟ್ಟಿಗೆ ನನ್ನಿಂದ ಏನನೂ ಅಪೇಕ್ಷಿಸಬೇಡಿ...'' ಎಂದು ಬರೆದಿದ್ದ.

''ಆಂ... ಅವ್ವಾsss...'' ಎಂದು ಅನಂತ ಚಾಚಿದ ಕಾಲನ್ನು ಹಿಂದಕ್ಕೆ ಎಳೆದುಕೊಳ್ಳುತ್ತಿದ್ದಂತೆ, ''ಸಾರಿ...'' ಎಂದ ಆ ವ್ಯಕ್ತಿ. ಬರುವ ನಿಲ್ದಾಣದಲ್ಲಿ ಆತ ಇಳಿಯಬೇಕಿತ್ತು. ಮೇಲಿಟ್ಟಿದ್ದ ತನ್ನ ಸೂಟ್‌ಕೇಸನ್ನು ತೆಗೆದುಕೊಳ್ಳಲು ಎದ್ದಾಗ, ಆತನ ಬೂಟುಕಾಲು, ಚಪ್ಪಲಿ ಬಿಟ್ಟು ಕಾಲುಚಾಚಿ ಕುಳಿತಿದ್ದ ಅನಂತನ ಬಲಗಾಲಿನ ಹೆಬ್ಬೆಟ್ಟಿನ ಮೇಲೆಯೇ ನಿಂತಿತ್ತು. ಬೂಟುಕಾಲಿನಿಂದ ತುಳಿದ ಆ ವ್ಯಕ್ತಿಯ ಭಾರಕ್ಕೆ ಬೆರಳು ಜಜ್ಜಿಹೋಗಿತ್ತು. ಕಂದುಗಟ್ಟಿ, ಉಗುರು ಸಂದಿನಲ್ಲಿ ರಕ್ತ ಒಸರಿತ್ತು. ಜೀವ ಹೋದಂತಾಗಿ ಅನಂತನಿಗೆ ಕ್ಷಣ ಹೊತ್ತು ಸಹಿಸಲಾರದ ಸಂಕಟವಾಗಿತ್ತು.

''ಐ ಆಮ್ ವೆರಿ ಸಾರಿ ಸರ್! ಆದರೂ ಸ್ವಲ್ಪ ಸರಿದು ನಿಮ್ಮ ಜಾಗಾದಾಗ ಕುಳಿತಿದ್ದರು... ವಿಚಾರ ಮಾಡ್ರಿ'' ಎಂದು ಇನ್ನೊಮ್ಮೆ ಆ ವ್ಯಕ್ತಿ

ಕ್ಷಮೆ ಬೇಡುವುದಕ್ಕೂ ಗಾಡಿ ನಿಲ್ಲುವುದಕ್ಕೂ ಮೇಳವಾಯಿತು. ಆತ ಇಳಿದುಹೋಗಿಬಿಟ್ಟ. ಕಾಲಿನ ಗಾಯದಿಂದಲೋ ಅಥವಾ ಹಿಂದಿನ ವಿಷಯ ನೆನಪಾಗಿಯೋ ಅನಂತನ ಕಣ್ಣಿನಿಂದ ಹನಿ ನೀರು ಉದುರಿತು.

''ಹೌದು ಸ್ವಲ್ಪ ವಿಚಾರ ಮಾಡಿದ್ದರೆ...'' ಅನಂತ ಈಗ ಸರಿಯಾಗಿ ಕುಳಿತುಕೊಂಡನು. ಆದರೆ ಕಾಲು ನೋವು ಕಡಿಮೆಯಾಗಲಿಲ್ಲ. ಅನಂತ ಕಾಲೇಜಿಗೆ ಸೇರಿದ್ದರಿಂದ ಮನೆಗೆ ಹಣ ಕಳಿಸುವುದಾಗಲಿಲ್ಲ. ತಾಯಿಯ ಕಾಯಿಲೆ ದಿನದಿನಕ್ಕೆ ಹೆಚ್ಚಾಗುತ್ತ ನಡೆಯಿತು. ತಂದೆ ಆ ಬಗ್ಗೆ ಯಾವ ವಿಷಯವನ್ನೂ ತಿಳಿಸಲಿಲ್ಲ. ನಾಲ್ಕು ವರುಷಗಳ ನಂತರ ಹೀಗೆಯೇ ಹುಬ್ಬಳ್ಳಿಯಿಂದ ಒಂದು ತಂತಿ ಬಂದಿತ್ತು.

''ತಾಯಿಗೆ ತೀವ್ರ ಕಾಯಿಲೆ. ಕೆ.ಎಂ.ಸಿ. ಯಲ್ಲಿ ಮುಖ ನೋಡು'' ಎಂದು.

ಅಂದು ಅವನ ಬಿ.ಎ. ಪರೀಕ್ಷೆ ನಡೆದಿತ್ತು. ಕೊನೆಯ ನಾಲ್ಕು ಪೇಪರುಗಳು ಉಳಿದಿವೆ. ಅದು ನಾಡಿದ್ದಿಗೆ ಮುಗಿಯುತ್ತದೆ. ಪರೀಕ್ಷೆ ಮುಗಿಸಿ ಹುಬ್ಬಳ್ಳಿಗೆ ಧಾವಿಸಿದಾಗ, ಅದರ ಹಿಂದಿನ ದಿನ ಅನಂತನ ತಾಯಿ ಕೊನೆಯುಸಿರೆಳೆದಿದ್ದರು. ಅದೇ ಆಗ ಹೆಂಡತಿಯನ್ನು ಸುಟ್ಟುಬಂದು ಕೆ.ಎಂ.ಸಿ. ಆಸ್ಪತ್ರೆಯ ಹತ್ತಿರ ಬರುತ್ತಿದ್ದ ತಂದೆಯ ಭೇಟಿಯಾಯಿತು. ಅನಂತ ಎದುರಿಗೆ ಬಂದಾಗ, ಒಂದೆರಡು ಕ್ಷಣ ತಂಧೆಯವರು ಯಾವ ಮಾತನ್ನೂ ಆಡಲಿಲ್ಲ. ಆಮೇಲೆ ಇದ್ದೆಲ್ಲ ದುಃಖ ವನ್ನು ಒತ್ತಿ ಹಿಡಿದು ಎಂದಿನಂತೆ ಸಮಾಧಾನ ದಿಂದಲೇ ಮಾತನಾಡಿದ್ದರು.

''ಆಯ್ತು!... ಪುಣ್ಯವಂತಳಾದಳು! ಸಂಜೆಯ ಹೊತ್ತಿಗೆ ಬೆಂಕಿ ಆರಬಹುದು. ಅಸ್ಥಿ ಆರಿಸಿಕೊಂಡು ರಾತ್ರಿಯ ಗಾಡಿಗೆ ಊರಿಗೆ ಹೋಗೋಣ. ಅಸ್ಥಿ ಆರಿಸಲಿಕ್ಕಾದರೂ ಮಗ... ನೀನು ಬಂದಿ ಸಂತೋಷ'' ಎಂದಿದ್ದರು. ಅವರನ್ನು ಇಲ್ಲಿಗೆ ಕರೆದುಕೊಂಡು ಬಂದು ಒಂದು ತಿಂಗಳಾಗಿತ್ತಂತೆ. ಕೊನೆಯುಸಿರೆಳೆದ ಮೇಲೆ, ಆಸ್ಪತ್ರೆಯಿಂದ ಅವರನ್ನೊಯ್ದು ಸುಟ್ಟು ಬರಲು ಕಟ್ಟಿಗೆಗಾಗಿ ಹಣ ಸಿಗುವವರೆಗೆ-ಒಂದು ದಿನ ಪೂರ್ತಿ-ಹೆಣ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಬಿದ್ದಿತ್ತೆಂದು ಆಮೇಲೆ ಅನಂತನಿಗೆ ತಿಳಿಯಿತು.

ತಂದೆಯವರ ಜೊತೆಗೆ ಏನು ಮಾತಾಡಬೇಕು? ತಾಯಿ ಸತ್ತ ದುಃಖ. ಮುಖದರ್ಶನ ಕೂಡ ಆಗಲಿಲ್ಲ, ಕ್ಷಣ ಹೊತ್ತು ಹಾಗೆಯೇ ನಿಂತಾಗ ಅದಕ್ಕಿಂತ ದಾರುಣ ಚಿತ್ರ.

''ಅನಂತಾ... ಒಂದು ಆಣೆ ಅದ ಏನು... ಮೂರು ದಿನಾ ಆಯ್ತು, ನೀರು ಸಹಿತ ಕುಡಿದಿಲ್ಲ... ನೀರಡಿಕಿ ಭಾಳ ಆಗೇದೋ'' ಎಂದು ದೈನ್ಯದಿಂದ ಕೇಳಿದ ಕ್ಷೌರವಿಲ್ಲದ ತಂದೆಯ ಮುಖ ನೋಡಿದಾಗ, ಅನಂತ ಇದ್ದೂ ಸತ್ತಿದ್ದ. ಅವನಿಗೆ ಬವಳಿ ಬಂದಂತಾಯ್ತು. ಕ್ಷಣಹೊತ್ತಿನ ಹಿಂದೆ ನಿಶ್ಚಲರಾಗಿ ಹೆಂಡತಿ ಸತ್ತ ವಿಷಯವನ್ನು ಹೇಳಿದ ತಂದೆಯ ಮುಖವನ್ನು ಕಲ್ಪಿಸುವುದೂ ಅಸಾಧ್ಯವಾಗಿತ್ತು. ಆ ನಿಶ್ಚಲತೆ ಯನ್ನೂ, ಅಭಿಮಾನವನ್ನೂ ಮೀರಿನಿಂತಿತ್ತು ತುತ್ತಿನ ಚೀಲ. ತಂದೆಯೊಂದಿಗೆ ಬದಿಯ ಹೋಟೆಲೊಂದಕ್ಕೆ ಹೋದಾಗ ಆ ದುಃಖದಲ್ಲೂ ತಂದೆ ಯಾವ ಪರಿವೆ ಇಲ್ಲದೆಯೇ ಹೊಟ್ಟೆ ತುಂಬುವಷ್ಟು ಊಟ ಮಾಡಿದರು. ಅನಂತನಿಗೆ ಒಂದು ಕಪ್ಪು ಚಹ ಕೂಡ ಗಂಟಲಲ್ಲಿಳಿಯಲಿಲ್ಲ. ವಾಸ್ತವವಾಗಿ ಅನಂತನೂ ಊಟ ಮಾಡಿ ಅಂದಿಗೆ ಎಂಟು ದಿನಗಳಾಗಿದ್ದವು. ದಿನಾಲು ಎರಡಾಣೆಯ ಕಡಲೆಕಾಯಿ, ಅರ್ಧಾಣೆಯ ಬೆಲ್ಲ ತಿನ್ನುವುದು ಪರೀಕ್ಷೆಗೆ ಹೋಗುವದು. ಇದು ಸಾಯಂಕಾಲ ಮತ್ತೆ ಅಷ್ಟೆ ಕಡಲೆಕಾಯಿ ಬೆಲ್ಲ; ಇದು ಎಂಟು ದಿನಗಳಿಂದ ನಡೆದುಬಂದಿತ್ತು. ಪರೀಕ್ಷೆಗೆಂದು ಎರಡು ತಿಂಗಳು ರಜೆ ಪಡೆದ ಆತನಿಗೆ ಎರಡನೆಯ ತಿಂಗಳು ಸಂಬಳರಹಿತ ರಜೆ ಮಂಜೂರಾಗಿತ್ತು. ಪರೀಕ್ಷೆಯ ಫೀಸು, ಪುಸ್ತಕ ಕ್ಕೆಂದು ಸರೀಕರಿಂದ ಸಾಕಷ್ಟು ಸಾಲ ಮಾಡಿ

ದ್ದಾಗಿತ್ತು. ಎಲ್ಲೂ ಬೇಡುವಂತಿರಲಿಲ್ಲ. ಊಟಕ್ಕೆ ಬೇಕಾದಷ್ಟು ಹಣ ಉಳಿಯಲಿಲ್ಲ. ಅಂಥ ಸಮಯದಲ್ಲಿ ತಂತಿ ಬಂದಿತ್ತು. ಪರೀಕ್ಷೆ ಬಿಟ್ಟು ಬಂದರೆ, ಇಡೀ ವರುಷ ಪಟ್ಟ ಕಷ್ಟ ನೀರಿನಲ್ಲಿ ಹೋಮ ಮಾಡಿದಂತೆ. ಪರೀಕ್ಷೆ ಮುಗಿಸಿ ಇದ್ದ ಪುಸ್ತಕಗಳನ್ನೆಲ್ಲ ಮಾರಿದ. ಇನ್ನೊಬ್ಬರಿಂದ ಸ್ವಲ್ಪ ಹಣ-ಅದೂ ತಂತಿ ತೋರಿಸಿ-ಕೈಗಡ ತೆಗೆದುಕೊಂಡು ಹುಬ್ಬಳ್ಳಿಗೆ ಓಡಿ ಬಂದಾಗ ಹುಬ್ಬಳ್ಳಿಯಲ್ಲಿಯ ಪರಿಸ್ಥಿತಿ ಅದನ್ನು ಮೀರಿಸಿತ್ತು.

ಸಾಯಂಕಾಲ ಅಸ್ಥಿ ಆರಿಸಿ, ರಾತ್ರಿಗಾಡಿಗೆ ಊರಿಗೆ ಹೋದರು. ಮರುದಿನ ಊರು ಮುಟ್ಟಿ, ಸಂಪ್ರದಾಯದಂತೆ ಶಾಸ್ತ್ರೋಕ್ತ ಶ್ರಾದ್ಧ ಕರ್ಮ ಮಾಡಿ ಅನಂತ ಮುಂಬಯಿಗೆ ಬರುವಾಗ ತಂದೆಯವರಿಗೂ ಅಲ್ಲಿಯೇ ಬಂದಿರಲು ಹೇಳಿದ. ಅವರು ಬರಲಿಲ್ಲ.


'ಅಗತ್ಯವೆನಿಸಿದಾಗ ಬರುವೆ' ಎಂದು ಹೇಳಿ ಮಗನನ್ನು ಬೀಳ್ಕೊಟ್ಟಿದ್ದರು. ಆಮೇಲೆ ಅನಂತ ಎಷ್ಟೋ ಪತ್ರಗಳನ್ನು ಬರೆದರೂ ತಂದೆಯವರಿಂದ ಉತ್ತರ ಬರಲಿಲ್ಲ. ಆರು ತಿಂಗಳ ನಂತರ ಮತ್ತೊಮ್ಮೆ ಊರಿಗೆ ಬಂದು, ತಂದೆಯವರಿಗೆ ಮುಂಬಯಿಗೆ ಬರಲು ಒತ್ತಾಯ ಪಡಿಸಿದಾಗ ಅವರು ಹೇಳಿದ್ದರು:


''ಇನ್ನ ನಾನು ಎಲ್ಲಿದ್ದರರೂ ಏನಾಗೂದು... ಈ ಮನಿ ಬಿಟ್ಟು ಎಲ್ಲೂ ಹೋಗೂದಿಲ್ಲ ನೋಡು. ನೀನು ಎಲ್ಲಿದ್ದರೂ ಸುಖದಿಂದ ಇರು... ಸಾಯು ಮುಂದ ಆಕಿ ಹೇಳಿದ್ದೂ ಇಷ್ಟೇ... ಇನ್ನ ನನ್ನ ಬಗ್ಗೆ ಯಾವ ಕಾಳಜೀನೂ ಮಾಡಬೇಡ.''

ತಿರುಗಿ ಮುಂಬಯಿಗೆ ಬಂದ. ಕಳಿಸಿದ ಮನಿ ಆರ್ಡರುಗಳೂ ತಿರುಗಿ ಬಂದವು. ಈ ಎರಡು ವರುಷಗಳಿಂದ ಅನಂತ ಎಲ್ಲವನ್ನೂ ಬಿಟ್ಟುಬಿಟ್ಟಿದ್ದ. ಇದೇ ವರುಷ ಆತ ಎಂ.ಎ. ಮೊದಲ ವರ್ಗದಲ್ಲಿ ಪಾಸಾಗಿದ್ದಾನೆ. ರಿಸರ್ವ್ ಬ್ಯಾಂಕನ್ನು ಬಿಟ್ಟು ಸ್ಥಳೀಯ ಕಾಲೇಜೊಂದರಲ್ಲಿ ಲೆಕ್ಚರರ್ ಎಂದು ಸೇರಿ ಒಂದು ವರುಷವಾಗಿದೆ. ಒಂಬತ್ತು ತಿಂಗಳುಗಳ ಹಿಂದೆ ಸುಶೀಲೆಯ ಕೈ ಹಿಡಿಯುವಾಗ ತಂದೆಯವರನ್ನು ಕರೆಯಲು ಊರಿಗೆ ಬಂದಿದ್ದ. ಆದರೆ ಅದಕ್ಕೆ ಮೊದಲು ಬದರೀ ಯಾತ್ರೆಗೆಂದು ಹೊರಟವರೊಂದಿಗೆ ಅನಂತನ ತಂದೆಯವರೂ ಹೋಗಿದ್ದಾರೆಂದು ನೆರೆಮನೆಯ ನಾರಾಯಣಾಚಾರ್ಯರಿಂದ ತಿಳಿದು ಬಂದಿತು.

ತಿರುಗಿ ಯಾವಾಗ ಬಂದರು? ಏನು ಕಾಯಿಲೆಯಾಗಿದ್ದೀತು? ಇನ್ನೂ ಬದುಕಿದ್ದಾರಷ್ಟೇ? ಅಥವಾ ಹುಬ್ಬಳ್ಳಿಗೆ ಹೋದಾಗ ಆದಂತೆಯೇ?... ಎದೆಯಲ್ಲಿ ತಣ್ಣೀರು ಸುರುವಿದಂತೆ... ಕೈಕಾಲುಗಳೆಲ್ಲ ತಣ್ಣಗಾದಂತೆ ಭಾಸ. ಮರುದಿನ ಸಾಯಂಕಾಲ ಊರು ಮುಟ್ಟುವವರೆಗೂ ಇದೇ ವಿಚಾರ. ಊರು ಮುಟ್ಟಿ ಮನೆಯ ಮುಂದೆ ಹೋಗುವವರೆಗೂ ಅನಂತನಿಗೆ ಎಷ್ಟೂ ಸಮಾಧಾನವಿಲ್ಲ. ಮನೆಯ ಬಾಗಿಲು ತೆರೆದಿದ್ದು ಕಂಡು ಎಷ್ಟೋ ಸಮಾಧಾನವಾಯಿತು. ಒಳಗೆ ಹೋದ. ಪಡಸಾಲೆಯಲ್ಲಿ ತಂದೆ ಮಲಗಿದ್ದರು. ಅವರ ಹತ್ತಿರ ನಾರಾಯಣಾಚಾರ್ಯರೂ ಕುಳಿತಿದ್ದರು. ಅನಂತ ಬಂದದ್ದನ್ನು ನೋಡಿ,

''ಬಾ-ಅಂತೂ ಅಪ್ಪನ ಮುಖಾ ಸಿಕ್ಕಿತು'' ಎಂದು ಕರೆಯುತ್ತ, ''ಇಲ್ನೋಡು... ಅನಂತ ಬಂದಾನ ನೋಡಪಾ...'' ಎಂದು ತಂದೆಯವರತ್ತ ನಾರಾಯಣಚಾರ್ಯರು ಹೇಳಿದಾಗ, ತಂದೆಯವರು ಆಚಾರ್ಯರತ್ತ ಕಣ್ಣರಳಿಸಿ ನೋಡಿದರು. ಅವರ ಕೈಸನ್ನೆಯಂತೆಯೇ ಕಣ್ಣು ಹೊರಳಿಸಿದಾಗ ಕ್ಷಣ ಹೊತ್ತು ರೆಪ್ಪೆ ಬಡಿಯದೆಯೇ ತಂದೆಯವರು ಪ್ರಾಧ್ಯಾಪಕ ಅನಂತ ದೇಶಪಾಂಡೆಯವರನ್ನು ನೋಡಿದರು... ಕಣ್ತುಂಬ ನೋಡಿದರು. ಮರುಕ್ಷಣ ಕಣ್ಣುಗುಡ್ಡೆ ಅತ್ತಿತ್ತಲಾಗಿ ಮುಖವನ್ನು ಬೇರೆಡೆ ತಿರುಗಿಸಲು ಪ್ರಯತ್ನಿಸಿದರು.





ಕುಂ. ವೀರಭದ್ರಪ್ಪ

ಭಳಾರೇ ವಿಚಿತ್ರಂ

# ಯಮರಾಜ ಸಹೋದರಾss

ಒಂದು ಮುನಿಸಿಪಾಲಿಟಿ ಕ್ವಾಲಿಟಿಯ ಕಾಫಿ ಕುಡಕೊಂಡು ನಿಶೆದಾಗ ನಾನು ಆ ಲಡಾಸು ಹೋಟಲಿನಿಂದ ಹೊರಬರುವುದಕೂ, ಟಾಪ್ ಟು ಬಾಟಂ ಟಾಕು ಟೀಕಾಗಿದ್ದ ತರುಣನೋರ್ವ ಪಟ್‌ಪಟ್ಟಿಗಾಡಿ ಮೇಲಿಂದ ಬಂದು ನನ್ನೆದುರು ಇಳಿಯುವುದಕ್ಕೂ ಸರಿಹೋಯಿತು. ಈತ ಯಾರಪ್ಪ ಸಿನ್ಮಾಯೂಟ್ರು ಅಂತ ನೋಡುತ್ತಿರಲು ತಾನೆ, ''ಗುಡು ಮಾರ್ನಿಂಗು ಸಾರೂ'' ಎಂದು, ಹುಡುಕಾಡಿ ಬಲ ಮುಂಗೈ ಹಿಡಿದು ಮಸಾಜು ಮಾಡಲಾರಂಭಿಸಿದ. ಅರ್ಥವಾಗದೆ ನಾನು ಒದ್ದಾಡುತ್ತಿರಲು, ತಾನೆ, ''ನಾನ್ಯಾರೂಂತ ಅಯಡೆಂಟಿಫೈ ಮಾಡ್ರಿ ಸಾರೂ ನೋಡಾಣು'' ಎಂದು ಮೀಸೆ ಕೆಳಗೆ ಕಿಲಕಿಲ ನಗೆ ತಂದುಕೊಂಡ. ನೋಡಿದೆನಾದರೂ ಗುರುತು ಹಿಡಿಯಲಾಗಲಿಲ್ಲ. ಯಾವುದೋ ಬಾರಂಡ್ರೆಸ್ಟುರೆಂಟೊಳಗೆ ಹೈ ಪೋಸ್ಟಿನಲ್ಲಿರಬೇಕೆಂದುಕೊಂಡೆ. ಅಂತೂ ಚಿತ್ ಮಾಡಿದೆನೆಂಬ ಮದವೇರಿ ಆ ತರುಣನು, ''ನಾನು ಸಾರೂ, ಯಂಟೇಸು... ನಿಮ್ ಸ್ಟೂಡೆಂಟೂ...'' ಎಂದೊಂದು ಕ್ಲೂ ನೀಡಿ ಮನದ ದುಗುಡ ಕಡಿಮೆ ಮಾಡಿದ. ನೆನಪಿನ ದಫ್ತರು ಓಪನ್ನು ಮಾಡಿ ಬೆದಕಲು, ಸುಮಾರು ಮುವ್ವತ್ತೊಂದೂವರೆ ಯಂಟೇಸುಗಳು ಸಿಕ್ಕವು. ಆವುಗಳ ಪೈಕಿ ಇದರ ನಂಬರು ಎಷ್ಟನೇದು? ಮತ್ತವನೆ, ''ನಾನು ಸಾರೂ, ನೈಂಥಿನಾಗ ಕ್ವಾಂಟರ ಆದಿಲಚುಮಿಗೆ ಲವ್‌ಲೆಟರು ಬರ್ದು ನಿಂ ಕೈಲಿ ಸಕತ್ ಒದಿ ತಿಂದಿದ್ನೆಲ್ಲಾ...'' ಎಂದೆನ್ನಲು, ನಾನು,''ಹೋss ಜಾಡರ ವೆಂಕಟೇಶ್'' ಎಂದುದ್ಗರಿಸಿದೆನು. ಲವ್ ಮಾಡುವುದನ್ನು ಆರನೇ ತರಗತಿಯಿಂದಲೇ ಕಲಿತು, ಎಂಟೊಂಬತ್ತನೆ ತರಗತಿ ತಲುಪುವಷ್ಟರಲ್ಲಿ ಕ್ಲೈಮಾಕ್ಸ್ ತಲುಪಿ, ನಮ್ಮೆಲ್ಲರಿಂದ ಕಾಲಾಪಾನಿ ಶಿಕ್ಷೆ ಅನುಭವಿಸಿದ್ದನು. ವಿದ್ಯೆಯನ್ನೇ ನೈವೇದ್ಯ ಮಾಡಿ, ಹಚ್ಚಬಾರದಕಡೆ ಪೋಡರು ಹಚ್ಚಿಕೊಂಡು ಭಲೆ ಸ್ಟೈಲಿನಿಂದ ನಮ್ಮ ಸ್ಕೂಲಿನ ತಿಪ್ಪೆ ಕ್ಯಾಂಪಸ್ಸಿನಲ್ಲಿ ಅಡ್ಡಾಡುತ್ತಿದ್ದನು. ಇವನು ಯಾರ ಮೇಲಾದರೂ ರೇಪ್ ಮಾಡಬಹುದೆಂದು ನಿರ್ಧರಿಸಿ, ನಾನು ಹಂಗು ಹಿಂಗು ಮಾಡಿ ಅವನನ್ನು ಸಾಲೆ ಬಿಡಿಸಿ ಓಡಿಸಿದೆನು. ಅದೇ ಲಾಸ್ಟು... ಅಂದು ಮಾಯವಾದವನು ಪ್ರತ್ಯಕ್ಷವಾಗಿರುವುದು ಇಂದು.

''ಈಗೇನು ಮಾಡ್ತಿದ್ದೀಯಾ ವೆಂಕಟೇಶ್?'' ನನಗೋ ಇವನು ಹೋಟೆಲು ಸಪಲಾಯರೋ, ಅಥವಾ ಪಾಕೆಟ್ ಮಾರರ್ರ್ರೋ ಆಗಿರಬೇಕೆಂಬ ಅನುಮಾನ.

''ಸಾರೂ ನಾನೀಗ ಡಾಟ್ರೂ'', ನೋಟಿನ ಕಂತೆಯೊಡನೆ ಬಂದ ಕರಚೀಪಿನಿಂದ ಮುಖಾರ ವಿಂದವನ್ನು ಒರೆಸಿಕೊಂಡ.

"ವೆಂಕಟೇಶು... ನೀನು ಡಾಕ್ಟರಾ!!"

"ಯಾಕ್ಸಾರು, ನಿಮ್ಗೆ ನನ್ ಮೇಲೆ ಬಿಲೀವ್ ಬರ್‍ತಾ ಇಲ್ಲ..."

ಒಂದಿಬ್ಬರು ಕಾಂಜಿ ಪೀಂಜಿಗಳನ್ನು ಕರೆದು ಸಾಕ್ಷಿ ಹೇಳಿಸಿದನು. "ಏಸೋ ಹಾರ್ಟು ಪೇಸಂಟಸ್ನ ಆಪ್ರೇಸನ್ನಿಲ್ದೆ ವಾಸಿ ಮಾಡೀವ್ನಿ ಸಾರೂ, ಡೆಲಿವರ್‍ರಿ ಮಾಡ್ಸೋದ್ರಾಗ ನಂದು ಎತ್ತಿದ ಕಯ್ಯಿ ಸಾರೂ ಹ್ಹಿ... ಹ್ಹಿ... ಹ್ಹಿ...."

ಅವನು ಹೇಳಿದ್ದು ಕೇಳಿ ನಾನು ಪಾತಾಳಕ್ಕಿಳಿದುಬಿಟ್ಟೆ.

"ವೆರ್‍ರಿಗುಡ್... ವೆರ್‍ರಿಗುಡ್... ಅಂದಹಾಗೆ ಸರ್ಕಾರ್‍ದಿಂದ ಯಾವ್ದೇ ಪ್ರಾಬ್ಲೆಂ ಆಗಿಲ್ವಾನೆ?"

"ತಮ್ಮ ಬ್ಲೆಸ್ಸಿಂಗ್‌ಸ್ನಿಂದ ಯಾವ್ ಪ್ರಾಬ್ಲೆಮ್ಮಾಗಿಲ್ಲ ಸಾರೂ, ಪ್ರಾಬ್ಲೆಮ್ಮಾಗಿರೋದು ಇನ್‌ಕಂಟಾಕ್ಸಿನೋರಿಂದ್ಲೆ ಸಾರೂ"

"ಅಂದ್ರೆ!"

"ನೆಣ್ಕೆಗೆಡ್ಯಾಗ ನಾನು ವೆರ್‍ರಿ ಪೇಮೋಸು ಡಾಟ್ರು ಸಾರೂ, ಸೂಜಿ ಮಾಡೀ ಮಾಡೀ ನನ್ರೆಟ್ಟೆ ಬುದ್ದೋಗ್ಯಾವೆ ಸಾರೂ, ನನ್ನ ಕಯ್ಯಿಂದ ಸೂಜಿ ಮಾಡಿಸ್ಗಂದಿರೋರ್‍ಯಾರೂ ಇಲ್ಲ ನೋಡ್ರಿ. ರೊಕ್ಕ ಇಡಲಾಕೆ ಜೆಗೇವಿಲ್ದಂಗಾಗೈತೆ ಸಾರೂ."

"ಪ್ರಾಪರಟೀ, ಗೀಪರಿಟೀಙ..."

"ಅದ್ಕೇನು ಬರ ಸಾರೂ... ನಗ್ ಮಾಡೀನಿ... ವಂದೆಲ್ಡು ಅಂಬಾಸಾಡ್ರೂನಿಲ್ಲಿ ರೆಂಟಿಗೆ ಬಿಟ್ಟೀನಿ..."

ಇದೇನು ಕಡಿಮೆ ನೀರ್‍ನಲ್ಲಿ ಮುಳುಗೋ ಆಸಾಮಿಯಲ್ಲ ಅಂದುಕೊಂಡೆ. 'ಇಸ್ವೀಟು ತಿಂಬುವೆಂತ್ರಿ ಬರ್‍ರೀ ಸಾರೂ' ಅಂದ. ನಾನು ಬೇಡಪ್ಪಾ ಅಂದೆ. 'ಸುಗರ್‍ಕಂಪಲ್ಯೆಂಟೇನಾದ್ರೂ...' ಎಂದು ರಾಗ ತೆಗೆದ. 'ಅಂತಾದ್ದೇನಿಲ್ಲಪ್ಪ... ಹೇಗೋ ನೀನಿದೀಯಲ್ಲ' ಅಂದೆ. 'ಆಲ್ವೇಸು ವೆಲ್‌ಕಮ್ಮೂ ಸಾ' ಎಂದ ಆತನಿಗೆ ಶುಭ ಹಾರೈಸಿ ಬೀಳ್ಕೊಟ್ಟೆ.

ಮೊನ್ನೆ ಒಂದು ಕಡೆ ಮಾತಿಗೆ ಬಂದು ಎಂಥೆಂಥ ವೈದ್ಯರಿದ್ದಾರೆ ಎಂದು ಉದ್ಧರಿಸಲು ಒಬ್ಬ ಹಿರಿಯರು, 'ಆ ವೇಂಕಟೇಶನೇನು ಮಹಾ ಕುಂವೀ, ಅವನಪ್ಪನಂಥೋರಿದ್ದಾರೆ' ಎಂದು ಈ ಪ್ರಕಾರವಾಗಿ ವಿವರಿಸಿದರು.



ಭಾವನಾ ಮೇ, 2001

ನಮ್ಮೂರಲ್ಲಿ ಒಬ್ಬರು ಬಿಪಿಎಮ್ಮಿದ್ರು. ಮೊದಮೊದಲು ನಾವ್ ನೋಡ್ತಿದ್ದಂಗೆ ಅವರ ಹತ್ರ ಕಡ್ಡಿ ಇದ್ರೆ ಬೀಡಿ ಇರ್ತಿರ್ಲಿಲ್ಲ, ಬೀಡಿ ಇದ್ರೆ ಕಡ್ಡಿ ಇರ್ತಿರ್ಲಿಲ್ಲ. ಬರೋ ನೂರಿನ್ನೂರುಪ್ಪೈ ಸಂಬಳದಲ್ಲಿ ಅವರು ಕುಟುಂಬ ಪೊರೆಯುತ್ತಿದ್ದುದೇ ಸಾಹಸದ ಸಂಗತಿಯಾಗಿತ್ತು. ಇದ್ದಕ್ಕಿದ್ದಂತೆ ಅವರು ಅಸ್ತಮಾ ರೋಗಕ್ಕೆ ಒಂದು ಚೂರ್ಣ ಕಂಡುಹಿಡಿದರು. ಅದರ ಹೆಸ್ರು ಅಂಚೂರ್ಣ ಅಂತ. ರೋಗಿ ಮಲಗೋ ಮುಂದುಗಡೆ, ಆಕಳದ ಹಾಲಿನಲ್ಲಿ ಆ ಚೂರ್ಣ ಹಾಕ್ಕೊಂಡ್ ಕುಡಿದಾಂದ್ರೆ ಕೆಮ್ಮುದಮ್ಮು ಖಲಾಸ್. ಆ ಚೂರ್ಣ ಅಸ್ತಮಾಕ್ಕೆ ರಾಮಬಾಣ ಅಂತಾನೆ ಪ್ರಸಿದ್ಧಾಯ್ತು. ಒಂದು ಚೂರ್ಣದ ಪ್ಯಾಕೆಟ್ಟಿಗೆ ಅವರು ನಿಗದಿಪಡಿಸಿದ್ದು ಕೇವಲ ಎರಡುದಿ ರುಪ್ಪಾ. ರೋಗಿಗಳು ನೂರಾರು ಮೈಲಿ ದೂರದೂರುಗಳಿಂದ ನಮ್ಮೂರಿಗೆ ಬರಲಾರಂಭಿಸಿದರು. ಬಿಪಿಎಂ ಕಂ ಡಾಕ್ಟರ ಮನೆ ಮುಂದೆ ರೋಗಿಗಳ ಮಹಾಜಾತ್ರೆ. ಎಲ್ಲಿ ಕಿವಿ ಚಾಚಿದರೂ ಕೆಮ್ಮುವ ಸದ್ದು. ಎಲ್ಲಿ ಕಣ್ಣು ಹಾಯಿಸಿದರೂ ಕಫವೋ ಕಫ. ರೋಗಿಗಳ ಪೈಕಿ ಒಂದಿಬ್ಬರು ಸ್ವಯಂಘೋಷಿತ ದೇವ ಮಾನವರೂ, ರಾಜಕಾರಣಿಗಳೂ, ಅಧಿಕಾರಿಗಳೂ, ಜಮೀನ್ದಾರರೂ ಇರುತ್ತಿದ್ದರೆಂದಮೇಲೆ ನೀವೇ ಲೆಕ್ಕಹಾಕಿ. ವರ್ಷೊಪ್ಪತ್ತಿನಲ್ಲಿ ಬಿಪಿಎಂ ಲಕ್ಷಾದೀಶರಾಗಿ ಬಿಟ್ರು.

''ಅವ್ರು ಕೊಡ್ತಿದ್ದ ಚೂರ್ಣಯಾವ್ದೂಂತ...'', ನಾನು ಕುತೂಹಲ ತಡೀಲಾರದೆ ಕೇಳಿದೆ. ''ಹ್ಹ... ಹ್ಹ... ಹ್ಹ...'' ಅವರು ಜೋರಾಗಿ ನಕ್ಕು ಹೇಳಿದರು,'' ಅವರು ಮೊದ್ಲೇ ಬಿಪಿಎಮ್ಮೂ... ಬೇರೆ ಊರ್ಗಳಿಂದ ಬರ್ತಿದ್ದ ಕಾರ್ಡುಗಳ್ನ ಬಟವಾಡೆ ಮಾಡದೆ ಸುಟ್ಟು ಬೂದಿ ಮಾಡಿಟ್ಕೊಳ್ತಿದ್ರು... ಅದ್ಕೆ ಅಂಚೂರ್ಣ (ಅಂಚೆ+ಚೂರ್ಣ=ಅಂಚೂರ್ಣ) ಹೆಸ್ರಿಟ್ರು. ಒಂದೊಂದು ಚಿಟಿಕೇನ ಪಾಕೇಟ್ ಮಾಡಿ ಕೊಡ್ತಿದ್ರು, ಅಷ್ಟೆ...''


ಅದನ್ನು ಕೇಳಿ ನಾವೆಲ್ಲ ಹೊಟ್ಟೆ ಹುಣ್ಣಾಗುವಂತೆ ನಕ್ಕೆವು.

''ಔಷಧದ ಗುಟ್ಟು ಎಲ್ರಿಗೂ ಗೊತ್ತಾಯ್ತು, ಪೇಷೆಂಟ್ಸು ಬರೋದು ಕಡಿಮೆ ಆಯ್ತು, ಆದ್ರೆ ಅಷ್ಟೊತ್ತಿಗೆ ನಾಕಾರು ಲಕ್ಷ ಸಂಪಾದಿಸಿದ್ದ ಬಿಪಿಎಮ್ಮು ಹೆಂಡ್ರು ಮಕ್ಳೊಂದಿಗೆ ಸುಖವಾಗಿದ್ದಾರೆ. ಅಂಚೂರ್ಣದಿಂದಾಗಿ ನಮ್ಮೂರ್ಗೆ ತಾರ್‍ರೋಡ್ಡಾಯ್ತು. ನೋಡಿ...'' ಇಷ್ಟು ಹೇಳಿ ನಂತರ ಪಿಸುದನಿಯಲ್ಲಿ, ''ನಂಗೂ ಅಸ್ತಮಾ ಕಾಯಿಲೆ ಇತ್ತಲ್ಲ... ನಾನೂ ಅಂಚೂರ್ಣವನ್ನ ಹಾಲ್ನಲ್ಲಿ ತಗೊಂಡಿದ್ದೆ. ಇದು ಎಷ್ಟು ವಿಚಿತ್ರ ನೋಡಿ'' ಎಂದು ನಗುತ್ತ ಹೇಳಿದರು.


ಅಲ್ಲಿಯೇ ಇದ್ದ ಮತ್ತೊಬ್ಬ ಹಿರಿಯರು, ''ಅಯ್ಯೋ... ಅವ್ನ ತಾತ್ನಂಥ ಡಾಕ್ಟ್ರು ನಮ್ಮೂರಲ್ಲಿದ್ರು ಸ್ವಾಮಿ... ನಮ್ಮೂರಲ್ಲಿ ರಿಟೈರ್ಡ್ ಮಾಸ್ತರರೊಬ್ರು ಇಂಪೋರ್ಟಡ್ದೂಂತ ಹೇಳಿ ಕ್ಯಾಪ್ಸಲ್ ಕೊಡ್ಲಿಕ್ಕೆ ಸುರು ಮಾಡಿದ್ರು. ಅದ್ಕೆ ಅವ್ರೆ ಫ್ಲೈಟೋಮೈಸಿಟಿನ್ ಅಂತ ಹೆಸರಿಟ್ಟು, ಒಂದೂಮುಕ್ಕಾಲು, ರುಪ್ಪಾಯ್ಕೊಂದರಂತೆ ಮಾರ್ತಿದ್ರು. ದೂರ ದೂರದೂರುಗಳಿಂದ ಜನ ಬಂದು ತಗೊಂಡು ಹೋಗ್ತಿದ್ರು... ಆ ಕ್ಯಾಪ್ಸಲ್ ಸರ್ವರೋಗ ನಿವಾರಕ ಎಂದು ಹೆಸರುವಾಸಿಯಾಯಿತು. ಕಲಿಯುಗದ ಚರಕ ಎಂಬ ಬಿರುದು ನೀಡಿ ಮಾಸ್ತರರನ್ನು ಸನ್ಮಾನಿಸಲಾಯಿತು. ಕ್ಯಾಪ್ಸಲ್ಲಿನಲ್ಲಿ ಅವರು ಅಡಗಿಸಿಡುತ್ತಿದ್ದ ಔಷಧ ಏನಂತ ನಮಗೆ ಮಾತ್ರ ಗೊತ್ತು. ಒಂದು ಸತ್ತ ನೊಣವನ್ನು ಅದರಲ್ಲಿಡುತ್ತಿದ್ದರೆಂದರೆ ನೀವೇ ಯೋಚಿಸಿ'' ಎಂದು ಹೇಳುತ್ತಲೇ ನಾವೆಲ್ಲರು ''ಓಹೋ... ಫ್ಲೈಟೋಮೈಸಿಟಿನ್'' ಎಂದುದ್ಗರಿಸಿದೆವು.

''ಎಂಬತ್ತೊಂದರಲ್ಲಿ, ಎನ್‌ಕೌಂಟರಿನಲ್ಲಿ ಸತ್ನಲ್ಲ ಡಾಕ್ಟರ್‍ರೇವಣಸಿದ್ದಪ್ಪ... ಆತನೇನು ಕಡ್ಮೆ ಇದ್ದಾಂತೀನಿ'' ಎಂದು ಮತ್ತೊಬ್ಬರು ಹಿರಿಯರು...

■



ಎನ್. ಕೆ. ಹನುಮಂತಯ್ಯ



ಕವಿ ಸಮಯ

## ಚಿತ್ರದ ಬೆನ್ನು

ಈ ಇರುವೆಯ ಮೇಲೆ
ನನ್ನ ಭಾರದ ಹೆಜ್ಜೆಯನಿಟ್ಟೆ
ತುಸು ಕಾಲದ ನಂತರ ತೆಗೆದೆ;
ಇರುವೆ ಮತ್ತೆ
ಚಲಿಸುತ್ತಿದೆ!
ಏ... ಕೂದಲು ಗಾತ್ರದ ಜೀವವೇ
ನನ್ನ ಭಾರ ಹೊರುವ ನಿನ್ನ ಬೆನ್ನಿಗೆ
ಶರಣು.

ಆ ಬೇಲಿಯ ದಡದಿ
ನಿಧಾನಕ್ಕೆ ತೆವಳುತ್ತಿರುವ
ಬಸವನ ಹುಳುವೇ
ನನ್ನ ಭಾರ ಹೊರಲಾರದ ನಿನ್ನ ಮೃದುತ್ವಕ್ಕೂ
ಶರಣು.

ಅಲ್ಲಿ ಆ ಗಿಡದಲ್ಲಿ
ನೂಲಿನ ಗಾತ್ರದ ಕಡ್ಡಿಯ ಮೇಲೆ
ಉಯ್ಯಾಲೆಯಾಡುವ ಹಕ್ಕಿಯೇ
ಕಡ್ಡಿ ಮುರಿಯದೆ ಆಡುವ ನಿನ್ನ ತೂಕಕ್ಕೆ
ಶರಣು.


ಅಗ್ನಿ ಮಾಂಸದ ಕುಲುಮೆಯಲಿ
ನನ್ನ ಕಾಯಿಸಿ ಬಣ್ಣವ ಮಾಡಿ
ಮರಳಿ ನನ್ನ ರೂಪನೇ ಕಡೆವ
ಏ ನನ್ನಾಳದ ಅಳುವೇ...
ನನ್ನ ಚಿತ್ರಕ್ಕೇಕೆ ಬೆನ್ನು ಬರೆವೆ!

## ದೀಪ ಹಚ್ಚಿದಾಗ

ನಿನ್ನ ಸೊಂಟಕ್ಕೆ
ಅವನ ತೋಳುಗಳು ಬಿಗಿದಾಗ
ಅಲ್ಲಿ ನನ್ನ ಬೆರಳುಗಳು ಸಿಗದಂತೆ
ಕಾಪಾಡು

ನಿನ್ನ ಗರ್ಭಗತ್ತಲಿಗಿಳಿದು
ಅವನು ದೀಪ ಹಚ್ಚಿದಾಗ
ಅಲ್ಲಿ ನನ್ನ ಹಳೆ ಅಂಗಿ ಕಾಣದಂತೆ
ಕಾಪಾಡು

ನಿನ್ನ ಕಂಗಳಿಗೆ
ಅವನು ಬೆಂಕಿಯಿಟ್ಟಾಗ
ಅಲ್ಲಿ ನಾನು ನದಿಯಾಗಿರುವುದ ನಂಬ
ನಲಿದಾಡು



# ಅವ್ವ ನಿಂತಿದ್ದಾಳೆ...



ಕಿಟಕಿಯ ಕಂಬಿಗಳ ಹಿಂದೆ
ಅವ್ವ ನಿಂತಿದ್ದಾಳೆ
ಹೊಗೆಯ ಕಂಭದ ಹಾಗೆ.
ಅವಳ ಕಣ್ಣಲ್ಲಿ ನೀರು
ಈಚಲು ಮರದಿ ಸೇಂಧಿ
ಸೋರಿದಂತೆ
ಅವಳ ಹತ್ತಿರದಲ್ಲೇ ನಾನು ನಿಂತಿದ್ದೇನೆ.
ಕೋಣೆಯ ಕತ್ತಲಲ್ಲಿ ಕೇಳುತ್ತಿದೆ ನನಗೆ
ಅಪ್ಪ ಕೆಮ್ಮಿದಂತೆ
ಸಿಟ್ಟಿನಲಿ ಕಟಕಟನೆ ಹಲ್ಲ ಕಚ್ಚಿದಂತೆ
ಚಿಕ್ಕ ತಮ್ಮನು ಹಸಿದು
ಅವ್ವಾ... ಎಂದಂತೆ
ಹಟ್ಟಿ ಜನ ಮನೆಯೊಳಗೆ ನುಗ್ಗಿದಂತೆ
ಅಪ್ಪನ ಕಡೆಯ ಪ್ರಾಣ ನಡುಗಿದಂತೆ.

ಅವ್ವ ನಿಂತಿದ್ದಾಳೆ
ಸ್ಮಶಾನದ ಒಂಟಿ ವೃಕ್ಷದಂತೆ
ಅವಳ ಕಣ್ಣೀರ ಆತುಕೊಳ್ಳಲು ಹೋದೆ
ಕೈಸುಟ್ಟಿತು
ಮನೆ ತುಂಬ ಜೇಡರ ಬಲೆ
ಹಳೆಯ ಕಾಲದ ಮಡಕೆ
ಸಗಣಿ ನೆಲದಲ್ಲಿ ಬಿದ್ದ ಸಿಗರೇಟ ತುಂಡು
ಮುರಿದ ತೀರಿನ ಮಧ್ಯೆ ಬೆಳಕು ಬೆಳಕಲ್ಲ
ಕಾಗೆಸೆರಳು
ನಿಂತಲ್ಲೇ ಉರಿಯುವೆನು ಯಾರ ಬೆಂಕಿಗೋ ಏನೋ,
ಅವ್ವ ನಿಂತಿದ್ದಾಳೆ.

ಆ ಕಪ್ಪು ಜಡೆ ಉದುರಿ ಒಣ ಹುಲ್ಲಾಗಿ
ಧ್ಯಾನದ ಗುಬ್ಬಿ ಗೂಡು ಕಟ್ಟಿರುವಂತೆ
ನಿಂತ ಅವ್ವನ ಬಳಿಗೆ ಹೋದೆ ನಾನು
ಕಿಟಕಿಗೆ ಕಣ್ಣಿಟ್ಟೆ,
ಅವಳ ನೋಟದ ತಂತಿಯ ಮೇಲೆ
ನಾನು ನಡೆದೆ.

ಆಚೆ ಆ ಕೊಪ್ಪಲಲಿ
ಅವನು ಮಲಗಿದ್ದಾನೆ
ನಿನ್ನೆ ತಾನೇ ಮದುವೆಯಾದ ಹೆಂಡಿರೊಡನೆ
ಮೊಲೆ ಚೆಂಡಿನೊಡನೆ.
ಅವನೇ ಆ ಬಿಳಿಯಂಗಿಯವನೇ
ನಾನು ನಿದ್ದೆಗಣ್ಣಲಿ ಎದ್ದಾಗ
ಸೇಬುಕೊಟ್ಟವನು.
ಅಪ್ಪನ ಹೆಣ ಬೀದಿಯಲಿ ಸಾಗುವಾಗ
ಅಳುವ ಅವ್ವನ ಎದೆಗೆ
ನಗುವ ತಂದವನು.

ಹೊಲೆಯ ಕೆರೆ ಬಿಟ್ಟು ವಲಸೆ ಹೋದ ಹಕ್ಕಿ ನಾನು
ಯಾಕೋ ಬಂದಿದ್ದೇನೆ...
ಅವ್ವ ನಿಂತೇಯಿದ್ದಾಳೆ
ಹೊಲಸೆಂಬ ಒಣಕೆರೆಯ ಏಡಿಯಂತೆ!


ಎನ್. ಕೆ. ಹನುಮಂತಯ್ಯ

## ಬಿಸಿಲು ಕೋಲು

ದೇವಯಾನಿ

ಮಟ ಮಟ ಮಧ್ಯಾಹ್ನ
ನೀರವ ಮಂಚ, ಆಕಾರವಿಲ್ಲದ ದಿಂಬು
ಹೆಂಚುಗಳೆಣಿಸಿ ಕಣ್ಣವೆ
ಮುಚ್ಚುವ ಹೊತ್ತಿಗೆ
ತೂರಿ ಬರುತ್ತದೆ ಬಿಸಿಲು ಕೋಲು.

ಆಹಾ -ಹೆಂಚು ಸಂದಿನಿಂದ
ನುಸುಳಿಬಂದ ಸಣ್ಣ ಕೋಲು
ಎಷ್ಟು ನೇರ .. ಎನಿತು ದಿಟ್ಟ!
ಇಲ್ಲಿ ಮುಟ್ಟಿ, ಅಲ್ಲಿ ತಟ್ಟಿ
ಧೂಳು ಕಣಗಳ ಮೇಳ
ಧೂಳಿನಲ್ಲಿ ಬೆಳಕೋ...
ಬೆಳಕಿನಲ್ಲಿ ಧೂಳೋ...




ಚಿತ್ತಾರದ ಕಿಟಕಿ ಗಾಜು
ಮೂಲೆಯ ಜೇಡನ ಬಲೆ
ಧೂಳು ಹೊತ್ತ ಹೊತ್ತಿಗೆ

ಸಂದುಗೊಂದೆನ್ನದೆ
ನಿಚ್ಚಳ ತಿಳಿನೀರಂತೆ
ಹೀಗೆಯೇ ಬಂತೆ
ಬೆಚ್ಚಗೆ ಎದೆಯೊಳಕ್ಕ

ದೇವಯಾನಿ








## ಈ ಸಂಜೆಯೂ

ಮಂಜುನಾಥ್ ಗೀತಾ

ಮೇದ ದನಗಳು ಮರುಳುತ್ತಿವೆ
ಸೂರ್ಯ ಸೋರುತ್ತಿದ್ದಾನೆ
ಪಡುವಣ ಬಟ್ಟಲಿಗೆ
ಗೂಡು ಮಕ್ಕಳ ಕಣ್ಣ ನೆನೆದು
ಗಾಳಿಯ ಸೀಳಿವೆ ಹಕ್ಕಿ ರೆಕ್ಕೆಗಳು
ಕೂಲಿ ಅವ್ವನೆದೆ ಹಾಲಿಗೆ
ಕೊನೆಯಾಗಿದೆ ಕಾದ ಕಂದನ ಆಕ್ರಂದ
ಕತ್ತಲೊಂದಿಗೆ ಮಲಗಲು
ಸಿದ್ಧವಾಗಿದೆ ಆಕಾಶ ಮೋಡ ಹೊದ್ದು
ಉತ್ತು ಬಂದವನ ಬೆವರುಮೈಯ
ತೊಳೆದಿದೆ ಅವನದೇ ನಿಟ್ಟುಸಿರು
ತರತರತಾರೆಗಳು ಸಿಂಗಾರಗೊಳ್ಳಲಿವೆ
ಬೇಗ ಮೊಗ ತೋರಿ ಹಲ್ಲು ಕಿರಿಯಲು
ನಾಚಿವೆ ಬೆಟ್ಟಗುಡ್ಡದ ತೊಡೆ ಕಿಬ್ಬೊಟ್ಟೆಗೆ
ಚೆನ್ನಾದ ಚಂದ್ರನ ಬೆಳ್ಳಿಸರಗಿಗೆ
ಮುನಿದು ಮೈಮುರಿದಿವೆ
ಬೆಳಗಿಂದ ತುಳಿಸಿಕೊಂಡ ದೂರದಾರಿಗ
ತೆಂಗು ತೋಳು ಇಳಿಬಿಟ್ಟಿವೆ
ಇವತ್ತೂ ಆಯಿತೆಂದು ಕೆಳಕ್ಕೆ ತೋರಲು
ಹಾಗೆಯೇ ಗೆಳೆಯಾ ಆವತ್ತಿನಿಂದಲೂ
ಸುಪ್ತ ಸುಖವ ತೋಡಿ ಸುಸ್ತಾಗಿವೆ
ಈ ಜನರ ಕೈಕಾಲುಗಳು.

ಮಂಜುನಾಥ್ ಗೀತಾ






## ರಂಗೋಲಿ

**ಸಿದ್ದಾಪುರ ಸಂಜೀವ**

ಎದುರು ಮನೆಯಲ್ಲೊಂದು ಯುವಜೋಡಿ
ಬಾಗಿಲಿಗೆ ಚಿತ್ರದ ಪರದೆ
ಮೆತ್ತನೆಯ ಮಾತು,
ಕುಲು ಕುಲು ಕಾರಂಜಿ
ಅಂಗಳದಿ ನಗುವ ರಂಗೋಲಿ

ಇಪ್ಪತ್ತೆಂಟು ಚುಕ್ಕಿಗಳು
ಹತ್ತಾರು ಹೂ ಬಳ್ಳಿಗಳು
ನೂರೆಂಟು ಕನಸುಗಳ ಆಶೆಗಳು



ಒಂದು ಸಂಜೆ ಜೋರಾದ ಮಾತುಗಳು
ಮುಟ್ಟಿದ ಬಾಗಿಲಿನ ಹಿಂದೆ
ಗಂಭೀರ ವಾತಾವರಣ
ರಂಗೋಲಿ ತೆಪ್ಪಗೆ ಬಿಳಿಚಿಕೊಂಡಿತ್ತು

ದಿನವಿಡೀ ಮೌನ; ಮುನಿಸು
ಸಂಜೆಗೆ ತಿಳಿಯಾಯಿತು ಮೋಡ
ಸೆಲೆಯೊಡೆಯಿತು ಕಾರಂಜಿ
ಮರುದಿನ,
ರಂಗೋಲಿ ನಕ್ಕಿತು ಅಂಗಳದಲಿ

ಸಿದ್ದಾಪುರ ಸಂಜೀವ

## ಸಂಜೆ ಮಳೆಯ ದಾರಿ

**ಚೇತನಾ ಬಾಳಗೋಡು**

ಬಾಹುಗಳು ಉದ್ದಕೂ ಚಾಚಿ
ಕದಗಳನೆಲ್ಲ ತೆರೆದಿಟ್ಟು
ದೂರಕೂ ದಿಟ್ಟಿ ಹಾಯಿಸುತಿರೆ
ಕಣ್ಣ ನೋಟಗಳಲಿ
ಬಾನು ಪ್ರತಿಫಲಿಸುತಿದೆ
ಜಿಟಜಿಟಿಯ ಸದ್ದು
ತನ್ನೊಳಗೇನನೋ ಮೆದ್ದು
ನಮ್ಮೊಳಗೆ ಬೆರೆಯುತಿದೆ!.

ತನು ಮೀಟಿ ದಾಟಿ
ಆತ್ಮವನು ಸ್ಪರ್ಶಿಸುವ
ಭಾವಕೆಲ್ಲಿದೆ ಹೊಸತು
ಹಳತೆಂಬ ಭಾವ
ದಿನವು ಕಾಯುತ್ತೇನೆ
ಸಂಜೆ ಐದರ ಮಳೆಗೆ

ತೃಷೆಯ ತಣಿಸುವ ಜಲಕೆ
ಹುಡುಕಾಟ ವ್ಯರ್ಥವೋ,
ಸೀಳುನಾಲಗೆಗಷ್ಟು
ಆರ್ದ್ರತೆಯ ಸ್ಪರ್ಶವೋ,
ಎದೆಯ ಕರೆ ಕೇಳೆಯಾ,
ದಾರಿ ಎಲ್ಲಿದೆ ಪ್ರಭುವೆ

ಬಿತ್ತು ಎದೆಯೊಳಗಿಷ್ಟು ಬೀಜ
ಅಲ್ಲೊಂದು ಹೆಮ್ಮರವೆ ಎದ್ದುಬರಲಿ
ಜಗ ರಕ್ಷೆ ಪಡೆವಂತೆ!

ಚೇತನಾ ಬಾಳಗೋಡು




## ಪುಟ್ಟ ಸಸಿ ಅಷ್ಟು ಸಾಕು

ಪುಟ್ಟ ಸಸಿಯೊಂದನು ತಂದು ನೆಟ್ಟೆನು
ಪುಟ್ಟ ಸಸಿ ಕವಲೊಡೆಯಿತು ಬೆಳೆಯಿತು
ಅಷ್ಟು ಸಾಕು ಕುಳಿತಿತು-ಪುಟ್ಟ ಹಳದಿ ಕೀಟ
ಪುಟ್ಟ ಸಸಿ ಏರುತ್ತ ಮೂಡಿತು ಗಿಡವು
ಅಷ್ಟು ಸಾಕು ಅರಳಿದವು ಪುಟಾಣಿ ಹೂಗಳು
ಪುಟ್ಟ ಪುಟ್ಟ ಹೂ ಕರೆದವು
ಪುಟ್ಟ ದುಂಬಿಗಳ ಹಾರು ಹಕ್ಕಿಗಳ
ಅಷ್ಟು ಸಾಕು ಮನತಣಿಯೆ ಹೀರಿದವು ಮಕರಂದ
ಪುಟ್ಟ ಹೂಗಳು ಹಣ್ಣಾಗಿ ತೊನೆದವು
ಅಷ್ಟು ಸಾಕು-ಸವಿದವು ಅಳಿಲುಗಳು
ಪುಟ್ಟ ಅಳಿಲುಗಳು ನಕ್ಕವು ನಲಿದವು
ಅಷ್ಟು ಸಾಕು ತಲೆದೂಗಿತು ಮರವು
ಬೇರೆಲ್ಲಿರುವುದೋ ಇಲ್ಲಿ ಹೂವಾಯಿತು ಮನವು

## ಮೀಸಲಿರಿಸು ಕಂಬನಿಯ ಕಿರುಬಿಂದುವೊಂದ...

ಮೀಸಲಿರಿಸು ನಿನ್ನ ಹೃದಯದ
ಕಂಬನಿಯ ಕಿರು ಬಿಂದುವೊಂದ
ಜೇನುಗಲದು ಹನಿಹನಿಯ ತೆರದಿ
ಸುರಿಯಲಿ ಅದು ಧಾರೆಯಾಗಿ
ತಂಪು ಜೀವದೊರತೆಯಾಗಿ
ಜುಳು ಜುಳು ಜುಳು ಹೊಳೆಯೇ ಆಗಿ
ಹರಿದ ಹೃದಯಗಳ ತಣಿಸಿ







ಸುಕನ್ಯಾ ಕಳಸ


# ಕೀಲಿ ಮಣೆಯ ಮೇಲೆ

ಅವನ ಘನಗಂಭೀರ ವಾದಗಳು
ಸದಾ ಅಂಟಿರುತ್ತವೆ ಕಂಪ್ಯೂಟರ್ ಟೇಬಲ್ಲಿನಡಿಗೆ
ಎಂದೂ ತಾಗದೆ ಮಣ್ಣಿನ ಬಿಸುಪಿಗೆ
ಇರುತ್ತವೆ ಷೂಗಳೊಳಗೆ ಏಸಿ ರೂಮಿನ ಒಳಗೆ
ಕೈಗಳು ಕೀಲಿಸಿರುತ್ತವೆ ಕೀಲಿಮಣೆಗೆ
ಎಂದೂ ತಾಗದೆ ಹೂವಿನೆಸಳ ನುಣುಪಿಗೆ
ಕಣ್ಣುಗಳು ಹೂತಿರುತ್ತವೆ ಕಲರ್ ಮಾನಿಟರೊಳಗೆ
ಎಂದೂ ಅರಳದೆ ಪ್ರಕೃತಿಯೊಡಲ ಒನಪಿಗೆ
ಕಿವಿಗಳು ಕೇಳುತ್ತವೆ ಬರೀ ನೋಟುಗಳ ಪರಪರ
ಎಂದೂ ಆಲಿಸದೆ ಹಕ್ಕಿಗಳಿಂಚರ
ಮತ್ತವನ ಪುಟ್ಟ ಮಗ
ಉಲ್ಲಾಸದ ಚಿಟ್ಟೆಯಾಗಿ ಹಾರುತ್ತಿದ್ದಾನೆ
ಇಡೀ ಅಂಗಳದ ತುಂಬಾ
ಕುಣಿಯುತ್ತಾನೆ ಅಮ್ಮ ಬೆಳೆಸಿದ ಹೂ ಗಿಡಗಳ ನಡುವಿನಲ್ಲಿ
ಕರೆಯುತ್ತಾನೆ ''ಡ್ಯಾಡೀ ಡ್ಯಾಡೀ ನೋಡಿ ಇಲ್ಲಿ!
ಎಷ್ಟು ಚಂದದ ಹೂವುಗಳು! ನೋಡಿ ಎಂಥಾ ಬಣ್ಣಗಳು!''

ಕಂಪ್ಯೂಟರ್ ಮನುಷ್ಯನ ಮೊಗದ ಮೇಲೆ
ಅಕಾಲ ಸುಕ್ಕು
ಎಳೆ ತಲೆಯ ಮೇಲೆಲ್ಲಾ
ಮಾಸಲು ಬಿಳಿ ಕೂದಲು
ಕಣ್ಣಿನಂಗಳದಲ್ಲಿ ಸತ್ತು ಬಿದ್ದಿದೆ
ಒಂದು ಚಿಟ್ಟೆ.








## ಜನಪದ

ಹೇಳಿದವರು: ಹೊನ್ನಪ್ಪ ಸಂಕು ಪಟಗಾರ

ಸಂಗ್ರಹ: ಎಲ್.ಆರ್. ಹೆಗಡೆ

# ಪದ್ಮಗಂಧಿನಿ

ಒಂದು ಊರಿನಲ್ಲಿ ಪದ್ಮಾವತಿ ಎಂಬ ಹೆಸರಿನ ವೇಶ್ಯೆಯಿದ್ದಳು. ಅವಳಿಗೆ ಪದ್ಮಗಂಧಿನಿ ಎಂ ಮಗಳಿದ್ದಳು. ಮಗಳು ಸುಂದರಿ. ಜಕಣಾಚಾರಿ ಕಟ್ಟಿದ ಮನೆ. ಅದಕ್ಕೆ ಅವಳು ಒಂದು ಫಲಕ ಬರೆ ಬಾಗಿಲಿನ ಮುಂದೆ ತೂಗಹಾಕಿಸಿದ್ದಳು. ಅದರಲ್ಲಿ ಕೆಳಗಿನಂತೆ ನಿಬಂಧನೆ ಇತ್ತು. ತನ್ನ ಮನೆಗೆ ಬಂದು ತ ಮಗಳನ್ನು ಕೂಡಲು ಬಯಸುವವರು, ಒಳಮನೆಯಲ್ಲಿ ಪ್ರವೇಶ ಮಾಡುವ ಮೊದಲು, ಒಂದಾ ಮೇಲೆ ಒಂದರಂತೆ ನಾಲ್ಕು ಕೋಣೆಗಳನ್ನು ಹೊಕ್ಕು, ದಾಟಿ ಬರಬೇಕು. ಮೊದಲಿನ ಕೋಣೆಯಲ್ಲಿ ಒ



ಕ್ಷೌರಿಕ ಇರುತ್ತಾನೆ. ಮೊದಲು ಅವನಿಗೆ ಸಮಾಧಾ ಮಾಡಬೇಕು. ಎರಡನೇ ಕೋಣೆಯಲ್ಲಿ ಆನೆಯಿ ಅದಕ್ಕೂ ಸಮಾಧಾನ ಮಾಡಬೇಕು. ಮೂರನ ಕೋಣೆಯಲ್ಲಿ ಹುಲಿಯಿದೆ. ಅದಕ್ಕೂ ಸಮಾಧಾ ಮಾಡಬೇಕು. ನಾಲ್ಕನೇ ಕೋಣೆಯಲ್ಲಿ ಸರ್ಪ ಇ ಅದಕ್ಕೂ ಸಮಾಧಾನ ಮಾಡಿ ಮುಂದೆ ಮನೆಯ ಒಳಗಿ ಕೋಣೆಯ ಪ್ರವೇಶ ಮಾಡಿದ ನಂತರ, ಒಳ ಕೋಣೆ ಬಂದರೆ ಅಲ್ಲಿ ಒಂದು ಬೆಕ್ಕು ಇದೆ. ಅದರ ತಲೆಯ ಮೇ ಹಣತೆಯ ದೀಪ ಹಚ್ಚಿದ್ದು ಉಂಟು, ಅದನ್ನು ನಂದಿಸಿದ ಮೇಲೆ ತನ್ನ ಮಗಳ ಸಂಪರ್ಕ ಮಾಡಬೇಕು

ಬಹಳ ಜನರು ಅವಳ ಮಗಳ ಮೇಲೆ ಆಸೆ ಮಾಡಿ ಬಂದರು. ಆದರೆ ಸಾವಿರಾರು ಜನ ಹೋದರೂ ಅವಳನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಮೊದಲಿನ ಕೋಣೆಯಲ್ಲಿ ಕೂವನ್ನು ಹಿಡಿದು ನಿಂತಿ ಕ್ಷೌರಿಕನನ್ನು ನೋಡಿಯೇ ಹೆದರಿ ಕೆಲವರು ಹಿಂದೆ ಹೋದರು. ಮುಂದೆ ಹೋದ ಸಾವಿರಾರು ಜನರ ಕ್ಷೌರಿಕನೇ ಕೊಂದು ಹಾಕಿದನು. ಆನೆಯು ಎರಡನೇ ಕೋಣೆಯಲ್ಲಿ ಹೊಕ್ಕ ಒಬ್ಬನನ್ನು ಕೆಡವಿ ಮೆ ಕೊಂದು ಹಾಕಿತು. ಹುಲಿಯು ಅವನನ್ನು ತಿಂದಿತು. ತಪ್ಪಿಸಿಕೊಂಡು ನಾಲ್ಕನೇ ಕೋಣೆಯನ್ನು ಪ್ರವೇ ಮಾಡಿದವರನ್ನು ಸರ್ಪವು ಕಡಿದು ಕೊಂದಿತು. ಯಾರೂ ಹೋದವರು ಹಿಂದೆ ಬರಲಿಲ್ಲ.

ಒಬ್ಬ ಅರಸು ಮಗನು ಇದರ ರಹಸ್ಯ ತಿಳಿಯಬೇಕು ಎಂದು ನಿಶ್ಚಯಿಸಿ ಮನೆಯನ್ನು ಕಟ್ಟಿದ ಜಕಣಾಚಾರಿ ಎಂದು ತಿಳಿದುಕೊಂಡು ಅವನ ಹತ್ತಿರ ಹೋದನು. ಜಕಣಾಚಾರಿಯ ಹತ್ತಿರ, ''ಏನಪ್ಪ ಪದ್ಮಾವತಿ ವೇಶ್ಯೆಯ ಮನೆಗೆ ಅರಸರೂ, ಬೇರೆ ಜನರೂ ಹೋದವರು ಯಾರೂ ತಿರುಗಿ ಬರಲಿ ನಾಶವಾದರು, ಅವಳನ್ನು ಹೇಗೆ ಹೇಗೆ ಗೆಲ್ಲಬೇಕಾಗುತ್ತದ?'' ಅಂತ ಕೇಳಿದನು.




ಜಕಣಾಚಾರಿ ಏನೆಂದನೆಂದರೆ, ''ಎಲಾ ರಾಜ, ನಾನು ಹೇಳಿದ ರೀತಿಯಾಗಿ ತಯಾರಿ ಮಾಡಿಕೊಂಡು ಹೋದರೆ ನೀನು ಅವಳನ್ನು ಗೆಲ್ಲಬಹುದು. ಮೊದಲಿಗೆ ಒಬ್ಬ ಕೆಲಸಿ (ಕ್ಷೌರಿಕ) ಸಿಗುತ್ತಾನೆ. ಒಂದು ಆಳೆತ್ತರದ ಮರದ ಗೊಂಬೆಯನ್ನು ನೀನು ಅವನಿಗೆ ಕೊಡಬೇಕು. ಗೊಂಬೆಯನ್ನು ಕೊಟ್ಟ ಕೂಡಲೆ ಅದರ ಕ್ಷೌರ ಮಾಡಲಿಕ್ಕೆ ಅವನು ಕೂತುಕೊಳ್ಳುವನು. ನೀನು ಮತ್ತೊಂದು ಕೋಣೆಗೆ ಹೋಗುವಾಗ ಮೊದಲೇ ಒಂದು ಕಬ್ಬಿನ ಹೊರೆಯನ್ನು ತಕ್ಕೊಂಡು ಬಂದಿರಬೇಕು. ಹೋದ ಕೂಡಲೆ ಆನೆ ನಿನ್ನನ್ನು ಕೊಲ್ಲಲು ಬರುವುದು. ಆಗ ನೀನು ಕಬ್ಬಿನ ಹೊರೆಯನ್ನು ಅದರ ಮುಂದೆ ಒಗೆಯಬೇಕು. ಅದು ಕಬ್ಬು ತಿನ್ನುತ್ತಾ ಇರುತ್ತದೆ. ನಿನ್ನ ತಂಟೆಗೆ ಬರುವುದಿಲ್ಲ. ನೀನು ಮುಂದಿನ ಕೋಣೆಗೆ ಹೋಗುವಾಗ ಹಾಗೆಯೇ ಹೋಗಬಾರದು. ನಿನ್ನ ಜೇಬಿನಲ್ಲಿ ನಾಯಿಮರಿಯನ್ನು ಹಾಕಿಕೊಂಡೇ ಬಂದಿರಬೇಕು. ಮೂರನೇ ಕೋಣೆಯಲ್ಲಿರುವ ಹುಲಿಗೆ ನಾಯಿಮರಿಯನ್ನು ತಿನ್ನಲಿಕ್ಕೆ ಕೊಟ್ಟು ಮುಂದೆ ನಾಲ್ಕನೇ ಕೋಣೆಗೆ ಹೋಗುವಲ್ಲಿ ಒಂದು ಭಯಂಕರ ಸರ್ಪ ಇದೆ. ಅದು ನಿನ್ನನ್ನು ಕೊಲ್ಲಲು ಹೆಡೆ ಬಿಚ್ಚಿಕೊಂಡು ಬರುವುದು. ಅದಕ್ಕೆ ಕೊಡಲು ನಿನ್ನ ಕಿಸೆಯಲ್ಲಿ ಹತ್ತು ಕೋಳಿ ಮೊಟ್ಟೆಗಳನ್ನು ಮೊದಲೇ ಹಾಕಿಕೊಂಡು ಬಂದಿರಬೇಕು. ಕಿಸೆಯಿಂದ ತೆಗೆದು ಆ ಕೋಳಿ ಮೊಟ್ಟೆಗಳನ್ನು ಅದಕ್ಕೆ ತಿನ್ನಲು ಕೊಡಬೇಕು. ಅದು ತಿನ್ನುತ್ತಿರುವಾಗ ನೀನು ಐದನೆಯ ಕೋಣೆಗೆ-ಪದ್ಮಗಂಧಿನಿಯ ಅಂತಃಪುರಕ್ಕೆ-ಹೋಗಬೇಕು. ಅಲ್ಲಿ ಬೆಕ್ಕಿನ ತಲೆಯ ಮೇಲೆ ದೀಪ ಹಚ್ಚಿ ಇಟ್ಟಿರುತ್ತಾಳೆ. ಆ ದೀಪವನ್ನು ನೀನು ಕೈಯಿಂದ ಮುಟ್ಟದೆಯೇ ನಂದಿಸಬೇಕು. ಅದಕ್ಕೆ ಒಂದು ಉಪಾಯ ಅಂದರೆ ಒಂದು ಇಲಿಯನ್ನು ನಿನ್ನ ಮತ್ತೊಂದು ಕಿಸೆಯಲ್ಲಿ ಇಟ್ಟುಕೊಂಡೇ ಬಂದವನು, ಇಲಿಯನ್ನು ಆ ಬೆಕ್ಕಿನ ಮುಂದೆ ಒಗೆಯಬೇಕು. ಬೆಕ್ಕು ಗಾಬರಿಯಿಂದ ಇಲಿಯನ್ನು ಹಿಡಿಯಲು ಓಡಿ ಹೋಗುವದು. ಆಗ ಅದರ ತಲೆಯ ಮೇಲೆ ಇಟ್ಟಿದ್ದ ಹಣತಿ ದೀಪ ಕೆಳಗೆ ಬಿದ್ದು ನಂದಿ ಹೋಗುವುದು. ಅಗ ಅಲ್ಲೇ ಕಾದು ಕುಳಿತಿರುವ ಸುರಸುಂದರಿ ಪದ್ಮಗಂಧಿನಿ ನಿನ್ನ ಸೇವೆಗೆ ಸಿದ್ಧಳಾಗುವಳು'' ಎಂದು ಹೇಳಿದನು.



ಜಕಣಾಚಾರಿಯು ಹೇಳಿದಂತೆ ಅರಸು ಮಗನು ಎಲ್ಲಾ ಸಾಹಿತ್ಯವನ್ನು-ಮರದ ಗೊಂಬೆ, ಕಬ್ಬಿನ ಹೊರೆ, ನಾಯಿಮರಿ, ಕೋಳಿಮೊಟ್ಟೆ, ಎಲ್ಲಾ-ತಕ್ಕೊಂಡೇ ಹೋದನು. ಜಕಣಾಚಾರಿ ಹೇಳಿದ ಪ್ರಕಾರ ಎಲ್ಲವನ್ನೂ ಕ್ರಮವಾಗಿ ಕೊಡುತ್ತ, ಕೆಲಸಿ, ಆನೆ, ಹುಲಿ, ಸರ್ಪ ಎಲ್ಲಾ ಇರುವ ಕೋಣೆಗಳನ್ನು ಸುರಕ್ಷಿತವಾಗಿ ದಾಟಿ ಅಂತಃಪುರದೊಳಗೆ ಹೋಗಿ ಬೆಕ್ಕಿನ ಮುಂದೆ ಇಲಿಯನ್ನು ಬಿಟ್ಟನು. ಬೆಕ್ಕು ಇಲಿಯನ್ನು ಹಿಡಿಯಲು ಓಡಿಹೋಯಿತು. ದೀಪ ಕೆಳಗೆ ಬಿದ್ದು ನಂದಿಹೋಯಿತು.

ಆಗ ಪದ್ಮಗಂಧಿನಿ, ''ಇಂಥಾ ವ್ಯಕ್ತಿ ಜಗತ್ತಿನಲ್ಲೇ ಇಲ್ಲ. ನಾನು ನಿನಗೆ ಮನಸೋತೆನು. ನನ್ನ ಆಸ್ತಿ, ಬಂಗಾರ ಎಲ್ಲವನ್ನೂ ನಿನಗೆ ಒಪ್ಪಿಸಿಬಿಡುವೆನು. ನೀನು ನನ್ನನ್ನು ಕೂಡು'' ಎಂದು ಹೇಳಿದಳು. ಅದರಂತೆ ಅವರು ರಾಜೆಯಿಂದ ಕೂಡಿಕೊಂಡರು. ಇಲ್ಲಿಗೆ ಕತೆ ಮುಗಿಯಿತು.



# ಸನಿಹ

ಜಾಗೇರಿ್ರ


## ಜಡೆಯ ಆಚೆಯ ಮುಖ

ಪಕ್ಕಾ ಅಯ್ಯರ್ ಛಾಪಿನ ಮುಖದ ನನ್ನ ಫ್ರೆಂಡಿಗೆ ಮೈಕೆಲ್ ಜಾಕ್ಸನ್ ಅಂದರೆ ಪಂಚಪ್ರಾಣ. ಆದ ಅವಳ ಹೆಬ್ಬಾವಿನಂಥ ಜಡೆ, ದೊಡ್ಡ ಕುಂಕುಮ, ಗೌರಮ್ಮನಂತೆ ಹೊದ್ದ ದುಪ್ಪಟ್ಟಾ, ತಲೆತಗ್ಗಿಸಿ ನಡೆ ಶೈಲಿ ಎಲ್ಲವನ್ನೂ ಒಂದೇ ನೋಟದಲ್ಲಿ ನೋಟ್ ಮಾಡಿಕೊಂಡುಬಿಡುವ ಕ್ಯಾಸೆಟ್ ಅಂಗಡಿಂ ಹುಡುಗ, 'ಕೇಳಿ, ಚೆನ್ನಾಗಿದೆ' ಅಂತ ಅವಳಿಗೆ ಯಾವಾಗಲೂ ರೆಕಮೆಂಡ್ ಮಾಡುವುದು, ಎಂ.ಎಸ ಸುಬ್ಬುಲಕ್ಷ್ಮಿಯ ವೆಂಕಟೇಶ ಸುಪ್ರಭಾತದ ಟೇಪನ್ನೇ. 'ಎಂ.ಎಸ್. ಬೇಡ. ಬ್ರೂಸ್ ಸ್ಪ್ರಿಂಗ್‌ಸ್ಟೀನ್ ಕೊ ಅಂತ ಹೇಳಿ ಅವನು ಮನಸ್ಸಿನಲ್ಲಿ ಕಟ್ಟಿಕೊಂಡ ಇಮೇಜನ್ನು ಒಂದೇ ಏಟಿಗೆ ಮುರಿಯುವ ಮನ ಬಾರದೆ ನಮ್ಮ ಹುಡುಗಿ ಏನೂ ಕೊಳ್ಳದೆ ಬಂದುಬಿಟ್ಟದ್ದೂ ಉಂಟು.

'ಮೊದಲು ಈ ಜಡೆ ಕತ್ತರಿಸಬೇಕು' ಅಂತ ಆಗಾಗ ಹೇಳುತ್ತಿದ್ದರೂ, ಅಪ್ಪನ ಕೋಪ ಅಂಜಿಯೋ, ಅಮ್ಮನ ಮಲ್ಲಿಗೆ ಹಂಬಿನ ಮುಖ ನೋಡಿಯೋ, ಪಂಕಾತಿಪಂಕ್ ಹುಡು ರಕ್ತದಲ್ಲಿಯೂ ಎಲ್ಲೋ ಅಡಗಿ ಕೂತ ನಾಗವೇಣಿಯರ ಮೇಲಿನ ವ್ಯಾಮೋಹಕ್ಕೆ ಬೆಲೆ ಕೊಟ್ಟೋ ಗ ಮನಸ್ಸಿನ ನಿರ್ಧಾರ ಮಾಡಿರಲಿಲ್ಲ.

ಒಂದೈದಾರು ವರ್ಷದ ನಂತರ ಸಿಕ್ಕ, ಈಗ ಅಮ್ಮ ಆಗಿರುವ ಗೆಳತಿಯ ಕೂದಲು ಹೆಗಲವ ಮಾತ್ರ ಇತ್ತು. ಐದು ವರ್ಷ ವಯಸ್ಸು ಕಡಿಮೆ ಆದ ಹಾಗೆ ಕಾಣುತ್ತಿದ್ದಳು. 'ಅಂತೂ ಧೈಯ ಮಾಡಿಬಿಟ್ಟೆಯಲ್ಲ' ಅಂದೆ. 'ನನ್ನ ಮಗನ ಕೂದಲೆಳೆದಾಟದಲ್ಲಿ ಸಿಕ್ಕು ಬಿಡಿಸಿ ಬಿಡಿಸಿ ಸುಸ್ತಾಗಿಹೋಗ್ತಿ ಒಂದು ದಿನ ಯಾರಿಗೂ ಹೇಳದೆ, ಮತ್ತೆ ಮನಸ್ಸು ಹೊರಳುವುದಕ್ಕೆ ಮುಂಚೆಯೇ ಕತ್ತರಿಸಿಬಿ ಅಂದಳು. 'ಅಂತೂ ವೆಂಕಟೇಶ ಸುಪ್ರಭಾತದಿಂದ ಮುಕ್ತಿ ಸಿಕ್ಕಿತಲ್ಲಾ!' ಅಂದುಕೊಂಡು ನಕ್ಕೆವು.

ಜಡೆ, ಕುಂಕುಮ, ಹೂವು, ಸೀರೆ ಇತ್ಯಾದಿ ಸಂಕೇತಗಳು ನಮ್ಮ ಮನಸ್ಸಿನಲ್ಲಿ ನಮಗರಿವಿಲ್ಲದೇ ಮೂಡಿಸಿಬಿಡುವ ಇನ್‌ಸ್ಟೆಂಟ್ ವ್ಯಕ್ತಿ ಚಿತ್ರಣಗಳು ಕುತೂಹಲ ಹುಟ್ಟಿಸುವಂಥವು. ಉದ್ದ ಜಡೆ, ಸೀ ಎಲ್ಲ ಸಂಪ್ರದಾಯಬದ್ಧತೆಯ ಸಂಕೇತವಾದರೆ, ಗಿಡ್ಡ ಕೂದಲು, ಗಿಡ್ಡ ಸ್ಕರ್ಟು ಆಧುನಿಕತೆ ಸ್ವೇಚ್ಛೆಯ ಸಂಕೇತ. ಜಡೆ ಇದ್ದು, ದುಪ್ಪಟ್ಟಾ ಇದ್ದು, ಬಿಳಿ ತೊಗಲಿದ್ದು, ಕುಂಕುಮ ಇಲ್ಲದಿದ್ದರೆ ಮು ಹುಡುಗಿ ಎನ್ನುವ ತೀರ್ಮಾನ. ಜೀನ್ಸ್ ಪ್ಯಾಂಟು, ಹವಾಯಿ ಚಪ್ಪಲಿ, ದೊಡ್ಡ ಕುಂಕುಮ ಇದ್ದರೆ NG ನಲ್ಲಿ ಕೆಲಸ ಮಾಡುವ ಹುಡುಗಿ ಇರಬಹುದೆನ್ನುವ ಅನುಮಾನ.



ನಮ್ಮ ಸರಳೀಕೃತ ಕಲ್ಪನೆಗಳು 10ರಲ್ಲಿ 9 ಬಾರಿ ಗುರಿ ತಪ್ಪಿದರೂ, ಡಿಸ್ಕೋತೆಕ್ ಹಾಗೂ ಕರವಾಚೌತ್ ವೃತ್ತದ ನಡುವೆ ಹಾಯಾಗಿ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಎಗರುವ ಗೆಳತಿಯರ ಗುಂಪೇ ಇದ್ದರೂ, 11ನೇ ಬಾರಿಯೂ ನಾವು ರಕ್ಕಂತ ಹೊಸೆಯುವ ಫಾರ್ಮುಲಾ ಮತ್ತೆ ಅದೇ. 'ಜಡೆಯ ಆಚೆ ತಿರುಗಿಸಿದ ಮುಖ'ದ ಚರ್ಯೆಯನ್ನು ಸೆರೆ ಹಿಡಿದು, ಫ್ರೇಮಿನೊಳಗೆ ಕೂರಿಸುವ ಹಠ.

ಅದೆಷ್ಟು ಕನ್ನಡ ಸಿನಿಮಾಗಳಲ್ಲಿ 'ಲೂಸಿ' ಅಂತಲೋ 'ಮೇರಿ' ಅಂತಲೋ ಹೆಸರಿಟ್ಟುಕೊಂಡು ಬಾಸ್‌ಗೆ 'ಕಮ್ ಆನ್' ದೃಷ್ಟಿ ಬೀರುವ ಗಿಡ್ಡ ಕೂದಲಿನ, ಗಿಡ್ಡ ಸ್ಕರ್ಟಿನ ಹುಡುಗಿಯರು 'ಇದೇನು ಸಭ್ಯತೆ, ಇದೇನು ಸಂಸ್ಕೃತಿ' ಅಂತ ಉದ್ದ ಜಡೆಯ ಹೀರೋಯಿನ್ನಿನಿಂದ ಉದ್ದುದ್ದ ಲೆಕ್ಚರ್ ಕೇಳಿಲ್ಲ! ಹೀರೋಯಿನ್ನುಗಳು 'ಮೈಚಳಿ ಬಿಟ್ಟು' ನಟಿಸುವ ಚಿತ್ರಗಳಲ್ಲೂ ಕೊನೆಯ ಸೀನು ತಲುಪುವ ಹೊತ್ತಿಗೆ ಆಕೆ ಜಡೆ, ಕುಂಕುಮ ಸಮೇತವಾಗಿ 'ಒಳ್ಳೆಯ ಹುಡುಗಿ'ಯಾಗಿ ತಯಾರಾಗಿಬಿಟ್ಟಿರುವುದು ಗ್ಯಾರಂಟಿ.

ನಮ್ಮ ಮನಸ್ಸಿನ ಪಟದಲ್ಲಿ ಮೂಗಿನಲ್ಲಿ ವಜ್ರದ ನತ್ತು ಹೊಳೆಸುತ್ತಾ, ಪುಡಿ ಕುಂಕುಮ ಇಟ್ಟುಕೊಂಡಿರುವ ಸೆಕ್ರೆಟರಿ, ಬಾಸಿನ ಜೊತೆ ಚೆಲ್ಲುಚೆಲ್ಲಾಗಿ ಮಾತನಾಡುವ ದೃಶ್ಯವಾಗಲೀ, ರಾಮನವಮಿ ಕಚೇರಿಯಲ್ಲಿ ಬಾಯ್‌ಕಟ್ಟಿನ ಹುಡುಗಿ ಲೂಸ್ ಪ್ಯಾಂಟು, ಲೂಸ್ ಟೀಶರ್ಟು ತೊಟ್ಟು 'ನಗುಮೋಮು' ಹಾಡುವ ದೃಶ್ಯವಾಗಲಿ ಖಂಡಿತ ಎಂದೂ ಮೂಡುವುದಿಲ್ಲ. ಸೋನಿಯಾ ಗಾಂಧಿಯ ವಿರುದ್ಧ ಸುಷ್ಮಾ ಸ್ವರಾಜ್ ನಮಗೆ ಭಾರತೀಯತೆಯೇ ಮೂರ್ತಿವೆತ್ತಂತೆ ಕಾಣುವುದರಲ್ಲಿ ಆಕೆಯ ಕಣ್ಣಿಗೆ ರಾಚುವಂತೆ ಕಾಣುವ ಕುಂಕುಮ, ಬೈತಲೆಯಲ್ಲಿ ಒತ್ತಿ ಒತ್ತಿ ತುಂಬಿದ ಸಿಂಧೂರದ ಪಾತ್ರ ಮಹತ್ತರವಾದದ್ದೇ. ಉಷಾ ಉತ್ತುಪ್‌ನಂಥ ವ್ಯಕ್ತಿಯ ಇಮೇಜು ನಮ್ಮ ಮನಸ್ಸಿನಲ್ಲಿ ಉಳಿಯುವುದು 'ಸಂಸ್ಕೃತಿ-ಸಭ್ಯತೆ- ಸೌಂದರ್ಯ'ದ ಸಮ್ಮಿಲನದ ನಮ್ಮ ಮಹಾ ಸಂಕೇತಗಳನ್ನು 'ಸ್ವೇಚ್ಛೆ-ಆಧುನಿಕತೆ'ಯ ಸಂಕೇತಗಳ ಜೊತೆ ಬೆರೆಸಿ, ನಮ್ಮ ಫಾರ್ಮುಲಾಗಳನ್ನು ಕಾಲು ಮೇಲೆ, ತಲೆ ಕೆಳಗೆ ಮಾಡಿ ನಿಲ್ಲಿಸಿ ಶಾಕ್ ಮಾಡುವ ತಂತ್ರದಿಂದಲೇ.

'ಕೃಷ್ಣಾ ನೀ ಬೇಗನೆ ಬಾರೋ' ಹಾಡನ್ನು ಡ್ರಮ್ ಬೀಟಿಗೆ ಹಾಡುವುದು ಸಾಮಾನ್ಯ ಆಗಿ ಹೋಗಿರುವ, 'ಎತ್ನಿಕ್ ಸ್ಟೈಲು'ಗಳು ಫ್ಯಾಷನ್ ಗುರುಗಳಿಗೆ ಪ್ರೀತಿಪಾತ್ರ ಆಗಿರುವ ನಮ್ಮ ಈ ಸಂದರ್ಭದಲ್ಲಿ ಇನ್ನೂ ಜಡೆ ಅಂದರೆ 'ಒಳ್ಳೆ, ಚೆಂದ ಹುಡುಗಿ' ಇಮೇಜು ಅಂತೆಲ್ಲ ಅನ್ನುವುದು ಹಳೇ ಕತೆ. ಯಾವ ಇಮೇಜೂ ನಿಂತ ನೀರಲ್ಲ ಅಂತೆಲ್ಲ ಅನ್ನಬೇಡಿ. ಗಾಗ್ರಾ ಚೋಲಿಗೆ, ಬಾಂದನಿ ಬಟ್ಟೆಗೆ 'ಎತ್ನಿಕ್ ಚಿಕ್' ಸ್ಥಾನ ದೊರಕಿರಬಹುದು. ಆದರೆ ಕೊಬ್ಬರಿ ಎಣ್ಣೆ ಹಚ್ಚಿ, ಗಟ್ಟಿ ಹೆಣೆದ ಜಡೆಗೆ ಖಂಡಿತ ಸಿಕ್ಕಿಲ್ಲ. ■



# ಕೆಂಪುಗಡ್ಡ

ಜಪಾನಿನ ಹಳ್ಳಿಗಾಡಿನ ಆಸ್ಪತ್ರೆಯೊಂದರಲ್ಲಿ ಆಗತಾನೆ ವಿಶ್ವವಿದ್ಯಾಲಯದ ಕೋರ್ಸ್ ಮುಗಿಸಿದ್ದ ವೈದ್ಯ ವಿದ್ಯಾರ್ಥಿಯು ತನ್ನ ಆಸೆಗೆ ವಿರುದ್ಧವಾಗಿ, ಆರು ತಿಂಗಳ ಪ್ರಾಯೋಗಿ ತರಬೇತಿಯನ್ನು ಹಳ್ಳಿಗಾಡಿನ ಹಿಂದುಳಿದ ಪ್ರದೇಶದ ಸರ್ಕಾರಿ ಆಸ್ಪತ್ರೆಯೊಂದರ ಪಡೆಯಬೇಕಾಗಿ ಬರುತ್ತದೆ. ಅವನಿಗೋ ತಾನು ಚಕ್ರವರ್ತಿಯ ಆಸ್ಥಾನದಲ್ಲಿ ಕುಲೀನ ವೈದ್ಯನಾಗಬೇಕೆಂಬ ಆಕಾಂಕ್ಷೆ. ಅದಕ್ಕೆ ಅನುವಾಗುವಂತೆ ರಾಜಧಾನಿಯ ಯಾವುದಾದರ ಸುಸಜ್ಜಿತ, ಪ್ರತಿಷ್ಠಿತ ಆಸ್ಪತ್ರೆಯಲ್ಲಿ ತನ್ನ ಪ್ರಾಯೋಗಿಕ ತರಬೇತಿಯನ್ನು ಪಡೆಯ ಬಯಸಿರುತ್ತಾನೆ. ಆದರೆ ಅವನನ್ನು ಕೊಳಕು ರೋಗಿಗಳಿಂದ ತುಂಬಿದ, ಅಸಹ್ಯಕ ವಾತಾವರಣದ, ಗಬ್ಬು ವಾಸನೆಯಿಂದ ತುಂಬಿದ ಗ್ರಾಮೀಣ ಆಸ್ಪತ್ರೆಗೆ ತರಬೇತಿಗಾ ಕಳಿಸಲಾಗಿರುತ್ತದೆ. ಅಲ್ಲಿ ಅವನು 'ಕೆಂಪು ಗಡ್ಡ' ಎಂದೇ ಪ್ರಸಿದ್ಧನಾದ ಮುಖ್ಯ ಡಾಕ್ಟರ ಬಳಿ ಕೆಲಸ ಕಲಿಯಬೇಕಿರುತ್ತದೆ.

ತಾನು ವಿಶ್ವವಿದ್ಯಾನಿಲಯದಲ್ಲಿ ಪಡೆದಿರುವ ಆಧುನಿಕ ವೈದ್ಯಕೀಯ ಜ್ಞಾ ಶ್ರೇಷ್ಠವಾದುದು, ಈ 'ಕೆಂಪುಗಡ್ಡ'ದ ಬಳಿ, ಈ ಕೊಂಪೆಯ ಆಸ್ಪತ್ರೆಯಲ್ಲಿ ತಾ ಕಲಿಯಬೇಕಾದ್ದು ಏನೂ ಇಲ್ಲ ಎಂಬ ಧೋರಣೆಯಿಂದ ಪ್ರಾರಂಭವಾಗಿ, ಒ ಡಾಕ್ಟರನಿಗೆ ಅಗತ್ಯವಾಗಿರುವುದು ಪುಸ್ತಕದ ಜ್ಞಾನ ಮಾತ್ರವಲ್ಲ ರೋಗಿಗಳನ್ನು ಅರ್ಥ ಮಾಡಿಕೊಳ್ಳುವ ಅಂತಃಕರಣ, ಸಹನೆ ಮತ್ತು ರೋಗ ವಾಸಿ ಮಾಡುವ ಹಠ ಎಂಬುದ ಈ ತರುಣ ಡಾಕ್ಟರ್ ಅರ್ಥಮಾಡಿಕೊಳ್ಳುತ್ತಾನೆ. ಚಿತ್ರದ ವಸ್ತು. ಈ ಸತ್ಯವ ಕಂಡುಕೊಳ್ಳಬೇಕಾದರೆ ಅವನು ಹಲವಾರು ಅನುಭವಗಳ ಮೂಲಕ ಸಾಗಿ ಪಯ ಮಾಡಬೇಕಾಗುತ್ತದೆ.

ಆಸ್ಪತ್ರೆಯಲ್ಲಿ ಸುಂದರಳಾದ ಮಾನಸಿಕ ರೋಗಿಯೊಬ್ಬಳಿರುತ್ತಾಳೆ. ಅವ ಅಪಾಯಕಾರಿಯಾದ್ದರಿಂದ ಅವಳಿರುವಲ್ಲಿಗೆ ಹೋಗಬಾರದೆಂದು 'ಕೆಂಪುಗಡ ಹೇಳಿರುತ್ತಾನೆ. ಆದರೆ ಆ ತರುಣಿಗೆ ಚಿಕಿತ್ಸೆ ನೀಡಲು ತಾನು 'ಕೆಂಪುಗಡ್ಡ'ಕ್ಕಿಂತ ಹೆಚ್ಚಿ ಜ್ಞಾನವುಳ್ಳವನು ಎಂದು ನಂಬಿಕೊಂಡಿರುವ ತರುಣ ಡಾಕ್ಟರ್ ಅವಳ ಭೇಟಿಯಾಗುತ್ತಾನೆ. ತನಗೆ ಅವಳಲ್ಲಿ ಲೈಂಗಿಕ ಆಸಕ್ತಿ ಇಲ್ಲ ಎಂದು ನಂಬಿಕೊಂಡ ಸಹಪಾಠಿಯೊಂದಿಗೆ ವಾದಿಸಿರುತ್ತಾನೆ. ರಾತ್ರಿ ಇವನೊಬ್ಬನೇ ಕೋಣೆಯಲ್ಲಿದ್ದಾಗ

ತರುಣಿ ತನ್ನ ವಾರ್ಡ್‌ನಿಂದ ತಪ್ಪಿಸಿಕೊಂಡು ಬರುತ್ತಾಳೆ. ಇವನೊಂದಿಗೆ ತನ್ನ ಕಥೆಯನ್ನು ಹೇಳುತ್ತಾ ಇವನ ಲೈಂಗಿಕಾಸಕ್ತಿಯನ್ನು ಉದ್ರೇಕಿಸುತ್ತಾಳೆ. ಇಬ್ಬರೂ ತಬ್ಬಿಕೊಂಡಿರುವಾಗ ಇವನ ಕತ್ತಿನ ನರವೊಂದನ್ನು ಅದುಮಿ ಪ್ರಜ್ಞೆ ತಪ್ಪುವಂತೆ ಮಾಡುತ್ತಾಳೆ. ಇನ್ನೇನು ತನ್ನ ಹೇರ್‌ಪಿನ್‌ನಿಂದ ಅವನನ್ನು ಕೊಲ್ಲಲಿರುವಾಗ 'ಕೆಂಪುಗಡ್ಡ' ಬಂದು ಅವನನ್ನು ಉಳಿಸುತ್ತಾನೆ. ಈಗಾಗಲೆ ಅವಳು ಮೂವರು ತರುಣರನ್ನು ಈ ರೀತಿ ಕೊಂದಿರುತ್ತಾಳೆ. ತಾನು ಮಾನಸಿಕ ರೋಗಿಗೆ ಚಿಕಿತ್ಸೆ ಕೊಡುವುದರಲ್ಲಿ ಮಹಾನ್ ಪಂಡಿತ ಎಂದುಕೊಂಡಿದ್ದ ತರುಣ ಡಾಕ್ಟರನಿಗೆ ತನ್ನ ಪ್ರಾಣವೇ ಹೋಗುವಂಥ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಾಗದ್ದು ಮತ್ತು 'ಕೆಂಪುಗಡ್ಡ' ತನ್ನ ಜೀವ ಉಳಿಸಿದ್ದು-ಇವೆಲ್ಲಾ ಅವನಿಗೆ ತನ್ನ ಪುಸ್ತಕ ಜ್ಞಾನ ಮತ್ತು ಕೆಂಪುಗಡ್ಡದವನ ಅನುಭವಗಳ ನಡುವಣ ವ್ಯತ್ಯಾಸ ತೋರಿಸುತ್ತದೆ.. ಈಗವನು ಆಸ್ಪತ್ರೆಯ ಚಟುವಟಿಕೆಗಳಲ್ಲಿ ಆಸಕ್ತಿ ತಳೆಯುತ್ತಾನೆ.



ಸಾಯುತ್ತಿರುವ ರೋಗಿಯೊಬ್ಬನನ್ನು ಗಮನಿಸಲು ತರುಣ ಡಾಕ್ಟರನನ್ನು 'ಕೆಂಪುಗಡ್ಡ' ನೇಮಿಸುತ್ತಾನೆ. ವೈದ್ಯಕೀಯ ಗ್ರಂಥಗಳಲ್ಲಿ ಸಾವಿನ ಬಗ್ಗೆ ಬಹಳಷ್ಟು ಓದಿಕೊಂಡಿದ್ದ ಇವನಿಗೆ ಸಾವನ್ನು ಪ್ರತ್ಯಕ್ಷವಾಗಿ ನೋಡುವುದು ಭಯಂಕರವಾದ ಅನುಭವವಾಗುತ್ತದೆ. ಒಂದು ಬಾರಿಲ್ಲಿ 'ಕೆಂಪುಗಡ್ಡ' ಬಹಳ ಕಷ್ಟಕರವಾದ ಹೆರಿಗೆಯನ್ನು ಮಾಡಿಸುತ್ತಾನೆ.

ಅಂಥ ಘಟನೆಗಳು ತರುಣ ಡಾಕ್ಟರನಿಗೆ 'ಕೆಂಪುಗಡ್ಡ' ಹೊರಗೆ ಕಾಣುವಂತೆ ಒರಟನಲ್ಲ; ತಾಯಿಯ ಮನಸ್ಸುಳ್ಳವನೆಂಬುದನ್ನು ಮನವರಿಕೆ ಮಾಡಿಸುತ್ತವೆ. ಆಸ್ಪತ್ರೆಯ

ನಿಯಮದಂತೆ ಸಮವಸ್ತ್ರ ಧರಿಸಲಾರಂಭಿಸುತ್ತಾನೆ. 'ಕೆಂಪುಗಡ್ಡ' ರೋಗಿಗಳನ್ನು ನೋಡಲೆಂದು ಹೊರಗೆ ಹೋದಾಗಲೆಲ್ಲ ಜೊತೆಯಲ್ಲಿ ತಾನೂ ಹೋಗುತ್ತಾನೆ.

ಒಮ್ಮೆ ಹೀಗೆ ವೇಶ್ಯಾ ಗೃಹದ ರೋಗಿಗಳ ತಪಾಸಣೆಗೆಂದು ಹೋಗಿದ್ದಾಗ, ಅಲ್ಲಿ ಹನ್ನೆರಡು ವರ್ಷದ ಬಾಲಕಿಯೊಬ್ಬಳು ಘರವಾಲಿಯ ಹಿಂಸೆಯಿಂದ ಜರ್ಜರಿತಳಾಗಿರುತ್ತಾಳೆ. 'ಕೆಂಪುಗಡ್ಡ' ಮತ್ತವನ ಸಿಬ್ಬಂದಿಗಳು ಅಲ್ಲಿಯ ಗೂಂಡಾಗಳೊಂದಿಗೆ ಬಡಿದಾಡಿ ಆ ಬಾಲಕಿಯನ್ನು ಆಸ್ಪತ್ರೆಗೆ ತರುತ್ತಾರೆ. ಅವಳು ದೈಹಿಕವಾಗಿ ನಲುಗಿದ್ದಾಳೆ ಮಾತ್ರವಲ್ಲ ಮಾನಸಿಕವಾಗಿ ಮುದುರಿಹೋಗಿರುತ್ತಾಳೆ. ಅವಳನ್ನು ಸರಿಪಡಿಸುವ ಜವಾಬ್ದಾರಿಯನ್ನು 'ಕೆಂಪುಗಡ್ಡ', ''ಇವಳು ನಿನ್ನ ಮೊದಲ ರೋಗಿ, ಗುಣಪಡಿಸು'' ಎಂದು ತರುಣ ಡಾಕ್ಟರನಿಗೆ ವಹಿಸುತ್ತಾನೆ. ಪ್ರೀತಿಯನ್ನೂ ದ್ವೇಷದಿಂದ ಪ್ರತಿಭಟಿಸುವ ಮಟ್ಟಕ್ಕೆ ಕುಸಿದಿರುವ ಆ ಬಾಲಕಿಯನ್ನು ಸಂಭಾಳಿಸುವುದರಲ್ಲಿ ತರುಣ ಡಾಕ್ಟರ್ ತಾನೇ ಕಾಯಿಲೆ ಬೀಳುತ್ತಾನೆ. ಆಗ ಅದೇ ಹುಡುಗಿ ಅವನ ಶುಶ್ರೂಷೆ ಮಾಡುತ್ತದೆ.

ಪುಸ್ತಕ ಜ್ಞಾನದ ಅಹಂಕಾರದಿಂದ ಅನುಭವ ಜ್ಞಾನದ ವಿನಯವಂತಿಕೆಗೆ ಬೆಳೆಯುವ ಆ ತರುಣ ಡಾಕ್ಟರನ ಶಿಕ್ಷಣದ ವಿವರಗಳನ್ನೊಳಗೊಂಡ ''ಕೆಂಪು ಗಡ್ಡ'' ಚಿತ್ರ ಅದರಲ್ಲಿರುವ ಸರಳ ಶೈಲಿ, ಆ ಸರಳ ಶೈಲಿಯಲ್ಲೇ ರೂಪುಗೊಳ್ಳುವ ರೂಪಕಗಳು ಸಂಕೇತಗಳು ಮತ್ತು ಧ್ವನಿಗಳ ಮೂಲಕ ಯಾವುದೇ ಶ್ರೇಷ್ಠ ಕಲಾಕೃತಿಗೆ ಸಮನಾಗಿದೆ.

(ಸಿನಿಮಾ ಜಗತ್ತಿನ ದೊಡ್ಡ ಹೆಸರು-ಜಪಾನಿ ನಿರ್ದೇಶಕ ಅಕಿರಾ ಕುರೊಸಾವನ 'ಕೆಂಪುಗಡ್ಡ' ಸಿನಿಮಾ ಕತೆ)

ಬೆಂಗಳೂರು **ಪರಮೇಶ್ವರ ಗುರುಸ್ವಾಮಿ**

# ನೊಣದ ಕನಸು

ಅವನು ಅವತ್ತಿನವರೆಗೂ ದೇವರನ್ನು ಏನೂ ಕೇಳಿಕೊಂಡವನಲ್ಲ. ಅಂದು ಮೊಟ್ಟಮೊದಲ ಬಾರಿಗೆ ದೇವರಲ್ಲಿ ಒಂದೇ ಒಂದು ಬೇಡಿಕೆಯಿಟ್ಟ. ಅತ್ಯಂತ ದೈನ್ಯತೆಯಿಂದ ಬೇಡಿಕೊಳ್ಳಲಾರಂಭಿಸಿದ. ಆ ದೇವರು ಎಂಬುವನು ಯಾರು ಯಾರದೋ, ಎಂಥೆಂಥದೋ ವಿಚಿತ್ರ ಬೇಡಿಕೆಗಳನ್ನೆಲ್ಲಾ ಪೂರೈಸಿರುವ ಕರುಣಾಮಯಿ. ಈ ಮೊರೆ ಯಾಕೆ ಕೇಳಿಸಲಿಲ್ಲವೋ ಪಾಪ. ಆದರೆ ಇವನು ಮಾತ್ರ ಅಷ್ಟೇ ಭಕ್ತಿಯಿಂದ ಇಂದಿನವರೆಗೂ ಬೇಡಿಕೊಳ್ಳುತ್ತಿದ್ದಾನೆ. ಅಷ್ಟಕ್ಕೂ ಅವನದೇನೂ ಮಹಾ ಬೇಡಿಕೆಯೇನಲ್ಲ ಬಿಡಿ. ಅವನೊಂದು 'ನೊಣ'ವಾಗಬಯಸಿದ್ದ ಅಷ್ಟೇ!

ಅದು ಹೇಗಾಯಿತು ಎಂದರೆ ಅವನ ರೂಮಿನ ಪಕ್ಕದಲ್ಲೇ ಅವಳ ಮನೆ. ಅವಳು ಇವನೊಂದಿಗೆ ನಗುನಗುತ್ತಾ ಮಾತನಾಡುತ್ತಾಳೆ. ಗಂಟೆಗಟ್ಟಲೇ ಹರಟೆಕೊಚ್ಚುತ್ತಾಳೆ. ಇವನು ಎರಡು ದಿನಕ್ಕೊಮ್ಮೆಯಾದರೂ ಅವರ ಮನೆಗೆ ನುಗ್ಗಿ, ಅವರಮ್ಮ ಮಾಡುವ ರುಚಿ ರುಚಿಯಾದ ವಡೆ ತಿನ್ನುತ್ತಾನೆ. ಅದೊಂದು ದಿನ ಇವನು ಅವಳನ್ನು

ಹುಡುಕಿಕೊಂಡು ಅವಳ ಮನೆಗೆ ಹೋದಾಗ, ಅವಳು ಸ್ನಾನ ಮಾಡುತ್ತಿದ್ದಾಳೆಂದೂ, ಕುಳಿತು ಕಾಯುವಂತೆಯೂ ಅವಳಮ್ಮ ತಿಳಿಸಿದಳು. ಬಚ್ಚಲಲ್ಲಿ ಸ್ನಾನದ ನೀರಿನ ಸದ್ದನ್ನು ಆಲಿಸುತ್ತಾ ಇವನು ಕೂತಿರುವಾಗಲೇ, ಅವಳು ಬಾಗಿಲು ತೆರೆದುಕೊಂಡು ಹೊರಬಂದಳು. ಅವಳ ಸೌಂದರ್ಯ ಇಮ್ಮಡಿಸಿತ್ತು. ಇವನು ತಳಮಳಗೊಂಡ. ಅವನಿಗೆ ಆಗಲೇ ಹೊಳೆದಿದ್ದು-ತಾನು ಒಂದು ನೊಣವಾದರೂ ಆಗಿದ್ದಿದ್ದರೆ ಅವಳು ಸ್ನಾನ ಮಾಡುವಾಗ ಅವಳ ಮೈಯನ್ನು ನಿರಾತಂಕವಾಗಿ ಆಸ್ವಾದಿಸಬಹುದಿತ್ತು! ಅವನಿಗೆ ಸುತ್ತಾ ಹಾರುವ ಎಲ್ಲಾ ನೊಣಗಳ ಅದೃಷ್ಟವನ್ನು ನೋಡಿ ಕರುಬುವಂತಾಯಿತು. ತಾಳ್ಮೆ ಕಳೆದುಕೊಂಡು ಹಗಲು-ರಾತ್ರಿ ನೊಣವಾಗುವ ಕನಸು ಕಾಣತೊಡಗಿದ. ದೇವಸ್ಥಾನಕ್ಕೆ ಹೋಗಿ ತಾನು ನೊಣವಾದರೆ ಸಾಕು ಏನೇನೋ ಮಾಡಿಸುತೀನಿ ನಿನಗೆ ಅಂತ ಹರಕೆ ಹೊತ್ತುಕೊಂಡ. ಉರುಳುಸೇವೆ ಮಾಡಿದ.

ಯಾರು ಯಾರದೋ, ಎಂಥೆಂಥದೋ ವಿಚಿತ್ರ ಬೇಡಿಕೆಗಳನ್ನೆಲ್ಲಾ ಪೂರೈಸಿದ ಆ ದೇವರು ನಮ್ಮ ಇವನ ಬೇಡಿಕೆಗೆ ಇಲ್ಲವೆಂದು ಎಷ್ಟು ದಿನ ಅಂದಾನು? ಅದೊಂದು ದಿನ ಅವನು ಸುಂದರ ನೊಣವಾದ. ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮನೆ ತುಂಬಾ ಹಾರಾಡಿದ. ಅವಳ ಹತ್ತಿರವೇ ಹಾರಾಡಿದ. ಅವಳು ಸ್ನಾನಕ್ಕೆ ಹೋಗುವ ಸಮಯವನ್ನು ಕಾಯುವಷ್ಟರಲ್ಲಿ ಅವನಿಗೆ ಸಾಕುಸಾಕಾಯಿತು. ಆ ಗಳಿಗೆಯೂ ಬಂತು. ಬಿಸಿನೀರು ತೋಡಿಕೊಂಡು ತಣ್ಣೀರು ಬೆರೆಸಿದ ಅವಳು, ಬಾತ್‌ರೂಮಿನ ಬೋಲ್ಟ್‌ನ್ನು ಭದ್ರಪಡಿಸಿ, ತನ್ನ ಸೀರೆಯನ್ನು ಬಿಚ್ಚಿ ಮೊಳೆಗೆ ನೇತುಹಾಕಿದಳು. ಅದಕ್ಕಾಗಿಯೇ ಗೋಡೆಯ ಮೇಲೆ ಉಸಿರುಕಟ್ಟಿ ಕೂತಿದ್ದ 'ನೊಣ' ರೋಮಾಂಚಿತಗೊಂಡು ಕಾಯುತ್ತಿತ್ತು.



ಪ್ರತಿಭಾ


ಅದರ ಕಣ್ಣೆಲ್ಲಾ ಈಗ ರವಿಕೆಯ ಮೊದಲ ಬಟನ್ ಬಿಚ್ಚುತ್ತಿದ್ದ ಅವಳ ಕೈಯ ಮೇಲಿತ್ತು. ಇನ್ನೇನು ರವಿಕೆ ಅವಳಿಂದ ಬೇರ್ಪಡುವ ಕ್ಷಣ.

ಎಷ್ಟು ಹೊತ್ತು ಹೊಂಚುಹಾಕಿ ಕಾದಿತ್ತೋ, ಹಿಂದಿನಿಂದ ಬಂದ ಆ ಪಾಪಿ ಹಲ್ಲಿ ಕ್ಷಣಾರ್ಧದಲ್ಲಿ 'ನೊಣ'ವನ್ನು ನುಂಗಿಬಿಟ್ಟಿತು!


(ಎಂದೋ ಓದಿದ ಮಲೆಯಾಳಂ ಕಥೆಯ ನೆನಪು)

**ಅಪಾರ**

**ಹಿರಿಯೂರು**




# ಗಾಳಿ ಪಟ




## 'ಗಾಮಿನಿ'

'ಸಂಗೀತ ಬರೇ ರಂಜನೆಯ ಹವ್ಯಾಸವಲ್ಲ, ಅದೊಂದು ಮಾನವೀಯ ಇತಿಮಿತಿಗಳನ್ನು ದಾಟಬಲ್ಲ ಆತ್ಮಿಕ ವಿಧಾನ'-ಎಂದು ನಂಬಿರುವ ಹಿಂದುಸ್ಥಾನಿ ಸಂಗೀತಗಾರ್ತಿ, ಚಟುವಟಿಕೆಯ ತರಳೆ ಸುಮತಿ, ಈಗ ಕನ್ನಡ ಸ್ತ್ರೀ ಸಂವೇದನೆಗೊಂದು ಅಕ್ಷರಶಃ ಹೊಸ ಸ್ವರವನ್ನು ನೀಡಿದ್ದಾರೆ. ಕನ್ನಡದ ಕೆಲ ವಿಶಿಷ್ಟ ಸ್ತ್ರೀ ರಚಿತ ಕವಿತೆಗಳಿಗೆ ಸುಮತಿ 'ವಿಶಿಷ್ಟ ಮುಕ್ತ ಥಾಟ'ಯಲ್ಲಿ ಸ್ವರಗಳನ್ನು ಸಂಯೋಜಿಸಿರುವ 'ಗಾಮಿನಿ' ಎಂಬ ಹೆಸರಿನ ಕ್ಯಾಸೆಟ್, 'ಹೆಂಗಸರ ಹಕ್ಕಿನ ಸಂಘ'ದ ಮೂಲಕ ಹೊ[...] ಬಂದಿದೆ. ಸ್ತ್ರೀ ಚೇತನದ ಅಸೀಮ ಸಾಧ್ಯತೆಗಳ ಉತ್ಸವದಂತಿರುವ ಈ ಸಂಯೋಜನೆಗಳು ತಮ್ಮ 'ಥಾಟಿ, ಧೋರಣೆ'ಗಳಲ್ಲಿ ಕನ್ನಡಕ್ಕೆ ಹೊಸತಾಗಿವೆ. ಕೇವಲ ಒಂದೇ ಹಾಡನ್ನು ಇಂಪಾಗಿಸಿ, ಟಿವಿಯಲ್ಲಿ ಸೊಂಪಾಗಿಸಿ, ಜತೆ ಏಳೆಂಟು ಕಳಪೆ ಹಾಡು ಹಾಕಿ ಮೋಸ ಮಾಡುವ 'ದೇಸಿ ಪಾಪ್' ಕ್ಯಾಸೆಟ್‌ಗಳ ಮಧ್ಯೆ, ತನ್ನ ಪ್ರತಿ ಹಾಡನ್ನು ವಿಶಿಷ್ಟವಾಗಿಸಲು ಯತ್ನಿಸಿರುವ 'ಗಾಮಿನಿ', ಸ್ತ್ರೀಯ ಗುಪ್ತಗಾಮಿನಿ ಅಲೆಗಳ ಪ್ರಯೋಗಶೀಲ ಸಂಚಯವಾಗಿದೆ.



## ಲಗ್ನ 'ಪುಸ್ತಕ'!

ಬೆಂಗಳೂರಿನ 'ಪುಸ್ತಕ ಪ್ರಿಯ' ಕೆ.ಎಸ್.ಉಮಾಪತಿ, ಈ ಮಾರ್ಚ್‌ನಿಂದ ಜೂನ್‌ವರೆಗಿನ ಅವಧಿಯಲ್ಲಿ ಮದುವೆಯಾಗಲಿರುವ ನವದಂಪತಿಗಳಿಗಾಗಿ ಒಂದು ಕುತೂಹಲಕಾರಿ ಕೊಡುಗೆಯ ಪ್ರಕಟಣೆಯನ್ನು ಹೊರಡಿಸಿದ್ದಾರೆ. ''ದಯವಿಟ್ಟು ಪುಸ್ತಕ ಕೊಡಿ. ಅದನ್ನು ನಾವು ಓದಿ ಪ್ರೀತಿಯಿಂದ ಮನೆಯಲ್ಲಿಟ್ಟುಕೊಳ್ಳುತ್ತೇವೆ'' ಎಂಬ ವಿನಂತಿಯೊಡನೆ, 'ಲಗ್ನಪತ್ರಿಕೆ'ಯನ್ನು ರಾಮಕ್ಕ-ಪದ್ಮಕ್ಕ ಸೇವಾನಿಧಿ ಟ್ರಸ್ಟ್, 447, 11ನೇ ಮುಖ್ಯರಸ್ತೆ, ಪದ್ಮನಾಭನಗರ, ಬೆಂಗಳೂರು-560070 ಈ ವಿಳಾಸಕ್ಕೆ ಕಳಿಸಿದರೆ, ಅವರು ನವದಂಪತಿಗಳಿಗೆಂದೇ ಆರಿಸಲಾದ, ಖ್ಯಾತನಾಮರ 30 ಪುಸ್ತಕಗಳನ್ನು ಉಡುಗೊರೆಯಾಗಿ ಕಳಿಸಿಕೊಡುತ್ತಾರೆ. ಅಂದರೆ, ವಧುವನ್ನಷ್ಟೇ ಅಲ್ಲ, ಪುಸ್ತಕಗಳನ್ನೂ ಮನೆ ತುಂಬಿಸಿಕೊಳ್ಳುವ ಒಂದು ಶುಭ ಅವಕಾಶ! ಹಸಿರು, ಒಂದು ಊರಿನ ಆರೋಗ್ಯವನ್ನು ಪೋಷಿಸುವಂತೆ ಪುಸ್ತಕಗಳು ಒಂದು ಮನೆಯಲ್ಲಿ ಗಾಳಿ, ಬೆಳಕು ತರುವ ಕಿಟಕಿಗಳಾಗುತ್ತವೆ.

ದೇಶದಲ್ಲೇ ಯಾರೂ ಮಾಡಿರದ ಈ ಶುಭ ಯೋಜನೆಯಲ್ಲಿ, ಪುಸ್ತಕಗಳ ಸೌಲಭ್ಯವಿದಲ್ಲದಂಥ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿನಂತಿಗಳಿಗೆ ಆದ್ಯತೆ ಇದೆ!


ಥಾರೆ ಆದದ್ದೇ, ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಪುಸ್ತಕ ಹಿಡಿದು ಕೂರಬೇಕು ಎಂಬ ಒತ್ತಾಯ ಮಾತ್ರ ಖಂಡಿತ ಇಲ್ಲ!


## ಡಾಟ್ ಕಾಮಿಗಳು

'ಕನ್ನಡ ಸಾಹಿತ್ಯ ಡಾಟ್ ಕಾಂ' ಈಚೆಗೆ ಉದ್ಘಾಟನೆಗೊಂಡಿತು. ಕಳೆದ ವರ್ಷ 'ಕಾಮನ ಬಿಲ್ಲು' ಎಂದೊಂದು ಉದ್ಘಾಟನೆಗೊಂಡಿತ್ತು. ಅದಕ್ಕೂ ಮುನ್ನ 'ಸೃಜನ್' ಎಂದೊಂದು ವೆಬ್‌ಸೈಟು ಸುಮ್ಮನೆ ತನ್ನ ಪಾಡಿಗೆ ತಾನು ನಡೀತಿತ್ತು. ಈ ಮಧ್ಯೆ ಹಠಾತ್ತನೆ ನೂರಾರು ಡಾಟ್ ಕಾಂಗಳು, ವೆಬ್‌ಸೈಟುಗಳು ಕೇಳಿಬಂದವು. ಸ್ಟಾರ್ ನೆಟ್‌ವರ್ಕ್‌ನಂಥ ದೈತ್ಯ ಸಂಸ್ಥೆಯೂ ತನ್ನೆಲ್ಲ ವೆಬ್ ಸೈಟುಗಳನ್ನು, 'ಇದರಿಂದ ಯಾವ ಫಲವೂ ಇಲ್ಲ' ಎಂದು ಬರಖಾಸ್ತುಗೊಳಿಸಿರುವಾಗ-ಉಳಿದೆಲ್ಲ ಸೈಟುಗಳ ಕಥೆಯೇನು ಎಂಬ ಪ್ರಶ್ನೆಗೆ ಸಮಾಧಾನಕರ ಉತ್ತರ ಇಲ್ಲ. ಹಳ್ಳಿ ಕಡೆ ಟೆಂಪೋಗಳು, 'ಬನ್ನಿ ಸಾರ್, ಆಯ್ತು ಇನ್ನೇನು ಹೊರಡೋದೇ' ಎಂದು ನಿಮ್ಮ ಬಸ್ಸನ್ನು ತಪ್ಪಿಸಿ, ಕೂರಿಸಿ, ಕಾಯಿಸಿದಂತೆ ಈ ವೆಬ್‌ಸೈಟ್‌ಗಳು ಕೆಲ ಪ್ರತಿಭಾವಂತರನ್ನು ಬಲಿತೆಗೆದುಕೊಂಡಿವೆ. ಇದರಿಂದ ಯಾರಿಗೇನು ಲಾಭ? ಸಾಹಿತ್ಯಕ್ಕೇನು ಲಾಭ? ಎಂದೆಲ್ಲ ಪ್ರಶ್ನೆಗಳನ್ನು ಸರಳವಾಗಿ ಕೇಳಿದರೂ ಉತ್ತರಗಳು ಸ್ಪಷ್ಟವಾಗಿರುವಂತಿಲ್ಲ. ಹೀಗಾಗಿ ಇದೂ ಕೂಡ 'ಜಾಗತೀಕರಣದ ಅವಲಕ್ಷಣ'ಗಳ ಮತ್ತೊಂದು ಸುಶಿಕ್ಷಿತ ರೂಪವಾಗಿಯೇ ತೋರುತ್ತದೆಯೇ?

## ಕಾದಂಬರಿ – ಸಿನಿಮಾ

'ನಾಗರ ಹಾವು' ದಿಂದ ಈಚಿನ 'ಮತದಾನ'ದ ತನಕ, ಸಾಹಿತ್ಯ ಕೃತಿಯೊಂದು ಚಿತ್ರಪಟವಾದಾಗ ತುಲನೆ, ಗೊಣಗಾಟ, ಚರ್ಚೆ ಇದ್ದಿದ್ದೇ. ಈ ಸಂದರ್ಭದಲ್ಲಿ ಪ್ರಪಂಚದ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದ ನೊಬೆಲ್ ಪ್ರಶಸ್ತಿ ವಿಜೇತ ಮಾರ್ಕ್ವೆಝ್‌ನ 'ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'ನ ಪ್ರಸಂಗ ಉಲ್ಲೇಖನೀಯವಾಗಿದೆ. ಹಾಲಿವುಡ್‌ನವರು ಕೋಟಿಗಟ್ಟಲೆ ಡಾಲರ್ ಕೊಟ್ಟು ಅದರ ಸಿನಿಮಾ ಹಕ್ಕು ಕೇಳಲು ಬಂದಾಗ, ಮಾರ್ಕ್ವೆಝ್ 'ಇಲ್ಲ' ಅಂದುಬಿಟ್ಟ. ಅಪರಿಮಿತ ಹಣವನ್ನು ತಂದುಕೊಡಬಹುದಾಗಿದ್ದ ಅವಕಾಶ ಯಾಕೆ ಕಳೆದುಕೊಂಡಿರಿ ಅಂದಿದ್ದಕ್ಕೆ ಆತ ಹೇಳಿದ''ಇಲ್ಲಿಯವರೆಗೆ ಕೋಟ್ಯಂತರ ಓದುಗರು ಮನಸ್ಸಿನಲ್ಲಿ ನನ್ನ ಕಾದಂಬರಿಯ ಪಾತ್ರಗಳನ್ನು ತಮ್ಮ ತಮ್ಮ ರೀತಿಯಲ್ಲಿ ಚಿತ್ರಿಸಿಟ್ಟುಕೊಂಡಿದ್ದಾರೆ. ಅವೆಲ್ಲ ಅವರ ಮನದಲ್ಲಿ ಹಾಗೇ ಉಳಿದಿವೆ, ಬೆಳೆಯಲಿವೆ. ಕಾದಂಬರಿಯ ಅನಿಶ್ಚಿತತೆ, ಅನೇಕಾನೇಕ ಅರ್ಥ ವಿನ್ಯಾಸಗಳು ... ಆಳ... ಇದೆಲ್ಲ ಸಿನಿಮಾದಲ್ಲಿ ಒಂದು ಸಣ್ಣ ಬಿಂಬವಾಗಿ ಚಿತ್ರಿತವಾಗಿ ಬಿಡುತ್ತವೆ. ಕೋಟಿಗಟ್ಟಲೆ ಮನಸ್ಸುಗಳಲ್ಲಿ ಈಗಾಗಲೇ ರೂಪುಗೊಂಡಿರುವ ಚಿತ್ರಗಳು-ಹಾಲಿವುಡ್‌ನ ಒಂದೇ ಚಪ್ಪಟೆ ಬಿಂಬವಾಗಿ ಸ್ಥಗಿತಗೊಳ್ಳುವುದು ನನಗಿಷ್ಟವಿಲ್ಲ.''





## ಪ್ರಹ್ಲಾದ ಅಗಸನಕಟ್ಟೆ

# ಕಮಾನ್ ಇಂಡಿಯಾ...

ಮೂರನೆ ದರ್ಜೆಯ ನೌಕರ ಮೂಲಿಮನಿ ಪಾಟೀಲರಿಗೆ ಇದೆಲ್ಲಾ ಬೇಕಾಗಿರಲಿಲ್ಲ. ಆದರೆ ಆ ವಿಧಿಯೆಂಬುದಕ್ಕೆ ಈ ಮನುಷ್ಯನಿಗೆ ಬೇಡವಾದುದನ್ನೇ ಒಡ್ಡಿ, ನಗೆ ಪಾಟಲಿಗೆ ಈಡು ಮಾಡುವುದು ಬೇಕಾಗಿರುತ್ತದೇನೋ? ನಡುಗುವ ಚಳಿ, ಮಳೆಗೆ, ತಾತ್ಕಾಲಿಕ ರಕ್ಷಣೆಗೆಂದು ಅಂಬೇಶ್ ಹೋಟೆಲ್‌ಗೆ ಹೋಗಿ ಕೂತ ಪಾಟೀಲರೆದುರು, ಆ ಸೇಲ್ಸ್‌ಮನ್ ಸಿಗರೇಟು ಸೇದುತ್ತಾ, ಯಾವುದಾದರೂ ಬಕರಾ ಬಂದು ಬಲೆ ಬೀಳುತ್ತಾದಾ ಎಂದು ಸಿಗರೇಟಿನ ಹೊಗೆಯಿಂದ ಚಕ್ರವ್ಯೂಹ ನಿರ್ಮಿಸುತ್ತಾ ಕೂತಿದ್ದ. ಬೋಳು ತಲೆಯ ಪಾಟೀಲರು, ತಮ್ಮ ಕರವಸ್ತ್ರದಿಂದ ಗಸ ಗಸ ತಲೆ ತಿಕ್ಕಿ, ಉಳಿದ

ನಾಲ್ಕಾರು ಕೂದಲುಗಳು ಕಿತ್ತು ಬಂದವೇನೋ
ಎಂಬಂತೆ ವ್ಯಸನ ವದನರಾಗಿ ತಮ್ಮ ಕರವಸ್
ನೋಡುತ್ತಿರಲಾಗಿ, ಎದುರಿಗೆ ಕೂತ ಸೇಲ್
ಮನ್, ಒಮ್ಮೆ ಬಿಳಿ ನಗೆ ನಕ್ಕು, ''ಸಾರ್, ಹೊಸ
ಡಾಬರ್ ಆಮ್ಲಾಂತ ಬಂದಿದೆ. ತಲೆಗೆ ಹಚ್ಚ
ಕೊಂಡರೆ, ಒಂದು ತಿಂಗಳಲ್ಲಿ ಹೊಸ ಹೊಸ
ಕೂದ್ಲು ಬರ್ತಾವೆ, ನೋಡಿ, ನಾನು ಅದಕ
ಹಚ್ಚುತಿನಿ,'' ಅಂದು ಒಮ್ಮೆ ತನ್ನ ಎಡಗೈಯಿಂದ
ಅಮಿತಾಬ್ ಸ್ಟೈಲ್‌ನ ಕೂದಲುಗಳನ್ನು ಹಿಂದಕ
ನೀವಿಕೊಂಡ. ದಿಢೀರನೇ ಅನವಶ್ಯಕವಾದ
ಇಂತಹ ಪ್ರಶ್ನೆ ಅಪರಿಚಿತರೊಬ್ಬರಿಂದ ಬಂದದ್ದಕ
ಗಲಿಬಿಲಿಗೊಂಡ ಪಾಟೀಲರು, ''ಇರ್ಲಿ ಬಿಡ್ರಿ
ಕೂದ್ಲ ತಗಂಡೇನು ಮಾಡೋದು, ವಯಸ್ಸಿಗ



ತಕ್ಕಂಗೆ ಕೂದ್ಲ ಉದುರಿದರೇನೆ ಚೆಂದ,'' ಅಂದವರು ಸಪ್ಲೆಯರ್‌ಗಾಗಿ ಸುತ್ತೂ ನೋಡಿದರು. ಹೊಟೆಲ್ ಗಿಜಿಗಿಜಿಗುಡುತ್ತಿತ್ತು. ಸಿಗರೇಟ್ ಹೊಗೆ ತೆಳ್ಳಗೆ ಹರಡಿ ನಿಧಾನಕ್ಕೆ ಮೇಲೇರುತ್ತಿತ್ತು. ಹೊರಗಿನಿಂದ ಬಂದವರು ನಡುಗುತ್ತಾ, ತಮ್ಮ ಎರಡೂ ಕೈಗಳಿಂದ ತಮ್ಮ ಮೈಯನ್ನ ತಾವೇ ಉಜ್ಜಿಕೊಳ್ಳುತ್ತಾ, ಒರೆಸಿಕೊಳ್ಳುತ್ತಾ, ಚಳಿಗೆ ದವಡೆಗಳನ್ನು ಅದುರಿಸುತ್ತಾ ಬೆಚ್ಚನೆಯ ಮೂಲೆಗಳನ್ನರಿಸಿ ಕೂರುತ್ತಿದ್ದರು.

ಪಾಟೀಲರ ಎದುರಿಗಿನ ಟಿಪ್ ಟಾಪ್ ಸೇಲ್ಸ್‌ಮ್ಯಾನ್ ಈಗ, ತನ್ನ ನೀಟಾದ ಕಪ್ಪು ಬ್ಯಾಗಿನಿಂದ ಕ್ಯಾಲುಕ್ಲೇಟರ್ ತೆಗೆದು, ಅದರ ಅಂಕಿಗಳ ಮೇಲೆ ಬೆರಳಾಡಿಸುತ್ತಾ, ಆಗಾಗ ಸಿಗರೇಟಿನ ಹೊಗೆಯನ್ನು ಗಾಳಿಗೆ ಬಿಡುತ್ತಾ, ಪಾಟೀಲರ ದರ್ಜೆಯನ್ನು ಅಳೆಯುವವನಂತೆ ಆಗಾಗ ಓರೆಗಣ್ಣಿನಿಂದ ನೋಡುತ್ತಿದ್ದ. ಪಾಟೀಲರಿಗೆ ಇದೆಲ್ಲಾ ಅನವಶ್ಯಕ ಕಸಿವಿಸಿಗೆ ಕಾರಣವಾಗಿ, ''ತಾವು ಏನ್ ಕೆಲ್ಸ ಮಾಡ್ತಿರಾ ಸಾರ್'' ಅಂದರು. ಇಂಥ ಮಾತಿಗೆ ಕಾದಿದ್ದವನಂತೆ ಆ ಸೇಲ್ಸ್‌ಮ್ಯಾನ್, ''ನಾನು ಪಾಲಿ ಕ್ಯಾಬ್ ಕಂಪನಿಯಲ್ಲಿ ಸೇಲ್ಸ್ ರೆಪ್ರೆಸೆಂಟೆಟಿವ್ ಅಂತ ಇದ್ದೀನಿ. ಕಂಪನಿ ಹೆಸರು ಕೇಳಿದಿರಾ,'' ಅಂದವ ತನ್ನ ಕಂಪನಿಯನ್ನು, ಅದರ ಪರಿಚಯವನ್ನು ಇನ್ನಷ್ಟು ಸಚಿತ್ರವಾಗಿ, ಸ್ಪಷ್ಟವಾಗಿ, ಖಚಿತವಾಗಿ ಹೇಳುವ ಉಮೇದಿನಿಂದ, ''ಟಿ.ವಿ.ಯಲ್ಲಿ ಕಮಾನ್ ಇಂಡಿಯಾ ಅಂತ ಒಂದು ಜಾಹಿರಾತು ಬರ್ತದಲ್ಲ, ಆ

ಶ್ರೀಪಾದ



ಜಾಹಿರಾತು ನಮ್ಮ ಪ್ರಾಡಕ್ಟ್‌ದೇ, ಹೌಸ್ ಕ್ಲೀನ್. ಮಿಷನ್, ಪಾಲಿ ಕ್ಯಾಬಂತ'' ಅಂದವ, ತಾನು ಹೇಳಿದ್ದು ಈ ಮನುಷ್ಯನ ತಲೆಗೆ ಸರಿಯಾಗಿ ನಾಟಿಲ್ಲವೆಂದುಕೊಂಡವನಂತೆ, ತನ್ನ ಬ್ಯಾಗಿನಿಂದ ಕ್ಯಾಟಲಾಗ್, ಫ್ಲಾಶ್‌ಕಾರ್ಡ್, ಅಡ್ವರ್ಟೈಸ್ ಪಾಂಪ್ಲೆಟ್ಸ್‌ಗಳನ್ನ ಒಮ್ಮೆಗೆ ಹೊರ ತೆಗೆದು ಟೇಬಲ್ ಮೇಲೆ ಹರಡಿ, ''ನೋಡಿ ಇದೇ ಈ ಮಿಷನ್, ಇದು ಮಲ್ಟಿಪರ್ಪಸ್ ವರ್ಕ್ ಮಾಡುತ್ತೆ. ಈ ಆ್ಯಂಗಲ್‌ನಿಂದ ಕಸವನ್ನ suckಮಾಡುತ್ತೆ. ಈ ಆ್ಯಂಗಲ್‌ನಿಂದ ವಾಷ್ ಮಾಡುತ್ತೆ. ಇಲ್ನೋಡಿ ಇದನ್ನ ಇದಕ್ಕೆ ಜೋಡ್ಸಿದರೆ ಇದು spray ಮಾಡುತ್ತೆ, just ten minutesನಲ್ಲಿ ಇಡೀ house clean, ಆಗಿಬಿಡುತ್ತೆ'' ಅಂತ ಹೇಳುತ್ತಾ ಹೇಳುತ್ತಾ ಆ ಸೇಲ್ಸ್‌ಮ್ಯಾನ್, ಮತ್ತಷ್ಟು ಸಿಗರೇಟು ಸೇದಿ, ಬೂದಿ ಕೊಡವಿ, ಆ ಟೇಬಲ್ ನೆಲ್ಲಾ ಹೊಲಸು ಮಾಡಿದ.

ಪಾಟೀಲರಿಗೆ ಇವೆಲ್ಲಾ ಏನೂ ಬೇಕಾಗಿರಲಿಲ್ಲ, ಉದ್ದಕ್ಕೆ ಕಾಲು-ಕೈ ಚಾಚಿದರೆ ಗೋಡೆಗಳಿಗೆ ಹೋಗಿ ಬಡಿಯುವಂತಹ ಕ್ವಾರ್ಟರ್ಸ್‌ನಲ್ಲಿರುವ ಅವರಿಗೆ ಇದರ ಅವಶ್ಯಕತೆ ಇರಲಿಲ್ಲ, ವಿನಾಕಾರಣ ಈ ಸೇಲ್ಸ್‌ಮ್ಯಾನ್ ತನ್ನ ಸಮಯ, ಶಕ್ತಿಯನ್ನು ಹಾಳು ಮಾಡಿಕೊಳ್ಳುತ್ತಿದ್ದಾನೆನಿಸಿ ಕರುಣೆ ಉಕ್ಕಿ, ''ನಮ್ಮಂಥವರಿಗೆಲ್ಲಾ ಯಾಕೆ ಸಾರ್, ಯಾರಾದರೂ ಪಾಷ್ ಬಂಗ್ಲೆದಲ್ಲಿ ಇದ್ದವರಿಗೆ ಇಂಥವೆಲ್ಲಾ ಅನುಕೂಲ'' ಅಂದ ಪಾಟೀಲರು, ಹೊರ ನೋಡಿ, ಅಲ್ಲಿ ಮಳೆ ಕಡಿಮೆಯಾಗಿರಲು ಹೊರಡಲು ಅನುವಾದರು. ಅವರ ಅವಸರ, ನಿರಾಸಕ್ತಿ ನೋಡಿದ ಆ ಸೇಲ್ಸ್‌ಮನ್‌ನೇನು ತನ್ನ ಪ್ರಯತ್ನ ಕೈಬಿಡದೆ, ''ಏನ್ಸಾರ್ ಹಿಂಗಂತೀರಾ, ಆ ಕಾಲ ಹೋಯ್ತು ಸಾರ್, ಅವರು ಶ್ರೀಮಂತರು, ಇವರು ಬಡವರು-ಅನ್ನೋದೆಲ್ಲಾ ಈಗ out dated, ಅಟೆಂಡರ್ಸ್‌ಗಳೆಲ್ಲಾ ಕಾರಿನಲ್ಲಿ ಕೋರ್ಟಿಗೆ ಬರ್ತಾರೆ, ಮೊನ್ನೆತಾನೆ ಕೆ.ಇ.ಬಿ.ಯ ಕ್ಲಾಸ್ ಫೋರ್ತ್ ಕ್ವಾರ್ಟರ್ಸ್‌ನಲ್ಲಿ ಹತ್ತು ಪೀಸ್

ಮಾರಿದಿನಿ'' ಅಂದು ಪಾಟೀಲರನ್ನು ಕೂರಿಸಿದೆ
ಬಿಟ್ಟ, ಹಾಗೆ ಕೂರಿಸಿದವ, ''ಏನಾದರೂ co
ಕುಡೀತೀರಾ'' ಎಂದ. ಪಾಟೀಲರು ಬೇಡ ಬೇ
ಎಂದರೂ, ಸಚಿನ್ ತೆಂಡೂಲ್ಕರ್, 'ದಿ
ಮಾಂಗೇ ಮೋರ್' ಭಂಗಿಯಲ್ಲಿರುವ, ಎರ
ಪೆಪ್ಸಿ ತರಿಸಿ, ಅದರ ಮುಚ್ಚಳ ಓಪನ್ ಮಾ
ನೊರೆಯುಕ್ಕಿಸಿ, ''ಕುಡಿರೀ ಸಾರ್'' ಅಂ
ಹಾಗೆ ಅಂದವ, ''by the by ನಿಮ್ಮ ವ
ಎಲ್ಲಿ ಬರ್ತದೆ, ನೀವು just ಅಡ್ರೆಸ್ ಕೊ
ನೀವು ತಗೋಬೇಡಿ,. ಒಂದ್ಸರಿ ನಮ್ಮ ಹುಡುಗ
ಬಂದು ಡೆಮಾನಸ್ಟ್ರೇಷನ್ ಮಾಡ್ತಾರೆ, ನೋ
ಆಮೇಲೆ ಡಿಸೈಡ್ ಮಾಡಿ'' ಅಂತ ಪಾಟೀ
ಅಡ್ರೆಸ್‌ನ್ನು ತನ್ನ ನೋಟ್‌ಬುಕ್‌ನಲ್ಲಿ ನೋ
ಮಾಡಿಕೊಂಡೇಬಿಟ್ಟ.

ಪಾಟೀಲರು ಗಂಟಲುರಿವ ಪೆಪ್ಸಿಯನ್
ಅಂತಹ ಮೈ ಹಿಂಡುವ ಚಳಿಯಲ್ಲಿ ಗುಟು
ಸುತ್ತಾ, ನಡುಗುತ್ತಾ ಮತ್ತೊಮ್ಮೆ ಬೋಳು ತ
ಮೇಲೆ ಕೈಯಾಡಿಸಿಕೊಂಡರು. ಹಾಗೆ ಕೈಯಾಡಿ
ಕೊಂಡವರಿಗೆ ಅಲ್ಲಿ ಮತ್ತೂ ನಾಲ್ಕು ಕೂದ
ಗಳು ಉದುರಿರಬಹುದೇನೋ ಎಂದೆನಿಸಿತು. ಹ
ನಿಸುತ್ತಿದ್ದಂತೆ ಭಯವಾಗಿ ಮೇಲೆದ್ದವರು, ''ನಾ
ಬರ್ಲೆ? ಆಫೀಸಿಗೆ ತಡವಾಯ್ತು'' ಎಂದು ಹೊ
ಟರು. ಸೇಲ್ಸ್‌ಮನ್ ಮುಗುಳ್ನಗುತ್ತಾ ಟಾಟಾ ಮಾ
ದಿಲ್ ಮಾಂಗೆ ಮೋರ್‌ನ ಬಿಲ್ ಎತ್ತಿಕೊಂಡ.

ಅಂಬೇಶ್ ಹೊಟೇಲಿನಿಂದ ಪಾಟೀಲ
ನೇರವಾಗಿ ತಾವು ಕೆಲಸ ಮಾಡುವ ಆಸ್ಪತ್ರೆ
ಬಂದರು. ತಮ್ಮ ಅಸಿಸ್ಟೆಂಟ್ ಗಾಯಕ್ವಾಡ್, ಮೆ
ಕಲ್ ಆಫೀಸರ್ ಡಾ॥ ಕತ್ತಿಯವರು, ಪ್ರಾಜೆ
ಆಫೀಸರ್ ಡಾ॥ ಜತ್ತಿಯವರು ಇನ್ನೂ ಯಾರು
ಬಂದಿರಲಿಲ್ಲ, ಆಸ್ಪತ್ರೆಯ ಮುಂದೆ ನಿಧಾನ
ಜನ ಜಮಾಯಿಸುತ್ತಿರುವುದು, ಬಸ್ಸಿನಿಂದ ಇ
ಯುವುದು, ಮಳೆಯ ಇರಿಚಲಿಂದ ತಪ್ಪಿ
ಕೊಳ್ಳಲು ಮಂದಿ ಬಸ್‌ಸ್ಟ್ಯಾಂಡ್ ಸಮೀಪ
ಮರದ ಬುಡಗಳ ಕಡೆಗೆ ಓಡುವುದೂ, ಕಿಟಕಿ

ಮೂಲಕ ನೋಡುತ್ತಿದ್ದ ಪಾಟೀಲರಿಗೆ ಯಾವುದೋ ಚಿತ್ರದ ಒಂದು ದೃಶ್ಯದಂತೆ ಕಾಣುತ್ತಿತ್ತು. ಮಳೆಗಾಲವೇ ಹೀಗೆ, ಮನಸ್ಸಿಗೆ ಒಂದು ಬಗೆಯ ಮಂಕು ಕವಿಸುತ್ತದೆ. ಓಡುವ ಭಾವನೆಗಳನ್ನ ಹಿಡಿದು ಅವುಗಳ ಮೇಲೆ ತಣ್ಣನೆಯ ನೀರು ಸುರುವಿದಂತೆ ಎಲ್ಲಾವೂ ದ್ರವೀಕರಣಗೊಳ್ಳುತ್ತದೆ.

ರೋಗಿಗಳಿಗಿಂತ ಔಷಧಿ ಮಾರುವ, ಔಷಧಗಳ ಪ್ರಚಾರವನ್ನು ಮಾಡುವ ಮೆಡಿಕಲ್ ರೆಪ್ರೆಸೆಂಟಿವ್ಸ್‌ಗಳ ತಂಡ, ತಂಡಗಳೇ ಕಾರು, ಸ್ಕೂಟರ್, ಬೈಕುಗಳಿಂದ ಇಳಿದು, ಕೈಗಳ ಬ್ಯಾಗುಗಳನ್ನು ತೂಗಿಸುತ್ತಾ, ಕುತ್ತಿಗೆ ಕಟ್ಟಿದ ಟೈಯನ್ನು, ತಮ್ಮ ಕ್ರಾಪನ್ನು ತಿದ್ದಿಕೊಳ್ಳುತ್ತಾ, ಓ.ಪಿ.ಡಿ.ಯೊಳಗಣ ವಿವಿಧ ಡಿಪಾರ್ಟ್‌ಮೆಂಟ್ ಗಳ ಕೋಣೆಯೊಳಕ್ಕೆ ನುಗ್ಗುತ್ತಿರುವ ಅವಸರದ ಸಡಗರವು ಪಾಟೀಲರ ಕಣ್ಣಿಗೆ ಕಾಣಿಸಿತು. ಈ ಇಪ್ಪತ್ತೈದು ವರ್ಷದ ಆಸ್ಪತ್ರೆ ಸೇವೆಯಲ್ಲಿ ಪಾಟೀಲರು ಎಂಥೆಂಥ ವೈದ್ಯರನ್ನೂ, ಎಂಥೆಂಥ ರೆಪ್‌ಗಳನ್ನೂ ನೋಡಿಲ್ಲ!, ಈ ಹಿಂದೆ ಬರುತ್ತಿದ್ದ ಒಬ್ಬರೋ, ಇಬ್ಬರೋ ಮೆಡಿಕಲ್ ರೆಪ್ರೆಸೆಂಟಿ ಟಿವ್ಸ್, ರೋಗಿಗಳೆಲ್ಲಾ ಖಾಲಿಯಾಗುವ ತನಕ ಕಾಯ್ದು, ಡಾಕ್ಟರ್‌ಗಳು ಬಿಡುವಾಗಿ ಕೂತಿದ್ದಾಗ, ಅವರ ಮುಂದೆ ಕುಂತು, ತಮ್ಮ ಕಂಪನಿಯ ಪ್ರಾಡಕ್ಟ್ಸ್‌ಗಳ ಬಗ್ಗೆ ವಿವರವಾಗಿ ವರ್ಣಿಸಿ, ಅವಶ್ಯವಿದ್ದರೆ ಈ ಸ್ಯಾಂಪಲ್ಸ್‌ಗಳನ್ನು ಬಳಸಿ ಎಂದು ಒಂದೆರಡು ಔಷಧಿಯ ಸ್ಟ್ರಿಪ್ಸ್‌ಗಳನ್ನೋ, ಬಾಟಲ್‌ಗಳನ್ನೂ ಇಟ್ಟು ಹೋಗುತ್ತಿದ್ದರು. ಡಾಕ್ಟರು ಗಳಾದರೋ, ಅವರು ಪುಕ್ಕಟೆಯಾಗಿ ಕೊಟ್ಟಿದ್ದಾರೆ, ಗಿಳಿಯಂತೆ ಇಂಗ್ಲಿಷ್‌ನಲ್ಲಿ ಉಲಿದಿದ್ದಾರೆಂದು ತಟಕ್ಕನೆ ಅವುಗಳನ್ನೆಲ್ಲಾ ನಂಬಿ, ತಮ್ಮನ್ನೆ ನಂಬಿ ಬರುವ ಬಡರೋಗಿಗಳ ಮೇಲೆ ತಟಕ್ಕನೆ ಪ್ರಯೋಗಿಸುತ್ತಿರಲಿಲ್ಲ. ತೂಗಿ ನೋಡಿ ಪರೀಕ್ಷಿಸಿ, ಬಡ ರೋಗಿಗಳ ಕೈಗೆ ಎಟುಕುವ ಬೆಲೆಯಿದ್ದರೆ ಅವುಗಳನ್ನ ಬರೆಯುತ್ತಿದ್ದರು.

ಈಗ ಏನಾಗಿದೆ! ಡಾಕ್ಟರಗಳ ಮುಂದೆ ರೋಗಿ ಕೂರುವ ಮೊದಲೇ ಈ ರೆಪ್‌ಗಳು ಕೂತಿರುತ್ತಾರೆ. ರೋಗಿಗಳಿಗಿಂತ ಇವರ ಪಾಳಯ ದೊಡ್ಡದು. ಒಬ್ಬರಾಗುತ್ತ ಒಬ್ಬರು ಡಾಕ್ಟರ್‌ಗಳ ಮುಂದೆ ಕುಂತು, ಅರ್ಧ ಗಂಟೆಗಟ್ಟಲೆ ಇಂಗ್ಲಿಷ್ ನಲ್ಲಿ ಟಸ್, ಪುಸ್ ಎಂದು ಗುನುಗುನಿಸಿ, ತಮ್ಮ ಬ್ಯಾಗಿನಿಂದ ರಾಶಿಗಟ್ಟಲೆ ಮೆಡಿಸಿನ್‌ಗಳನ್ನು ಹೊರ ತೆಗೆದು, ಅವುಗಳನ್ನು ಡಾಕ್ಟರ್ ಟೇಬಲ್ ಮೇಲೆ ಸುರಿದು, ಇನ್ನೊಂದು ಬ್ಯಾಗಿನಿಂದ ಮತ್ಯಾವು ದೋ ಕಂಪನಿ ಗಿಫ್ಟ್ ಎಂದು ಕೊಟ್ಟು, ಕೈ ಹೊಸೆಯುತ್ತಾ ಮತ್ತೊಬ್ಬನಿಗೆ ಪಾಳಿ ಬಿಟ್ಟು ಕೊಡುತ್ತಾರೆ. ಈ ಡಾಕ್ಟರ್‌ಗಳಾದರೂ ರೋಗಿಯ ರೋಗ ಗುಣವಾಗಲೆಂದು ಮೆಡಿಸಿನ್‌ಗಳ ಬರೆಯು ತ್ತಾರೋ, ಅಥವಾ ಈ ಮೆಡಿಕಲ್ ರೆಪ್ ಕೊಟ್ಟ ಗಿಫ್ಟ್‌ನ ಋಣಭಾರಕ್ಕೆ ಬರೆಯುತ್ತಾರೋ...

ಹೀಗೆ ಯೋಚಿಸುತ್ತಾ ತಮ್ಮ ಬೀರುವಿನಿಂದ ಆವಕ-ಜಾವಕ ರಿಜಿಸ್ಟರ್‌ಗಳನ್ನು ಸ್ಟ್ಯಾಂಪ್ ಪ್ಯಾಡ್, ರೂಲರ್, ಪೆನ್ನು, ಪೆನ್ಸಿಲು ಇತ್ಯಾದಿ ಸಲಕರಣೆ ಗಳನ್ನು ತೆಗೆದು ಟೇಬಲ್ ಮೇಲೆ ಇಡುತ್ತಿದ್ದಂತೆ ಅಸಿಸ್ಟೆಂಟ್ ಗಾಯಕ್‌ವಾಡ್ ಓಡುತ್ತ ಬಂದ.

ಮಳೆಯಲ್ಲಿ ನೆನೆದು ಹೋದ ತಲೆಯನ್ನು ಕೊಡವಿಕೊಳ್ಳುತ್ತ ಬಂದ ಗಾಯಕ್ವಾಡ್, "ನಮಸ್ಕಾರ್ರಿ ಸರ್ರ" ಅಂದವ, ತನ್ನ ಟೇಬಲ್‌ನಲ್ಲಿ ಕೂತು, "ಅಪ್ಪಮ್ಮನ್, ಏನ್ ಮಳೀರಿ ಇದು, ಒಂದು ನಮೂನಿ ಸಿಡಿ ಸಿಡಿ" ಅಂದು ತನ್ನ ತೊಯ್ದ ಬಟ್ಟೆಗಳನ್ನು ಒದರಿಕೊಂಡ. ಹಾಗೆ ಅಂದವ ಮತ್ತೇನೋ ನೆನಪಾದಂತೆ, "ಸರ್ ಇವತ್ತಿನ ಪೇಪರ್ ನೋಡಿರೇನು? ಶ್ಯಾಮಸನ್ ಕಂಪನಿ ಬಟ್ಟೆದು ಸೆಕೆಂಡ್ಸ್ ಸೇಲ್ಸ್ ಹಾಕ್ಯಾರ. ಇಪ್ಪತ್ತು ರೂಪಾಯಿಗೆ ಒಂದು ಮೀಟರ್ ಅಂತ್ರಾಪಾ ಅಂಗಿ ಬಟ್ಟೆ, ನಲ್ವತ್ತ ರೂಪಾಯಿಗೆ ಒಂದು ಪ್ಯಾಂಟ್ ಪೀಸ್ ಅಂತ, ಮೊನ್ನಿಂದ ಶುರುವಾಗಿದಂತ. ಮುಂಜಾನಿ ಮುಂಜಾನಿನೇ ಕ್ಯೂ ಅಂತ ಸರ್‌s" ಅಂದ, ಅವನೂ ಇಷ್ಟತನಕ ಕ್ಯೂ ನಿಂತು ಬಂದವನಂತೆ.

ಪಾಟೀಲರೂ, ಗಾಯಕ್ವಾಡ್, ನಗರದ ಯಾವ ಯಾವ ಅಂಗಡಿಯಲ್ಲಿ ಯಾವ ಯಾವ ಸೇಲ್‌ಗಳು, ಡಿಸ್ಕೌಂಟ್‌ಗಳು, ಎಕ್ಸ್‌ಚೇಂಜ್‌ಗಳು, ಏನ ತಗಂಡರೆ ಏನು ಗಿಫ್ಟ್ ಎಂದು ಮಾತಾಡುತ್ತಾ ಆಫೀಸಿನ ಫೈಲುಗಳನ್ನು ಹರವಿ ಕೂತರು. ನಾಲ್ಕು ಅಕ್ಷರ ನಾಲ್ಕು ಸಾಲು ಬರೆಯುತ್ತಿದ್ದಂತೆ ಪಕ್ಕನೆ ಗಾಯಕ್ವಾಡ್, ಯಾವುದಾದರೂ ರೋಚಕ ಸ್ಕೀಮುಗಳನ್ನು, ಅವುಗಳ ವಿಧ, ವಿಧಾನಗಳ ಕುತೂಹಲದ ಕತೆಗಳನ್ನು ವರ್ಣಿಸುತ್ತಿದ್ದ. ಯಾವುದನ್ನು ಕೊಂಡರೆ, ಯಾವುದು ಫ್ರೀ ಎಂಬುದರ ಬಗ್ಗೆ ರಸವತ್ತಾಗಿ ಮಾತಾಡ್ತಿದ್ದ.

ಅಷ್ಟರೊಳಗೆ ಡಾ|| ಕತ್ತಿಯವರೂ ಮತ್ತು ಡಾ|| ಜತ್ತಿಯವರೂ ಒಟ್ಟಿನಲ್ಲಿಯೇ ಕಾರಿನಲ್ಲಿ ಬಂದವರು, ಕಾರನ್ನು ಆಫೀಸಿನ ವರಾಂಡದಲ್ಲಿ ನಿಲ್ಲಿಸಿ, ಅದೂ ಇದೂ ಮಾತಾಡುತ್ತಾ ಒಳ ಪ್ರವೇಶಿಸಿದರು.

''ಏನರಾ ಅರ್ಜೆಂಟು ಟಪಾಲು ಅದಾವೆನ್ರಿ'' ಎಂದರು ಡಾ|| ಕತ್ತಿಯವರು, ತಮ್ಮ ಕುಚಿರ್ಯಲ್ಲಿ ಕೂರುತ್ತಾ. ''ಏನು ಅರ್ಜೆಂಟು ಇರ್ತಾವರಿ, ಈ ಪ್ರಾಜೆಕ್ಟ್ ಆಫೀಸ್‌ನಲ್ಲಿ ತಿರುಗ ಬರುಗ ಎಷ್ಟು ನಿರೋದ್ ಹಂಚಿದೆ, ಎಷ್ಟು ವಂಕಿ ಹಾಕಿದೆ, ಎಷ್ಟು ಜನರ ನರ ಕಟ್ ಮಾಡಿದೆ ಎಷ್ಟು ಹುಡುಗ್ರಗೆ ಪೋಲಿಯೋ ಹಾಕಿದೆ'' ಅಂತ ಡಾ|| ಜತ್ತಿಯವರು ನಗೆಯಾಡಿದರು.

''ಏನ್ನಾರ್ ಮಂತ್ ಎಂಡ್, ಎಲ್ಲಾ ರಿಪೋರ್ಟ್ಸ್ ಕಳ್ಸೀವಿ, ಯಾವ ಕೈಲೂ ಬಾಕಿ ಉಳಿದಿಲ್ಲ'' ಅಂದರು ಪಾಟೀಲರು ಡಾ|| ಇಬ್ಬರ ಮಾತಿಗೆ ಪ್ರತಿಯಾಗಿ. ಕಚೇರಿಯಲ್ಲಿ ಕೂತು ಕಡಿಯಲು ಘನಂದಾರಿ ಕೆಲಸವೇನೂ ಇಲ್ಲವೆಂಬುದು ಹೊಳೆಯುತ್ತಲೆ ಡಾ|| ಜತ್ತಿಯವರು, ಎಲ್ಲರನ್ನೂ ಉದ್ದೇಶಿಸಿ, ''ಒಂದಿಪ್ಪತ್ತು ಮಿನೀಟು ಇಲ್ಲೇ ಒಂದು ಅಂಗಡಿಗೆ ಕಾರಲ್ಲಿ ಹೋಗಿ ಬರೋಣ ಬರ್ರಿ. ಡಾ|| ಕತ್ತಿಯವರೇ, ನೀವೂ ಬರ್ರೀ ಪಾಟೀಲರೇ, ಹಿರಿಯರು, ಗಾಯಕ್ವಾಡ್



ನೀ ಇಲ್ಲೆ ಇರು, ಫೋನ್ ಅಟೆಂಡು ಮಾ
ಯಾರಾದರೂ ಕೇಳಿದ್ರೆ, ಇಲ್ಲೇ ಫೀಲ್ಡ್‌ಗೆ ಕೆ
ನೋಡ್ಲಿಕ್ಕೆ ಹೊಗ್ಯಾರೆ ಅನ್ನು'' ಅಂದ
ಡಾ|| ಜತ್ತಿಯವರ ಅವಸರ, ಧಾವಂತ ನೋ
ಡಾ||ಕತ್ತಿಯವರು ''ಅದೇನ್ರಿ ಅಂತ ಅರ್ಜೆಂ
ಖರೀದಿ. ಏನ್ರಪಾ ಅದು ನಮಗೊಂದೀ
ಹೇಳ್ರಲಾ, ಏನರಾ ಡಿಸ್ಕೌಂಟು ಆಯಿತೇನ
ಅಂದರು. ಇದೇ ಪ್ರಶ್ನಾಭಾವದಿಂದ ಪಾಟೀಲ
ಗಾಯಕ್ವಾಡ್, ಡಾ|| ಜತ್ತಿಯವರ ಮುಖ ನೋಡಿದ

''ಏನಿಲ್ಲರಿ, ಅದೇನೋ ಹೊಸ
ಮ್ಯಾಗ್ನಟಿಕ್ ಬೆಡ್ ಅಂತ ಬಂದಾವಂತ, ಅ
ಮ್ಯಾಗ ಮಲಗಿದ್ರ ಬಿ.ಪಿ.,ಡೆಯಾಬಿಟಿ
ಅರ್ಥ್ರೈಟಿಸ್, ಅಲ್ಸರ್, ಕ್ಯಾನ್ಸರ್ ಎ
ಗುಣಕ್ಕವಂತಾ ಹೇಳಾಕತ್ಯಾರ, ನವ
ನನಗೊಂದು ಕೊಡಿಸ್ರಿ ಅಂತ ಕಾಡಕತ್ಯಾ
ನೋಡ್ಯಾರ ನೋಡ ಬರಾಣಾಂತ'' ಅ

ಡಾ॥ ಜತ್ತಿಯವರು, "ಬರ್ರಿ ಬರ್ರಿ ಲಗೂನ ಬರೋಣ" ಅಂತ ಹೊರಬಂದರು. ಅವರ ಹಿಂದೆ ಡಾ॥ ಕತ್ತಿಯವರು, ಪಾಟೀಲರು ಕುತೂಹಲದಿಂದ ಹೊರಟರು.

ಅವರು ಮೂವರು ಆ ಆಫೀಸ್‌ನಲ್ಲಿ ಎಂಟ್ರಿಯಾಗುತ್ತಿದ್ದಂತೆ, ಮುಂಭಾಗದ ರೂಂನಲ್ಲಿ ಎರಡು ಸುಂದರ ಹುಡುಗಿಯರು, ಪ್ರಾಯಶಃ ರಿಸೆಪ್ಷನಿಸ್ಟ್‌ಗಳಿರಬೇಕು, ಕಂಪ್ಯೂಟರ್‌ಗಳ ಮುಂದೆ ಕೂತಿದ್ದವರು ಇವರನ್ನು ಕಂಡೊಡನೆ ಹೂವರಳಿದಂತೆ ನಕ್ಕರು. ಅವರು ನಕ್ಕ ಬಗೆ, ಆಯಾಸದಿಂದ ಬಂದವನನ್ನು ಕೈ ಹಿಡಿದು ಕೂರಿಸಿದಂತಹ ಆಹ್ಲಾದಕರವಾದ ಮಾದಕತೆಯಿಂದ ತುಂಬಿತ್ತು, ಪ್ಲೀಸ್ ಕಮಾನ್, ಬಿ ಸೀಟೆಡ್, ಎಂದೊಬ್ಬಳು ಉಲಿದರೆ ಮತ್ತೊಬ್ಬಳು ಇವರುಗಳ ಆಗಮನವನ್ನು ಒಳಗಿರುವ sales managerಗೆ ಫೋನ್ ಮೂಲಕ ಮೆಸೇಜ್ ಮುಟ್ಟಿಸಿದಳು.

ಸೇಲ್ಸ್ ಮ್ಯಾನೇಜರ್ ಕೂತಿರುವ ಛೇಂಬರ್ ಸುತ್ತಾ ಕಪ್ಪು ಗಾಜು, ಒಳಗಿಂದ ಅವನು ಹೊರಗಿನವರನ್ನು ಸುಲಭವಾಗಿ ನೋಡಲಿಕ್ಕೆ ಯೋಗ್ಯವಾದ sun glassಗಳನ್ನು ಜೋಡಿಸಿದ್ದರು. ಇವರು ಕೂತ ಸೋಫದ ನೆತ್ತಿಯ ಮೇಲೆ- ನೆತ್ತಿಗೆ ತಾಗುವಂತೆ ಫ್ಯಾನೊಂದು ಭರ್ರಂದು ಸುತ್ತುತ್ತಿತ್ತು. ಬೆಡ್‌ಗಳನ್ನು, ಸಾಲಾಗಿ, ನೀಟಾಗಿ ಜೋಡಿಸಿದ್ದರು. ಒಂದಿಬ್ಬರು ಗಿರಾಕಿಗೆ, salesmanಗಳು ಬಹಳ ರಸವತ್ತಾಗಿ ಅಂಗಾಭಿನಯದಿಂದ ವರ್ಣಿಸುತ್ತಿದ್ದರು. ಈ salesmanಗಳ ಕೈಗೆ ಒಂದಷ್ಟು ಹಿಡಿ ಮಣ್ಣನ್ನು ಕೊಟ್ಟರೂ ಅದನ್ನು ಮಾರ್ಕೆಟನಲ್ಲಿ ಮಾರಿಬಿಡುವಷ್ಟು ವಾಕ್ ಚಾತುರ್ಯವನ್ನೂ, ಮೋಡಿ ಮಾಡುವ ನೈಪುಣ್ಯವನ್ನು ಗಳಿಸಿಕೊಂಡುಬಿಟ್ಟಿದ್ದಾರೇನೋ ಎನಿಸಿತು ಪಾಟೀಲರಿಗೆ.

ತಮ್ಮ ಎದುರು ಕೂತ ಸುಂದರ ಹುಡುಗಿಯರು ತಮ್ಮ ಸೌಂದರ್ಯದ ಆಧಾರದ ಮೇಲೆಯೇ ಅಲ್ಲಿ ನೌಕರಿ ಗಿಟ್ಟಿಸಿದ್ದಾರೇನೋ ಎಂಬಂತೆ ವಿಶೇಷವಾದ ಮೇಕಪ್‌ನಲ್ಲಿ ಬಂದವರನ್ನು ಸೆರೆ ಹಿಡಿಯುವಂತಿದ್ದರು. ಬಂದವರೆದರು ನಕ್ಕು, ಹಲ್ಗಿಂಜಿ, ಓಲೈಸಿ, ಸುಳ್ಳು ನಾಟಕ ಮಾಡಿಮಾಡಿ ಹೆಣ್ಣು ಹುಡುಗಿಯರಿಗೆ ಸಹಜವಾಗಿರುವ ಮುಗ್ಧತೆ, ನಾಚಿಕೆ, ಸಂಕೋಚಗಳನ್ನು ಬಿಟ್ಟು, ಒಂದು ಬಗೆಯ ಪ್ರೊಫೆಷನಲ್ ವ್ಯಕ್ತಿತ್ವ ಪಡಕೊಂಡಂತೆ ಕಾಣುತ್ತಿದ್ದರು.

ಸೇಲ್ಸ್ ಮ್ಯಾನೇಜರ್ ರೂಂನಿಂದ ಇಬ್ಬರು ಧಡೂತಿ ವ್ಯಕ್ತಿಗಳು ನಗಾಡುತ್ತಾ ಹೊರಬಂದರು. ಮ್ಯಾಗ್ನೆಟಿಕ್ ಬೆಡ್‌ಗಳನ್ನು ಹೊಂದಿಸಿರುವ ಹಾಲ್ ಕಡೆ ನಡೆಯಲಾರದೆ ನಡೆದುಹೋದರು. ಇನ್ ಶರ್ಟ್ ಮಾಡಿದ ಪ್ಯಾಂಟನ್ನೂ, ಅಂಗಿಯನ್ನೂ ಭೇದಿಸಿ ಅವರ ಕೊಬ್ಬು ಮೈ ಕುಣಿಯುವುದು, ಅಲ್ಲಾಡುವುದು, ತೊನೆಯುವುದು ಮಾಡುತ್ತಿತ್ತು.

ಅವರುಗಳು ಆಚೆ ಹೋಗುತ್ತಿದ್ದಂತೆ ಡಾ॥ ಕತ್ತಿ, ಡಾ॥ ಜತ್ತಿ ಹಾಗೂ ಪಾಟೀಲರಿಗೆ ಒಳಗಿನಿಂದ ಬುಲಾವ್ ಬಂದಿತು. ಮೂವರೂ ಒಳಪ್ರವೇಶಿಸುತ್ತಿದ್ದಂತೆ ಈ ಕಂಪನಿಯ ಕರ್ನಾಟಕದ ಡಿಸ್ಟ್ರಿಬ್ಯೂಟರ್ ಹಾಗೂ ಸೇಲ್ಸ್ ಮ್ಯಾನೇಜರ್ ಮಿಸ್ಟರ್ ಶೆಣೈ, "ಹಲೋ ಕಮಿನ್ ಡಾಕ್ಟರ್, ಸಾರಿ, ಸಾರಿ, ಸ್ವಲ್ಪ ಲೇಟ್ ಆಯಿತು. ಪ್ಲೀಸ್, ಬಿ ಸೀಟೆಡ್", ತಾನೇ ಸೀಟನಿಂದ ಎದ್ದು, ಅವರನ್ನು ಕೈ ಹಿಡಿದು ಕೂರಿಸುವವನಂತೆ ಅವರುಗಳೆಲ್ಲ ಕೂರುವವರೆಗೂ ತಾನು ನಿಂತಿದ್ದು, ಅವರು ಕೂರುತ್ತಿದ್ದಂತೆ ರಿಸೆಪ್ಷನಿಸ್ಟ್‌ಗೆ ಫೋನು ಮಾಡಿ ಮೂರು ಕೂಲ್ ಡ್ರಿಂಕ್ಸ್‌ಗೆ ಆರ್ಡರ್ ಮಾಡಿ, ಉಳಿದವರಿಗೆ ಮಾತಿಗೆ ಅವಕಾಶವಿಲ್ಲದಂತೆ ತಾನೆ ಹರಳು ಹುರಿದಂತೆ ಮಾತಾಡಲು ಶುರುಮಾಡಿದ.

ನೋಡಲು, ತೆಳ್ಳಗೆ, ಬೆಳ್ಳಗೆ ಬಹಳ ಸ್ಮಾರ್ಟ್ ಆಗಿದ್ದ ಶೆಣೈ, ಮಾತಿಗೊಮ್ಮೆ ಕತ್ತು ಕೊಂಕಿಸುತ್ತಿದ್ದ. ಗಂಭೀರವಾದ ಪಾಯಿಂಟ್‌ನ್ನು ಒತ್ತಿ ಹೇಳುವಾಗ ಹಣೆಯ ನೆರಿಗೆಗಳನ್ನು ಕೂಡಿಸುತ್ತಿದ್ದ. ಆಶ್ಚರ್ಯವಾದ ವಿಷಯಗಳನ್ನು ಹೇಳುವಾಗ ಹುಬ್ಬಗಳನ್ನು

ಹಾರಿಸಿ, ಕಣ್ಣುಗಳ ಅಗಲ ಮಾಡುತ್ತಿದ್ದ. ತಮ್ಮ ಕಂಪನಿಯ ಬ್ರಾಂಚ್ ಆಫೀಸು ಕರ್ನಾಟಕದಲ್ಲಿ ಶುರುವಾಗಿ ಎರಡೇ ತಿಂಗಳಲ್ಲಿ ಅದು ಸಾಧಿಸಿರುವ ಪ್ರಗತಿಯನ್ನು, ಮಾರಿರುವ ಬೆಡ್‌ಗಳ ಸಂಖ್ಯೆಯನ್ನು, ಹಾಗೂ ಅದಕ್ಕಿರುವ ವ್ಯಾಪಕವಾದ ಡಿಮ್ಯಾಂಡನ್ನು ವರ್ಣಿಸಿದ.

"ನೋಡಿ world health organisation ಕೂಡ ನಮ್ಮ ಕಂಪನಿಯ ಪ್ರಾಡಕ್ಟ್‌ನ ರಿಸಲ್ಟ್ ನೋಡಿ it has given its appreciation. ಜಪಾನ್‌ನಲ್ಲಿ ಈಗ ಪ್ರತಿಯೊಬ್ಬರ ಮನೆಯಲ್ಲಿ ಮ್ಯಾಗ್ನಟಿಕ್ ಬೆಡ್ಡನ್ನೇ ಜನ ಬಳಸುತ್ತಾರೆ. ಎಷ್ಟು ಗಳಿಸಿದರೇನೂ, health ಮುಖ್ಯ ಅಲ್ವೇ, ಜನ ಈಗ ಗುಳಿಗೆ ನುಂಗಿ, ಇಂಜೆಕ್ಷನ್ ಚುಚ್ಚಿಸಿಕೊಂಡು ಆಪರೇಶನ್‌ಗಳನ್ನು ಮಾಡಿಸಿಕೊಂಡು fed up ಆಗ್ಬಿಟ್ಟಿದ್ದಾರೆ. They want alternative system of medicine, ನೋಡಿ ನಮ್ಮ ಬೆಡ್ ಬಳಸಿದವರಲ್ಲಿ, ಬಿ.ಪಿ. ಇದ್ದವರು, ಡಯಾಬಿಟೀಸ್ ಇದ್ದವರು, ಆಸ್ತಮಾ ಇದ್ದವರು, ಅರ್ಥೈಟಿಸ್ ಇದ್ದವರು ಅಲ್ಸರ್ ಇದ್ದವರು, even ಕ್ಯಾನ್ಸರ್ ಇದ್ದವರು ಕೂಡ, they have expressed satisfaction. ಬಹಳ ಜನಕ್ಕೆ ಆರಾಮ ಆಗ್ಬಿಟ್ಟಿದೆ. ಮ್ಯಾಗ್ನಟಿಕ್ ಪವರ್ ಬಗ್ಗೆ ನಮ್ಮ ಪ್ರಾಚೀನ ಕಾಲದ ಜನಕ್ಕೆ ಬಹಳ ಗೊತ್ತಿತ್ತು. ಅದಕ್ಕೆ ಅವರು ಬರಿ ನೆಲದ ಮೇಲೆ ಮಲಗುತ್ತಿದ್ದರು. ಇಲ್ಲಾಂದರೆ ಸಣ್ಣದೊಂದು transparent ಆದ ಚಾಪೆ ಹಾಸಿಕೊಂಡು ಮಲಗುತ್ತಿದ್ದರು. ಭೂಮಿಯ ಮತ್ತು ನಮ್ಮ ದೇಹದ ಒಳಗೆ ಇರುವ ಮ್ಯಾಗ್ನಟಿಕ್ ಪವರ್ ಮಧ್ಯೆ ಈಗ link ತಪ್ಪಿ ಹೊಗ್ಬಿಟ್ಟಿದೆ. ನಾವು ಕೂತರೆ ಕುರ್ಚಿಯ ಮೇಲೆ ಕೂರ್ತೀವಿ, ಉಂಡರೆ ಕುರ್ಚಿಯ ಮೇಲೆ ಕೂರ್ತಿವಿ, ಮಲಗಿದರೆ ಕಾಟ್ ಮೇಲೆ ಮಲಗ್ತಿವಿ. ಓಡಾಡಲಿಕ್ಕೆ ಕಾರ್ ಬಳಸ್ತಿವಿ, ನಡೆದಾಡುಕ್ಕೆ ಬೂಟ್ ಬಳಸ್ತಿವಿ. ಇನ್ನು ಕೆಲವರು ಈ ಮನೆಯಲ್ಲಿ ಸ್ಯಾಂಡಲ್ ಚಪ್ಲಿ ಹಾಕ್ಕೊಂ ಓಡಾಡ್ತರೆ. ಒಟ್ಟಾರೆ ನೆಲದ ಸಂಬಂಧವೆ ತ ಹೋಗಿದೆ. ಹೀಗಾಗಿ..."

ಶೆಣೈ ಮಾತು ಮುಗಿಸುವ ಮುಂಚೆ ಅ ಮಾತಿನ ಓಘಕ್ಕೆ, ಆಕರ್ಷಣೆಗೆ ಮರುಳಾದ ಡಾ।। ಕತ್ತಿಯವರು, "ಸಾರ್ ಈಗ ಹೆ ಲ್ಯಾಟ್ರನ್‌ಗಳು ಬಂದಾವೆ. ಅಲ್ಲಂತೂ ಇ ನಿಂತಂಗಲ್ಲ, ಅತ್ಲಗೆ ಕುಂತಗಲ್ಲ, ಎಲ್ಲ ಅಂತರದ ಮಾಡಿದಂಗೆ, ಒಂದು ನಮೂನಿ ಪಿಶಾಚಿಗಳ ಆಗ್ಬಿಟ್ಟೀವೆ" ಎಂದು ನಕ್ಕರು. ಇದು ತನ್ನ ಮಾ ಸಿಕ್ಕ ಪ್ರಶಂಸೆಯಂತೆ ಶೆಣೈ ಮತ್ತೂ ಉ "ನೋಡಿ ಗಾಂಧಿಯವರೂ ನೆಲದ ಮ ಮಲಗ್ತ ಇದ್ದರು, ಅವರಿಗೆ ಈ ನಿಸರ್ಗದ ರಹ ಗೊತ್ತಿತ್ತು, ಗೋಡ್ಸೆ ಏನಾದರೂ ಅವ ಕೊಲ್ಲಿದ್ದರೆ ಅವರು ನೂರು ವರ್ಷ ಬದು ಇದ್ದರು" ಅಂದ. ಶೆಣೈ ಪಾಟೀಲರತ್ತ ತಿರು "ಏನ್ಸಾರ್ ನೀವು ಎಂದಾದರೂ ನ್ಯಾಚುರೋ ಕ್ಲಿನಿಕ್‌ಗೆ ಹೋಗಿದ್ದೀರಾ," ಎಂದು ಪ್ರಶ್ನಿಸಿ ಅಷ್ಟೊತ್ತಿಗೆ ಕೂಲ್‌ಡ್ರಿಂಕ್ಸ್ ಬಂದವು. ಸುಂ ಹುಡುಗಿಯರಲ್ಲಿ ಒಬ್ಬಾಕೆ, "ಪ್ಲೀಸ್" ಎನ್ನು ಎಲ್ಲರ ಕೈಗೊಂದೊಂದನ್ನು ಓಪನ್ ಮ ಕೊಟ್ಟಳು. ಹಾಗೆ ಕೊಟ್ಟವಳು, ಅವರು ಕುಡಿಂ ವುದನ್ನೇ ತನ್ಮಯತೆಯಿಂದ ನೋಡುವವಳ ನೋಡುತ್ತಾ ಶೆಣೈ ಬಾಜೂಕ್ಕೆ ನಿಂತಳು.

ಸಂಬಂಧವಿಲ್ಲದ್ದಕ್ಕೆ ಸಂಬಂಧ ಹಚ್ಚಿ, ತಾ ಪ್ರಶ್ನೆ ಮಾಡಿ, ತಾನೇ ಉತ್ತರ ಹೇಳಿ, ತಾ ಬಯಕೆಗಳನ್ನು ಹುಟ್ಟಿಸಿ, ತಾನೇ ಅ ಪರಿಹಾರಗಳನ್ನು, ತಣಿಸುವ ಮಾರ್ಗಗಳ ಹುಟ್ಟು ಹಾಕುತ್ತಿರುವುದೇ ಈ ಆಧು ಮಾರ್ಕೆಟಿಂಗ್‌ನ ತಂತ್ರವಿರಬಹುದೆ? ಎಂದೇ ಏನೇನೋ ಅಸ್ಪಷ್ಟವಾದ ಅನುಮಾನಗ ಪಾಟೀಲರ ತಲೆಯಲ್ಲಿ ಶೆಣೈ ಮಾತು ಕೇಳುತ್ತಾ, ಕೇಳುತ್ತಾ ಮೂಡತೊಡಗಿದವು, ಡಾ

ಜತ್ತಿಯವರು, ಡಾ|| ಕತ್ತಿಯವರು ಮಂತ್ರವಾದಿಯ ಮುಂದೆ ಕೂತ ಮುಗ್ಧ ಮಕ್ಕಳಂತೆ, "ಹೌದು, ಹೌದು" ಎಂದು ತಲೆ ಅಲ್ಲಾಡಿಸುತ್ತಿದ್ದರು.

"ನೋಡಿ, ನಮ್ಮ ಕಂಪನಿ ಮ್ಯಾಗ್ನಟಿಕ್ ಇನ್ಸ್‌ಟ್ರೂಮೆಂಟ್ ಪ್ರೊಡಕ್ಷನ್ ಕಂಪನಿ. ಕಳೆದ ಇಪತ್ತು ವರ್ಷದಿಂದ ಇದ್ನೆಲ್ಲಾ ಅಭ್ಯಾಸ ಮಾಡಿ, ಈ ಪ್ರಾಡಕ್ಟ್‌ನ್ನ ಲಾಂಚ್ ಮಾಡಿದೆ, It has produced wonderful results, ಅಂದ ಶೆಣೈ. "ಬನ್ನಿ ನಿಮಗೆ ನಮ್ಮ ಪ್ರಾಡಕ್ಟ್‌ನ operation ವ್ಯಾಕ್ಯೂಂ ತೋರಿಸ್ತೇನೆ" ಎಂದು ಆ ಮೂವರನ್ನು ಕರಕೊಂಡು ಪಕ್ಕದಲ್ಲಿದ್ದ ಇನ್ನೊಂದು ವಿಶಾಲ ರೂಂಗೆ ಹೊರಟ, ಅವ ಕೇವಲ ಮ್ಯಾಗ್ನಟಿಕ್ ಬೆಡ್‌ಗಳನ್ನು ಮಾರುತ್ತಿರಲಿಲ್ಲ ಮ್ಯಾಗ್ನಟಿಕ್ wordಗಳನ್ನು ಮಾರುವವನಂತೆ, ಬಹು ಆಕರ್ಷಕವಾಗಿ ಮಾತಾಡುತ್ತಿದ್ದ. ಗಿರಾಕಿಗಳನ್ನು impress ಮಾಡುವುದೇ, ಮಾರಾಟ ಮಾಡುವ ಕೆಲಸದಲ್ಲಿ ಐವತ್ತು ಭಾಗ ಮುಖ್ಯ ಎನ್ನುವಂತಿತ್ತು ಅವನ ಹಾವಭಾವ.

ಅವರು ಪ್ರವೇಶಿಸಿದ ಹಾಲ್ ಮಧ್ಯ ಮಡಿಸಿದ, ಹಾಸಿದ, ಸುರಳಿ ಸುತ್ತಿದ್ದ ವಿವಿಧ ಬಣ್ಣಗಳ ಬೆಡ್‌ಗಳನ್ನು ಬಹಳ ಸುಂದರವಾಗಿ, ಮನ ಸೆಳೆಯುವಂತೆ ಒಪ್ಪವಾಗಿ ಜೋಡಿಸಲಾಗಿತ್ತು. ಒಂದು ಅಡಿ ಎತ್ತರದ ಕಬ್ಬಿಣದ ಕಾಟುಗಳನ್ನೂ ಇನೊಂದು ಬದಿಗೆ ಜೋಡಿಸಲಾಗಿತ್ತು. ಹಾಲ್‌ನಲ್ಲಿ ಮಧ್ಯೆ ಇದ್ದ ಒಂದು ಬೆಡ್ಡನ್ನ ಉರುಳಿಸಿ, "ನೋಡಿ, ಇದು ನೋಡ್ಲಿಕ್ಕೆ ಬಹಳ ಆರ್ಡಿನರಿ ಬೆಡ್ ಥರ ಕಾಣುತ್ತೆ, ಇದರೊಳಗಿರುವ ಅರಳೆಗೆ ಮ್ಯಾಗ್ನಟಿಕ್ ಪವರ್ ಇರುವ ingredientsನ್ನ ಜನರೇಟ್ ಮಾಡಲಾಗಿದೆ. ಇದರ ಮೇಲೆ ಮಲಗಿದ ಕೂಡಲೆ ಮನುಷ್ಯನ ದೇಹದ heatಗೆ ಇವುಗಳ ಪವರ್ ಜನರೇಟ್ ಆಗ್ತದೆ, ನಿಧಾನಕ್ಕೆ ಇವು ದೇಹದೊಳಗಿನ unnatural ದೋಷಗಳನ್ನ ತಮ್ಮ ಮ್ಯಾಗ್ನಟಿಕ್ ಪವರ್‌ನಿಂದ suck ಮಾಡಿ, earthಗೆ ರವಾನೆ ಮಾಡ್ತಾವೆ" ಅಂದ ಶೆಣೈ ಅಲ್ಲಿಯೆ ನಿಂತಿದ್ದ ಪ್ಯೂನನ್ನು ಕರೆದು ಮೂಲೆಯಲ್ಲಿರಿಸಿದ ಕಬ್ಬಿಣದ ಕಾಟ್ ಮೇಲೆ ಆ ಬೆಡ್‌ನ್ನು ಹಾಸುವಂತೆ ಆಜ್ಞಾಪಿಸಿದ.

ಆ ಆಳು, ಆ ಕಾಟನ್ನು ಹೊಂದಿಸಿ, ಅದರ ಮೇಲೆ ಬೆಡ್ ಹೊದಿಸುವ ಮಧ್ಯೆ ಗಿರಾಕಿಯ ಮನಸ್ಸು ಸಂದೇಹಗಳಿಗೆ ಸಿಲುಕಲು ಸಮಾಯಾವಕಾಶ ಕೊಡಬಾರದೆಂಬಂತೆ, "ಡಾಕ್ಟರ್ ಆ ಕಾಟ್ ಇದೆಯಲ್ಲಾ ಅದು ಕೂಡ ಮ್ಯಾಗ್ನಟಿಕ್ ಪವರ್ ಹೊಂದಿದೆ. ಕೆಲವರಿಗೆ ನೆಲದ ಮೇಲೆ ಬೆಡ್ ಹಾಸಿಕೊಂಡು ಮಲಗೋ ರೂಢಿ ಇರೋದಿಲ್ಲ, ಅಂಥವರಿಗೆ ಇದನ್ನು ನಮ್ಮ ಕಂಪನಿ ವಿಶೇಷವಾಗಿ ತಯಾರಿ ಮಾಡಿದೆ" ಎಂದ. ಅಷ್ಟರಲ್ಲಿ ಆ ಆಳು ಕಾಟ್ ಮೇಲೆ ಬೆಡ್ ಹರಡುವ ಕೆಲಸ ಮುಗಿಸಿದ.

"ಬನ್ನಿ ಡಾ|| ಜತ್ತಿಯವರೆ ಇದರ ಮೇಲೆ ಎರಡು ನಿಮಿಷ ಮಲಗಿ" ಅಂದ ಶೆಣೈ ಹಿಂಜರಿಯುತ್ತಿದ್ದ ಡಾ|| ಜತ್ತಿಯವರನ್ನು, "ಕಮಾನ್ ಡಾಕ್ಟರ್, ಬರೀ ಕೇಳಿ ಕೊಳ್ಳಬಾರದು we should personaly verify it" ಅಂದು ಅದರ ಮೇಲೆ ಮಲಗಿಸಿ, ಅವರ ಕಣ್ಮುಚ್ಚಿಸಿದ, ಕಣ್ಮುಚ್ಚಿ ಮಲಗಿದ ಡಾ|| ಜತ್ತಿಯವರು ಯುದ್ಧಭೂಮಿಯಲ್ಲಿ ಶರಶಯ್ಯೆಯಲ್ಲಿ ಮಲಗಿದಂತಹ ಭೀಷ್ಮನ ಥರ ಕಂಡರು.

ಸೇಲ್ಸ್ ಮ್ಯಾನೆಜರ್ ಶೆಣೈ, "ಒಂದು ನಿಮಿಷ ಬಂದೆ" ಅಂದವನು, ಅಲ್ಲಿಯೇ ಟೈ ಕಟ್ಟಿಕೊಂಡು ಕಾದು ಠಾಕೂಠೀಕಾಗಿ ನಿಂತಿದ್ದ ನಾಕಾರು ಸೇಲ್ಸ್ ಮ್ಯಾನ್‌ಗಳಲ್ಲಿ ಬಹಳ ಸ್ಮಾರ್ಟ್ ಇದ್ದ ಒಬ್ಬನನ್ನು ಕರೆದು, ತಮ್ಮ ಕಂಪನಿಯು ಮುಂದೆ ಹೊರತರಲಿರುವ ಹೊಸ ಪ್ರಾಡಕ್ಟ್‌ಗಳ ಬಗ್ಗೆ ಎಕ್ಸ್‌ಪ್ಲೇನ್ ಮಾಡ್ಲಿಕ್ಕೆ ಹೇಳಿ ತನ್ನ ಛೆಂಬರ್‌ಗೆ ಧಾವಿಸಿದ.

"ನೋಡಿ ಸಾರ್, ಇದು ನಮ್ಮ next product. ಈಗ ನಮ್ಮದು ಮ್ಯಾಗ್ನಟಿಕ್ ಬೆಡ್ ಮಾತ್ರ ಇದೆ, next ನಾವು ಲಾಂಚ್ ಮಾಡ್ತಾ ಇರೋದು ಮ್ಯಾಗ್ನಟಿಕ್ ರಗ್ಸಂತಾ, ನೀವು ಯಾಕೆ

ಅಂತ ಕೇಳಬಹುದು, ನೋಡಿ ಸಾರ್, ದೇಹದಲ್ಲಿ ಎರಡು ಪಾರ್ಟ್ ಇದೆ, lower part ಮತ್ತು upper part ಅಂತ. ಈಗಿನ ನಮ್ಮ ಮ್ಯಾಗ್ನಟಿಕ್ ಬೆಡ್ ದೇಹದ lower part ದೋಷಗಳನ್ನ heal ಮಾಡೋದರಲ್ಲಿ ಯಶಸ್ವಿಯಾಗಿದೆ. upper part ಇದೆಯಲ್ಲಾ, ಅಂದ್ರೆ, heart, eyes, ear, face ಇವೆಲ್ಲಾ ಇನ್ನಷ್ಟು ಕ್ಲಿಕ್ ಆಗಿ ಮ್ಯಾಗ್ನಟಿಕ್ ಪವರ್‌ನಿಂದ ಹೀಲ್ ಮಾಡೋ ಸಲುವಾಗಿ, ಮ್ಯಾಗ್ನಟಿಕ್ ರಗ್ ತಯಾರು ಮಾಡ್ತಾ ಇದ್ದೀವಿ. ಈಗ ಎಕ್ಸ್‌ಪೆರಿಮೆಂಟ್ ನಡಿತಾ ಇದೆ. results also good, ಅಂತ ಆ ಹುಡುಗ ಮಾತು ಮುಗಿಸುವುದರೊಳಗೆ ಡಾ|| ಕತ್ತಿಯವರಿಗೆ 'ಮ್ಯಾಗ್ನಟಿಕ್ ಕಾಚಾ ಏನಾದರೂ ನಿಮ್ಮ ಕಂಪನಿ ತಯಾರು ಮಾಡುತ್ತಾ' ಎಂದು ಕೇಳುವ ಪ್ರಲೋಭನೆ ತುಟಿಯವರೆಗೆ ಬಂತು. ಆದರೆ ಶೆಣೈ ಮತ್ತಾರೋ ನಾಲ್ಕಾರು ಮ್ಯಾಗ್ನಟಿಕ್ ಆಕಾಂಕ್ಷಿಗಳನ್ನು ಕರಕೊಂಡು ಹಾಲ್‌ಗೆ ಬಂದದ್ದರಿಂದ ಸುಮ್ಮನಾದರು.

ಹೊಸದಾಗಿ ಬಂದ ಆ ಗಿರಾಕಿಗಳನ್ನು ಮೂಲೆಯಲ್ಲಿ ನಿಂತಿದ್ದ ಉಳಿದ ಸೇಲ್ಸ್ ಮ್ಯಾನ್‌ಗಳ ಕೈಗೆ ಒಪ್ಪಿಸಿ, ಕ್ರಾಪು ತಿರುವಿಕೊಳ್ಳುತ್ತಾ ಬಂದ ಶೆಣೈ, ನೇರವಾಗಿ ಮಲಗಿದ್ದ ಡಾ|| ಜತ್ತಿಯವರ ಬಳಿ ಹೋಗಿ, "How you feel sir, come on get up, and relax" ಅಂದ.

ನಿದ್ದೆಯಿಂದ ಮೇಲೆದ್ದವರಂತೆ, ಅಥವಾ ಯಾವುದಾದರೂ ಮೋಡಿಗೆ ಒಳಗಾದವರಂತೆ ಸೊಂಟದ ಮೇಲೆ ಕೈಯಿರಿಸುತ್ತಾ, ಜೋಮು ಹಿಡಿದ ಕಾಲುಗಳನ್ನು ಅಲ್ಲಾಡಿಸುತ್ತಾ, "ಸ್ವಲ್ಪ ಅನ್‌ಕಂಫರ್ಟ್‌ಬಲ್ ಆಗುತ್ತಲ್ಲ ಸಾರ್. ಸೊಂಟ ನೋಯುತ್ತೆ" ಅಂದರು. ಅವರ ಮಾತಿಗೆ ಶೆಣೈ ನಗುತ್ತಾ, "that is right ಸಾರ್, ಮುಳ್ಳನ್ನು ಮುಳ್ಳಿಂದ ತೆಗೆಯುವ ಫಿಲಾಸಫಿ ನಿಮಗೆ ಗೊತ್ತಿಲ್ವೆ, ಅನ್‌ಕಂಫರ್ಟ್‌ಬಲ್‌ನಿಂದ ಅನ್‌ಕಂಫರ್ಟ್


ಬಲನ್ನು remove ಮಾಡೋ meth
ಇದು, ನೀವು ಡಾಕ್ಟರ್, ನಿಮಗೆ ನಾನಿ
ಹೇಳಬೇಕೆ? ಪೋಲಿಯೋ ಕಾಯಿಲೆ ಬರಬ
ದೂಂತ ನೀವು ಹುಡಗ್ರ ಬಾಯಲಿ ಏನಾಕ್ತೀ
ಪೋಲಿಯೋ ವೈರಸ್‌ನ್ನೇ ಹಾಕ್ತಿರಿ,
ದೇಹದಲ್ಲಿ ಹೋಗಿ ಆ್ಯಂಟಿಬಾಡಿ ಕ್ರಿಯೆ
ಮಾಡ್ತಾವೆ, ಹಾಗೇನೆ ನಮ್ಮ ಪ್ರಾಡ
ಅನ್‌ಕಂಫರ್ಟ್‌ಬಲ್ ಸ್ಟಾರ್ಟ್ ಮಾಡಿ,
ಕಂಫರ್ಟ್‌ಬಲ್‌ನ ರಿಮೂವ್ ಮಾಡ್ತವೆ,"
ಶೆಣೈ ನಿಮಗೆ ಬೇಕೂಂದರೆ ಇವತ್ತೆ ಬುಕ್ ಮಾ
ನಮ್ಮಲ್ಲಿ ಹೆಚ್ಚಿಗೆ ಸ್ಟಾಕ್ ಇಲ್ಲ, ಸದ್ಯಕ್ಕೆ ಜಪಾ
ನಿಂದ ಬರೋದು ಗ್ಯಾರಂಟಿಯಿಲ್ಲ" ಅಂದ

ಡಾ|| ಜತ್ತಿಯವರು ಡಾ|| ಕತ್ತಿಯ
ಮುಖ ನೋಡಿದರು. ಡಾ|| ಕತ್ತಿಯವ
"ಇರಲಿ ತಗೊಳ್ಳಿ, ನಿಮಗೇನು ಮಹಾ ಇರಾ
ಹೋಗಿ ಹತ್ತು ವರ್ಷ ದುಡ್ಡು ಬಂದಿ
ಮ್ಯಾಗ್ನಟಿಕ್ ಬೆಡ್ ಏನು, ಮ್ಯಾಗ್ನಟಿಕ್ ಮನ
ಕಟ್ಟಿಸಬಹುದು" ಎಂದು ಪುಸಲಾಯಿಸಿದರು

"ಆಗಲಿ ನಮಗೊಂದು ಕಳಿಸಿಕೊಡ್ರಿ
ರಾತ್ರಿ ನಮ್ಮತ್ತೆ ಮಲ್ಕೋತಾರೆ. ಹಗಲು
ಹೆಂಡ್ತಿ ಮಲಕ್ಕೊತಾರೆ. ಟೈಮ್ ಸಿಕ್ಕರೆ ನಾ
ಒಂಚೂರು ಉಲ್ಡಾಡತಿನಿ" ಎಂದರು
ಜತ್ತಿಯವರು.

ಮೂವರೂ ಮ್ಯಾಗ್ನಟಿಕ್ ಬೆಡ್ ಖರೀ
ಆಫೀಸಿಗೆ ಬರುವ ಹೊತ್ತಿಗೆ ಮಧ್ಯಾಹ್ನ ಒಂ
ಗಂಟೆಯೇ ಆಗಿಬಿಟ್ಟಿತ್ತು. ಬೆಂಗಳೂರಿಗೆ
ಎಜ್ಯುಕೇಷನ್ ಟ್ರೈನಿಂಗ್‌ಗೆ ಹೋಗಿಬಂ
ಹೆಲ್ತ್ ಎಜ್ಯುಕೇಟರ್ ನರಸಪ್ಪ ಟೇಬಲ್ ಮೇ
ಸೂಟ್‌ಕೇಸ್ ಇರಿಸಿ, ಬೆಂಗಳೂರಿನಿಂದ ಕೊಂ
ತಂದ ಥರಾವರಿ ಸಾಮಾನುಗಳ ಪ್ರದರ್ಶ
ಇಟ್ಟಿದ್ದ. ಗಾಯಕ್ವಾಡ್, ಎ.ಎನ್.ಎಮ್
ಬಾಯಿ, ಬಾಯಿ ಬಾಯಿ ಬಿಟ್ಟುಕೊಂಡು
ಗಳನ್ನ ನೋಡುತ್ತಿದ್ದರು.

ನರಸಪ್ಪ ತಾನು ಬೆಂಗಳೂರಿನಿಂದ ಖರೀ



ತಂದ ಸಾಮಾನುಗಳು, ಅವುಗಳ ಬೆಲೆಗಳನ್ನು ವರ್ಣಿಸುತ್ತಾ, "ಸರ್ರು ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಒಂದು ಕತ್ತರಿ ಬಜಾರ್ ಅಂತ ಇದಾs ಅಲ್ಲೆಲ್ಲಾ foreign goods, ಮೊದಲು ಟೂ-ಇನ್-ಒನ್, ಈಗ ಹಂಗಲ್ಲಾ, ಟೂ-ಇನ್ ಟೆನ್, ಇಲೆವನ್, ಟ್ವೆಲ್ವ್, ಟೂ ಇನ್-ಫಿಫ್ಟಿ ತಂಕ ಬಂದವಾs" ಅಂದವ, ಯಾವುದೋ ಒಂದು ಸಾಮಾನನ್ನು ಸೂಟ್‌ಕೇಸ್‌ನಿಂದ ತಗದು, "ನೋಡ್ರಿ ಸಾರ್, ಇದು ಟಿ.ವಿ./ರೇಡಿಯೊ/ಟೆಪರೆಕಾರ್ಡ್/ಕ್ಯಾಲುಕೇಟರ್/ವಾಚ್/ಸೆಲ್ಯುಲರ್ ಫೋನ್, ಎಲ್ಲಾ ಇದರಾಗs ಅದs ಮೊದ್ಲಂಗ ಜನ ಬ್ಯಾರ ಬ್ಯಾರ ಸಾಮಾನ ಖರಿದೀ ಮಾಡಂಗಿಲ್ಲ, ಎಲ್ಲಾ ಒಂದರಾಗ ಬೇಕಂತಾರs ಟೂನ್-ಆಲ್ ಬೇಕಂತಾರ" ಎಂದು ಆ ಸಾಮಾನುಗಳ ವಿವಿಧ ಪ್ರಯೋಗವನ್ನು ಅಲ್ಲಿಯೇ ಮಾಡಿದ. ಅವನು ತೋರಿಸಿದ ಸಾಮಾನುಗಳನ್ನು ನೋಡುತ್ತಾ ಪ್ರತಿಯೊಬ್ಬರೂ "ಅಯ್ಯೊ ಮೊದ್ಲ ಹೇಳಿದ್ದರs ನಾನು ಒಂದು ಬೇಕಂತಿದ್ನಲ್ಲಾ ನರಸಪ್ಪ" ಅಂತೆಲ್ಲಾ ಚುಚ್ಚು ಅನ್ನತೊಡಗಿದರು.

"ಏನು ನರಸಪ್ಪ ಅದ್ನೆಲ್ಲಾ ಕಟ್ಟಿ ಇಡು. ICEಟ್ರೈನಿಂಗ್‌ನಲ್ಲಿ ಏನು ಹೊಸದು ಹೇಳಿದ್ರ ಅದನ್ನರ ನಾಕು ಪಾಯಿಂಟ್ ಹೇಳು, ICE ಅಂದ್ರ ನೆಪ್ಪೈತೊ ಇಲ್ಲೊ-ಇನ್‌ಫಾರ್ಮೆಶನ್, ಕಮ್ಯೂನಿಕೇಶನ್, ಎಜ್ಯುಕೇಶನ್" ಅಂದು ಡಾ|| ಜತ್ತಿಯವರು ಗದರಿಸಿದರು. ಎಲ್ಲರೂ ನರಸಪ್ಪನ ಟೇಬಲ್ ಬಿಟ್ಟು ದೂರ ಸರಿದರು. ನರಸಪ್ಪ ತನ್ನ ಸಾಮಾನುಗಳನ್ನು ಸೂಟ್‌ಕೇಸ್‌ನಲ್ಲಿ ತುಂಬುತ್ತ, "ಸಾರ್, ನ್ಯಾಷನಲ್ ಹೆಲ್ತ್ ಪ್ರೋಗ್ರಾಮ್‌ಗಳನ್ನು ಹೆಂಗ ಪ್ರೋಪಾಗಾಂಡ ಮಾಡಬೇಕು ಅಂತ ಹೇಳಿದ್ರs, ಮಾರ್ಕೆಟ್ ಟೆಕ್ನಾಲಜಿಯಲ್ಲಿ ಹೆಂಗ ಪ್ರೊಪಾಗಾಂಡ ಬಳಸಿ, ಜನರ ಮೈಂಡನ ವಾಷ್ ಮಾಡುತ್ತಾರೋ ಹಂಗ ನಾವು ಮಾಡ ಬೇಕಂದರು" ಅಂದ ನರಸಪ್ಪ.

ಪಾಟೀಲರು ಮಧ್ಯೆ ಪ್ರವೇಶಿಸಿ, ಪ್ರೊಪಾಗಾಂಡದ ಪ್ರಿನ್ಸಿಪಲ್ಸ್ ಏನಪಾ ಅಂದರು. ನರಸಪ್ಪ ಟ್ರೈನಿಂಗ್ ಸಂದರ್ಭದಲ್ಲಿ ತನಗೆ ಕೊಟ್ಟಿದ್ದ ಮೆಟೀರಿಯಲ್‌ಗಳಲ್ಲಿ ಹಲವನ್ನು ಹುಡುಕಿ, ಕೈಯಲ್ಲಿ ಒಂದನ್ನು ತಕ್ಕೊಂಡು, "ವಿಷಯ ಹೇಳಬೇಕು, ವಿಚಾರ ಮಾಡ್ರಿ, ಅನ್ನಬಾರದು. ಇದು ಫಸ್ಟ್ ಪಾಯಿಂಟ್. ಸೆಕೆಂಡ್ ಪಾಯಿಂಟ್, ರೆಡಿಮೆಡ್ ಸ್ಲೋಗನ್‌ಗಳನ್ನ ಪ್ರಚಾರ ಮಾಡ

ಬೇಕು, ಮೂರನೆದು ಅವರೊಳಗೆ ಇರೋ ಬಯಕೆಗಳನ್ನು ಭಾವನಾತ್ಮಕ ರೀತಿಯಲ್ಲಿ ಉದ್ದೀಪಿಸಬೇಕು. ನಾಲ್ಕನೆಯದು ಎಮೋಷನಲ್ ಆಗಿ ಅಪೀಲ್ ಆಗೊ ಹಂಗ ಹೇಳಬೇಕು. ಐದನೆಯದು ಎಲ್ಲಾ ಜನ ಒಂದೇ ಥರ ಯೋಚ್ನೆ ಮಾಡೋ pattern ಮತ್ತು mouldಗಳನ್ನು ತಯಾರಮಾಡಬೇಕು. ಆರನೆಯದು ಸಾರ್, ಅದು ಇಂಗ್ಲಿಷನಲ್ಲಿದೆ... ಹಂಗೆ ಓದ್ತನಿ, Knowledge is spoon fed and passively received, ನರಸಪ್ಪ ಓದುವ list ಬಹಳ ಇತ್ತೇನೋ,. ಡಾ|| ಜತ್ತಿಯವರಿಗೆ ಊಟದ ನೆನಪಾಗಿ, "ಸಾಕು ನಿಲ್ಸಪ್ಪಾ ನಿನ್ನ ಪ್ರೋಪಗಾಂಡ," ಅಂತ ಮೇಲೆದ್ದರು. ಅವರೊಡನೆ ಎಲ್ಲರೂ ಮೇಲೆದ್ದರು.

ಟಿ.ವಿ. ನೋಡುತ್ತಿದ್ದ ಪಾಟೀಲರ ಮಗ, ಮುಂಜಾನೆಯ ಪತ್ರಿಕೆಯಲ್ಲಿ ಮ್ಯಾಚ್ ಫಿಕ್ಸಿಂಗ್ ಪ್ರಕರಣ ಕುರಿತು ಓದುತ್ತಿದ್ದ ಪಾಟೀಲರನ್ನ ಅವರ ಓದನ್ನು ರಸಭಂಗ ಮಾಡುವಂತೆ, "ಅಪ್ಪಾ ಇವರು ಕಮಾನ್ ಇಂಡಿಯಾ, ಕಮಾನ್ ಇಂಡಿಯಾ, ಅಂತ ಯಾವುದೇ ಸಿಗರೇಟ್ ಅಡ್ವಟೈಜ್ ಯಾಕೆ ಮಾಡ್ತಾರೆ, ಇಂಡಿಯಾದ ಮಂದಿಯೆಲ್ಲಾ ಸಿಗರೇಟ್ ಸೇದಬೇಕಂತಾನ". ಅಂತ ಕೇಳಿದ. ಮಗನ ಮಾತನ್ನು ಒಳಗೆ ಅವಲಕ್ಕಿಗೆ ಒಗ್ಗರಣೆ ಬೆರೆಸುತ್ತಿದ್ದ ಬಸವ್ವ ಕೇಳಿಸಿಕೊಂಡವ್ಳೆ, "ಲೇ ತೆಪರಾs, ನೀ ಅವ್ರುನ್ ನೋಡಿ ನೋಡಿ ಕೆಟ್ಟೆ ಕಣೋ, ಇವರು ಅದ್ಯಾವನೋ ಮನೆ ಕ್ಲೀನ್ ಮಾಡೋನಿಗೆ ಇವತ್ತೆ ಬರೋಕೆ ಹೇಳಾರೆ, ಆಯ್ತುವಾರ, ಒಂದೀಟ ಆರಾಮಿರಾಣ ಅಂದರೇ, ಅದೇನೋ ರಾಮಾಯಣ ಹಚ್ಚರೇ, ಅಪ್ಪ, ಮಕ್ಕಳು ಬಾಳ ಚಲೋ ಆದೀರಿ, ಬರ್ರಿ ಅವಲಕ್ಕಿ ನುಂಗಿರಿ" ಅಂತ ಒಗ್ಗರಣೆ ಪಾತ್ರೆಯನ್ನು ಎತ್ತಿ ನೆಲದ ಮ್ಯಾಲೆ ಕುಕ್ಕಿದಳು. ಬಸವ್ವನ ಮಾತಿಗೆ ಪಾಟೀಲರ ಪೇಪರ್ ಓದುವ ಮೂಡು ಹಾಳಾಗಿ, "ಏ, ಏ, ನಾನೇನ ಅವ್ನ ಬಾ

ಅಂದ್ನೆ, ಏನೋ ನಿಮ್ಮ ಮನೆ ಎಲ್ಲೈತ್ರಿ, ಅ
ಅಡ್ರಸ್ ಬರ್ಕಂಡ, ನೀವು ತಕ್ಕಬ್ಯಾಡಿ, ಸ
ನೋಡ್ರಿ ಅಂದ, ಸುಮ್ಮ ನೋಡಕರ ಏನಾಕ

"ಆಗಾs ನಿಮಗೆ ಪುಗಸಟ್ಟೆ ತೋರಿ
ಅವರು, ನೀವು ನೋಡವಂತ್ರಿ, ಅದ
ನಮ್ಮೂರ ದೊಡ್ಡಾಟಾದೀತs", ಬಸವ್ವ ಲ
ಲೊಟ ಗುಬ್ಬುತ್ತಾ ನಾಲ್ಕು ಪ್ಲೇಟಿಗೆ ಅವಲಕ್ಕಿ ಹ
ಹೊರಗೆ ಉಗುರು ಕತ್ತರಿಸಿಕೊಳ್ಳುತ್ತಾ ನಿ
ಮಗಳನ್ನ, 'ನೀನೂ ಬಾರೆ,' ಅಂದು ಒದರಿದ

ಸಂತೋಷವಾಗಿ ಕಾಲ ಕಳೆಯಬೇಕಾ
ಸಂಡೆಯ ಮುಂಜಾನೆ ಬಿಗುವಿನ ಕಾರ್ಮೋ
ದಿಂದ ಆರಂಭವಾದಂತಾಗಿ ಯಾಕೋ ಪಾಟ
ರಿಗೆ ಅವಲಕ್ಕಿ ರುಚಿ ಅನ್ನಿಸಲಿಲ್ಲ. ಅವರಿನು
ತೊಳೆದುಕೊಂಡಿರಲಿಲ್ಲ, "ಮೇ ಐ ಕಮಿ
ಸಾರ್" ಎಂಬ ದನಿ ಬಾಗಿಲಿನಿಂದ ಕೇಳಿಬ
ಜೊತೆಗೆ ನಾಕಾರು ನೆರಳುಗಳು, ದ
ಗಂಟಲಿನ ಹರಟೆಗಳೂ ಕೇಳಿಬಂದವು. ಅ
ಮನೆಯಿಂದ ಹೊರಬಂದು ನೋಡಿ
ಪಾಟೀಲರ ಕಣ್ಣಿಗೆ ಕಂಡದ್ದು, ಅದೇ ಅಂಚೆ
ಹೊಟೆಲಿನಲ್ಲಿ ಕೂತಿದ್ದ ಟಿಪ್‌ಟಾಪ್ ಸೆ
ಮ್ಯಾನ್, ಅವನ ಹಿಂದೆ ನಾಲ್ಕಾರು ಹುಡು
ಕೆಳಗೊಂದು house cleaner machi

ಪಾಟೀಲರು ಅವರನ್ನು ನೋಡಿ ಬನ್ನಿ ಎ
ಮೊದಲೆ ಒಳನುಗ್ಗಿದ ಆ ಸೇಲ್ಸ್‌ಮ್ಯಾನ್, "
ಬಹಳ dust ಆಗಿದೆ, ಮತ್ತೆ ಬಹಳ ಕಂಜೆ
ಇದೆ, ನಿಮಗೆ ನಮ್ಮ cleaner ಅವಶ್ಯ
ಬಹಳ ಇದೆ ಸಾರ್" ಅಂದ.

ಒಳಗಿನಿಂದ ಬಸವ್ವ ಮತ್ತು ಎ
ಹುಡುಗರೂ ಕುತೂಹಲದಿಂದ ಆ ಸೇಲ್ಸ್
ನನ್ನು ಹಾಗೂ ಅವನ ಸಹಚರರನ್ನು, ಹಾಗೂ
ಯಂತ್ರವನ್ನು ನೋಡಿ ಪಾಟೀಲರತ್ತ ಇದ
ಏನ್ರಿ ಎನ್ನುವಂತೆ ನೋಡಿದರು. ಪಾಟೀ

ತುಟಿಯ ಮೇಲೆ ಬೆರಳಿಟ್ಟು, "ನೀವೇನೂ ಮಾತಾಡಬೇಡಿ" ಎಂಬಂತೆ ಸಂಜ್ಞೆ ಮಾಡಿದರು.

ಆ ಸೇಲ್ಸ್‌ಮ್ಯಾನ್ ಸಹಾಯಕರು ಆ ಯಂತ್ರದ ನಾಕು ದಿಕ್ಕಿನ ನಾಕು ಬಾಯಿಗಳಿಗೆ ಒಂದೊಂದು ಕೊಳವೆ ಸಿಗಿಸಿ, ಮತ್ತೊಂದು ಕಡೆ ಒಂದೆರಡು ಬಕೆಟ್‌ನಲ್ಲಿ ನೀರು, ಬಣ್ಣಗಳ ಕಲಸಿ ಮುಂದಿನ ಆಜ್ಞೆಗೆ ಆ ಸೇಲ್ಸ್‌ಮ್ಯಾನ್ ಕಡೆ ತಿರುಗಿದರು. ಆ ಸೇಲ್ಸ್‌ಮ್ಯಾನ್ ಈಗ ಈ ಮನೆಯು ತನ್ನದೇ ಅನ್ನುವಂತೆ ಅವರಿಗೆಲ್ಲಾ, "ಆ ಮಂಚವನ್ನು ಆ ಕಡೆ ತಳ್ಳು, ಈ ಬೀರನ್ನು ಈಚೆಗೆ ಮಾಡು, ಆ ಟಿ.ವಿ.ಯನ್ನು ಇತ್ತ ಸರಿಸು" ಎಂದೆಲ್ಲಾ ಹೇಳುತ್ತಾ ಇಡೀ ಮನೆಯ ಸಾಮಾನುಗಳನ್ನು ಚೆಲ್ಲಾಪಿಲ್ಲಿಗೊಳಿಸಿದ. ಪಾಟೀಲರು ಇದನ್ನೆಲ್ಲಾ ನೋಡಲಾರದೆ ನೋಡಿ,

"ರ್ರೀ ಇವರ್‍ರ, ನಾವಿರದು ಕ್ವಾರ್ಟರ್ಸ್, ಇದಕ್ಕೆ ಸುಣ್ಣ, ಬಣ್ಣ ಸರ್ಕಾರದೋರು ಹೊಡಿಸುತ್ತಾರೆ. ನಾವಿರತನಕ ಕಸಬರಿಕೆಯಿಂದ ಕಸ ಗೂಡಿಸಿಗೋತಿವಿ, ನಾ ನಿಮಗೆ ಅಪತ್ತೆ ಹೇಳಿದ್ನಲ್ಲ, ನಮಗ ಇದೆಲ್ಲಾ ಬೇಡಾಂತ, ಸುಮ್ನೆ ನಿಮ್ಮ ಟೈಂ ವೇಸ್ಟ್, ನಮ್ಮ ಟೈಂ ವೇಸ್ಟ್," ಅಂದರೂ ಅದಕ್ಕೆ ಆ ಸೇಲ್ಸ್ ಮ್ಯಾನ್, "ಸರ್ ಸಮ್ಮ ಕಂಪನಿ ನಮಗೆ ಟಾರ್ಗೆಟ್ ಕೊಟ್ಟಿರುತ್ತೆ. ಎಷ್ಟು ಫೀಸ್ ಖರ್ಚು ಮಾಡಿದಿರಿ. ಎಷ್ಟು ಮನೆಯಲ್ಲಿ ಡೆಮನ್‌ಸ್ಟ್ರೇಟ್ ಮಾಡಿದಿರಿ, ಅಂತ. ನೀವು ನಮ್ಮ ಡೆಮಾನಸ್ಟ್ರೇಷನ್ ನೋಡಿ ಖರೀದಿಸುವ ಮನಸ್ಸು ಮಾಡಬಹುದು ಅಥವಾ ಈ ಡೆಮಾನ್‌ಸ್ಟ್ರೇಷನ್ ನೋಡ್ಲಿಕೆ ಬರ್ತಾರಲ್ಲಾ ಆಚೆ ಈಚೆ ಮನೆಯವರು, ಅವರು ಆರ್ಡರ್ ಕೊಡಬಹುದು" ಅಂದವ, ತನ್ನ ಸಹಾಯಕರ ಕಡೆ ತಿರುಗಿ, " ಏ, ಆ ಕಡೆ ಈ ಕಡೆ ಮನಿಗೆಲ್ಲಾ ಹೋಗಿ, ಹಿಂಗಿಂಗಿ, ಇಂಥ ಮಷಿನ್ ಬಂದದೆ, ಡೆಮಾನ್‌ಸ್ಟ್ರೇಷನ್ ಮಾಡ್ತಾರೇ ನೋಡಿ ಬನ್ನಿ, ಎಂದು ಹೇಳಿ ಬರ್‍ರ್ರೀ" ಎಂದು ಕಾಟಿನ ಮೇಲೆ ಕೂತು ಸಿಗರೇಟು ಹಚ್ಚಿದ. ಮುಂಜಾನೆ ಮುಂಜಾನೆ ತನ್ನ ಮನೆಯನ್ನು ಅಡವಿಗಿಟ್ಟಂಗೆ, ತನ್ನ ಸಾಮಾನುಗಳನ್ನು ಹರಾಜಿಗಿಟ್ಟಂತೆ ನೆರೆಹೊರೆಯವರ ಎದುರು ಪ್ರದರ್ಶನಕ್ಕಿಡುವ ಪ್ರಸಂಗ ಬಂತಲ್ಲಾ ಎಂದು ನೊಂದು ತಮ್ಮ ಬೋಳು ತಲೆಯ ಮೇಲೆ ಕೈಯಾಡಿಸಿಕೊಂಡರು ಪಾಟೀಲರು.

ಬಸವ್ವ ಮತ್ತು ಹುಡುಗರು ಪಾಟೀಲರ ಭೋಳೆತನ ಹೀಗೆ ಪದೇ ಪದೇ ತಮ್ಮನ್ನ ಪೇಚಿಗಿಡುತ್ತಿರುವ ಪ್ರಸಂಗದಿಂದಾಗಿ ಬಹಳ ಕೋಪಗೊಂಡವರಂತೆ ಮುಸುಮುಸುಗುಡುತ್ತಾ, ಹೊರ ಹೋಗಿ ನಿಂತರು.

ಸೇಲ್ಸ್‌ಮ್ಯಾನ್ ಸಹಾಯಕರು ನೆರೆಹೊರೆಯ ಮನೆಗಳಿಗೆಲ್ಲಾ ನುಗ್ಗಿ, "ಬನ್ನಿ, ಪಾಟೀಲರ ಮನೆಯಲ್ಲಿ ಪುಕ್ಕಟೆ ಪ್ರದರ್ಶನವಿದೆ. ತಪ್ಪಿಸಿಕೊಳ್ಳದಿರಿ, ನೋಡಲು ಮರೆಯದಿರಿ ಮರೆತು ನಿರಾಶರಾಗದಿರಿ, ಇದೇ ಕಡೇ ಪ್ರದರ್ಶನ" ಎಂದು ಪ್ರಚಾರ ಮಾಡಿದವರಂತೆ ಮಾಡಿ, ಹತ್ತಾರು ಜನರನ್ನು ಎಳೆತಂದು ಪಾಟೀಲರ ಮನೆಗೆ ನುಗ್ಗಿಸಿದರು.

"ಏನಪ್ಪಾ, ಮುಂಜ, ಮುಂಜಾನೆ, ಏನೋ ಖರೀದಿ ನಡೆಸಿದ್ರಿ,"

"ಅಂತೂ ಬಸವ್ವ ಅವರಿಗೆ ಕಸ ಗುಡಿಸೋದು ತಪ್ಪತೂ"

"ಈ ಮೆಷಿನ್ ಬಣ್ಣಾನೂ ಸ್ಪ್ರೇ ಮಾಡ್ತದಂತೆ, ನೆಲನೂ ವಾಷ್ ಮಾಡ್ತದಂತೆ,"

"ಏ, ಚಾಲೂ ಮಾಡ್ರಪ್ಪಾ,"

ಒಬ್ಬೊಬ್ಬರು ಒಂದೊಂದು ಮಾತಾಡಿ, ಕೆಲವರು ಎಲೆ ಅಡಿಕೆ, ಕೆಲವರು ಬೀಡಿ, ಮತ್ತೆ ಕೆಲವರು ಸಿಗರೇಟು ಸೇದುತ್ತ, ಸಿಕ್ಕ ಸಾಮಾನುಗಳ ಮೇಲೆ ಅಂಡು ಊರಿದರು. ಸಿಕ್ಕಲ್ಲೇ ಬೂದಿ ಕೊಡವಿ, ಎಲೆಯಡಿಕೆಯ ಉಗುಳ ಉಗುಳಿದರು.

ಎಕ್ಸ್‌ಟೆನ್‌ಷನ್ ಕಾರ್ಡ್ ವೈರ್‌ನಿಂದ ಪ್ಲಗ್‌ಗೆ ವೈರ್‌ನ್ನು ಸಿಗಿಸಿ, ಸ್ವಿಚ್ ಆನ್ ಮಾಡುತ್ತಿದ್ದಂತೆ ಆ ಕ್ಲೀನರ್ 'ಗುರ್‍ರ್ರೀ' ಎಂದು ಸದ್ದು ಮಾಡಿತು. ಡಿ.ಡಿ.ಟಿ. ಸ್ಪ್ರೇ ಮಾಡುವವರು ವೈರನ್ನು,

ನಾಜರ್‌ನ್ನು ಎಳಕೊಂಡು ಮೂಲೆ ಮೂಲೆಗೂ ಹೋಗುವಂತೆ, ಕ್ಲೀನರ್ ಕೊಳವೆ ಹಿಡಕೊಂಡವ ಮನೆಯ ಸಂದಿ ಸಂದಿಗಲ್ಲಾ ನುಗ್ಗಿ, "ಇಸ್, ಬುಷ್, ಸರ್್ರ, ಕೀಚ್" ಎಂದೆಲ್ಲಾ ಸದ್ದು ಮಾಡಿ, ನೋಡುವವರೆಲ್ಲಾ ಮೂಗಿನ ಮ್ಯಾಲೆ ಬೆರಳಿಡುವಂತೆ, ಎಲ್ಲರ ಮುಂದೆ, ಒಂದು ಪ್ಲಾಸ್ಟಿಕ್ ಟ್ರೇ ಮೇಲೆ ತಾನು ಕೊಳವೆಯ ಮೂಲಕ ಹೀರಿದ ಒಂದು ಬುಟ್ಟಿಯಷ್ಟು ಕಸವನ್ನು, ಮತ್ಯಾವುದೋ ಬಟನ್ ಒತ್ತಿ ಹೊರ ಹಾಕಿಸಿದ. ಅದರಲ್ಲಿ ಸತ್ತ ಜಿರಲೆಗಳು, ಒದ್ದಾಡುವ ಜಿರಲೆಗಳು, ಜೇಡಗಳು, ಜೇಡದ ಬಲೆಗಳು ಇಲಿಯ ಹಿಕ್ಕಿಗಳು, ಕೂದಲುಂಡೆಗಳು, ನಾನಾ ಆಕಾರದ ಕಸಗಳು ಒಂದರೊಳಗೊಂದು ಮಿಕ್ಸ್ ಆಗಿ ಹೋಗಿದ್ದವು. ಗುಂಪಿನಲ್ಲಿದ್ದವರಲ್ಲಿ ಒಂದಿಬ್ಬರು "ಏನ್ರಿ ಪಾಟೀಲರೇ, ಇವರು ಬಂದು ಕಸ ಹೊಡಿತಾರಂತಾ, ಹಿಂಗ ಬಿಟ್ಟಿದ್ದರೇನು" ಅಂತ ನಗೆಯಾಡಿದರು. ಮತ್ತೆ ಕೆಲವರು "ಏ, ಕ್ಲಿನರ್ ಚಲೋ ಕೆಲ್ಸ ಮಾಡ್ತದ, ತಕ್ಕಂಬಿಡ್ರಿ ಪಾಟೀಲರೆ" ಅಂತ ಪುಸಲಾಯಿಸಿದರು.

ಈಗ ನಡೆದದ್ದು ಕೇವಲ ಒಂದು ಐಟಂ. ಮುಂದೆ ಇನ್ನೂ ಕ್ಲೆಮ್ಯಾಕ್ಸ್ ದೃಶ್ಯಗಳಿವೆ ಎಂದು ಅನೌನ್ಸ್ ಮಾಡುವನಂತೆ, "ಏ, ಅದ್ನ ರಿಮೂವ್ ಮಾಡಿ ಆ ಸ್ಪ್ರೇ ಸ್ಪ್ರಿಂಕಲ್‌ನ ಅಡ್ಜೆಸ್ಟ್ ಮಾಡ್ಹೋ," ಎಂದು ಅವನೇ ಖುದ್ದು ತಾನೆ ಅದನ್ನು ತೋರಿಸುವವನಂತೆ ಕೈಗೆ ತೆಗೆದುಕೊಂಡ ಆ ಸೇಲ್ಸ್ ಮ್ಯಾನ್.

ಪಾಟೀಲರ ಹೆಂಡ್ತಿ ಕುತೂಹಲ ತಾಳದೆ ಒಮ್ಮೆ ಬಗ್ಗಿ ನೋಡಿ, ತಮ್ಮ ಮನೆಗೆ ಒರಗಿದ ದುಸ್ಥಿತಿಗೆ ಮರುಗಿ ಮುಖ ಮುಚ್ಚಿಕೊಂಡಳು. ಜನ ಈಗ ಮತ್ತೂ ಹೆಚ್ಚಾದರು. ಒಬ್ಬರನ್ನು ತಳ್ಳಿ ಮತ್ತೊಬ್ಬರು ನುಗ್ಗಿ ಪಾಟೀಲರ ಮನೆಯಲ್ಲಿ ಕಾಲಿಡಲು ಜಾಗವಿಲ್ಲದಂತೆ ತುಂಬಿಕೊಂಡರು. ನುಗ್ಗಿ ಬರುವ ಜನರ ಕಾಲಿಗೆ, ಕೈಗೆ ಸಿಕ್ಕ ಮನೆಯ

ಸಾಮಾನುಗಳು ಮತ್ತೂ ಅಸ್ತವ್ಯಸ್ತಗೊಂಡ
ಪಾಟೀಲರು ಮಧ್ಯೆ, "ಏ ಅಲ್ಲಿ ಕೂಡಬೇಡ್ರಿ,
ಅದನ್ನ ಮುಟ್ಟಬ್ಯಾಡ್ರಿ, ಏ ಅದ್ನ ತಳ್ಳಬೇಡಿ
ಅಂದರೂ ಅವರ ಮಾತು ಯಾರ ಕಿವಿ
ಸೇರದ ಪ್ರಹಸನ ಕ್ಷಣ ಕ್ಷಣ
ರಂಗೇರತೊಡಗಿತು.

ಆ ಸೇಲ್ಸ್‌ಮ್ಯಾನ್ ಸ್ಪ್ರೇಯನ್ನ
ಕೈಯಲ್ಲಿಡಕೊಂಡು ಬಕೆಟ್‌ನಲ್ಲಿ ನೀ
ಖಾಲಿಯಾಗುವವರೆಗೂ ಅದನ್ನು ಗೋ
ಗೋಡೆಗೂ ಕಾರಂಜಿಯಂತೆ ಸ್ಪ್ರಿಂಕ್ ಮಾ
ನಂತರ ಅದರ ಮೇಲೆ 'ಬುಷ್' ಎಂಬ ಬಿಸಿ
ಹಾಯಿಸಿದ. ನೀರೆಲ್ಲಾ ಆವಿಯ
ಮನೆಯೊಳಗೆ ಮಳೆ ಬಂದಂತೆ. ನೀರಿನ ವಾ
ತುಂಬಿಕೊಂಡಿತು. ಜನ 'ಹಾ, ಹಾ' ಅಂದ
ಸೇಲ್ಸ್‌ಮ್ಯಾನ್ ಈಗ ತನ್ನ ಆಪರೇಷನ್ ನಿ
"ಏ ನೆಲ ವಾಷ್ ಮಾಡೋ item
ಮಾಡೋ" ಎಂದು ಕೊಳವೆಯನ್ನು ಕೆಳಗಿ
ಸಿಗರೇಟು ಹಚ್ಚಿದ. ಸಿಗರೇಟಿನ ನಡುವೆ ಅ
ಇನ್ನೂ ಹಲವು ಉಪಯೋಗಗಳನ್ನು ಅವ ನೆ
ಮಂದಿಗೆ ವಿವರಿಸಿದ. ಒಂದು ಸೆಟ್‌ನ ಬೆಲೆ ಐ
ಸಾವಿರವಾಗುವುದೆಂದು ಅದರ ಮೇ
ಡಿಸ್ಕೌಂಟ್ ಇದೆಯೆಂದು ಸರ್ಕಾರಿ ನೌಕರ
ಕಂತಿನ ಮೇಲೆ ಸಿಗುತ್ತದೆ ಎಂದು ಅಲ್ಲಿ ನೆರ
ಮಂದಿಯ ಕೈಗೆ ಒಂದೊಂದು ಪಾಂಪ್ಲೆಟ್‌ಗಳ
ಹಂಚಿದ. ಅಷ್ಟರಲ್ಲಿ ಅವನ ಸಹಾಯಕ
ಮನೆಯ ತುಂಬಾ ತುಂಬಿಕೊಂ
ಸಾಮಾನುಗಳನ್ನೆಲ್ಲಾ ಈ ಗೋಡೆಯ ಬಾಜು
ತಳ್ಳಿ, ನೆಲವನ್ನು ವಾಷ್ ಮಾಡ
ಯೋಗ್ಯವಾಗುವಂತೆ ನಡುಮನೆಯನ್ನು ಖ
ಮಾಡಿದರು.

ಹೊರಗೆ ನಿಂತು ಈ ಕಾರುಬಾರುಗಳ
ನೋಡುತ್ತಿದ್ದ ಬಸವ್ವನ ಸಂಯಮದ ಕಟ್ಟೆ ಒಡೆ
ಆಸ್ಫೋಟಿಸುವ ಸ್ಥಿತಿ ತಲುಪಿತು. ಆ ಮ
ಬಂದು ಆಗಲೆ ಎರಡು ತಾಸು ದಾಟಹೋಗಿ

ಆಕೆಗೆ ಒಮ್ಮೆಗೆ ತನ್ನ ಹಳ್ಳಿಯ ನೆನಪಾಯ್ತು. ಮುಂಜಾನೆ ಐದಕ್ಕೆ ಎದ್ದು ಮರಗಟ್ಟಲಿ ರಾಗಿ ಬೀಸುತ್ತಿದ್ದದ್ದು, ಒನಕೆಯಿಂದ ನವಣೆ ಕುಟ್ಟುತ್ತಿದ್ದದ್ದು, ಬಾವಿಗೆ ಹೋಗಿ ನೀರು ತರುತ್ತಿದ್ದದ್ದು, ಕೆರಗೆ ಹೋಗಿ ಬಟ್ಟೆ ತೊಳೆಯುತ್ತಿದ್ದದ್ದು, ಒಳಕಲ್ಲಲ್ಲಿ ಚಟ್ನಿ ಪುಡಿ, ಗುರಳ್ಳು ಪುಡಿ ಅರೆಯುತ್ತಿದ್ದದ್ದು... ಆಗೆಲ್ಲಾ ಹೀಗೆ ಕೈಗೊಂದು, ಕಾಲಿಗೊಂದು ಮಿಷನ್‌ಗಳಿದ್ದವಾ? ಇಷ್ಟೆಲ್ಲಾ ಕೆಲ್ಸ ಮಾಡಿ ಮತ್ತೆ ಆಳುಗಳ ಜೊತೆ ಹೊಲಕ್ಕೆ ದುಡಿಯಲಿಕ್ಕೆ ಹೋಗುತ್ತಿದ್ದದ್ದು ಆಕೆಗೆ ನೆನಪಿಗೆ ಬಂತು. ಈಗ ಮನುಷ್ಯ ಎಷ್ಟೊಂದು ಸೋಮಾರಿಯಾಗಿದ್ದಾನೆ. ಹತ್ತು ನಿಮಿಷ ಕಸ ಹೊಡೆಲಿಕ್ಕೆ, ಹತ್ತು ನಿಮಿಷ ನೆಲ ಒರಸಲಿಕ್ಕೂ ಮಿಷನ್...

ಯೋಚಿಸುತ್ತಾ ಯೋಚಿಸುತ್ತಾ ಅವಳ ಮೈ ನರನರಗಳೆಲ್ಲಾ ಸೆಟಕೊಂಡು ಹಳ್ಳಿಯಿಂದ ನಗರಕ್ಕೆ ಬಂದು ಕೊಂಚ ಮೃದುವಾಗಿದ್ದ, ನಾಗರಿಕವಾಗಿದ್ದ ಸ್ಪಂದನಗಳು ಪುನಃ ಹಳ್ಳಿಯ ರೂಪತಾಳಿ ಎಲ್ಲಾ ಭೀತಿಗಳನ್ನು ಕಿತ್ತೊಗೆದವಳಂತೆ ಒಮ್ಮೆಲೆ ಬಿರುಗಾಳಿಯಂತೆ ಒಳನುಗ್ಗಿ, ಸಿಗರೇಟ್ ಸೇದುತ್ತಾ ಹರಾಮಿ ಜನರೊಂದಿಗೆ ಪಂಡ್ ಒಡೆಯುತ್ತಿದ್ದ ಸೇಲ್ಸ್‌ಮ್ಯಾನ್ ಹತ್ತಿರ ಧಾವಿಸಿದವಳೆ, "ಏ, ಮೇಲೇಳೋ ಇದೇನ ನಿಮ್ಮಪ್ಪನ ಮನಿ ಅಂತ ತಿಳ್ಕಂಡಿಯೇನು, ಕಟ್ಟೋ ನಿನ್ನ ಗಂಟು ಮೂಟೀನೇ, ಅದೇನ ಹೇಳ್ತಾರಲ್ಲ ಸದರ ಕೊಟ್ಟರೆ ನಾಯಿ ಅಡುಗೆ ಮನಿಗೂ ನುಗ್ಗಿತ್ತಂತೆ" ಅಂತ ಒಮ್ಮೆಗೆ ಕಿರುಚಿದಳು. ಸೇಲ್ಸ್‌ಮ್ಯಾನ್ ದಢಕ್ಕನೆ ಮೇಲೆದ್ದು ಅಪ್ರತಿಭನಾದ. ಸುತ್ತೂ ನೋಡುತ್ತಾ ನಿಂತಿದ್ದ ಮಂದಿ ಕಡೆ ತಿರುಗಿದ ಬಸವ್ವಾ, "ಹೋಗ್ ಹೋಗರಿ, ಬೇಕಾದರೆ ಇವ್ನೆ ನಿಮ್ಮ ಮನಿಗೆ ಕರೆಸಿಕೊಂಡು ತೊಳ್ಸಿಕೊಳ್ಳರಿ, ಮಂದಿ ಮನೆಯಾಗ ಪುಕ್ಕಟ ನೋಡಕ ಚಲೋ ಯಿರತ್ತದಾ ಏನು," ಅಂದಳು. ಮಂದಿ ಮೆಲ್ಲಗೆ ಹೊರ ಹೊರಡತೊಡಗಿತು. ಪಾಟೀಲರೂ ಈಗ ಬಸವ್ವನನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿರ ಲಿಲ್ಲ. ಅವರೂ ಬೋಳುತಲೆಯನ್ನ ಸವರಿ ಕೊಳ್ಳುತ್ತಾ ತನ್ನ ಹೆಂಡತಿಯ ಕಣ್ಣಿಗೆ ಬೀಳದೆ ಇರಲು ಅತ್ತಿತ್ತ ನೋಡತೊಡಗಿದರು.

ಆ ಸೇಲ್ಸ್‌ಮ್ಯಾನ್ ಈಗ ತನ್ನ ಸಹಾಯಕರಿಗೆ ಎಲ್ಲವನ್ನೂ ಪ್ಯಾಕ್ ಮಾಡಲು ಹೇಳಿ ಹೊರ ಬಂದು ನಿಂದು ಸಿಗರೇಟು ಹಚ್ಚಿದ. ತಮ್ಮ ತಮ್ಮ ಮನೆಗೆ ಹೋದ ಮಂದಿ ಮಾಡಲು ಕೆಲಸವಿಲ್ಲದೆ ಟಿ.ವಿ.ಯ ಆನ್ ಮಾಡಿದರು. ಎಲ್ಲರ ಮನೆಯಿಂದಲೂ ಒಂದೇ ದನಿ, "ಕಮಾನ್ ಇಂಡಿಯಾ, ಕಮಾನ್ ಇಂಡಿಯಾ" ಎಂಬುದು ಭೂಮಿಯನ್ನು, ಬಾನನ್ನು ತುಂಬಿಕೊಂಡಿತು.

[illegible]

[illegible]



# ಭ್ರಷ್ಟತೆಯ ಕತ್ತಲಲ್ಲಿ ಒಂದು ಪಣತಿ



ಕಳೆದ ತಿಂಗಳು ನಮ್ಮ ವಾರ್ಷಿಕ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ 'ಭ್ರಷ್ಟತೆಯ ಕತ್ತಲಲ್ಲಿ...' ಅಂಕಣದ ಮತ್ತಷ್ಟು ಆಯ್ದ ಬರಹಗಳು.

## ಸಾಮೋಪಾಯಕ್ಕೆ ಜಗ್ಗದಿದ್ದರೆ...

1993ರಲ್ಲಿ ಒಂದು ಸಾವಿರ ಜನ ಸ್ನಾತಕೋತ್ತರ ಪದವೀಧರರಿಗೆ ಒಂದು ಪೈಸೆಯೂ ಲಂಚವಿ ಉಪನ್ಯಾಸಕ ವೃತ್ತಿ ರಾಜ್ಯದ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯಗಳಲ್ಲಿ ಸಿಕ್ಕಿತ್ತು. ಅಂಥವರಲ್ಲಿ ನಾ ಒಬ್ಬ ಸುದೈವಿ. ನಮ್ಮ ಸ್ವಂತ ತಾಲೂಕಿನ ಸರಕಾರಿ ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾಗಲು ಆಜ್ಞಾಪತ್ರ ಬ. ತಲುಪಿದಾಗ, ಸಂತೋಷದಿಂದ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಮೋಟಾರ್ ಸೈಕಲ್ ಹೊಡೆದಿದ್ದೆ. ಅಲ್ಲಿ ನನ್ನಂತೆ ಇನ್ನೂ ಮೂವರು ಬಂದಿದ್ದರು. ಆದರಲ್ಲಿ ಒಬ್ಬಳು ಆಗ ತಾನೆ ಹೊಸ ಮದುವೆಯಾದ ಹೆಣ್ಣುಮಗಳು. ನಾವು ನಾಲ್ಕೂ ಜನ ಪಿ.ಸಿ.ಎಂ.ಬಿ. ವಿಷಯಗಳಿಗಾಗಿ ಉಪನ್ಯಾಸಕರ ಕರ್ತವ್ಯಕ್ಕೆ ಸೇರಲು ಸ್ವಲ್ಪ ಕಷ್ಟಪಡಬೇಕಾಯಿತು. ಕಾರಣ ಇಷ್ಟು; ಮಾನ್ಯ ಪ್ರಾಚಾರ್ಯರು-ತಮ್ಮ ಸೇವ ಅಂತಿಮ ಘಟ್ಟದಲ್ಲಿದ್ದವರು-ಹೋಗುವಾಗ ಮಗಳ ಮದುವೆ ಇತ್ಯಾದಿಗಾಗಿ ಅಲ್ಪಸ್ವಲ್ಪ ಏನಾದ ಮಾಡಿಕೊಂಡು ಹೋಗಬೇಕೆನ್ನುವ ಧೋರಣೆ ಹೊಂದಿದ್ದರಂತೆ. ಹೀಗಾಗಿ ವಿದ್ಯಾರ್ಥಿಗಳಿಂದ ಯಾವುದ ಸುಳ್ಳು ಕಾರಣಕ್ಕಾಗಿ ಡೊನೇಷನ್ ಪಡೆಯುವುದು, ಸಿಬ್ಬಂದಿಗೆ ರಜೆ ನೀಡಲು ಹಣ ಪಡೆಯುವುದು, ಇನ ಸರ್ಟಿಫಿಕೇಟುಗಳಿಗೆ ಸಹಿ ಹಾಕಲು ಹತ್ತಿಪ್ಪತ್ತು ರೂಪಾಯಿ ಸಿಪಾಯಿಯ ಮೂಲಕ ಸಂಗ್ರಹಿಸುವ ಮಾಡುತ್ತಿದ್ದರಂತೆ. ಹೀಗಿರುವಾಗ ನೌಕರಿ ಸೇರಲು ಬಂದಿದ್ದ ನಮ್ಮೆಲ್ಲರಿಂದ ತಲಾ ಐನೂರು ರೂಪಾ ಕೊಡಲು ಅವರ ಆಪ್ತರು (ಚಮಚಾಗಳು) ಮುಂದಾದಾಗ ಆಗಲೇ ಬಂಡೇಳುವ ಸೂಚನೆ ಗೋಚರಿಸಿದವು. ಆದರೂ ಆವೇಶಕ್ಕೆ ಒಳಗಾಗದೆ, ಸಂಬಳವಾದ ನಂತರ, ಕಾಲೇಜಿಗೆ ಗೋ ಗಡಿಯಾರವನ್ನೋ, ಒಂದೆರಡು ಕುರ್ಚಿಗಳನ್ನೋ ಕಾಣಿಕೆಯಾಗಿ ಕೊಡುವೆವು ಎಂದು ಆಪ್ತರ ಮ ಹೇಳಿದೆವು. ಅವರು ಒಂದು ಕಾಲುಭಾಗದಷ್ಟಾದರೂ ಬೋಣಿಗಿ ವಸೂಲಿ ಮಾಡಲು ಯತ್ನಿಸಿದಾಗ ನ ಸಂಪೂರ್ಣವಾಗಿ ನಿರಾಕರಿಸಿದ್ದು ಅವರ ಸ್ವಾಭಿಮಾನಕ್ಕೆ ಧಕ್ಕೆ ಪಟ್ಟು ಬಿಡದೆ, ತಂದಿತು.

ಸರಕಾರಿ ಕಾಲೇಜಿನ ಉಪನ್ಯಾಸಕರಾಗಿ ನಾಲ್ಕು ತಿಂಗಳು ಉರುಳಿದರೂ ನಮ್ಮ ಸಂಬಳವಾಗಲಿಲ್ಲ. ಬ ಊರುಗಳಲ್ಲಿದ್ದ ನಮ್ಮ ಸ್ನೇಹಿತರೆಲ್ಲರ ಸಂಬಳ ಎರಡೇ ತಿಂಗಳಲ್ಲಿ ಆಗಿ ಸುಖದಿಂದಿದ್ದರು. ಕಾರಣವೇನೆ ವಿಚಾರಿಸಿದಾಗ ಇನ್ನೂ ಬಜೆಟ್ ಅನುದಾನ ಪತ್ರ ಬಂದಿಲ್ಲವೆಂಬ ಉತ್ತರ ಪ್ರಾಂಶುಪಾಲರಿಂದ ಬಂದ ಸ್ವತಃ ನಾವೇ ಬೆಂಗಳೂರಿಗೆ ಹೋಗಿ ಆ ಪತ್ರ ತಂದಿಟ್ಟೆವು. ಅಲ್ಲದೇ ಆ ಪತ್ರವನ್ನು ಆಗಲೇ ನಮ್ಮ ಕಾಲೇಜಿಗೆ ಕಳಿಸಿರುವುದಾಗಿ ಪ.ಪೂ.ಶಿ. ಇಲಾಖೆಯಲ್ಲಿ ಹೇಳಿದ್ದರು. ಆದರೂ ಇನ್ನೊಂದು ಪ್ರತಿ ಪಡೆದು ಪ್ರಾಚಾರ್ಯರೆದುರು ಸಾದರಪಡಿಸಿ ಬಿಲ್ಲು ಮಾಡಿರೆಂದು ಬಿನ್ನವಿಸಿಕೊಂಡೆವು. ಆದರೆ ಅವರು ಸಾವಿರ ರೂಪಾಯಿ ಒಬ್ಬೊಬ್ಬರು ಕೊಟ್ಟರೆ ಮಾತ್ರ ಎಂದು ಆಪ್ತರ ಮುಖಾಂತರ ಬಾಣ ಬಿಟ್ಟರು.




ಪರಿಹಾರ ಕಾಣದಾದಾಗ, ಒಂದು ಶುಭ ಮುಂಜಾನೆ, ಕಾಲೇಜಿನ ಎಲ್ಲ ಉಪನ್ಯಾಸಕರು, ಹೈಸ್ಕೂಲಿನ ಶಿಕ್ಷಕರು ಸರ್ವ ಸಿಬ್ಬಂದಿಯೆಲ್ಲ ಚೇಂಬರಿಗೆ ಬಂದು

ಸಹಿಹಾಕುವ ಗಳಿಗೆಯಲ್ಲಿ, ಪ್ರಾಚಾರ್ಯರು ತಮ್ಮ ಆಸನದಲ್ಲಿ ರಾರಾಜಿಸುತ್ತಿರುವಾಗ, ಸನ್ಯಾಸ್ಯರ ಇಬ್ಬದಿಯಲ್ಲೂ ಇಬ್ಬಿಬ್ಬರಂತೆ ನಿಂತೆವು. ಇಬ್ಬರು ಮೇಜು ಗುದ್ದಿದರೆ, ಇನ್ನಿಬ್ಬರು ಪಾದರಕ್ಷೆಗಳನ್ನು ಕೈಗೆಳೆದುಕೊಂಡರು... ಕೇವಲ ಒಂದೇ ಒಂದು ಗಂಟೆಯಲ್ಲಿ ನಮ್ಮ ಐದು ತಿಂಗಳ ಸಂಬಳವಾಗಿತ್ತು. ಇಷ್ಟು ಬಿಟ್ಟು ನಮಗೆ ಬೇರೆ ಯಾವ ದಾರಿಯೂ ಇರಲಿಲ್ಲ. ಮೇಲಧಿಕಾರಿಗಳಿಗೆ ಬರೆದುಕೊಂಡರೆ ಅವರು ಎರಡು ಸಾವಿರ ಕೇಳಿದರೆ ಹೇಗೆಂಬ ಆತಂಕವಿತ್ತು!

ಲಿಂಗಸುಗೂರು

ಬಿ.ಎಸ್. ಕೌಜಲಗಿ



## ಒಂದು ಪೈಸೆ ಇಲ್ಲದೇ!

ರಾಜ್ಯ ಸರ್ಕಾರದ ವಿಮಾ ಇಲಾಖೆ. ಕೆ.ಜಿ. ಆಯ್.ಡಿ. ಎಂದು ಎಲ್ಲರೂ ಕರೆಯುವರು. ಈ ಇಲಾಖೆಯಲ್ಲಿ ಯಾವುದೇ ಕೆಲಸ ಆಗಬೇಕಾದರೂ ಹಣ (ಲಂಚ) ಬೇಕೇಬೇಕು. ಸಾಪಿಟ್ಟ ಹಣದ ಮೇಲೆಯೇ ಸಾಲ ಪಡೆಯಲಾಗಲಿ, ಇಲ್ಲವೇ ಹತ್ತಾರು ವರ್ಷದ ಉಳಿಕೆಯ ಹಣವನ್ನು ಫಲಪ್ರದಗೊಂಡ ನಂತರ ಅವರಿಂದ ಪಡೆಯಲಾಗಲಿ ನೂರೋ, ಇನ್ನೂರೋ ರೂಪಾಯಿ ಹಣ ಅವರಿಗೆ ಕೊಡಲೇಬೇಕು. ಹತ್ತಾರು ನಮಸ್ಕಾರ ಮಾಡಬೇಕು. ಅಗತ್ಯವಿಲ್ಲದಿದ್ದರೂ ಹಲ್ಲು ಕಿಸಿಯುತ್ತ ಅವರೆದುರು ದೈನ್ಯವಾಗಿ ನಿಲ್ಲಬೇಕು. ಕಾನೂನು ಪ್ರಕಾರವಾಗಿ ಗಟ್ಟಿಧ್ವನಿಯಲ್ಲಿ ಮಾತನಾಡಿದರೆ ನಮ್ಮ ಫೈಲು ಏನಾದರೊಂದು ಕಾರಣದಿಂದಾಗಿ ತಳ ಹಿಡಿಯಿತೆಂದೇ ತಿಳಿಯಬೇಕು.

ಒಮ್ಮೆ ನಮ್ಮ ಅತ್ತೆಯದೊಂದು (ಶಿಕ್ಷಕಿ) ಹತ್ತು ವರ್ಷದ ಪಾಲಿಸಿ ಮೆಚೂರ್ ಆಗಿ ಸುಮಾರು ಮೂವತ್ತು ಸಾವಿರ ಹಣ ಬರಬೇಕಿತ್ತು. ಇಲಾಖೆಯಿಂದ ಅವರ ವಿಳಾಸಕ್ಕೆ ಬಂದ ಪತ್ರದ ನಿರ್ದೇಶನದಂತೆ ಅವರು ಎಲ್ಲ ಸರ್ಟಿಫಿಕೇಟ್ ಸಹ ಕಳಿಸಿ ತಿಂಗಳಾದರೂ ಏನೊಂದೂ ಉತ್ತರವಿಲ್ಲದಿದ್ದಾಗ ಹೋಗಿ ವಿಚಾರಿಸಿದೆ. ನಮ್ಮತ್ತೆ ಒಂದು ಪತ್ರಕ್ಕೆ ರೆವಿನ್ಯೂ ಸ್ಟಾಂಪ್ ಹಚ್ಚುವುದನ್ನು ಮರೆತಿದ್ದರು. 'ನಿಮ್ಮಿಂದ ಹೀಗೆ ತಪ್ಪಾಗಿದೆ' ಎಂಬ ಪತ್ರ ಹಾಕಬೇಕೆಂಬ ಸೌಜನ್ಯವೂ ಇಲಾಖೆಯವರಲ್ಲಿರಲಿಲ್ಲ. ನಾನು ಮತ್ತೆ ಎಲ್ಲ ದಾಖಲೆ ಸರಿಹೊಂದಿಸಿ, ಅವರಿಗೆ ಕೊಡುವಾಗ; ಶ್ರೀಮತಿ... ಇವರ ದಾಖಲೆಗಳೆಲ್ಲ ಸರಿ ಇವೆ. ಇವರ ಚೆಕ್ಕನ್ನು ಇಂತಿಷ್ಟು ದಿನದೊಳಗೆ ಕೊಡುತ್ತೇವೆ ಎಂಬ ಲಿಖಿತ ಪತ್ರ ಇಲಾಖೆಯ ಮುದ್ರೆ ಸಹಿತ ಬರೆಸಿಕೊಂಡೆ. ಇಂತಹ ಹೊಸ ವಿಧಾನದ ಪತ್ರ ಕೊಡಲು ಆ ಅಧಿಕಾರಿ ತಕರಾರು ಮಾಡಿದರೂ ಆಮೇಲೆ ಬರೆದುಕೊಟ್ಟ. ಮಾತಿನಂತೆ ವಾರದಲ್ಲೇ ಚೆಕ್ ಸಹ ಕಳಿಸಿದ.

ವಿಜಾಪುರ

ಮಹಾಬಲೇಶ್ವರ ಗಡೇದ

ಎಸ್. ಗಂಗಾಧರಯ್ಯ

# ಭಾವದ ಬಯಲು




ತನ್ನೆದುರಿನ ಬಂಡೆಯನ್ನೇ ದಿಟ್ಟಿಸುತ್ತಿದ್ದ ಬೀನಾಳ ಕಣ್ಣುಗಳು ತುಂಬಿಬಂದವು. ದಿಟ್ಟಿಸಿದಂತೆಲ್ಲಾ ನೆನಪುಗಳು ದಟ್ಟಗೊಳ್ಳುವುದ ಕಂಡು ಬೀನಾಳಿಗೆ ಗಲಿಬಿಲಿಯಾಯ್ತು. ಆ ಬಂಡೆಯ ಎದೆಯ ಮೇಲೆ ತನ್ನ ಮತ್ತು ಚಂದುವಿನ ಹೆಸರುಗಳಿದ್ದವು. ಅವು ಮಳೆ, ಗಾಳಿ, ಬಿಸಿಲುಗಳ ಹೊಡೆತಕ್ಕೆ ಮಾಸಿದ್ದವು. ಆದರೆ ಪೂರ ಅಳಿಸಿಹೋಗಿರಲಿಲ್ಲ. ಅಲ್ಲಿಂದ ದೃಷ್ಟಿಯನ್ನು ಕಿತ್ತು, ತನ್ನ ತೊಡೆಗಳ ಮೇಲೆ ಕೂತಿದ್ದ ಮಗಳು ಸಮೃದ್ಧಿಯ ನೆತ್ತಿಗೊಂದು

ಮುತ್ತಿಟ್ಟಳು. ಅಮ್ಮನ ಪ್ರೀತಿಯ ಸ್ಪರ್ಶಕ್ಕೆ ಪುಳಕಗೊಂಡ ಆ ಕಂದ, ತಾನು ಕೂತ ಕಡೆಯಿಂದಲೇ ಕತ್ತನ್ನು ಮೇಲೆತ್ತಿ, ಮುಗುಳ್ನಗೆ ಚೆಲ್ಲಿ, ಅಮ್ಮನ ತೊಡೆಗಳನ್ನು ಮತ್ತೂ ಬಿಗಿಯಾಗಿ ಹಿಡಿದು ಕೂತುಕೊಂಡಿತು. ಅಮ್ಮ-ಮಗಳು ಕೂತ ಜಾಗದಿಂದ ಕೆಳಕ್ಕೆ, ಕೊಂಚ ದೂರದಲ್ಲಿ, ಕಡಿದಾದ ಬಂಡೆಗಳ ಆಳದಲ್ಲಿ, ಕಡಲ ಅಲೆಗಳು ಘರ್ಜಿಸುತ್ತಿದ್ದವು.

ಹೊತ್ತು ಮುಳುಗುತ್ತಿತ್ತು. ಅಲ್ಲಲ್ಲಿ ಸಣ್ಣಪುಟ್ಟ ಬಂಡೆಗಳ ಮೇಲಿದ್ದ ಪ್ರೇಮಿಗಳ ಜೋಡಿಗಳು, ಕಾವಿಗೆ ಕೂತ ಕೋಳಿಗಳಂತೆ ಕಾಣುತ್ತಿದ್ದವು. ಇವುಗಳನ್ನು ಬಿಟ್ಟರೆ, ಇಡೀ ವಾತಾವರಣ ನಿರ್ಜನವಾಗಿತ್ತು. ಕಣ್ಣಿಗೆಟಕುವಷ್ಟು ದೂರದಲ್ಲಿ, ಕಡಲ ನಡುವಲ್ಲಿ, ಪುಟಾಣಿ ದ್ವೀಪವೊಂದು ಕಾಣುತ್ತಿತ್ತು. ಅದರ ಗಿಡಮರಗಳ ಹಿಂದೆ ಮುಳುಗುತ್ತಿದ್ದ ಸೂರ್ಯ ಮರೆಯಾಗುತ್ತಿದ್ದ. ಅಲೆಗಳ ಆರ್ಭಟದ ಜೊತೆಗೆ, ಗಾಳಿಯೂ ಗುಟುರು ಹಾಕುತ್ತಿತ್ತು.

ಇಳಿಹೊತ್ತಿನಿಂದ ಸಂಜೆಯವರೆಗೆ ಮುಗುಮ್ಮಾಗಿ ಕೂತ ಅಮ್ಮನನ್ನು ಕಂಡ ಸಮೃದ್ಧಿಗೆ ಬೇಸರವಾಗತೊಡಗಿತು. ಮೇಲೆದ್ದು ಹೊರಡುವಂತೆ ಪೀಡಿಸಹತ್ತಿದಳು. ಮಗಳು ಪೀಡಿಸಿದಾಗ, ಅದೂ ಇದೂ ಹೇಳಿ ಕೂರಿಸಿಕೊಂಡಳು. ಮಗುವಿಗೆ ತನ್ನ ಅಮ್ಮ ಎಂದಿನಂತಿಲ್ಲ ಎಂಬುದು ಅರಿವಾದಂತೆ, ಮುಖ ಇಳಿಬಿಟ್ಟುಕೊಂಡು ಸುಮ್ಮನಾಯ್ತು. ಕತ್ತಲು ಇಳಿಯತೊಡಗಿತು. ಇದರ ಜೊತೆಗೆ ಬೀನಾಳ ಎದೆಯೊಳಗೆ ದುಗುಡ ಕೂಡಾ ದಡದಡಿಸುತ್ತಿತ್ತು. ಆದರೂ ಮೇಲೇಳುವ ಪ್ರಯತ್ನ ಮಾಡಲಿಲ್ಲ. ಅಷ್ಟಕ್ಕೂ, ಎದ್ದು ದಡಬಡಿಸಿ ಹೋಗುವ ಅವಸರವಾದರೂ ಏನಿದೆ ಅಂದುಕೊಂಡಳು. ಇದ್ದಕ್ಕಿದ್ದಂತೆ ತಾನು ಇತ್ತ ಬರುವಾಗ ಕಂಡ ಕುಡುಕ ನೆನಪಿಗೆ ಬಂದ.

ಮಧ್ಯಾಹ್ನ, ಬೀನಾ ಮಗಳೊಂದಿಗೆ ಸಮುದ್ರದ ತಡಿಯ ಆ ಪುಟ್ಟ ಊರಿನಲ್ಲಿ ಬಸ್ಸಿನಿಂದ ಇಳಿದಾಗ, ಬಿಸಿಲು ಬಿಡದೆ ತದಕುತ್ತಿತ್ತು. ಮಗಳಿಗೆ ತಿಂಡಿ ಕೊಡಿಸಿ, ತಾನೀಗ ಕೂತಿದ್ದ ಜಾಗಕ್ಕೆ ಬರುವಾಗ ಈ ಕುಡುಕನನ್ನು ಕಂಡಿದ್ದಳು. ಕಂಠಪೂರ್ತಿ ಕುಡಿದು ತನ್ನಷ್ಟಕ್ಕೆ ತಾನು ಏನನ್ನೋ ಮಾತಾಡಿಕೊಳ್ಳುತ್ತಿದ್ದ. ಬೀನಾ ಕುತೂಹಲಕ್ಕೆಂದು ಕೊಂಚ ಹೊತ್ತು ಅಲ್ಲಿ ನಿಂತಿದ್ದಳು. ಅವಳಲ್ಲಿ ಕಂಡ ದೃಶ್ಯ ನಿಜಕ್ಕೂ ಅವಳನ್ನು ದಂಗುಬಡಿಸಿತ್ತು. ಆ ಕುಡುಕ, ಮನೆಗೆ ಹೋಗಿ ಹೆಂಡತಿ ಮಕ್ಕಳನ್ನು ಮುಖಾಮುಖಿಯಾಗುವ ದೃಶ್ಯದ ರಿಹರ್ಸಲ್ ಮಾಡುತ್ತಿದ್ದ. ಅವನ ಕೈಯ್ಯಲ್ಲೊಂದು ಹೂವಿನ ಪೊಟ್ಟಣವಿತ್ತು. ತನ್ನ ಎದುರಿಗಿದ್ದ ಮರವನ್ನೇ ತನ್ನ ಮನೆ ಅಂತಲೂ, ತನ್ನ ಎಡಭಾಗಕ್ಕಿದ್ದ ಕಲ್ಲುಬಂಡೆಯೊಂದನ್ನೇ ತನ್ನ ಹೆಂಡತಿ ಅಂತಲೂ, ಬಲಭಾಗಕ್ಕಿದ್ದ ಪುಟಾಣಿ ಗಿಡಗಳನ್ನೇ ತನ್ನ ಮಕ್ಕಳು ಅಂತ ಮಾತನಾಡುತ್ತಿದ್ದ. ನಾನಿವತ್ತು ಕೊಂಚ ಹೆಚ್ಚು ಕುಡಿದು ಬಂದಿದ್ದೇನೆಂದೂ, ಇದಕ್ಕಾಗಿ ನೀನು ಬೇಸರ ಮಾಡಿಕೊಳ್ಳಬಾರದೆಂದೂ, ಕಲ್ಲಿನ ದುಂಡಿಯನ್ನು ಮುಟ್ಟಿ ಮುಟ್ಟಿ

ಗೋಗರೆಯುತ್ತಿದ್ದ. ನಂತರ ಚಂಗನೆ ಪುಟಾಣಿ ಗಿಡಗಳತ್ತ ನೆಗೆದು, 'ಅಯ್ಯೋ ನನ್ನ ಕಂದಮ್ಮಗಳ, ನೋಡಿ, ನಿಮ್ಮ ಅಮ್ಮ ಹೇಗೆ ಹೊಡೆಯುತ್ತಾಳೆ' ಅಂತ ಜೋರಾಗಿ ಅಳುತ್ತಿದ್ದ. 'ಬಿಡಿ, ನಿಮಗ್ಯಾರಿಗೂ ನನ್ನ ಬಗ್ಗೆ ಕೊಂಚವೂ ಪ್ರೀತಿಯಿಲ್ಲ' ಅಂತ ಅಂದುಕೊಂಡು ತನ್ನ ಕೈಲಿದ್ದ ಹೂವಿನ ಪೊಟ್ಟಣವನ್ನು ಮರದ ಗೆಣ್ಣಿನ ಮೇಲಿಟ್ಟು ಕೂರುತ್ತಿದ್ದ. ಕೊಂಚ ಹೊತ್ತು ಹಾಗೇ ಕೂತವನು, ಮತ್ತೆ ಏನನ್ನೋ ಜ್ಞಾಪಿಸಿಕೊಂಡವನಂತೆ, ಮೇಲೆದ್ದು ಮೇಲಿನದೆಲ್ಲವನ್ನೂ ಉರುಹೊಡೆದಂತೆ ಪುನರಾವರ್ತಿಸುತ್ತಿದ್ದ.

ಕುಡುಕನ ಬಗ್ಗೆ ಬೀನಾಳಿಗೆ ಯಾಕೋ ಅಯ್ಯೋ ಅನಿಸಿತು. ಅಲೆಯೊಂದು ಮಾಮೂಲಿಗಿಂತ ಬಿರುಸಾಗಿ ಬಂಡೆಗೆ ಬಂದೆರಗಿತು. ಅದರ ಸದ್ದು ಕತ್ತಲ ಎದೆಯ ಮೌನವನ್ನು ಫಕ್ಕನೆ ಕಲಕಿದಂತಾಯ್ತು. ಬೀನಾಳಿಗೆ ಮತ್ತೂ ಭಯವಾಗತೊಡಗಿತು. ಸುತ್ತ ಎತ್ತ ನೋಡಿದರೂ ನೀನೇ ಅನ್ನುವವರಿಲ್ಲ. ಮಡಿಲಲ್ಲಿ ಮಲಗಿದ್ದ ಮಗಳನ್ನು ಮಾತನಾಡಿಸಿದಳು. ಅದಾಗಲೇ ನಿದ್ದೆಯಲ್ಲಿ ಕಳೆದುಹೋಗಿತ್ತು. ಬೀನಾಳಿಗೆ ಎಲ್ಲಿಲ್ಲದ ಅಳು ಬಂದುಬಿಟ್ಟಿತು. ತಾನು ಕೂತ ಬಂಡೆ, ಎದುರಿನ ಕಡಲು, ಬೀಸುವ ಗಾಳಿ, ಕಾಡುವ ಕತ್ತಲೆಗಳಿಗೆ ತನ್ನ ಸ್ಥಿತಿ ಮೊದಲೇ ಗೊತ್ತಿತ್ತು ಅನಿಸತೊಡಗಿತು. ಗೊತ್ತಿದ್ದೂ ನೀವೇಕೆ ನನಗೆ ವಂಚಿಸಿದಿರಿ ಅಂತ ಕೂಗಿ ಕೇಳಬೇಕು ಅನಿಸಿತು. ಆದರೆ ದನಿ ಹೊರಡಲೇ ಇಲ್ಲ. ಮಲಗಿದ್ದ ಮಗುವಿಗೆ ಬಾಚಿ ಮುತ್ತಿಟ್ಟಳು. ಗಂಟಲು ಒಣಗಿಬಂದಂತಾಯ್ತು.

ಹತ್ತು ವರ್ಷಗಳ ಹಿಂದೆ, ಚಂದು, ಇದೇ ಬಂಡೆಯ ಎದುರಿಗೆ, ಹೀಗೆಯೇ ಕೂರಿಸಿಕೊಂಡು, ಭವಿಷ್ಯದ ಕನಸುಗಳನ್ನು ಮೊಗೆದು ಕೊಟ್ಟಿದ್ದ. ಮುಳುಗುವ ಸೂರ್ಯ, ಕಡಲಿನ ಅಲೆಗಳು, ಹೀಗೆ ಇಲ್ಲಿನ ಎಲ್ಲದನ್ನೂ ಹೊಸದಾ ಕಂಡವನಂತೆ, ಹಕ್ಕಿಯಂತೆ ಹಗುರಾಗಿ ಹಾರಾಡಿದ್ದ.

ಆ ದಿನ ಚಂದುವಿನೊಂದಿಗೆ ಇಲ್ಲಿ ಬಂದಾಗ, ಹಿಂದಿನ ದಿನವಷ್ಟೇ ಪರೀಕ್ಷೆಗಳು ಮುಗಿದಿದ್ದವು. ತನ್ನ ಗೆಳತಿಯರೆಲ್ಲಾ ಊರಿ ಹೋಗುವ ತರಾತುರಿಯಲ್ಲಿದ್ದರು. ತಾನ ಮಾತ್ರ, ನಿರುಮ್ಮಳವಾಗಿ, ಚಂದುವಿನ ಜೊ ಬಸ್ಸು ಹತ್ತಿ, ಈ ಊರಿಗೆ ಬಂದುಬಿಟ್ಟಿದ್ದೆ. ಈ ಮಲೆನಾಡಿನ ಹಸಿರು, ಸುರಿವ ಮಳೆ, ಕಡಲು... ಅದೆಷ್ಟು ಮುದ ಕೊಟ್ಟಿದ್ದವು. ಎಷ್ಟು ಹೇಳಿದರೂ ಕೇಳದೆ, ಅಂದು ಚಂದು, ಇದೋ ಈ ತನ್ನೆದುರಿನ ಕೋಡುಗಲ್ಲಿನಂಥ ಬಂಡೆಯನ ಹತ್ತಿ, ಮೊಳೆಯೊಂದರಿಂದ 'ಚಂದು-ಬೀನಾ' ಅಂತ ಬಂಡೆಯ ಎದೆಗೆ ಹಚ್ಚೆ ಹಾಕಿಬಂದಿದ್ದ...

ತಾನು, ಚಂದು ಕ್ಲಾಸ್‌ಮೇಟ್ಸ್. ತಮಗಿಬ್ಬರಿಗೂ ಎಂ.ಎ.ಗೆ ಸೀಟು ಸಿಕ್ಕಿದ್ದು ವೇಟಿಂಗ್ ಲಿಸ್ಟ್‌ನಲ್ಲಿ. ಅವತ್ತೇ ತಾವಿಬ್ಬರು ಒಬ್ಬರನ್ನೊಬ್ಬರು ಮೊದಲು ನೋಡಿದ್ದು. ನೋಟೀಸ್ ಬೋರ್ಡಿನಲ್ಲಿ ತನ್ನ ಹೆಸರನ್ನು ನೋಡಿ ಚಂದು, ಮೂರನೆಯ ಮಹಡಿಯಿಂದ ಕೆಳಕ್ಕೆ ನೋಡುತ್ತಾ ಏನನ್ನೋ ಹುಡುಕುತ್ತಿರುವವನಂತೆ ನಟಿಸುತ್ತಿದ್ದ. ತನ್ನ ಕಣ್ಣು ತಪ್ಪಿಸಿ, ಕದ್ದು ಕದ್ದು ತನ್ನನ್ನೇ ನೋಡುತ್ತಿದ್ದ. ತಾನು ಅತ್ತ ನೋಡಿದ ಕೂಡಲೇ ನಾಚಿ ನೀರಾಗಿಬಿಡುತ್ತಿದ್ದ. ಆದರೆ ಆ ನಾಚಿಕೆಯಲ್ಲಿ ಅದೆಂಥ ಮಾಯೆ ಇತ್ತು. ತನಗಿಂತ ಕುಳ್ಳಗಿದ್ದ, ಅಷ್ಟು ಸುಂದರನೂ ಅಲ್ಲದ, ಚಂದುವನ್ನು ಅಂದು ನೋಡಿದಾಗಿನಿಂದ ಅದಾವ ಭಾವ ತನ್ನನ್ನು ಅತ್ತ ಸೆಳೆಯಿತು-ತನಗಂತೂ ತಿಳಿಯದು. ಈ ಪ್ರೀತಿಗೆ ಇಂಥ ಸೆಳೆತವಿದೆಯೆ-ಇರಬಹುದು ಅಂದುಕೊಂಡಿದ್ದೆ. ಹಾಗೆ ನೋಡಿದರೆ, ಚಂದು ಅಂಥ ಬುದ್ಧಿವಂತನೂ ಆಗಿರಲಿಲ್ಲ. ಅವನಿಗೆ ಪರೀಕ್ಷೆಗಳೆಂದರೆ ಅಲರ್ಜಿ. ಹತ್ತನೆಯ ತರಗತಿಯಿಂದಲೂ, ಪರೀಕ್ಷೆಗಳಲ್ಲಿ ಅವನು ಐವತ್ತರ ಅಂಕಿಯನ್ನು ದಾಟಿದ್ದಿಲ್ಲ. ಅವನಿಗೆ ಪರೀಕ್ಷೆಯ

ಓದಿಗಿಂತ ಇತರ ಓದಿನಲ್ಲಿ ಇನ್ನಿಲ್ಲದ ಆಸಕ್ತಿ. ಕ್ಲಾಸಿನಲ್ಲಿ ಮೇಷ್ಟ್ರು ಪಾಠ ಮಾಡುತ್ತಿದ್ದರೆ, ಚಂದು ಮಾತ್ರ, ತನ್ನನ್ನೇ ಕಿತ್ತು ತಿನ್ನುವವನಂತೆ ನೋಡುತ್ತಾ ಕೂತುಬಿಡುತ್ತಿದ್ದ. ಲೈಬ್ರರಿಗೆ ಹೋದರೆ, ತನ ಗರಿವಿಲ್ಲದಂತೆ ತನ್ನ ಹಿಂದೆಯೇ ಬರುತ್ತಿದ್ದ. ಅವನತ್ತ ತಾನೊಂದು ಸಣ್ಣ ನಗು ಬೀರಿದರ ಸಾಕು, ಸಂತೃಪ್ತನಾಗಿಬಿಡುತ್ತಿದ್ದ. ಆಗ ಅವನಿಗೆ ತನ್ನನ್ನು ಮಾತನಾಡಿಸುವಷ್ಟು ಧೈರ್ಯ ಕೂಡಾ ಇರಲಿಲ್ಲ. ಅಪ್ಪಿತಪ್ಪಿ ತಾನು ಎದುರಾದರೆ ಸಾಕು, ಅವನ ಮುಖ ಕೆಂಪೇರಿಬಿಡುತ್ತಿತ್ತು. ಅಷ್ಟಕ್ಕೂ ಅವನನ್ನು ಮೊದಲು ಮಾತನಾಡಿಸಿದ್ದು ತಾನೇ.

ಮಾಮೂಲಿ ಕ್ರಾಪಿಗಿಂತ ಕೊಂಚ ಪಕ್ಕಕ್ಕೆ ಬೈತಲೆ ತೆಗೆದುಕೊಂಡವನಂತೆ ತಲೆ ಬಾಚಿ ಕೊಳ್ಳುತ್ತಿದ್ದ. ಉದ್ದನೆಯ ಗಡ್ಡೆ ಮೂಗಿನ ಕೆಳಗೆ, ತುಟಿಗಳು ಪೂರಾ ಮುಚ್ಚಿಕೊಳ್ಳುವಂತೆ ಮೀಸೆ ಬೆಳಸಿಕೊಂಡಿದ್ದ. ಚಂದುವಿನ ಮೀಸೆಯನ್ನು ಕಂಡು ತನ್ನ ಗೆಳತಿಯರು, ಮೀಸೆಮಾಮ ಅಂತ ಅಣಕಿಸಿಕೊಳ್ಳುತ್ತಿದ್ದರು. ಅವರ ಅಣಕ ಅತಿಯಾದಂತೆಲ್ಲಾ ತನಗೆ ಚಂದುವನ್ನು ಮತ್ತೆ ಮತ್ತೆ ಮಾತನಾಡಿಸಬೇಕು ಅನಿಸುತ್ತಿತ್ತು.

ತಮ್ಮ ಮದುವೆಗೆ ಅಮ್ಮನನ್ನು ಅತ್ತೂ ಕರೆದು ಒಪ್ಪಿಸಿದ್ದೆ. ಆದರೆ ಅಪ್ಪ ಮಾತ್ರ, ದೂರ್ವಾಸ ಮುನಿಯಂತೆ, ''ನಿನ್ನ ಈ ಅವಸರದ ತೀರ್ಮಾನಕ್ಕಾಗಿ ನೀನು ಮುಂದೊಂದು ದಿನ ಪಶ್ಚಾತ್ತಾಪ ಪಡುತ್ತೀಯ. ಆಗ ನಿನಗೆ ನರಳುವುದನ್ನು ಬಿಟ್ಟರೆ, ಮತ್ತೇನೂ ಉಳಿದಿರುವುದಿಲ್ಲ'' ಅಂತ ಅಂದಿದ್ದ. ಅಲ್ಲ, ಅಪ್ಪನಿಗೆ ಅದ್ಹೇಗೆ ಅಷ್ಟು ಬೇಗ ಗೊತ್ತಾಗಿ ಹೋಗಿತ್ತು, ಚಂದುವಿನ ಒಳಮನಸ್ಸು? ಅಮ್ಮ ಗದರಿಸಿಕೊಂಡಾಗಲೆಲ್ಲಾ ತನ್ನ ನೆರವಿಗೆ ಬರುತ್ತಿದ್ದ ಅಪ್ಪ ಅವನೆ ತಾನೆ, ಅಂತ ಆಗ ಅಪ್ಪನ ಬಗ್ಗೆ ತಾನು ಮೊಟ್ಟಮೊದಲ ಬಾರಿಗೆ ಮುನಿಸಿಕೊಂಡಿದ್ದೆ. ಈ ಮದುವೆಗೆ ತನ್ನ ಒಪ್ಪಿಗೆ ಇಲ್ಲವೇ ಇಲ್ಲ ಅಂತ ಅಪ್ಪ ಗುಡುಗಿದಾಗ, ಅಪ್ಪ ಅದೆಷ್ಟು ಜಾತಿವಾದಿ, ಕ್ರೂರ ಮನಸ್ಸಿನವನು ಅಂತ ಅಂದುಕೊಂಡಿದ್ದೆ. ಅಪ್ಪನ ಮುಖ ಕೂಡಾ ನೋಡಬಾರದೆಂದು ಮನಸ್ಸನ್ನು ಕಲ್ಲುಮಾಡಿಕೊಂಡಿದ್ದ.


ಚಂದುವಿಗೆ ತಾನೇ ಧೈರ್ಯ ತುಂಬಿ, ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ಮನೆಗೆ ಬಂದಾಗ, ಅಪ್ಪ ತನ್ನ ರೂಮಿನಿಂದ ಹೊರ ಬಂದಿರಲೇ ಇಲ್ಲ. ಅಮ್ಮನ ಕಣ್ಣೀರನ್ನು ಕಂಡು, ಅಪ್ಪನ ಬಗ್ಗೆ ರೇಗಿಹೋಗಿತ್ತು. ಅಬ್ಬಾ, ಅಂದು ತನ್ನ ಎದೆಯಲ್ಲಿ ಅದೆಂಥಾ ಅವ್ಯಕ್ತ ಭಯ, ಸಂಕಟಗಳು ಮಡುಗಟ್ಟಿಕೊಂಡಿದ್ದವು. ಎಷ್ಟೆಲ್ಲಾ ಧೈರ್ಯ ತುಂಬಿಕೊಂಡರೂ, ಅದೆಷ್ಟು ಬಿಕ್ಕಿ ಬಿಕ್ಕಿ ಅತ್ತಿದ್ದೆ. ಕಡೆಗೆ ಚಂದುವಿನ ಜೊತೆ ಅವನ ಊರಿಗೆ ಹೊರಟುನಿಂತಾಗ, ಅಮ್ಮನ ಕಣ್ಣೀರಿನ ಮುಂದೆ ತಾನು ಕುಬ್ಜಳಾಗಿಬಿಟ್ಟಿದ್ದೀನಿ ಅನಿಸಿತ್ತು. ಇರುವ ಒಬ್ಬಳೇ ಮಗಳು ಮನೆಬಿಟ್ಟು ಹೋಗುತ್ತಿದ್ದಾಳೆ ಅನ್ನುವಾಗಲೂ, ಅಪ್ಪ ತನ್ನ ರೂಮಿನಲ್ಲಿ, ತನ್ನ ಪಾಡಿಗೆ ತಾನು ಅದ್ಯಾವುದೋ ಪುಸ್ತಕದೊಳಗೆ ಮುಳುಗಿಹೋಗಿದ್ದ. ಅಷ್ಟು ದೂರ ಹೋಗಿ, ಯಾಕೋ ಮನೆಯತ್ತ ತಿರುಗಿನೋಡಬೇಕು ಅನಿಸಿ ನೋಡಿದರೆ, ಅಪ್ಪ ಕಿಟಕಿಯಲ್ಲಿ! ಇಂದು ಕೂಡಾ ಅಪ್ಪನ ಆ ನೋಟ ತನ್ನನ್ನು ಇರಿಯುತ್ತಿದೆ.

ಆಗ ಚಂದು ತನ್ನ ಬಗ್ಗೆ ಅದೆಷ್ಟು ತಲೆ ಕೆಡಿಸಿಕೊಂಡಿದ್ದ. ತನ್ನನ್ನು ನೋಡದೆ ಒಂದು ದಿನ ಕೂಡಾ ಇರುತ್ತಿರಲಿಲ್ಲ. ಆಗವನ ಐಲಾಟಗಳು ಒಂದೇ, ಎರಡೆ. ತಾನಿನ್ನೂ ಬೆಳಗಿನ ತಿಂಡಿ ಮುಗಿಸುವುದಕ್ಕೆ ಮುಂಚೆಯೇ ತನ್ನ ಹಾಸ್ಟೆಲಿನ ಎದುರು ಹಾಜರಾಗಿ ಬಿಡುತ್ತಿದ್ದ. ಸಣ್ಣಪುಟ್ಟದ್ದಕ್ಕೆಲ್ಲಾ ಹುಡುಗಿಯರ ಥರ ಗೋಳೋ ಅಂತ ಅಳುತ್ತಿದ್ದ. ಇದನ್ನು ಕಂಡ ತನ್ನ ರೂಮ್‌ಮೇಟ್ಸ್ ಮತ್ತು ಹಾಸ್ಟೆಲಿನ ಕೆಲ ಹುಡುಗಿ ಯರು ಚಂದುವನ್ನು ಕಂಡರೆ ಸಾಕು, ಮುಸು ಮುಸು ನಗುತ್ತಿದ್ದರು. ಅವರು ಹಾಗೆ ನಗುವಾಗ, ತನಗೆ ಕೊಂಚ ಇರುಸುಮುರುಸಾಗುತ್ತಿತ್ತು ನಿಜ. ಆದರೂ ಚಂದುವಿನ ಬಗ್ಗೆ ಎದೆ ತುಂಬಿಬರುತ್ತಿತ್ತು.

ಅಷ್ಟು ಹೊತ್ತಿಗಾಗಲೇ ಅವನು ಕಥೆ, ಕವನ ಅಂತ ತಲೆ ಕೆಡಿಸಿಕೊಂಡಿದ್ದ. ಎಷ್ಟೋ ಸಲ, 'ಇವು ಕ್ಲಾಸಿನಲ್ಲಿ ಮೇಷ್ಟು ಪಾಠ ಮಾಡುವಾಗ ಬರೆದವು' ಅಂತ ಕೆಲ ಪದ್ಯಗಳ ಸಾಲುಗಳನ್ನು ತೋರಿಸುತ್ತಿದ್ದ. ಚಂದುವಿನ ಮೊದಲ ಕಥೆ ಪತ್ರಿಕೆಯಲ್ಲಿ ಪ್ರಕಟವಾದಾಗ ತನಗೆಷ್ಟು ಖುಷಿ ಯಾಗಿತ್ತು. ಆ ದಿನ ರಾತ್ರಿ, ಆ ಕಥೆಯ ಒಂದೊಂದು ಅಕ್ಷರಗಳನ್ನೂ, ಅಕ್ಕರೆಯಿಂದ ತನ್ನ ಕಣ್ಣುಗಳಲ್ಲಿ ತುಂಬಿಕೊಂಡಿದ್ದೆ. ಚಂದುವಿನ ಹೆಸರಿಗೆ ಮುತ್ತಿಟ್ಟಿದ್ದೆ. ಆ ಕಥೆಯ ನಾಯಕಿ, ವ್ಯವಸ್ಥೆಯ ವಿರುದ್ಧ ನಿಂತು, ಅಪ್ಪ ಅಮ್ಮಂದಿರನ್ನು ಬಿಟ್ಟು, ನೆಚ್ಚಿದ ಹುಡುಗನೊಂದಿಗೆ ಹೋಗುವಾಗ, ಚಂದು ಅವಳ ಬಾಯಿಂದ ಅದೆಷ್ಟು ಚಂದವಾಗಿ ಮಾತನಾಡಿಸಿದ್ದ. ಈ ಬರೆಯುವ ಗೀಳಿನ ಜೊತೆಗೆ, ಚಂದು ಯಾವುದ್ಯಾವುದೋ ಸಂಘಟನೆಗಳಲ್ಲೂ ಗುರುತಿಸಿಕೊಂಡಿದ್ದ. 'ಇವತ್ತು ರಾತ್ರಿ ಪೂರಾ ವಾಲ್‌ರೈಟಿಂಗ್ ಮಾಡಿದ್ದೇ ಆಯ್ತು,' 'ನಾಳೆ ಒಂದು ಪ್ರತಿಭಟನಾ ಸಭೆ ಇದೆ...' ಹೀಗೆ ಏನೇನೋ ಹೇಳುತ್ತಿದ್ದ. ಆಗ ತನಗೆ ಅವನ ಬಗ್ಗೆ ಎಂಥದೋ ಕುತೂಹಲ. ಅಬ್ಬಾ ಎಂಥ ಹಸು ಗೂಸಿನಂಥವನು, ಏನೊಂದನ್ನೂ ಬಚ್ಚಿಟ್ಟು ಕೊಳ್ಳುವುದೇ ಇಲ್ಲ, ಅನ್ನೋ ಅಭಿಮಾನ.

ಹ್ಲಾಂ, ಆ ದಿನ ತನಗಿನ್ನೂ ಚೆನ್ನಾಗಿ ನೆನಪಿದೆ. ಅಂದು ಇನ್ನೂ ಪೂರಾ ಕತ್ತಲಾಗಿರಲೇ ಇಲ್ಲ. ತನ್ನ ಹಾಸ್ಟೆಲ್ ಎದುರಿನ ಪಾರ್ಕಿನಲ್ಲೇ ಅದ್ಹೇಗೆ ಬಾಚಿ ತಬ್ಬಿ ಮುತ್ತಿಟ್ಟುಬಿಟ್ಟಿದ್ದ. ಅಷ್ಟು ಮೆತ್ತಗಿದ್ದ ಅವನಿಗೆ, ಅಂದು ಅದೆಲ್ಲಿಂದ ಬಂದಿತ್ತು ಅಂಥಾ ಧೈರ್ಯ? ಅಬ್ಬಾ ಅದೆಷ್ಟು ಬಿಸಿಯಿತ್ತು ಆಗವನ ಮೈಯಲ್ಲಿ. ತಾನು ಪೂರಾ ಥಂಡು ಹೊಡೆದುಹೋಗಿದ್ದೆ. ದಡ್ ಅಂತ ಅವನನ್ನು ಹಿಂದಕ್ಕೆ ತಳ್ಳಿ, ಮಾತು ಮರೆತವಳಂತೆ ಕೂತುಬಿಟ್ಟಿದ್ದೆ. ಆಗವನ ದೈನೇಸಿ ಸ್ಥಿತಿಯನ್ನು ಜ್ಞಾಪಿಸಿಕೊಂಡು ತಾನೆಷ್ಟು ಸಲ ನಕ್ಕಿಲ್ಲ. ಮತ್ತೊಂದು ದಿನ, ಅಪ್ಪುಗೆಯ ಬಿಸಿಯಲ್ಲಿದ್ದ ಜೋಡಿಯೊಂದನ್ನು ತೋರಿಸಿ, 'ನೋಡು ನೀನೂ ಇದೀಯಾ', ಅನ್ನುವ ತನ್ನತ್ತ ನೋಡಿ ಅಣಕಿಸಿಕೊಂಡಿದ್ದ. ಆ ಕ್ಷಣ ತನ ಚಂದುವಿನ ಬಗ್ಗೆ ಮೊದಲ ಬಾರಿಗೆ ಎಂಥದೋ ಭಯ ಹುಟ್ಟಿಕೊಂಡಿತ್ತು. ಒಂದು ಮಾತು ಕೂಡ ಆಡದೆ, ರಪ್ ಅಂತ ಕೊಡವಿಕೊಂಡು ಹಾಸ್ಟೆ ಸೇರಿಕೊಂಡುಬಿಟ್ಟಿದ್ದೆ. ಎಂಥದೋ ಕಸಿವಿ ತನ್ನನ್ನು ಕವಿದುಕೊಂಡಿತ್ತು.

ಮನೆಬಿಟ್ಟು ಹೊರಡುವ ಹಿಂದಿನ ದಿನ ಘಟನೆಯಿಂದ ಬೀನಾ ಭೂಮಿಗಿಳಿದ ಹೋಗಿದ್ದಳು. ತನ್ನ ಚಂದು ಆ ಮಟ್ಟ ಇಳಿಯುತ್ತಾನೆ ಅಂತ ಅವಳಿಗೆ ಕಲ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಕೇವಲ ಕ್ಷುಲ್ಲಕ ಕಾರಣಕ್ಕಾಗಿ ತ




ಮೇಲೆ ಕೈಮಾಡಿದ್ದ. ಇನ್ನು ಈ ಗಂಡ-ಹೆಂಡತಿ ಅಂತ ನಾಟಕ ಆಡುವುದರಲ್ಲಿ ಅರ್ಥವಿಲ್ಲ ಅನ್ನುವ ತೀರ್ಮಾನಕ್ಕೆ ಬಂದಿದ್ದಳು ಬೀನಾ. ಎಲ್ಲಾ ಸಂಬಂಧಗಳ, ಋಣಗಳ, ಕಡಿದುಕೊಂಡು ದೂರಾಗುವ, ಕಡುಪಿನ ನೋವುಗಳಿಗೆ ಎದೆಯನ್ನು ಗಟ್ಟಿಮಾಡಿಕೊಂಡಿದ್ದಳು. ಆ ಕ್ಷಣದಿಂದಲೇ ಆ ಮನೆ, ಅಲ್ಲಿನ ಎಲ್ಲದೂ, ತನ್ನದಲ್ಲ ಅನಿಸಿತು. ಆ ಇಡೀರಾತ್ರಿ ಮನೆಯ ಮುಂದಿನ ಜಿಂಚುಕಲ್ಲಿನ ಮೇಲೆ ಕೂತು, ಅದೆಷ್ಟೋ ಹುಟ್ಟುವ ನಕ್ಷತ್ರಗಳು ಹುಟ್ಟಿ, ಮುಳುಗುವ ನಕ್ಷತ್ರಗಳು ಮುಳುಗಿ, ಕಪ್ಪನೆಯ ಮೋಡಗಳು ಬಿಳಿಯಾಗುತ್ತಾ, ಬಿಳಿಯ ಮೋಡಗಳು ಕಪ್ಪಾಗುತ್ತಾ, ಚಂದದ ಚಂದಿರನ ಮುಸುಕುತ್ತಾ, ಮರೆಯಾಗುತ್ತಾ, ಬೀಸೋ ಗಾಳಿಯ ಹೊತ್ತು ಹೊರಳಾಡುತ್ತಾ, ಮುಗಿಲಂಥ ಮುಗಿಲೆಲ್ಲಾ ಬೆಳ್ಳಿ ರೇಖೆಗಳ ಮಿನುಗಲ್ಲಿ ಬೆಳಗುತ್ತಾ, ಮಾನವನ ನೋವು, ಅವಮಾನ, ಸಣ್ಣತನಗಳಿಗೆ ಸವಾಲೆಂಬಂತೆ ಇದ್ದ ಮುಗಿಲಿಗೆ ಮುಖವಿಟ್ಟು ಕಳೆದಿದ್ದಳು.

ಟ್ರ್ಯಾನ್ಸ್‌ಫರ್ ವಿಚಾರ ಒಂದು ನೆಪ ಮಾತ್ರ. ಚಂದು ಕೆಲಸಕ್ಕೆ ಸೇರಿ ಎಂಟು ವರ್ಷಗಳಾಗಿದ್ದವು. ಆ ಎಂಟು ವರ್ಷಗಳಲ್ಲಿ ಅವನು, ತನ್ನ ಊರಿನಿಂದ ದೂರದ ಊರುಗಳಲ್ಲಿ ಕೆಲಸ ಮಾಡಿ, ತನ್ನ ಊರಿನ ಪಕ್ಕದ ಕಾಲೇಜಿಗೆ ಟ್ರ್ಯಾನ್ಸ್‌ಫರ್ ತೆಗೆದುಕೊಂಡು ನಾಲ್ಕು ವರ್ಷಗಳಾಗಿದ್ದವು. ಆಗ ಬೀನಾ ಕೊಂಚ ಪ್ರತಿಭಟಿಸಿದ್ದಳು. ಟ್ರ್ಯಾನ್ಸ್‌ಫರ್ ತೆಗೆದುಕೊಂಡದ್ದಕ್ಕಲ್ಲ, ತೆಗೆದುಕೊಂಡ ರೀತಿಗೆ. ಆಗ ಚಂದು ಸಮಜಾಯಿಷಿ ಕೊಟ್ಟದ್ದು-ತಾನು ತನ್ನ ಅಪ್ಪ-ಅಮ್ಮಂದಿರ ಇಳಿವಯಸ್ಸಿನಲ್ಲಿ ಜೊತೆಗಿರಬೇಕು, ಹಳ್ಳಿಯ ಸೊಗಡಿಗೆ ಹತ್ತಿರವಿರಬೇಕು ಅಂತ.

ಅಂದು ಕಾಲೇಜಿನಿಂದ ಬಂದ ಚಂದು ದುಗುಡದಲ್ಲಿದ್ದ. ಮನೆಗೆ ಬಂದವನೆ ಮಾತು ಕಳೆದುಕೊಂಡವನಂತೆ ಕೂತುಬಿಟ್ಟಿದ್ದ. ಬೀನಾ ಮಾತನಾಡಿಸಿದ್ದಕ್ಕೆ, ತನ್ನ ಟ್ರ್ಯಾನ್ಸ್‌ಫರ್ ಆರ್ಡರನ್ನು ತಣ್ಣಗೆ ಅವಳ ಕೈಗಿಟ್ಟ. ಬೀನಾಳಿಗೆ ಚಂದುವಿನ ನಡತೆ ಅತಿ ಅನಿಸಿತು. ಪ್ರಗತಿಪರವಾಗಿ ಯೋಚಿಸಬಲ್ಲ, ಪ್ರಾಮಾಣಿಕತೆಯ ಬಗ್ಗೆ ಬರೆಯಬಲ್ಲ, ಭಾಷಣ ಬಿಗಿಯಬಲ್ಲ, ಈ ಚಂದುವಿಗೆ ಏನಾಗಿದೆ ಅಂತ ಅಂದುಕೊಂಡಳು. ಅವನು ಇದಕ್ಕೆಲ್ಲಾ ಇಷ್ಟೊಂದು ತಲೆಕೆಡಿಸಿಕೊಳ್ಳುವ ಅಗತ್ಯವೇನಿದೆ ಅಂತ ಯೋಚಿಸುತ್ತಾ, ಅವನನ್ನು ಸಮಾಧಾನಗೊಳಿಸಲೆಂದು, "ನೋಡು ಚಂದು, ಈ ಸರ್ಕಾರಿ ನೌಕರಿಯಲ್ಲಿರುವವರಿಗೆ ಇದೆಲ್ಲ ಇದ್ದದ್ದೆ. ನೀನು ಇದಕ್ಕೆಲ್ಲಾ ತುಂಬಾ ಸೆಂಟಿಮೆಂಟಲ್ ಆಗಿ ಕೂತರೆ ಹ್ಯಾಗೆ ಹೇಳು. ಎಲ್ಲಾ ಸರ್ಕಾರಿ ನೌಕರರಿಗೂ ಅಪ್ಪ, ಅಮ್ಮ ಸಂಬಂಧಿಕರು, ಅಂತ ಇದ್ದೇ ಇರ್ತಾರೆ. ಹಾಗೇನೆ ಅಷ್ಟೋ ಇಷ್ಟೋ ಆಸ್ತಿ ಕೂಡಾ. ಹಾಗಿರುವಾಗ, ಒಬ್ಬ ಸರ್ಕಾರಿ ನೌಕರ ತಾನು ಇಲ್ಲೇ ಉಳಿಯಬೇಕು, ಇಂಥ ಕಡೆಗೇ ಟ್ರ್ಯಾನ್ಸ್‌ಫರ್ ತಗೋಬೇಕು ಅಂತ ಕೂತರೆ ಹೇಗೆ? ಕಂಡಕಂಡವರ ಕೈಕಾಲು ಕಟ್ಟಬೇಕು, ವಶೀಲಿ ಮಾಡಬೇಕು, ಜೊತೆಗ ರೊಕ್ಕಾನೂ ಚೆಲ್ಲಬೇಕು. ಆಗ ಒಬ್ಬ ನೌಕರ ಪ್ರಾಮಾಣಿಕವಾಗಿ..." ಇನ್ನೂ ಮಾತು ಪೂರಾ ಮುಗಿಸದ ಬೀನಾಳ ಜುಟ್ಟು ಹಿಡಿದು ಚಂದು ಕಿರುಚಿಬಿಟ್ಟಿದ್ದ, "ನಿನ್ನಂಥ ಕಾಂಕ್ರೀಟ್ ಕಾಡಿನಲ್ಲಿ ಬೆಳೆದ ಗೂಬೆಗಳಿಗೆ, ನನ್ನಂಥವನ ಹಳ್ಳಿಯ ಸಂವೇದನೆಗಳು ಅರ್ಥವಾಗುವುದಿಲ್ಲ. ನಿಮ್ಮ ಕೃತಕ ಬದುಕಿನಲ್ಲಿ ಸಂಬಂಧಗಳು ಪೂರಾ ಸೊರಗಿಹೋಗಿಬಿಡುತ್ತವೆ. ಅಪ್ಪ, ಅಮ್ಮ ಅಂದರೆ, ನಿನ್ನಂಥವರಿಗೆ ಕೇವಲ ಹೆರುವ ಯಂತ್ರಗಳು, ಅಷ್ಟೇ... ನಿನ್ನಂಥ ಗಯ್ಯಾಳಿಗಳಿಗೆಲ್ಲಿ ತಿಳಿಯಬೇಕು ಇದೆಲ್ಲಾ..."

ಚಂದುವಿನ ಇಂಥ ವರ್ತನೆ ಬೀನಾಳಿಗೆ ತುಂಬಾ ಅನಿರೀಕ್ಷಿತವಾಗಿತ್ತು. ಚಂದು ಇಷ್ಟು ಸಣ್ಣವನಾದನಲ್ಲ ಅಂತ ಅಸಹ್ಯ ಹುಟ್ಟಿತು. ಅಳು ನುಗ್ಗಿಬಂತು. ಆ ಅಳುವಿನೊಳಗಿಂದಲೇ ತಾನೂ ಕಿರುಚಿಕೊಂಡಿದ್ದಳು, "ಬಾಯಿಗೆ ಬಂದದ್ದನ್ನೆಲ್ಲಾ

ಬೊಗಳಬೇಡ. ಇಂಥ ಮೊಂಡುವಾದ ಕೈಳಿಯುವುದು, ಹೆಂಡತಿಯ ಮೇಲೆ ಕೈಮಾಡು ವುದು, ಸತ್ಯಕ್ಕೆ ಮುಖಾಮುಖಿಯಾಗಲು ಹೆದ ರುವ ಹೇಡಿಗಳ ಲಕ್ಷಣ. ನಿನ್ನ ಅಪ್ಪ ಅಮ್ಮಂದಿರನ್ನು ಪಾಲಿಸಬೇಕೆನ್ನುವ ನಿನ್ನ ಆಸಕ್ತಿಯ ಹಿಂದಿರುವ ಸ್ವಾರ್ಥ, ಸಣ್ಣತನ ಹೇಸಿಗೆ ತರುತ್ತಿದೆ. ನಿನ್ನಂಥವನು ಅದೇನು ಬರೆಯುತ್ತೀಯೋ ನನಗಂತೂ ತಿಳಿಯದು.



ಥೆ, ಇವೆಲ್ಲಾ ಹೀಗೇಕೆ ಕಾಡುತ್ತಿವೆ. ಈ ನೆನಪುಗಳೇಕೆ ಕತ್ತಲೆಗೆ ಹಚ್ಚಿಕೊಂಡ ದೊಂದಿಯಂತೆ ಬಿಚ್ಚಿಕೊಂಡು ಉರಿಯಹತ್ತಿವೆ... ಇಷ್ಟೆಲ್ಲಾ ರಾದ್ಧಾಂತದ ಅಗತ್ಯವಿತ್ತೆ... ಚಂದು ತನಗಾಗಿ, ತಮ್ಮ ಕಂದನಿಗಾಗಿ, ತನ್ನಂತೆಯೇ ಹಂಬಲಿಸುತ್ತಿರಬಹುದೆ... ಅಥವಾ, ತಾನೇ ಇದನ್ನೆಲ್ಲಾ ನುಂಗಿಕೊಂಡು ತೆಪ್ಪಗಿದ್ದುಬಿಡಬಹುದಿತ್ತೆ...

ಅಲ್ಲ, ಅವನಿಗೆ ಚಟೀರ್ ಅಂತ ಕೆನ್ನೆಗೆ ಬಾರಿಸಲು ಮನಸ್ಸಾದರೂ ಹೇಗೆ ಬಂತು? ಅದೇಕೆ ದೆವ್ವ ಹಿಡಿದವನಂತೆ ಹೂಂಕರಿಸುತ್ತಿದ್ದ. ಅಬ್ಬಾ, ಆಗಿನ ಅವನ ಅವತಾರ ತನಗೀಗಲೂ ನಡುಕ ಹುಟ್ಟಿಸುತ್ತಿದೆ. ಅವನು ಕೊಟ್ಟ ಏಟಿಗೆ, ಕಣ್ಣುಗಳು ಮಂಜಾಗಿ, ತಲೆಸುತ್ತು ಬಂದು ಬಿದ್ದುಬಿಟ್ಟಿದ್ದೆ. ಆಗಲೂ ಹತ್ತಿರಕ್ಕೆ ಬಂದು ಏನಾಯ್ತು ಅಂತ ಕೇಳುವ ಸೌಜನ್ಯ ಕೂಡಾ ತೋರಿರಲಿಲ್ಲ. ಅದಿರಲಿ, ಆ ರಾತ್ರಿ ಕಳೆದು ಬೆಳಿಗ್ಗೆಯಾದರೂ ಏನೋ ಆಗಿದ್ದು ಆಗಿ ಹೋಯ್ತು ಅಂತ ಸಮಾಧಾನ ಮಾಡಲೂ ಮುಂದಾಗಲಿಲ್ಲ.

ತನ್ನ ಮಗಳಿಗೀಗ ಎಂಟು ವರ್ಷ. ಮದುವೆಯಾದ ಎರಡು ವರ್ಷಕ್ಕೆ ಹುಟ್ಟಿದವಳು. ಇಷ್ಟೂ ವರ್ಷಗಳಲ್ಲಿ, ತಾನು ತವರು ಮನೆಗೆ ಅಂತ ಹೋಗಿರುವುದು ಬೆರಳೆಣಿಕೆಯಷ್ಟು ಸರ್ತಿ ಮಾತ್ರ. ಅಮ್ಮನನ್ನು ಬಿಟ್ಟರೆ, ಅಪ್ಪ ಒಮ್ಮೆಯೂ ತನಗೆ ಮುಖ ಕೊಟ್ಟು ಮಾತಾಡಿಲ್ಲ. ಅಮ್ಮನೆ ಆಗಾಗ ಚಂದೂನ ಊರಿಗೆ ಬಂದು ಹೋ[illegible] ದ್ದಾಳೆ. ಅಪ್ಪ ಮಾತ್ರ ಅಪ್ಪಿತಪ್ಪಿಯೂ ಇತ್ತ ಸುಳಿದಿಲ್ಲ. ಇಂಥದ್ದು ಕೂಡಾ ಚಂದೂಗೆ ಒಂದು ಕುಂಟು ನೆಪ, ತನ್ನನ್ನು ಹೀಯಾಳಿಸಲಿಕ್ಕೆ. ಚಂದುವಿನ ಇಂಥ ವರ್ತನೆಗೆ ಕಾರಣಗಳನ್ನು ಹುಡು[illegible] ಸೋತಿದ್ದೇನೆ.

ಹತ್ತು ವರ್ಷಗಳ ಹಿಂದೆ ಇಲ್ಲಿಗೆ ಬಂದಾಗ, ಇದೇ ಹೋಟೆಲಿನಲ್ಲಿ ಉಳಿದದ್ದು. ಅದೂ ಈ ರೂಮಿನ ಪಕ್ಕದ ರೂಮಿನಲ್ಲೇ, ಅಡ್ರೆಸ್ ಬರೆಸುವಾಗ, ತನ್ನನ್ನು ಹೆಂಡತಿ ಅಂತ ಚಂದು ಎಷ್ಟು ಸಲೀಸಾಗಿ ಹೇಳಿಬಿಟ್ಟಿದ್ದ. ರಿಸೆಪ್ಷನ್ ಕೌಂಟರಿನಲ್ಲಿದ್ದ ಆ ಹುಡುಗಿ, ತನ್ನನ್ನು

ಮೇಲಿನಿಂದ ಕೆಳಗಿನವರೆಗೂ ಒಮ್ಮೆ ನೋಡಿ, ತುಂಟ ನಗೆ ಬೀರಿದ್ದಳು...

ಸಾಯುವ ಧೈರ್ಯ ತುಂಬಿಕೊಳ್ಳಲು ಬೀನಾಳಿಗೆ ಎರಡು ದಿನಗಳೂ ಸಾಕಾಗದಾದವು. ಸಾಯಬೇಕೆಂದು ಇಲ್ಲಿಗೇ ಯಾಕೆ ಬಂದೆ ಅನ್ನುವುದಕ್ಕೂ ಅವಳಲ್ಲಿ ಉತ್ತರವಿರಲಿಲ್ಲ. ಬಂದ ಮೊದಲ ದಿನ, ರಾತ್ರಿಯವರೆಗೂ ಆ ಬಂಡೆಯ ಪಕ್ಕದಲ್ಲಿ ಕೂತು, ನಂತರ ಸೀದಾ ನಡೆದು, ಹೋಟೆಲ್ಲಿನಲ್ಲಿ ರೂಮು ಹಿಡಿದಿದ್ದಳು. ಅದರ ಮಾರನೆಯ ದಿನ, ಇದೇ ತನ್ನ ಜೀವನದ ಕೊನೆಯ ದಿನವೆಂಬಂತೆ, ಆ ಪುಟ್ಟ ಊರಿನ ರಸ್ತೆಗಳಲ್ಲೆಲ್ಲಾ ಮಗಳ ಕೈಹಿಡಿದು ಓಡಾಡಿದ್ದಳು. ಆ ಮಗು ಕೇಳಿದ್ದನ್ನೆಲ್ಲಾ ಕೊಡಿಸಿದ್ದಳು. ಕಡಲ ತಡಿಯನ್ನು ತಲುಪುವ ಹೊತ್ತಿಗೆ ಮತ್ತೊಂದು ಸಾಯಂಕಾಲ ಬಂದಿತ್ತು. ಎಂದೂ ಕಡಲನ್ನೇ ಕಾಣದಿದ್ದ ಸಮೃದ್ಧಿ ಹಿರಿಹಿರಿ ಹಿಗ್ಗಿ ಹೋಗಿದ್ದಳು. ಆ ಹೊತ್ತಿಗಾಗಲೇ, ದೂರದಲ್ಲಿ ಅಲೆಗಳ ಊರೊಳಗಿಂದ, ಅವುಗಳ ಎದೆಯ ಮೇಲೆ ಮುದುಕಾದ ಸೂರ್ಯ, ತನ್ನ ಸಾಯುವ ಮುಂಚಿನ ಕೆಂಪನ್ನು ಚೆಲ್ಲಿ, ಅವುಗಳ ಕುಣಿತದಲ್ಲಿ ಪ್ರತಿಫಲಿಸುತ್ತಿದ್ದ. ಇಡೀ ಕಡಲ ತಡಿ ಗಿಜಗುಡುತ್ತಿತ್ತು. ಕೆಲವರು ಅಲೆಗಳೊಡನೆ ಆಟವಾಡುತ್ತಿದ್ದರು. ಕೆಲವರು ನೆಂದು ತೊಪ್ಪೆಯಾಗಿ, ಅರೆಬೆತ್ತಲಾಗಿ ಮರಳಲ್ಲಿ ಉರುಳಾಡುತ್ತಿದ್ದರು. ಮತ್ತೆ ಕೆಲವರು ನೀರಿಗಿಳಿಯುತ್ತಿದ್ದರು.

ಮರಳು ದಿಣ್ಣೆಯೊಂದರ ಮೇಲೆ ಕೂತಿದ್ದ ಬೀನಾಳ ಕೈಬಿಡಿಸಿಕೊಂಡು, ಸಮೃದ್ಧಿ ಹತ್ತಿರದಲ್ಲೇ ಆಡುತ್ತಿದ್ದ ಮಕ್ಕಳ ಗುಂಪಿನತ್ತ ಓಡಿದಳು. ಕೂತಲ್ಲೇ ಬೀನಾಳಿಗೆ ಮನಸ್ಸು ಪೂರಾ ಖಾಲಿಯಾಗುತ್ತಿದೆ ಅನಿಸಿತು. ಎದೆಯ ಭಾವಗಳೆಲ್ಲಾ ಬತ್ತಿ ಹೋಗುತ್ತಿರುವಂಥ ಅನುಭವವಾಗತೊಡಗಿತು. ಭಾವಗಳೆಲ್ಲಾ ಬಯಲಾಗಿ ಹೋಗುತ್ತಿವೆ. ಅನಿಸಿತು. ವಿಚಿತ್ರ ದುಗುಡವೊಂದು ಮುತ್ತಿಕೊಳ್ಳತೊಡಗಿತು. ಮತ್ತೆ ವಾಸ್ತವಕ್ಕೆ ಬಂದವಳಂತೆ ಸುತ್ತಲೂ ಕಣ್ಣಾಡಿಸಿದಳು. ಕಡಲ ತಡಿಯಲ್ಲಿ ಮರಳೋ ಮರಳು. ಜನವೋ ಜನ. ಥರಾವರಿ ಸದ್ದುಗಳು. ಥರಾವರಿ ಹಕ್ಕಿಗಳು. ತನ್ನ ಎದುರಿಗೇ, ಕೆಲ ಮಕ್ಕಳು ಮರಳಿನಲ್ಲಿ ಮನೆ ಕಟ್ಟುವ ಆಟ ಆಡುತ್ತಿದ್ದವು. ತಾವು ಕಟ್ಟುತ್ತಿದ್ದ ಮನೆಯನ್ನು ಅಲೆಗಳು ಅಳಿಸಿ ಹಾಕುವುದನ್ನು ಬೆರಗಾಗಿ ನೋಡುತ್ತಿದ್ದವು.

ಎಷ್ಟು ನೋಡಿದರೂ, ಎತ್ತ ನೋಡಿದರೂ ದುಗುಡ ತಮಣಿಗೊಳ್ಳಲಿಲ್ಲ. ಎಂಥದೋ ಉದ್ವೇಗ. ಶೂನ್ಯದಂಥ ಅನುಭವ. ಇದಕ್ಕಿದ್ದಂತೆ ತಾನು ಚಂದುಗೆಂದು ಅರ್ಧಕ್ಕೆ ಬರೆದು ನಿಲ್ಲಿಸಿದ ಪತ್ರ ನೆನಪಿಗೆ ಬಂತು. ರವಿಕೆಯೊಳಗಿನಿಂದ ಅದನ್ನು ಹೊರ ತೆಗೆದು, ಅದರ ಮಡಿಕೆ ಬಿಡಿಸಿದಳು. ಬೆವರಿಗೆ ಒದ್ದೆಯಾದಂತಿತ್ತು. ಚುಂಗು ವಾಸನೆ ಹೊಡೆಯುತ್ತಿತ್ತು. ಪತ್ರವನ್ನು ಬರೆದು ಮನೆಯಲ್ಲೇ ಬಿಟ್ಟು ಬರಬೇಕು ಅಂದುಕೊಂಡಿದ್ದಳು. ಆದರೆ ಅದನ್ನು ಪೂರಾ ಬರೆಯಲೂ ಆಗಿರಲಿಲ್ಲ. ಜೊತೆಗೆ, ಬರೆದಷ್ಟನ್ನೂ ಯಾಕೋ, ಮನೆಯಲ್ಲಿ ಬಿಟ್ಟು ಬರಲೂ ಮನಸ್ಸು ಒಪ್ಪಿರಲಿಲ್ಲ. ತಾನೇ ಮೂಡಿಸಿದ್ದ ಅಕ್ಷರಗಳ ಮೇಲೆ ಕಣ್ಣಾಡಿಸಲೂ ಹೆದರಿದ್ದಳು. ಅಂಜುತ್ತಲೇ ಪತ್ರದ ಮೇಲೆ ಕಣ್ಣಾಡಿಸಿದಳು:

ಪ್ರೀತಿಯ ಚಂದು,

ನಾನು ನಿನ್ನನ್ನು ಈಗಲೂ ಹೀಗೆ ಕರೆಯಬೇಕಾದ್ದಕ್ಕೆ, ನನಗೇ ನೋವಾಗುತ್ತಿದೆ. ಅಂದು ಅಷ್ಟೆಲ್ಲಾ ಕನಸು ತುಂಬಿದವನು, ಚುಕ್ಕಿ ಚಂದ್ರಮರನ್ನು ಅಂಗೈಯಲ್ಲಿ ತೋರಿಸುವ ಹುಮ್ಮಸ್ಸು ತೋರಿಸಿದವನು ನೀನೇ ಅಂತ ನನ್ನಿಂದ ಕಲ್ಪಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಬದುಕಲ್ಲಿ ಹೊಸದೊಂದು ಗ್ರಹಿಕೆಯನ್ನು ಕೊಟ್ಟ ನೀನು, ಹೆಂಡತಿ ಅಂದರೆ ಗೆಳತಿ ಅಂತ ಕೂಡಾ ಅರ್ಥವಾಗದ ವರ್ತಿಸಿದ್ದು ವಾಕರಿಕೆ ತರುತ್ತಿದೆ...

ಬೀನಾಳ ಕೊರಳ ಸೆರೆ ಹಿಗ್ಗಿದವು. ಪತ್ರವನ್ನು ಮಡಿಚಿ ಹಿಡಿದು, ಸಮೃದ್ಧಿಯನ್ನು ಕರೆದುಕೊಂಡು, ನಿನ್ನೆ ಕೂತಿದ್ದ ಬಂಡೆಯ ಹತ್ತಿರ ಬರುವ ಹೊತ್ತಿಗೆ, ಸೂರ್ಯ ಅಂದಿನ ಅಂತಿಮ ಯಾತ್ರೆಯ ಕುರುಹುಗಳನ್ನು ಅಚ್ಚೊತ್ತಿದ್ದ. ಸಂಜೆಯ ಕತ್ತಲು ಇಳಿಯತೊಡಗಿತ್ತು. ಜನರ ಗುಂಪು ಕರಗತೊಡಗಿತ್ತು.

''ಬೀನಾ, ಈ ಜಾಗ ಸಾಯುವವರಿಗೆ ಎಷ್ಟು ಸಲೀಸಾಗಿದೆ. ಒಮ್ಮೆ ಕಣ್ಣು ಮುಚ್ಚಿ ಜಿಗಿದರೆ ಸಾಕು, ಅಲೆಗಳ ಎದೆಯಲ್ಲಿ ಹೇಳ ಹೆಸರಿಲ್ಲದಂತೆ ಕರಗಿಹೋಗಿಬಿಡಬಹುದು... ಆದರೆ ಬೀನಾ, ಈ ಸಾಯೋದು ಅನ್ನುವುದು ಅಷ್ಟು ಸುಲಭ ಅಲ್ಲ ಅಲ್ವ....''


ಅಂದು, ಚಂದು ಅದೇ ಜಾಗದಲ್ಲಿ ಅದ್ಯಾವ ಕಾರಣಕ್ಕೋ ಅಂದಿದ್ದ ಮಾತುಗಳು ಬೀನಾಳಿಗೆ ನೆನಪಾದವು.

ಕಡಲೆಲ್ಲಾ ಕಪ್ಪೋ ಕಪ್ಪು. ಕತ್ತಲಲ್ಲಿ ಅಲೆಗಳ ಸದ್ದು ಮುಗಿಲು ಮುಟ್ಟುತ್ತಿತ್ತು. ಎಲ್ಲೋ ದೂರದಿಂದ ಕೇಕೆ, ನಗು, ಮಾತುಗಳು ತೇಲಿಬರುತ್ತಿದ್ದವು. ಬಂದವುಗಳು ಅಲೆಗಳ ಸದ್ದಿನೊಂದಿಗೆ ಪ್ರತಿಧ್ವನಿಸುತ್ತಿದ್ದವು. ಮನಸ್ಸು ಪೂರಾ ಮಸುಕು, ಮಸುಕು. ಎಲ್ಲಾ ಅಸ್ಪಷ್ಟ. ಇದ್ದಕ್ಕಿದ್ದಂತೆ, ತುಂಬಾ ಹತ್ತಿರದಲ್ಲೇ ಮನುಷ್ಯರ ಧ್ವನಿ ಕೇಳಿಸಿತು. ಬೀನಾ ಭಯದಿಂದ ಬೆವೆತು ಹೋದಳು. ಕತ್ತಲಲ್ಲೇ ಅತ್ತ ತಿರುಗಿ, ಕಣ್ಣ ಕೀಲಿಸಿ ನೋಡಿದಳು. ತಾನು ಕೂತಲ್ಲಿಂ ಕೆಲವೇ ಕೆಲವು ಮಾರುಗಳ ದೂರದ ಯಾರೋ ಬಡಬಡಿಸುತ್ತಿದ್ದ. ಮತ್ತೂ ಗಮನ ವಿಟ್ಟು ನೋಡಿದಳು. ನಿನ್ನೆ ನೋಡಿದ ಅದೇ ಹುಡುಕ, ಆ ಕತ್ತಲಲ್ಲೂ, ಪುಟ್ಟ ಬಂಡೆಗೆ ಎದ ರಾಗಿ ನಿಂತು, ಅದೇ ರಿಹರ್ಸಲ್‌ನಲ್ಲಿ ತೊಡಗಿದ್ದ

ಭಯ ಮತ್ತಷ್ಟು ಗಟ್ಟಿಯಾಯ್ತು. ಕೈಯಲ್ಲಿ ಪತ್ರವನ್ನು ಗಾಳಿಗೆ ಬಿಟ್ಟಳು. ಅದನ್ನು ಗಾ ಕೊಂಚ ದೂರ ತೇಲಿಸಿತು. ನಂತರ ಹತ್ತಿ ದಲ್ಲೆಲ್ಲೋ ನೆಲ ಕಚ್ಚಿಸಿತು. ಅದರ ಕುರುಹಾಗಿ, ಆ ಪತ್ರ, ಒಂದೆರಡು ಸಲ ಪಟ ಪಟ ಸದ್ದು ಮಾಡಿ ನಿಶ್ಶಬ್ದವಾಯ್ತು. ಇನ್ನಿಲ್ಲದಂಥ ಅಳು ಬಂತು. ಮಗಳನ್ನು ಬಿಗಿಯಾಗಿ ತಬ್ಬಿ ಹಿಡಿದಳು. ಅದ ಕತ್ತಲಿಗೆ ಹೆದರಿ ಗುಬ್ಬಚ್ಚಿ ಮರಿಯಾಗಿತ್ತು. ಅಸಾಧ್ಯ ಅನಿಸಿತು. ತಡವರಿಸಿಕೊಂಡೇ ಎದ್ದು ನಿಂತಳು. ತಲೆ ಸುತ್ತಿ ಸುತ್ತಿ ಬರುತ್ತಿತ್ತು. ಕಡೇ ಕಡೆಗೆ ನೋಡಲೂ ಹೆದರಿಕೆಯಾಯ್ತು. ಹಿಂದಕ್ಕೆ ತಿರುಗಿ ನೋಡಿದಳು. ಕೊಂಚ ದೂರದಲ್ಲಿ ತಾನಿದ್ದ ಹೋಟೆಲಿನಲ್ಲಿ ದೀಪಗಳು ಬೆಳಗುತ್ತಿದ್ದವು.

ಇಲ್ಲ, ಇವನಿಗೆ ಚಾಳೀಸ್ ಇಂತ ಕನ್ನಡಕ ಹಾಕಿಸಲು ಮನಸ್ಸಾದರೂ ಬೇಗ ಬಂತು. ಕಿವಿಗೆ ದೆವ್ವ ಹಿಡಿದವನಂತೆ ಹಾಂತರಿಸುತ್ತಿದ್ದ.

ಎಸ್. ಗಂಗಾಧರಯ್ಯ



# ಕಾಡುವ ಬಿಂಬಗಳು

ಕಳೆದ ತಿಂಗಳು ನಮ್ಮ ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾದ 'ಕಾಡುವ ಬಿಂಬಗಳು' ಅಂಕಣದ ಮತ್ತಷ್ಟು ಬಿಂಬಗಳು.

- ವಾಹನಗಳ ಕಾಲ್ತುಳಿತಕ್ಕೆ ಸಿಕ್ಕು ರಸ್ತೆಗಂಟಿದ ಬಣ್ಣದ ಚಿಟ್ಟೆ.

ಎಚ್. ಮಹೇಶ್, ದೊಡ್ಡಬಳ್ಳಾಪುರ

- ಗೋದಾವರಿ ತೀರದಲ್ಲಿ ಹೊಟ್ಟೆಪಾಡಿಗಾಗಿ, ಹಣತೆಗಳನ್ನು ಕೊಳ್ಳಿರೆಂದು ಭಕ್ತರನ್ನು ಅಂಗಲಾಚುವ ಹಣ್ಣುಹಣ್ಣು ಮುದುಕಿ.
- ಕುಡಿವ ನೀರಿಗಾಗಿ ಮೈಲುದ್ದ ಕ್ಯೂ ನಿಂತ ಖಾಲಿ ಕೊಡಗಳು.

ಕೆ.ಪಿ. ಸತ್ಯನಾರಾಯಣ, ಹಾಸನ

- ಐಸ್‌ಕ್ರೀಂ ತಿನ್ನುವಾಗ ಬೇಡುವ ಬಿಕ್ಷುಕ ಮಕ್ಕಳು
- ನಿಂತ ಗಡಿಯಾರದ ಮುಳ್ಳನ್ನು ಆಸ್ಥೆಯಿಂದ ತಿರುಗಿಸುತ್ತಿರುವ ಮುದುಕ.

ವೆಂಕಟೇಶ್ ಎಂ.ರಾವ್., ಬೆಂಗಳೂರು

- LKGಗೆ ಹೋಗುವ ಪುಟ್ಟ ದೇವತೆಗಳನ್ನು ಶಾಲೆಯ ಹೆಸರು ಕೇಳಿದರೆ ಬೆಚ್ಚುವಂತೆ ಹೊಡೆಯುವ 'ಮಿಸ್ಸು'ಗಳು
- ಜನಜಂಗುಳಿಯ ರಸ್ತೆಯಲ್ಲಿ ದಾವಣಿ ಸೈಕಲ್ ಚಕ್ರಕ್ಕೆ ಸಿಕ್ಕಿಕೊಂಡು, ಕಂಗಾಲಾದ ಹುಡುಗಿಯ ಮುಜುಗರದ ಕಣ್ಣುಗಳು.

ರಾಜೇಂದ್ರ, ಹೆಗಡೆ, ಹಾವೇರಿ

- ಇಂಜೆಕ್ಷನ್ ನೋಡಿದೊಡನೆ ಪ್ರಪಂಚವೇ ಮುಳುಗುತ್ತಿರುವಂತೆ ಅಳುವ ಪುಟ್ಟ ಮಗು.
- ಕೈಯಲ್ಲೆರಡು, ಹೊಟ್ಟೆಯಲ್ಲೊಂದು ಮಗುವಿನ ಜೊತೆ ಆಸ್ಪತ್ರೆ ಮೆಟ್ಟಿಲೇರುತ್ತಿರುವ ಬಡವಿ.

ವಿಷ್ಣ ಮರಕ್ಕಿನ, ಅಡ್ಕನಡ್ಕ

- ಸುತ್ತ ಕೂತ ಮೊಮ್ಮಕ್ಕಳಿಗೆ ಕತೆ ಹೇಳುತ್ತಿರುವ ಅಜ್ಜ.
- ಪರೀಕ್ಷೆಗೆಂದು ಹಗಲು ರಾತ್ರಿ ತಲ್ಲಣದೊಂದಿಗೆ ಸಿದ್ಧಗೊಳ್ಳುತ್ತಿರುವ ಮಕ್ಕಳು.
- ಡಿವೋರ್ಸ್ ಪೇಪರ್‌ಗೆ ರುಜು ಹಾಕುತ್ತಿರುವ ಹಲವು ವರ್ಷ ಒಟ್ಟಿಗೆ ಬಾಳಿದ್ದ ಗಂಡ-ಹೆಂಡತಿ.
- ಜಡಿಮಳೆ

ಪದ್ಮಾ ಕೃಷ್ಣಮೂರ್ತಿ, ಕೊರಟಗೆರೆ

- ಅರಂತೋಡು ಹೊಳೆಯಲ್ಲಿ ಮಳೆಗಾಲದ ದೋಣಿ.

ಎಂ. ದಿನೇಶ್ ತೊಡಿಕಾನ, ಬೆಂಗಳೂರು

- ಎಸ್ಸೆಲ್ಸಿ ಪರೀಕ್ಷೆ ಫೇಲಾಯಿತೆಂಬ ಕ್ಷುಲ್ಲಕ ಕಾರಣಕ್ಕಾಗಿ ಆತ್ಮಹತ್ಯೆಮಾಡಿಕೊಳ್ಳುವ ಹುಡುಗ-ಹುಡುಗಿಯರು.

ಬಿ.ಎಸ್. ಮೋಹನ್, ಬೆಂಗಳೂರು

- ವರುಷ ತುಂಬದ ಎಳೆ ಕಂದನ ನೆತ್ತಿಯ ಸುವಾಸನೆ.

ಸುಧೀಂದ್ರ, ಕಂಚಿತೋಟ

ಶಬ್ದ ತೀರ




# ಒಂಟಿ ಪಿಯಾನೋ ಮನುಷ್ಯ...

ವಿಶಾಲವಾದ ಸಮುದ್ರತೀರ. ಸಮುದ್ರವನ್ನೇ ಮೆಲ್ಲಗೆ ಹೀರಿಕೊಳ್ಳುತ್ತಿರುವಂಥ ಆಕಾಶ. ಚಲಿಸುವುದನ್ನೆ ಮರೆತುಬಿಟ್ಟಂತಿರುವ ಭಗ್ನ ಮೋಡಗಳ ಹಿಂಡು. ಮತ್ತೆ ಮತ್ತೆ ತೀರವನ್ನು ತಟ್ಟುವ ತವಕದಲ್ಲಿ ಓಡೋಡಿ ಬರುವ ತೆರೆಗಳು. ಈ ತೆರೆಗಳ ತೀರದಲ್ಲಿ ಸಮುದ್ರಕ್ಕೆ ಮುಖಮಾಡಿ ಕೂತು ಪಿಯಾನೋ ನುಡಿಸುತ್ತಿದ್ದಾನೆ ದೂರದಿಂದ ಪುಟ್ಟ ಆಟಿಗೆಯಂತೆ ತೋರುತ್ತಾರೆ, ಪಿಯಾನೋ ಮತ್ತು ಅವನು. ತೆರೆಗಳು ಅವರಿಬ್ಬ ಕಾಲ್ಗಳನ್ನು ತೋಯಿಸುತ್ತ- ತೀರದೆಡೆ ಬರುತ್ತಲೇ ಇವೆ. ಕೇವಲ ಸ್ವರಗಳಿಗೆ ಮಾತ್ರ ಮಣಿವವನಂತೆ ಅವನು ಪಿಯಾನೋಕ್ಕೆ ಶರಣಾಗಿದ್ದಾನೆ. ಗಾಳಿ, ಸಮುದ್ರ, ಆಕಾಶ, ಒದ್ದೆ ರೇವು ಮತ್ತು ಒಂಟಿ ಪಿಯಾನೋ ಮನುಷ್ಯ...

ಬಿಡಿ ಸ್ವರಗಳನ್ನು ಕಸಿದುಕೊಳ್ಳುವ ಹಪಾಪಿ ಗಾಳಿಗಿಲ್ಲ. ಆಕಾಶಕ್ಕೆ ಸಮುದ್ರವನ್ನು ಬಿಟ್ಟುಕೊಟ್ಟ ಉದಾಸೀನ ಇಲ್ಲ. ಯಾವುದೂ ಬೆರೆತಿಲ್ಲ, ಯಾವುದೂ ಹೊರತಾಗಿಲ್ಲ. ತೆರೆಗಳು ಮಾತ್ರ ಪಿಳಿಪಿಳಿ ಕಣ್ಣರಳಿಸುತ್ತ ಪಿಯಾನೋವನ್ನು ಸುತ್ತರಿದು, ಬಳಸಿ, ಪುಲಕದಿಂದೆಂಬಂತೆ ಅದರ ನಾಲ್ಕು ಕಾಲುಗಳಡಿಗೆ ಪುಟ್ಟ ಸುಳಿಗಳನ್ನೆಬ್ಬಿಸಿ ಮರಳುತ್ತಿವೆ. ಅವನ ಕಾಲುಗಳೋ ಮೀನಿನ ಬೆಳ್ಳನೆ ಕಿಬ್ಬೊಟ್ಟೆಯಂತೆ ತೆರೆಗಳ ತೆಳುಲೇಪದಲ್ಲಿ ಮಿನುಗುತ್ತಿವೆ...

ಎದುರಿನ ವಿಶಾಲ, ವಿದ್ರಾವಕ ನೀಲಿ ಹಾಸಿನ ಆಚೆಗೊಂದು ಕಳವಳದ ಕ್ಷಿತಿಜ. ಅಲ್ಲಿಂದಲೇ ಬರಬೇಕು, ಬರಬೇಕಾದುದೆಲ್ಲ. ಮುಳುಗಿದ ದ್ವಾರಕೆಯಿಂದೆದ್ದು ಜನ, ಪಾತ್ರೆ-ಪಗಡಿ, ಕಂಕುಳ ಮೊಲೆಗೂಸು, ಸೌದೆಹೊರೆಯೊಂದಿಗೆ ನಡೆದುಬಂದಂತೆ. ಅಲ್ಲಿಂದಲೇ ಬರಬೇಕು. ಇಲ್ಲಿಯ ಸ್ವರಗಳೆಲ್ಲ ಅವರಿಗಾಗಿ. ಅವರ ಬರವಿಗಾಗಿ.

ದೂರದಿಂದ ಪಿಯಾನೋ ಒಂಟಿ ರೆಕ್ಕೆಯ ಕರಿ ಪತಂಗ. ಅವನೋ ಕರಿ ತಾಯ ಕೆಚ್ಚಲಿಗೆ ಬಾಯ್ಕೊಟ್ಟ ವಿಧೇಯ ಎಳೆಗರು.



ನೂರೆನೂರೆ ತೆರೆಗಳ ಕಿರುಲಾಸ್ಯ. ಕಪ್ಪು ಹೂಗಳ ತೋಟಗಳಿವೆ. ಅಲ್ಲಿ ಕಪ್ಪು ಬಣ್ಣದ ಚಿಟ್ಟೆಗಳಿವೆ. ಅದು ಹಗಲಲ್ಲಿ ಕಣ್ಮುಚ್ಚಿಕೊಂಡಿರುವ ರಾತ್ರಿಯ ತೋಟ. ಮನೆಮಂದಿಯೆಲ್ಲ ಮಲಗಿದಾಗ ಒಬ್ಬಳೇ ಎದ್ದು ತೋಟಕ್ಕೆ ನೀರು ಹನಿಸುವ ಒಂಟಿ ತಾಯಿಯ ಬಳೆಗಳು ಕೊಡಕ್ಕೆ ತಗಲುವ ಶಬ್ದ.

ನೀರು ಸೇದುವಾಗೆಲ್ಲ ಆಕೆ ಒಂದು ಗಳಿಗೆ ನಿಂತು, ಬಾಗಿ ಬಾವಿಯೊಳಗನ್ನು ನಿಟ್ಟಿಸುತ್ತಾಳೆ. ರಾತ್ರಿಯ ಸುರಂಗದಲ್ಲಿ ಹೊಳೆವ ನೀರಿನ ಗೋಲ, ಕಣ್ಣಿನಂತೆ, ಅದರಲ್ಲಿ ಮೆಲ್ಲಗೆ ತುಂಬುತ್ತಿರುವ ಕೊಡ, ಪಾಪೆಯಂತೆ. ಎವೆಯಿಕ್ಕದ ಈ ಕಣ್ಣಿನಲ್ಲಿ ಪ್ರತಿಫಲಿಸಿದ್ದು ಮುಂದಾವದ ಆಕಾಶ. ಈ ವೇಳೆಯಲ್ಲಿ ಕೆಲ ಮಕ್ಕಳು ಮನೆ ಬಿಟ್ಟು ಓಡಿಹೋಗುತ್ತಾರೆ. ಉಳಿದವರು ತುಸು ದೊಡ್ಡವರಾದ ಮೇಲೆ ಸಂಭಾವಿತರಂತೆ ಟಾಟಾ ಮಾಡುತ್ತ ನಡೆದು ಹೋಗುತ್ತಾರೆ. ಮನೆಬಿಟ್ಟು ಹೋದವರಿಂದಲೇ ಪಟ್ಟಣಗಳು ಆಗಿವೆ.

ಈ ಪಿಯಾನೋ ಇಲ್ಲಿ ಹೇಗೆ ತಂದ?... ದೋಣಿಯಲ್ಲಿ? ಅಥವ ಒಳನಾಡಿನಿಂದ ರಸ್ತೆಗುಂಟ ಲಾರಿಯಲ್ಲಿ? ಕೂಲಿಗಳಿಂದ ಅದನ್ನು ಚಕ್ಕಡಿಯಿಂದ ಇಳಿಸಿದನೆ? ನಂತರ ಕಿಸೆಯಿಂದ ದುಡ್ಡು ಅವರಿಗೆ ಕೊಟ್ಟು, 'ಆಯಿತು ನೀವಿನ್ನು ಹೊರಡಿ' ಎಂಬಂತೆ ನೋಡಿದನೆ? ಮೆಲ್ಲಗೆ ಅವರೆಲ್ಲ ಅವನಿಂದ ದೂರವಾದ ನಂತರ... ವಿಶಾಲ ರೇವೆಯಲ್ಲಿ, ಪುಟ್ಟ ಸ್ಟೂಲಿನ ಮೇಲೆ ಕೂತು, ಅದರ ರೆಕ್ಕೆಯನ್ನು ಬಿಚ್ಚಿ... ಕ್ಷಿತಿಜದಲ್ಲಿ ಕಣ್ಣಿಟ್ಟು... ಎಲ್ಲ ಅಸಂಗತವಾಗಿತ್ತೆ ಅವನಿಗೆ? ರುಮುರುಮು ಕಿನಾರೆ ಗಾಳಿಯಲ್ಲಿ ಅವನು ತಟ್ಟಿದ ಮೊದಲ ಸ್ವರ ಎಲ್ಲಿ ಹೋಯಿತು? ಎರಡೂ ಬದಿಯ ಅಪರಿಚಿತ ಶತಶೃಂಗ ಗುಡ್ಡಗಳು ಅವನನ್ನು ಉಡಾಫೆಯಿಂದ ನೋಡಿದವೆ...

ಪಿಯಾನೋ ನಾನು ನೋಡಿದ್ದು ಬರೀ ಸಿನಿಮಾದಲ್ಲಿ. ಏರು ಮೆಟ್ಟಿಲುಗಳ ಸ್ಟುಡಿಯೋ ಮನೆಯ ವಿಶಾಲ ಹಜಾರದಲ್ಲಿ ''ಕಿಸೀ ಪತ್ತರ್ ಕೀ ಮೂರತ ಸೇ''... ಎನ್ನುವ ಸುನೀಲ್ ದತ್ತನ ಕೈಲಿ, ಅಥವಾ ''ಇದು ಯಾರು ಬರೆದ ಕಥೆಯೋ'' ಎನ್ನುವ ರಾಜಕುಮಾರ್ ಕೈಲಿ. ವಾಹ್!.. ಅದೆಂಥ ಗಹನವಾದ ದುಃಖ! ಪ್ರಲಾಪಕ್ಕೊಂದು ವರ್ಚಸ್ಸು ನೀಡುವ ಪಿಯಾನೋ, ದಿವ್ಯಲೋಕದ ರೆಕ್ಕೆ ಪಡೆದ ಪಿಯಾನೋ, ಬೆರಳಿಟ್ಟರೆ ಟಿಂಗೆನ್ನುವ ಪಿಯಾನೋ, ನನ್ನ ಹನ್ನೆರಡು ಚದರಡಿ ಸಂಸಾರಕ್ಕೆ ಬರುವುದೆಂತು?

''ಅಫಘಾನಿಸ್ತಾನದ ಹರಾಜು ಬೀದಿಗಳಲ್ಲಿ ಅದನ್ನು ಕವಡೆ ಬೆಲೆಗೆ ಕೊಂಡೆ'' ಎನ್ನುವ ಶೇಖರು, ಒಂಟೆಗಳ ಬೆನ್ನಿಗೆ ಅದನ್ನು ಕಟ್ಟಿ ಕಾಬೂಲ್‌ನ ದಾರಿಗಳಲ್ಲಿ ಹೊತ್ತೊಯ್ದರೆ? ಖರ್ಜೂರದ ನೆರಳಲ್ಲಿ ಅದರ ಉಸುಕು ಝಾಡಿಸಿದರೆ? ಪಟಪಟನೆ ರೆಕ್ಕೆ ಬಡಿಯುತ್ತ, ಅದರ ಮೇಲೆ ಕೂತು ಚಿಂವ್ ಚಿಂವ್ ಎಂದು ಪುರ್ರಾಡಿದ ಬಣ್ಣಬಣ್ಣದ ಗುಬ್ಬಚ್ಚಿಗಳು ಕಾಲಿಟ್ಟಾಗೆಲ್ಲ ಪಿಯಾನೋ ಬಾಯ್ಬಿಟ್ಟಿತೆ? ತನ್ನದೇ ಉಲಿಯಲ್ಲಿ ಜಗಳಾಡಿತೆ?

ನಾಲ್ಕು ಕಾಲಿನ ಈ ಪ್ರಾಣಿ ಒಂದೊಂದೇ ಕಾಲಿಟ್ಟು ನಡೆದುಬಂತೆ? ರಥಬೀದಿಯಲ್ಲಿ, ಬಸ್‌ಸ್ಟ್ಯಾಂಡಿನಲ್ಲಿ, ಸಂತೆಕಟ್ಟೆಯಲ್ಲಿ ಯಾರೂ ಇದನ್ನು ಚುಡಾಯಿಸಲಿಲ್ಲವೆ? ಅಥವಾ ಯುಗಗಳಿಂದ ಟಾರ್ಪಾಲಿನ್ ಶೀಟ್ ಹೊದ್ದು ಗಪ್‌ಚುಪ್ ಉಪ್ಪಿನಮೂಟೆಯಂತೆ ಕೂತಿದ್ದು, ಈಗ ಫಕ್ಕನೆ ಈ ಬಣ್ಣದ ಬೇಲೆಯಲ್ಲಿ ಪ್ರತ್ಯಕ್ಷವಾಯಿತೆ?

ನೀರು ಏರುತ್ತಲೇ ಇದೆ ಬಣ್ಣದಲ್ಲಿ. ತೀರ ಸಣ್ಣದಾಗುತ್ತ, ಕ್ಷಿತಿಜ ಸರಿಯುತ್ತಿದೆ ದೂರ. ವೇಷ ಮುಗಿಸಿ ಮನೆಗೆ ಹೊರಟಿವೆ ಮೋಡ. ಕಡ ತಂದ ಸ್ವಪ್ನದಂತೆ ನುಡಿಸುತ್ತಿದ್ದಾನೆ ಎರಡು ಒದ್ದೆ ಕಾಲಿನ ಒಂಟಿ ಮನುಷ್ಯ, ಸಮಯದಿಂದ ಬೇರ್ಪಡಿಸುತ್ತ ಎಲ್ಲವನ್ನು.

ಸಮುದ್ರವೇ ಈ ಪಿಯಾನೋ ನನ್ನದು. ಈ ಬಸ್‌ಸ್ಟ್ಯಾಂಡು ನನ್ನದು. ಈ ಮದ್ದಿನ ಶೀಷೆ, ಈ ಕುಲಾವಿ, ಈ ಹೊಸ್ತಿಲು ನನ್ನದು. ಈ ಹಾಡು ನನ್ನದು. ಈ ಉಪಗ್ರಹದ ಪ್ರತಿಯೊಂದು ಮೋರೆ ನನ್ನದು.

ಭಯಬೇಡ, ಕಾಪಾಡುತ್ತೇನೆ ನಿನ್ನ.


ಜಯಂತ ಕಾಯ್ಕಿಣಿ

jayantkaikini@vsnl.net

ರಾತ್ರಿಯನ್ನು ಒದ್ದೋಡಿಸಿ ಅದರ ಸ್ಥಳ ಆಕ್ರಮಿಸಿದ ಬೆಳಗಿನ ಝಾವದಲ್ಲಿ ಸೂರ್ಯನಿನ್ನೂ ಕಾಣಿಸಿಕೊಂಡಿರಲಿಲ್ಲ. ಸಬರ್ಬ್ ಪೊಲೀಸ್ ಠಾಣೆಯಬಾಗಿಲಲ್ಲಿ ಪೇದೆ ವೆಂಕಟರಮಣಪ್ಪ ಕಾಣಿಸಿಕೊಂಡಿದ್ದ.

ರೈಟರ್ ಸಿಂಗಣ್ಣ ತೂಕಡಿಸುತ್ತಿದ್ದವನು ವೆಂಕಟರಮಣಪ್ಪನ ಗಟ್ಟಿಧ್ವನಿಯಿಂದ ಬೆಚ್ಚಿದ.

''ಯಾವನೋ ಅವ್ನು ನನ್ನ ನಿದ್ದೆ ಕೆಡಿಸೋನು?'', ಕಣ್ಣನ್ನೂ ಬಿಡದೇ ಗುಡುಗಿದ.


''ಸಿಂಗಣ್ಣೋ...'', ಹೆಗಲು ಒಡಿದು ಅಲುಗಾಡಿಸಿದ ಪೇದೆ ವೆಂಕಟರಮಣಪ್ಪ. ಈಗ ಎಚ್ಚರವಾಯಿತು ಸಿಂಗಣ್ಣನಿಗೆ.

''ಏನಲೇ ಒತ್ತಾರೆ ಒತ್ತಾರೆ ಬಂದ್ಬುಟ್ಟಿದ್ದೀ? ಈ ಟೇಷನ್‌ಗೇ ಬಂದ್ಬುಟ್ಟಾ?'', ಕೇಳಿದ ಸಿಂಗಣ್ಣ.

''ಇಲ್ಲ ಕಣಣ್ಣೋ, ಬೆಳಿಗ್ಗೆ ಬೆಳಿಗ್ಗೇನೇ ಹೆಣ ಕಣ್ಣಿಗೆ ಬಿತ್ತು. ಅದಕ್ಕೆ ಬಂದೆ. ಸಿಂಗಣ್ಣನ ನಿದ್ದೆ ಹಾರಿಹೋಗಿತ್ತು.''

''ಎಲ್ಲೋ ಮಾರಾಯಾ?'' ವಿವರ ಕೇಳಿದ ಸಿಂಗಣ್ಣ.

ಸಿಟಿ ಪೊಲೀಸ್ ಠಾಣೆಯ ಪೇದೆ ವೆಂಕಟರಮಣಪ್ಪ ನಗರದಿಂದ ಹೊರಹೋಗಿದ್ದವನು ಬಸ್‌ನಲ್ಲಿ ಹಿಂದಿರುಗುತ್ತಿದ್ದ. ಸರ್ಕಾರಿ ಬಸ್ಸು ಕೆಟ್ಟಿತ್ತು ನಡುರಸ್ತೆಯಲ್ಲಿ. ಬಸ್ಸು ರಿಪೇರಿಯಾಗಲು ಒಂದು ಗಂಟೆಯಾದರೂ ಬೇಕು ಎಂದು



ಯತಿರಾಜ್ ವೀರಾಂಬುಧಿ

# ಅಗ್ನಿಸ್ನಾನ



ವೆಂಕಟರಮಣಪ್ಪ ಸ್ವಲ್ಪದೂರ ನಡೆದಿದ್ದ. ಅವನು ಹೋದ ದಾರಿಯಲ್ಲಿ ಬೇರೆ ಯಾರೂ ಬರಲಿಲ್ಲ. ಒಂದಷ್ಟು ದೂರ ಮರಗಳ ಗುಂಪಿತ್ತು. ಅದರಾಚೆಗೆ ಕಂಡಿತ್ತು ವಿಕೃತಾಕೃತಿಯೊಂದು.

ಸಂಪೂರ್ಣವಾಗಿ ಸುಟ್ಟು ಹೋಗಿದ್ದ ಮನುಷ್ಯಾಕಾರ!

''ಗಂಡ್ಸೋ? ಹೆಂಗ್ಸೋ?'', ಕೇಳಿದ ಸಿಂಗಣ್ಣ.

''ಗಂಡ್ಸೇ ಅನ್ಸುತ್ತೆ''.

ಜೀಪು ಸಿದ್ಧವಾಗಿ ಸಬ್ ಇನ್ಸ್‌ಪೆಕ್ಟರ್ ಅನಿಲ್, ಪೇದೆ, ಛಾಯಾಗ್ರಾಹಕ, ವೈದ್ಯರನ್ನು ಹೊತ್ತುಕೊಂಡು ಹೊರಟಿತು.

ನಗರದ ಸರಹದ್ದು. ಹೆಚ್ಚು ಜನಸಂಚಾರವಿರಲಿಲ್ಲ.

ಅಲ್ಲಲ್ಲೇ ಕುರಿಗಳ ಗುಂಪು. ಅನತಿದೂರದಲ್ಲಿ ಒಂದು ರಸ್ತೆ.

ಸಬ್ ಇನ್ಸ್‌ಪೆಕ್ಟರ್ ಅನಿಲ್ ಸ್ಥಳವನ್ನೊಮ್ಮೆ ಪರಿವೀಕ್ಷಿಸಿದ. ನಂತರ ಹೆಣವನ್ನೇ ದಿಟ್ಟಿಸಿದ.

ಕೈಕಾಲುಗಳನ್ನಿಟ್ಟಿದ್ದ ಗಂಡಸಿನ ಹೆಣ. ಮೈಮೇಲೆ ಬಟ್ಟೆ ಇದ್ದಂತಿರಲಿಲ್ಲ. ಕೊಲೆಯೇ? ಆತ್ಮಹತ್ಯೆಯೇ? ಅನಿಲ್ ಹಾಗೇ ಹೆಣವನ್ನು ನಿರುಕಿಸಿ ನೋಡಿದ. ಯಾವುದೇ ರೀತಿಯ ಕುರುಹುಗಳೂ ಕಾಣಿಸರಲಿಲ್ಲ.



ಸಾವಿನ ಸಮಯವನ್ನು ಹಿಂದಿನ ದಿನ ಮಧ್ಯಾಹ್ನವೆಂದು ವೈದ್ಯ ಹೇಳಿದ. ಚಿತ್ರಗಳನ್ನು ತೆಗೆದು, ದೇಹವನ್ನು ವ್ಯಾನಿಗೆ ಸಾಗಿಸುವಾಗ, ಹೆಣವನ್ನೇ ನೋಡುತ್ತಿದ್ದ ಅನಿಲ್‌ಗೆ ಕುತೂಹಲ, ಏನಾದರೂ ಸಾಕ್ಷ್ಯಾಧಾರಗಳು ಸಿಗಬಹುದೇನೋ ಎಂದು. ಅಲ್ಲೆಲ್ಲಾ ಹುಡುಕಾಡಿದ. ಪ್ರತಿದಿಕ್ಕಿನಲ್ಲೂ ಹೋದ. ಸುಮಾರು ನಾಲ್ಕು ಫರ್ಲಾಂಗ್ ದೂರದಲ್ಲಿ ಒಂದು ಕಡೆ ಒಂದಿಷ್ಟು ಬೂದಿ ಬಿದ್ದಿತ್ತು.

ಇದಕ್ಕೂ ಸುಟ್ಟ ಹೆಣಕ್ಕೂ ಏನಾದರೂ ಸಂಬಂಧವಿದೆಯೇ? ಅಲ್ಲಿಯೇ ಬಿದ್ದಿದ್ದ ಕಡ್ಡಿಯೊಂದರ ಸಹಾಯದಿಂದ ಬೂದಿಯನ್ನು ಕೆದಕಿದ. ಅವನ ಕಂಗಳು ಕಿರಿದಾದವು. ಬೂದಿಯ ಅಡಿಯಲ್ಲಿ ಅರೆಬರೆ ಸುಟ್ಟಿದ್ದ ಒಂದಿಂಚು ಚದರದ ಬಟ್ಟೆಯ ಚೂರು ಸಿಕ್ಕಿತ್ತು!

ವಿಚಿತ್ರವಾದ ಹಸಿರು, ಕಂದು ಬಣ್ಣದ ಬಟ್ಟೆ ಸೂರ್ಯನ ಬೆಳಕಿಗೆ ಹೊಳೆದಿತ್ತು. ಅದನ್ನು ಜೋಪಾನವಾಗಿ ಇಟ್ಟುಕೊಂಡು ವಾಪಸು ಬಂದ. ಬೈಕನ್ನು ಸ್ಟೇಷನ್ ಮುಂದೆ ಪಾರ್ಕ್ ಮಾಡಿ ಒಳಬಂದು ''ತಮ್ಮಯ್ಯಾ ಡಾಕ್ಟರು ರಿಪೋರ್ಟು ಕಳಿಸಿದ್ರಾ?'', ಕೇಳಿದ. ದಫೇದಾರ ತಮ್ಮಯ್ಯ ''ಇನ್ನೂ ಇಲ್ಲ ಸರ್'' ಎಂದ.

ಅನಿಲ್ ಆಲೋಚಿಸತೊಡಗಿದ.

ಗಂಡಸಿನ ಹೆಣ. ಈ ಏರಿಯಾದಲ್ಲಿ ಸುಟ್ಟಿದ್ದಾರೆ. ಆತ್ಮಹತ್ಯೆ ಇರಲಾರದು. ಮಲಗಿರುವ ಭಂಗಿಯಲ್ಲಿ ಸುಡಲ್ಪಟ್ಟಿದೆ ದೇಹ. ಜೀಂಕ್ರೆ ಯಾರೋ ಸುಟ್ಟಿದ್ದಾರೆ. ಕೈಕಾಲುಗಳು ಮೇಲೆದ್ದಿರುವುದನ್ನು ನೋಡಿದರೆ ಎದ್ದೇಳಲು ಯತ್ನಿಸಿರಬಹುದೇ? ತಲೆ ಗೊಂದಲಗಳ ಗೂಡಾಯಿತು.

ಡಾಕ್ಟರು ಬರುವವರೆಗೂ ನಾಲ್ಕೈದು ಲೋಟ ಕಾಫಿ ಗಂಟಲೊಳಗೆ ಇಳಿಸಿದ್ದ. ತುಂಬಾ ದಿನಗಳ ನಂತರ ಒಂದು ಸಾವಿನ ಘಟನೆ!

''ತಲೆ ಮೇಲೆ ಪೆಟ್ಟು ಹಾಕಿ...'' ಎಂದಾರಂಭಿಸಿದ ಡಾಕ್ಟರ್...

ತನ್ನ ಥಿಯರಿ ಕರೆಕ್ಟ್ ಎಂದುಕೊಳ್ಳದಿರದಾದ ಅನಿಲ್. ಮತ್ತೊಮ್ಮೆ ಹೆಣಸಿಕ್ಕಿದ ಸ್ಥಳಕ್ಕೆ ಹೋ ತಲೆಯಲ್ಲಿ ಡಾಕ್ಟರ್ ನೀಡಿದ ವರದಿ ಹೊರಳಿ

ಸುಮಾರು ಮೂವತ್ತೈದರ ಯುವಕ. ತ ಪೆಟ್ಟು ಬಿದ್ದ ನಂತರ ಸುಟ್ಟಿರುವ ಸಾಧ್ಯತೆಗಳಿ ಸಾಯುವ ಮುಂಚೆ ಸ್ವಲ್ಪ ಹೋರಾಟದ ಯತ್ನ ಇದೆ ಎಂದಿದ್ದರು ಡಾಕ್ಟರು...

ಬೈಕ್ ನಿಲ್ಲಿಸಿ ಹೆಣ ಬಿದ್ದಿದ್ದ ಜಾ ತಲುಪಿದ. ಈ ಸಲ ಮತ್ತಷ್ಟು ಪರೀಕ್ಷಾ ದೃ ಯೊಂದಿಗೆ ಅಲ್ಲೆಲ್ಲಾ ಹುಡುಕಾಡಿದ. ಸುಮಾ ದೂರ ಹೋದಾಗ ಕಾಣಿಸಿತ್ತು ಕಪ್ಪನೆ ಕಟ್ಟಿನಂತಹ ಬಟ್ಟೆಯ ಚೂರು. ಆಸಕ್ತಿಯಿಂ ಕೈಗೆತ್ತಿಕೊಂಡು ಪರೀಕ್ಷಿಸಿದ.

ನಗರದ ಹೆಸರಿನ ಕಡೆಯ ಭಾಗ, -2 ಎಂದು ಎರಡನೇ ಸಾಲಿನಲ್ಲಿದ್ದವು. ಮೇ ಇಂಗ್ಲಿಷಿನ LL ಎಂಬ ಅಕ್ಷರಗಳೂ ಇದ್ದವು.

ಓಹೋ! ಇದು ಷರಟಿನ ಕಾಲರ್‌ನ ಕೆಳ ಒಳಭಾಗದಲ್ಲಿ ಹೊಲಿಯಲ್ಪಡುವ ದರ್ಜಿ ಹೆಸರು ಹಾಗೂ ವಿಳಾಸ! ಇದು ಈ ಕೇಸಿ ಸಂಬಂಧಿಸಿದ್ದೇ? ಹೊಂಗೆಯ ಮರದ ನೆರಳ ನಿಂತು ಕುತ್ತಿಗೆಯ ಹಿಂಭಾಗ ಉಜ್ಜಿಕೊಂಡ.

ಆಗ ಕಂಡಿತ್ತು ಒಂದು ಚಿಕ್ಕದಾರ! ಅದ ಬೂದಿಯಲ್ಲಿ ಸಿಕ್ಕ ಒಂದಿಂಚು ಚದರದ ಬಟ್ಟೆಯ ದಾರ! ಯಾರಿಗೂ ತಿಳಿಯದೇ ಹೀಗೆ ಯಾ ನ್ನಾದರೂ ಸುಡಲು ಇಲ್ಲಿ ಸಾಧ್ಯವೇ? ಎಂದ ಲೋಚಿಸುತ್ತಾ ಸುತ್ತಲೂ ನೋಡಿದ. ಅವನ ನಿಂತಿದ್ದ ಸ್ಥಳದಿಂದ ಸುಮಾರು ಮೂರ ಫರ್ಲಾಂಗ್‌ಗಳ ಆಚೆ ಕುರಿಮಂದೆ ಕಾಣಿಸಿತ್ತು.

ಅತ್ತಕಡೆ ನಡೆದುಹೋದ. ಕುರಿಮಂದ ಯಿದ್ದ ಮೇಲೆ ಕುರಿ ಕಾಯುವಾತನೂ ಇರಬೇಕ ಎಂದುಕೊಳ್ಳುತ್ತಾ ಕುರಿಗಳಿದ್ದೆಡೆಗೆ ಹೋದಾ ಅಲ್ಲಿ ಯಾರೂ ಇರಲಿಲ್ಲ. ''ಅರೆ! ಇದೇನು ಯಾರೂ ಇಲ್ಲವಲ್ಲಾ?'' ಎಂದು ಗಟ್ಟ ಯಾಗಿಯೇ ಉದ್ಗರಿಸುತ್ತಾ ಅಲ್ಲಿ ಓಡುತ್ತಿ ಮುದ್ದಾದ ಕುರಿಮರಿಯನ್ನು ಕೈಗೆತ್ತಿಕೊಂಡ.

"ಅಯ್ಯಯ್ಯೋ, ಪೊಲೀಸ್ ಇನ್ಸ್‌ಪೆಕ್ಟರೇ ಕಳ್ತನ ಮಾಡ್ತಿದ್ದಾರೆ!" ಎಂದಿತ್ತು ಕೀರಲು ದನಿಯೊಂದು.

ಬೆಚ್ಚಿ ಮರಿಯನ್ನು ಕೆಳಗೆ ಬಿಟ್ಟ.

ಚೂಟಿಯಾದ ಆ ಹುಡುಗ ಅನಿಲ್ ಕಣ್ಣಿಗೆ ಬಿದ್ದ.

ಖಾಕಿ ಸಮವಸ್ತ್ರದ ಪೊಲೀಸರನ್ನು ನೋಡಿದರೆ ದೊಡ್ಡವರೇ ಸ್ವಲ್ಪ ಹೆದರುತ್ತಾರೆ. ಈ ಹುಡುಗನಿಗೆ ಭಯವೇ ಇಲ್ಲವಲ್ಲಾ!

"ಏನ್ಮರೀ, ನಿನ್ನ ಹೆಸರು?"

"ಬೀರ ಸಾರ್!"

"ಏನ್ಮಾಡ್ತಿದ್ದೀ ಬೀರಾ?"

"ನಿಮ್ಹತ್ರ ಮಾತಾಡ್ತಿದೀನಿ" ಎಂದು ತುಂಟ ನಗೆ ನಕ್ಕ ಬೀರ.

"ಓ ನೀನು ತುಂಬಾ ಜಾಣ, ಏನೋದಿದ್ದೀ?" ಎಂದ.

"ಐದನೇ ಕ್ಲಾಸು."

"ಈಗ ಕ್ಲಾಸಿಗೆ ಹೋಗಲ್ವಾ?"

"ಊಹೂಂ."

"ಯಾಕೆ? ಓದೋಕ್ಕೆ ಇಷ್ಟ ಇಲ್ವಾ?"

"ಇಷ್ಟ. ಆದ್ರೆ, ಈಗ ಸ್ಕೂಲಿಗೆ ನನ್ನನ್ನ ಸೇರಿಸೋಲ್ಲ"

"ಯಾಕೆ? ಏನಾದ್ರೂ ತಪ್ಪು ಮಾಡಿದ್ಯಾ?"

"ಅಲ್ಲ ಸಾರ್! ಈಗ ಬೇಸಿಗೆ ರಜಾ ಅಲ್ವಾ?"

"ಓಹ್!" ಗಹಗಹಿಸಿ ನಕ್ಕ ಅನಿಲ್. ಬೀರನ ಬೆನ್ನು ನೇವರಿಸಿ ಕೇಳಿದ. "ನೀನು ದಿನಾ ಇದೇ ಜಾಗಕ್ಕೆ ಬರ್ತೀಯಾ?".

"ಹೂಂ. ಬೆಳಗೆ ಹತ್ಗಂಟೇಗೆ ಬಂದ್ರೆ, ಸಂಜೆ ಆರ್ಗಂಟೇಗೆ ಹೋಗ್ತೀನಿ"

"ಇತ್ತೀಚೆಗೆ ಇಲ್ಲಿ ಏನಾದ್ರೂ ವಿಶೇಷ ಕಂಡೆಯಾ?"

"ಏನಿದೆ ಸಾರ್ ಇಲ್ಲಿ? ಮೊದ್ಲೇ ತುಂಬಾ ಬಿಸಿಲು"

"ಹೋಗ್ಲಿ, ಏನಾದ್ರೂ ಕೇಳಿಸ್ತಾ?"

"ಇಲ್ಲಿ ಹಕ್ಕಿ, ಪ್ರಾಣಿ ಏನೂ ಬರಲ್ಲ."

ಅನಿಲ್ ಇಲ್ಲಿ ಮತ್ತೇನೂ ಕೆಲಸವಿಲ್ಲವೆಂಬಂತೆ ಹೊರಡುತ್ತಿದ್ದಾಗ, "ಹ್ಞಾಂ! ಅವತ್ತು ಮಾತ್ರ ಏನೋ ವಿಚಿತ್ರ ಶಬ್ದ ಕೇಳಿಸ್ತು" ಎಂದು ಬೀರ ಹೇಳಿದ್ದು ಕೇಳಿ ಟಕ್ಕನೆ ನಿಂತ.

ಇದು ಆ ಹತ್ಯೆಗೆ ಸಂಬಂಧಿಸಿರಬಹುದೇ?

"ಏನು ಶಬ್ದ ಬೀರಾ?", ಮೃದುವಾಗಿ ಕೇಳಿದ.

"ಯಾರೋ ಕೂಗಿಕೊಂಡ್ರು,, ಯಾವ್ದೋ ಪ್ರಾಣಿ ಕೂಗಿದ ಹಾಗೆ"

"ಹೇಗಿತ್ತು ಆ ಶಬ್ದ?", ಆಸೆಯಿಂದ ಕೇಳಿದ.

"ಯಾವ್ದೋ ಇಂಗ್ಲಿಷ್ ಅಕ್ಷರದ ಹಾಗಿತ್ತು" ಎಂದ ಬೀರ. ನಂತರ ಎಷ್ಟು ಯತ್ನಿಸಿದರೂ ಅವನಿಗೆ ಬೇರೇನೂ ನೆನಪಿಗೆ ಬರಲಿಲ್ಲ.

"ಆಗ ನೀನು ಆ ಕಡೆ ಹೋಗಲಿಲ್ವಾ?", ಕೇಳಿದ ಅನಿಲ್.

"ಊಹೂಂ. ತಾತ ಹೇಳಿದ್ದಾರೆ, ಕುರಿಗಳ್ನ ಬಿಟ್ಟು ಹೋಗಬಾರ್ದೂಂತ."

ಇಂಗ್ಲಿಷ್ ಅಕ್ಷರ?

ಇದೆಂಥಾ ವಿಚಿತ್ರ ಕ್ಲೂ?

"ಸಾರ್, ಸಿಟಿ ಟೆಲಿಫೋನ್ ಡೈರೆಕ್ಟರೀಲಿ ಪಿನ್‌ಕೋಡ್ 28, ಅಂದ್ರೆ ಜೀವನಪುರದಲ್ಲಿ ಸುಮಾರು ನಲವತ್ತು ಟೈಲರ್‌ಗಳಿದ್ದಾರೆ" ಎಂದ ರೈಟರ್ ಸಿಂಗಣ್ಣ.

"ಸರಿ ಮೂರು ಜನ ಕಾನ್‌ಸ್ಟೇಬಲ್‌ಗಳನ್ನ ಕಳಿಸು. ಮೊದ್ಲು ಆ ಬಟ್ಟೆ ಥರದ್ದು ಅರ್ಧ ಮೀಟರ್ ಬಟ್ಟೆ ತರಿಸು", ಅನಿಲ್ ಆಣತಿ ಇತ್ತ.

ಶೋಧ ಆರಂಭವಾಯಿತು.

ಎಲ್ಲೆಡೆಯೂ ನಿರಾಸೆಯೇ!

ಬೇಸರದಿಂದ ಠಾಣೆಯಲ್ಲಿ ಕುಳಿತು ಟೀ ಹೀರುತ್ತಿದ್ದ. ಪೇದೆಯೊಬ್ಬ ಯಾರ ಮೇಲೋ ಕೂಗಾಡುತ್ತಿದ್ದ.

"ಆ ಪೇದೇನ ಕರಿ" ಎಂದ ಅನಿಲ್.



ಆ ಪೇದೆಯ ಹಿಂದೆಯೇ ಬಂದಿದ್ದು ಒಬ್ಬ ಪೋಸ್ಟ್‌ಮನ್.

ಅನಿಲ್ ಪೇದೆಯನ್ನು ಗದರಿದಾಗ, ಆ ಪೇದೆಯ ಮನೆಗೆ ಪತ್ರಗಳು ತಲುಪುತ್ತಿಲ್ಲ, ಅದಕ್ಕಾಗಿ ಪೋಸ್ಟ್‌ಮನ್ ಜತೆ ಜಗಳ ಕಾಯುತ್ತಿದ್ದಾನೆ ಎನ್ನುವ ವಿಷಯ ತಿಳಿದುಬಂತು.

ಆ ಅಂಚೆ ಇಲಾಖೆಯಾತ, 'ಪಿನ್‌ಕೋಡ್ ಸರಿ ಇಲ್ಲದಿದ್ರೆ ಕಾಗದ ಹೇಗೆ ತಲುಪಿಸೋದು?' ಎಂದಾಗ, ಅನಿಲ್‌ಗೆ ಮಿಂಚು ತಾಕಿದಂತಾಯ್ತು.

ಪೋಸ್ಟ್‌ಮನ್ ಸಹಾಯದಿಂದ ಕಡೆಗೂ ಟೈಲರಿಂಗ್ ಹಾಲ್ ಕಂಡುಹಿಡಿದು ಹೋದಾಗ ಆ ಅಂಗಡಿಯ ಮಾಲಿಕ ಮಹೇಂದ್ರ, 'ನಮಸ್ಕಾರ ಸಾರ್' ಎಂದ.

ಅನಿಲ್ ನೀಡಿದ ಬಟ್ಟೆ ಚೂರನ್ನು ನೋಡಿ, ತನ್ನ ಪುಸ್ತಕಗಳನ್ನು ಪರಿಶೀಲಿಸಿ ವಿಳಾಸ ಪತ್ತೆ
ಮಾಡಿದ. ಅಲ್ಲಿಯೇ ಇದ್ದ ಮತ್ತೊಬ್ಬ ಸಹಾಯ
ದರ್ಜಿ ನಟೇಶ, 'ಈ ಷರ್ಟು ನನ್ನ ಕಜಿ
ಸುಧೀರನದು' ಎಂದು ಹೇಳಿದಾಗ ಅವನ
ಸುಧೀರನ ಮನೆಗೆ ಕರೆದುಕೊಂಡು ಹೊರಟ ಅನಿ

ಮನಸ್ಸಿನಲ್ಲಿ ಅನುಮಾನದ ಕಿಡಿಗಳು ಭ
ಲೇಳುತ್ತಿದ್ದವು. ಕೇವಲ ಷರಟಿನ ಚೂರಿನಿಂ
ಮನುಷ್ಯ ಸಿಗುವನೇ? ಒಂದು ವೇಳೆ ಅ
ಸುಧೀರ ಶವವೇ ಆಗಿದ್ದರೆ ಕೊಲೆ ಮಾಡಿ
ಯಾರು?

''ಇದೇ ಸಾರ್ ಮನೆ'', ನಟೇಶನ ಮಾ
ನಿಂದ ಎಚ್ಚರಗೊಂಡು ಮನೆಯತ್ತ ನೋಡಿ
ಅನಿಲ್. ಮಧ್ಯಮವರ್ಗದ ಮನೆ.

ಒಳಗಿನಿಂದ ಗಟ್ಟದನಿಯ ವಾಕ್ಯಗಳು ಕೇಳಿ
ದವು. ''ಇಲ್ಲ ಸ್ವಾಮ್ಯಾರಾ? ನಾನ್ಯಾಕೆ ಸುಳ್ಳೇಳ್ಳ
ನಿಮ್ಮನೆ ಉಪ್ಪ ನಮ್ಮ ತಾತನ ಕಾಲದಿಂ
ತಿಂದಿದೀವಿ''. ಯಾರೋ ಬೇಡಿದಂತಿತ್ತು.

''ಹ್ಞುಂ! ಉಪ್ಪು!? ಹಣ ಅನ್ನೋ
ಈಗಿನ್ಕಾಲದಲ್ಲಿ ಮನುಷ್ಯತ್ವಾನೇ ಇಲ್ಲದಂ
ಮಾಡ್ಬಿಡತ್ತೆ. ಸರಿ ಹೋಗು. ಅಪ್ಪು ಬರ
ವಿಚಾರಿಸಿ ಆಮೇಲೆ ಊರಿಗೆ ಬರ್ತೀನಿ'' ಎಂದಿ
ಮತ್ತೊಂದು ಗಂಡಸಿನ ಸ್ವರ.

ಅನಿಲ್, ನಟೇಶ ಒಳಹೋಗುತ್ತಿದ್ದಂ
ಕಟ್ಟುಮಸ್ತಾದ ಹಳ್ಳಿ ಯುವಕನೊಬ್ಬ ಹೊರ
ಹೊರಟುಹೋದ.

''ಯಾರು? ಓ ನಟೀ? ಹೇಗಿದ್ದಾನೋ
ನಿಮ್ಮಪ್ಪ? ನೋಡಿ ತುಂಬಾ ದಿನ ಆಯ್ತು
ಎಂದಿದ್ದರು ಅಲ್ಲಿದ್ದ ಅರವತ್ತರ ವಯಸ್ಕ.

''ಚೆನ್ನಾಗಿದ್ದಾರೆ ದೊಡ್ಡಪ್ಪ. ನಿಮ್ಮ
ನೋಡೋಕ್ಕೆ ಈ ಭಾನ್ವಾರ ಬರ್ತಾರಂತೆ'' ಎಂದ
ಉತ್ತರಿಸಿ, ''ದೊಡ್ಡಪ್ಪ ಇವ್ರು ಸುಧೀರನ ವಿಷ
ಕೇಳೋಕ್ಕೆ ಬಂದಿದ್ದಾರೆ'' ಎಂದ ಅನಿಲ್‌ನನ
ಪರಿಚಯಿಸಿ.

''ಏನ್ಸಾರ್? ನಮ್ಮ ಸುಧೀರ ನಿಮ್ಮ ಸ್ಟೇಷನ್ನಿನ
ದ್ದಾನಾ?'', ಆತಂಕವಿತ್ತು ಆ ವಯಸ್ಕನ ಧ್ವನಿಯಲ್ಲಿ

''ಯಾಕೆ? ನಿಮ್ಹುಡುಗ ಯಾವಾಗ್ಲೂ ಸ್ಟೇಷನ್‌ಗೆ ಹೋಗ್ತಿರ್ತಾನಾ?'' ಕಿರುನಗೆ ಬೀರಿದ ಅನಿಲ್. ''ಛೇ ಛೇ! ಹಾಗಲ್ಲ. ನೀವು ಬಂದಿರೋದ್ರಿಂದ ಹಾಗೆ ಕೇಳ್ದೆ'' ಎಂದು ಹೇಳಿ, ''ಕೂತ್ಕೊಳ್ಳಿ'' ಎಂದರು.

''ನಿಮ್ಮ ಮಗನ್ನ ಕರೀತೀರಾ? ಮಾತಾಡ್ಬೇಕಿತ್ತು'', ಅನಿಲ್ ಕೇಳಿದಕ್ಕೆ, ''ಅವ್ನು ಊರ್ಗೆ ಹೋಗಿದಾನೆ'' ಎಂದರಾತ.

ಆ ತಂದೆಗೆ ಮಗ ಎಲ್ಲಿದ್ದಾನೆಂದು ತಿಳಿದುಕೊಳ್ಳುವ ಆಸಕ್ತಿ ಇಲ್ಲವೆಂದು ಅನಿಲ್‌ಗೆ ಅನ್ನಿಸಿತು. ಯಾವಾಗೆಂದರೆ ಆಗ ಸುಧೀರ ಮನೆಯಿಂದ ಹೊರಟುಬಿಡುತ್ತಿದ್ದ.

''ಬೆಳೆದ ಹುಡುಗ... ಯಾವ ಕೆಟ್ಟ ಚಟವೂ ಇಲ್ಲ... ಆ ಹಾಳು ಸಿನಿಮಾ ಚಟ್ರ'' ಎಂದರು. ಆತನ ಮಾತಿಗೆ ಪುಷ್ಟಿ ಎಂಬಂತೆ ಸಿನಿಮಾ ನಟನೊಬ್ಬನ ಅನುಕರಣೆ ಮಾಡಿದ್ದ ಸುಧೀರನ ದೊಡ್ಡ ಫೋಟೋ ಹಾಲ್‌ನ ಗೋಡೆ ಅಲಂಕರಿಸಿತ್ತು.

''ಅಂದ್ರೆ ಸಿನಿಮಾ ನೋಡೋದಾ?'' ಎಂದು ಅನಿಲ್ ಕೇಳಿದಾಗ, ''ಊಹೂಂ... ಹೂಂ... ಹೂಂ...'' ಎಂದು ಮೊದಲು ತಲೆಯನ್ನು ಅಡ್ಡಡ್ಡಲಾಗಿ, ನಂತರ ಉದ್ದುದ್ದ ಆಡಿಸಿ ಕುತೂಹಲ ಹೆಚ್ಚಿಸಿದರು.

''ಬಂದ್ಮೇಲೆ ಸ್ಟೇಷನ್‌ಗೆ ಕಳಿಸಿ'' ಎಂದು ಹೊರಟವನು, ''ಒಮ್ಮೆ ನಿಮ್ಮ ಮಗನ ರೂಂ ನೋಡ್ಬೋದಾ?'' ಎಂದ.

''ನೋಡಿ'' ಎಂದರು ಸುಧೀರನ ತಂದೆ.

ರೂಮಿನ ತುಂಬಾ ಸುಧೀರನ ದೊಡ್ಡ ಸೈಜಿನ ಫೋಟೋಗಳು, ಸಿನಿಮಾ ನಟರಂತೆ, ಸಿನಿಮಾ ನಾಯಕರೊಂದಿಗೆ. ಅಲ್ಲಿದ್ದ ಟೇಬಲ್‌ನ ಡ್ರಾದಲ್ಲಿ ಸಿನಿಮಾಗಳ ಪ್ರಕಟಣೆಗಳು. ವಿಶೇಷವೆಂದರೆ ಸುಮಾರು ಪ್ರಕಟಣೆಗಳಲ್ಲಿ ನಿರ್ಮಾಪಕನೇ ನಾಯಕನಾಗಿದ್ದುದು.

ಅನಿಲ್ ಮತ್ತೆ ಸುಧೀರನ ತಂದೆಯನ್ನು ''ನಾನು ನಿಮ್ಮ ಮಗನ ಖಾಸಾ ಸ್ನೇಹಿತರನ್ನು ಭೇಟಿಯಾಗಬೇಕು'' ಎಂದು ಕೇಳಿದವನು ''ಸಾಧ್ಯವಾದರೆ ಇವತ್ತೇ'' ಎಂದ.

''ಸುಧೀರನಿಗೆ ತುಂಬಾ ಜನ ಗೆಳೆಯರಿದ್ದಾರೆ. ಆದ್ರೆ ಚಂದ್ರ, ಮಾತ್ರ, ದಿನಾ ಬಂದು ಸುಧೀರ ಬಂದ್ನಾ ಅಂತ ಕೇಳ್ತಿರ್ತಾನೆ'' ಎನ್ನುತ್ತಿದ್ದಂತೆ ಅಲ್ಲಿಗೆ, ''ಸುಧೀ'' ಎನ್ನುತ್ತಾ ಒಳ ಬಂದ ಯುವಕನೊಬ್ಬ. ನಟೇಶನನ್ನು ನೋಡಿ ಅವನು ತುಟಿಸೊಟ್ಟ ಮಾಡಿದ್ದು ಅನಿಲ್ ಕಣ್ಣಿಗೆ ಬಿತ್ತು.

''ಇದೋ... ಇವನೇ ಚಂದ್ರ'' ಎಂದು ಹೇಳಿ, ''ಇವ್ರು, ನಿನ್ನ ನೋಡ್ಬೇಕಂತೆ'' ಎಂದಾಗ ''ನನ್ನನ್ನಾ?'' ಎಂದ ಸಾಧಾರಣ ಮೈಕಟ್ಟಿನ, ಸಾಮಾನ್ಯ ಮುಖದ ಚಂದ್ರ. ನೂರಾರು ಜನರ ನಡುವೆ ಕಳೆದುಹೋಗುವ ವ್ಯಕ್ತಿತ್ವ. ಸಿನಿಮಾ ತೆಗೆಯೋ 'ರಾಜೇಶ್ವರಿ ಸ್ಟುಡಿಯೋ'ದಲ್ಲಿ ಲೈಟ್‌ಬಾಯ್ ಆಗಿದ್ದ ಚಂದ್ರ, ಅನಿಲ್‌ನ ಪ್ರಶ್ನೆಗಳಿಗೆ ಮಾಮೂಲಾಗಿಯೇ ಉತ್ತರಿಸಿದ.

''20ನೇ ತಾರೀಕು ಎಲ್ಲಿದ್ದಿ?'' ಎಂದ ಅನಿಲ್. ಅದು ಹೆಣ ಸಿಕ್ಕಿದ ಹಿಂದಿನ ದಿನ.

''ಗೊಲ್ಲಹಳ್ಳಿ.... ನಮ್ಮೂರು ಗೊಲ್ಲಹಳ್ಳಿ ಜಾತ್ರೆಗೆ ಹೋಗಿದ್ದೆ.'' ಎಂದ. ಅವನನ್ನು ಮರುದಿನ ಸ್ಟೇಷನ್‌ಗೆ ಬರಹೇಳಿದ ಅನಿಲ್. ಅವನು ಹೋದಮೇಲೆ ನಟೇಶ, ಸುಧೀರ, ಚಂದ್ರ ಸಹಪಾಠಿಗಳೆಂದು ತಿಳಿಯಿತು.

''ಬಲೇ ಶೋಕಿ ಮಾಡ್ತಿದ್ದ. ತಂದೆ, ತಾಯಿಗೆ ತಿಳಿಯದ ಹಾಗೆ ಕಳ್ತನ ಮಾಡ್ತಿದ್ದ. ನಮ್ಗೊಂದೆ ಕೊಟ್ರು ಅಂತಿದ್ದ. ಆದ್ರೆ ಸಾಹುಕಾರ್ರೇನಲ್ಲ ಅವ್ರು.''

ಅನಿಲ್‌ಗೆ ಈಗ ಹೊಸ ಯೋಚನೆ ಉಂಟಾಯಿತು. ಸುಧೀರ ಸುಟ್ಟು ಹೋಗುವವರೆಗೂ ಸುಮ್ಮನಿರಬೇಕಾದರೆ ಯಾರೋ ತಿಳಿದವರೇ ಬೆಂಕಿ ಹಚ್ಚಿರಬೇಕು.

ಕಾರಣ ಏನಿರಬಹುದು? ಹಣದಾಸೆ?

ನಟೇಶನ ಮಾತು ಆ ವಿಷಯದತ್ತಲೇ

ಜೊಟ್ಟು ಮಾಡುತ್ತಿದೆ. ಚಂದ್ರ ಸಿನಿಮಾ ಸ್ಟುಡಿಯೋದಲ್ಲಿ ಕೆಲಸ ಮಾಡ್ತಾನೆ. ಸುಧೀರನಿಗೆ ಸಿನಿಮಾ ಹುಚ್ಚು. ಚಂದ್ರನೇ ಯಾಕೆ ಸುಧೀರನನ್ನು ಕೊಲೆ ಮಾಡಿರಬಾರದು?

ಯಾಕೆ ಮಾಡುತ್ತಾನೆ? ದುಡ್ಡಿಗಾಗಿ? ಹೊಟ್ಟೆಯುರಿಯಿಂದ?

ಕಾರಣ ಯಾವುದಾದರೂ ಇರಬಹುದು.

ಈ ಕೇಸಿನಲ್ಲಿ ಚಂದ್ರನೇ ಪ್ರಥಮ ಅನುಮಾನಿತನಾಗುತ್ತಾನೆ. ಅವಕಾಶ ಹಾಗೂ ಕಾರಣ- ಎರಡೂ ಅವನಿಗೆ ಇವೆ.

ದಿನಾ ಬಂದು ವಿಚಾರಿಸುತ್ತಿದ್ದಾನೆ ಎಂದಿದ್ದರು ಸುಧೀರನ ತಂದೆ. ಯಾಕೆ?

ನಟೇಶನನ್ನು ಟೈಲರ್ ಅಂಗಡಿಯಲ್ಲಿ ಬಿಟ್ಟು ಬಸ್‌ಸ್ಟಾಂಡ್ ಕಡೆ ಬಂದ ಅನಿಲ್, ಅಯಾಚಿತವಾಗಿ ಬಸ್‌ಸ್ಟಾಪ್‌ನತ್ತ ನೋಡಿದ. ಅಲ್ಲಿ ನಿಂತಿದ್ದ ಹಳ್ಳಿ ಯುವಕ ಅವನ ಕಣ್ಣಿಗೆ ಬಿದ್ದ.

ಅರೆ! ಈ ಯುವಕ ಸುಧೀರನ ಮನೆಗೆ ಬಂದಿದ್ದವನಲ್ಲವೇ? ಗಾಡಿ ನಿಲ್ಲಿಸಿ ''ಇಲ್ಲಿ ಬಾ'' ಎಂದು ಸನ್ನೆ ಮಾಡಿದ. ಆ ಯುವಕ ಓಡಿ ಬಂದ.

''ಏನು ನಿನ್ನ ಹೆಸರು?''

''ಕಿಟ್ಟ ಸಾರ್''.

''ಇವತ್ತು ನೀನು ಸುಧೀರ್ ಮನೆಗೆ ಬಂದಿದ್ದೆ ಅಲ್ವಾ?''

''ಹೌದು ಸಾರ್. ಅವರ ತೋಟಾನ ನಾನೇ ನೋಡ್ಕೊಳ್ಳಾದು'' ಎಂದ ಕಿಟ್ಟ.

''ನಿನ್ನನ್ನ ಒಂದು ವಿಷಯ ಕೇಳ್ತೀನಿ. ನಿಜ ಹೇಳ್ಬೇಕು'' ಎಂದ ಅನಿಲ್ ಗಂಭೀರವಾಗಿ.

ಕಿಟ್ಟ ಗಾಬರಿಯಾದ. ''ಸಂದೇನೂ ತಪ್ಪಿಲ್ಲ ಸಾರ್. ನಾನು ಗೊಲ್ಲಳ್ಳಿ ಜಾತ್ರೆಗೆ ಒಗ್ಬುಟ್ಟಿದ್ದೆ. ನನ್ನೆಂಡ್ರಿಗೆ ಗೊತ್ತಾಗಿಲ್ಲ. ತಪ್ಪು ಮಾಡ್ಬುಟ್ಟೆ'' ಎಂದ ಚಿಂತಿತ ಸ್ವರದಲ್ಲಿ.

''ನಂಜೊತೆ ನಡಿ'' ಎಂದು ಬೈಕ್ ಸ್ಟಾರ್ಟ್ ಮಾಡಿದ. ಕಿಟ್ಟ ನಡುಗುತ್ತಾ ಬೈಕ್ ಏರಿದ.

''ಈಗ ಸರಿಯಾಗಿ ಹೇಳು ಏನಾಯ್ತೂಂತ'', ಹಣೆ ತಲುಪಿ, ತನ್ನ ಸೀಟಿನಲ್ಲಿ ಕೂ
ಎದುರಿಗೆ ಕಿಟ್ಟನನ್ನು ಕೂರ ಹೇಳಿ, ಕೇಳಿದ ಅನಿ

''ಸುಧೀರಪ್ನೋರ ತಂದೇವ್ರೇ ಯಾವಾ
ಪಸಲಿನ ದುಡ್ಡು ತಗೊಂಡೋಗೋರು. ಈ ಸ
ನಮ್ಮ ಪಕ್ಕದೂರ ಪಟೇಲ್ರು ಬತ್ತ ಕೊಂಡ್ಕೊ
ಕಾಸು ಕೊಟ್ರು. ನಾನು ಜಾತ್ರೆ ಮುಗಿಸಿಬ
ಊರ್ಗೋಗಿ ಕೊಟ್ಬುಡಾಣಾಂತ ಮಡಗಿ
ನನ್ನೆಂಡ್ರು ಸುದೀರಪ್ನೋರಿಗೆ ಕೊಟ್ಬುಟ್ಟವ್ಳೆ''

''ಅದ್ರಲ್ಲೇನ್ತಪ್ಪ?'', ಕೇಳಿದ ಅನಿಲ್.

''ದೊಡ್ಡ ಸ್ವಾಮ್ಯೇರು ಬೇರೇ
ಕೊಡೂಂತ ಏಳಿಲ್ಲ. ಇವ್ಳಿಗೆ ತಿಳೀ
ಕೊಟ್ಬುಟ್ಳು'', ದೂರಿದಂತೆ ಅಂದ.

''ಎಷ್ಟು ಹಣ?''

''ಅರುವತ್ತು ಸಾವ್ರ ಬುದ್ದೀ. ಆಳ
ಗೊಲ್ಲಳ್ಳಿ ತೇರಿಲ್ದೇ ಓಗಿದ್ರೆ....'' ಎಂದು ತ
ಗಟ್ಟಿಯಾಗಿ ಗೊಣಗಿಕೊಂಡ.

''ಅನಿಲ್‌ನ ಕಿವಿಗಳು ನಿಮಿರಿ
ಮೆದುಳು ಚುರುಕಾಯಿತು.''

''ಯಾವೂರೂಂದೆ?'', ಕೇಳಿದ ಕಾತರದಿ

''ಗೊಲ್ಲಳ್ಳಿ ಸಾರ್ ಅಲ್ಲಿ ನಮ್ಮನೆ ಐತೆ ಸ
ಮಾರಮ್ಮಂಗೆ ಪೂಜೆ ಮಾಡ್ದೇ ಇರಾಕಿಲ್ಲ 
ಜಾತ್ರೆ ದಿನ''

''ನಿಂಗೆ ಚಂದ್ರ ಗೊತ್ತಾ? ಅದೇ ಸುಧಿ
ಸ್ನೇಹಿತ?''

''ಗೊತ್ತು'' ಎಂದು ಮುಖ ಸಿಂಡರಿಸಿದ

''ಯಾಕೆ ಹಾಗೆ ಮುಖ ಮಾಡ್ದೆ?''

''ಆಯಪ್ಪನ ಸಾವಾಸದಿಂದ್ಲೇ ಸುದಿ
ಆಳಾಗಿರೋದು'' ಮುಖ ಹುಳ್ಳಗೆ ಮಾಡಿದ

''ಹೋಗ್ಲಿ ಬಿಡು ಈ ಸಲದ ಜಾತ್ರೆ ವಿ
ಹೇಳು'' ಎಂದ.

ಕಿಟ್ಟ ಈಗ ನಿರಾಳವಾಗಿ ಜಾ
ವೈಶಿಷ್ಟ್ಯಗಳನ್ನು ವಿವರಿಸಿದ. ಅವನು ಹ
ಮೇಲೆ ಅನಿಲ್ ಮತ್ತೊಮ್ಮೆ ಹೆಣ ಸಿಕ್ಕಿದ ಜ
ಬಂದ.

"ಏನ್ಸಾರ್? ಮತ್ತೆ ಬಂದ್ರಿ?" ಧ್ವನಿ ಕೇಳಿ ತಿರುಗಿದ.

ಬೀರ ನಗುತ್ತಾ ನಿಂತಿದ್ದ.

"ಬರಬಾರ್ದಿತ್ತಾ? ನಿನ್ನ ಸ್ವಂತ ಜಾಗಾನಾ ಇದು?", ಅನಿಲ್ ಛೇಡಿಸಿದ.

"ಹಾಗಲ್ಲ. ನಂಗೂ ನಿಮ್ಮನ್ನನೋಡ್ಬೇಕೂ ಅನ್ನಿಸ್ತು"

"ಅದ್ಯಾಕಪ್ಪ?" ಕೇಳಿದ ಅನಿಲ್.

"ನಂಗೆ ಆ ಅಕ್ಷರ ಜ್ಞಾಪಕ ಬಂತು. ಇಂಗ್ಲೀಷ್ ಅಕ್ಷರ..." ಸರಕ್ಕನೆ ತಲೆ ಎತ್ತಿದ ಅನಿಲ್‌ಗೆ ಆ ಹುಡುಗ ತನ್ನ ಎರಡು ಬೆರಳೆತ್ತಿ ಸನ್ನೆ ಮಾಡಿ ಹೊರಟುಹೋದ.

ಅನಿಲ್ ಈಗ ಟೈಲರಿಂಗ್ ಹಾಲ್‌ಗೆ ಗಾಡಿ ಓಡಿಸಿದ. ಅಲ್ಲಿ ನಟೇಶನನ್ನು ಕೆಲವು ಪ್ರಶ್ನೆ ಕೇಳಿ, ಅವನ ಉತ್ತರಗಳಿಂದ ತೃಪ್ತನಾಗಿ ಮನೆ ಸೇರಿದ.

ಕೊಲೆಯ ಚಿತ್ರದ ಚೂರುಗಳೆಲ್ಲಾ ಸೇರಿ ಈಗ ಪೂರ್ಣರೂಪ ಬಂದಿತ್ತು!

ಚಂದ್ರ ಹೇಳಿದ ಸಮಯಕ್ಕೆ ಮುಂಚೆಯೇ ಬಂದ.

"ಕೂತ್ಕೋ" ಎಂದು ಹೇಳಿ, "ನೀನು 20ನೇ ತಾರೀಕು ಎಲ್ಲಿದ್ದೇಂದೆ?" ಎಂದ ಏಕವಚನದಲ್ಲಿ.

ಚಂದ್ರ ಅದನ್ನು ಗಮನಿಸಿದರೂ ಸ್ವಲ್ಪವೂ ಅಳುಕದೇ, "ಅದೇ, ಗೊಲ್ಲಳ್ಳಿ ತೇರಿಗೆ ಹೋಗಿದ್ದೆ ಅಂದಿದ್ನಲ್ಲಾ" ಎಂದ.

"ಗುಂಪಲ್ಲಿದ್ದೇಂದ್ರೆ ಅನುಕೂಲ ಅಲ್ವಾ?", ಅವನನ್ನು ತೀಕ್ಷ್ಣವಾಗಿ ನೋಡಿ, "ಏನು ವಿಶೇಷ ಈ ಸಲ ಗೊಲ್ಲಳ್ಳಿ ಜಾತ್ರೇಲಿ?" ಎಂದು ಕೇಳಿದ ಅನಿಲ್.

"ಇನ್ನೇನಿರತ್ತೆ? ಕೋಣ ಬಲಿ ಕೊಟ್ರು." ಎಂದ ಚಂದ್ರ, ಧೋರಣೆಯಿಂದ.

"ನಿಜವಾಗ್ಲೂ?"

"ಯಾಕ್ಸಾರ್? ಅನುಮಾನ ಯಾಕೆ?", ಕೇಳಿದ ಚಂದ್ರ.

"ನಿನಗೊಂದು ಕತೆ ಹೇಳ್ತೀನಿ" ಎಂದ ಅನಿಲ್ ಹಠಾತ್ತನೆ.

"ಇಬ್ರು ಗೆಳೆಯರಿರ್ತಾರೆ. ತುಂಬಾ ವರ್ಷಗಳಿಂದ ಪರಿಚಿತರು. ರಾಮು ಸ್ವಲ್ಪ ಲಕ್ಷಣವಾಗಿದ್ದಾನೆ. ಸಿನಿಮಾ ನಟನಾಗೋ ಆಸೆ. ಮತ್ತೊಬ್ಬ ಶ್ಯಾಮೂಗೆ ಸಿನಿಮಾದವರ ಪರಿಚಯವಿರುತ್ತೆ. ರಾಮೂನ ಸಿನಿಮಾ ಹುಚ್ಚು ಶ್ಯಾಮೂಗೆ ಗೊತ್ತು. ಹಣ ತಂದ್ರೆ, ಹೀರೋ ಮಾಡಿಸ್ತೀನೀಂತ ಶ್ಯಾಮು ರಾಮೂಗೆ ಚಿಕ್ಕ ಆಸೆ ತೋರಿಸ್ತಾನೆ..."

ಕತೆ ನಿಲ್ಲಿಸಿ ಚಂದ್ರನ ಮುಖ ನೋಡಿದ ಅನಿಲ್. ಅವನು ಕಲ್ಲಿನಂತೆ ಕೂತಿದ್ದ. ಕಂಗಳು ಅನಿಲ್ ಮೇಲೇ ಇದ್ದವು.

ಅನಿಲ್ ಮುಂದುವರಿಸಿದ. "ರಾಮು ಹಣ ತಂದ. ಅವನನ್ನು ಊರಾಚೆ ಕರ್ಕೊಂಡ್ಹೋದ ಶ್ಯಾಮು. ಯಾರೂ ಇಲ್ಲದ ನಿರ್ಜನ ಪ್ರದೇಶ. ರಾಮುವಿನ ಗಮನವನ್ನು ಬೇರೆಡೆಗೆ ಸೆಳೆದು ಅವನ ತಲೆಗೆ ಭಾರೀಪೆಟ್ಟು ಹಾಕಿದ. ಜ್ಞಾನತಪ್ಪಿತು. ರಾಮೂನ ಬಟ್ಟೆ ತೆಗೆದು ಅವನ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಬಿಟ್ಟ. ಹಠಾತ್ತನೆ ಎಚ್ಚರಗೊಂಡ ರಾಮು ಭಯದಿಂದ 'ರಮೀ' ಅಂತ ಕೂಗಿಕೊಂಡ." ಅನಿಲ್ ಕತೆ ನಿಲ್ಲಿಸಿ ಚಂದ್ರನ ಮುಖ ನೋಡಿದ.

"ಚೆನ್ನಾಗಿದೆಯಾ ಕತೆ?" ಎಂದು ಹೇಳುತ್ತಾ ಅವನೆದುರಿಗೆ ನಿಂತು, "ಏಕೆ? ಏನೂ ಹೇಳ್ತಾನೇ ಇಲ್ಲ?" ಎಂದು ಹೇಳಿ, "ಮುಂದಿನ ಕತೆ ಕೇಳು" ಎಂದು ಮುಂದುವರಿಸಿದ. "ರಾಮು ಹೆಣವಾಗಿ ಹೋದ. ಶ್ಯಾಮು ರಾಮುವಿನಿಂದ ಅರವತ್ತು ಸಾವಿರ ರೂಪಾಯಿ ತಗೊಂಡುಬಿಟ್ಟ. ಧೈರ್ಯವಾಗಿ ರಾಮೂನ ಮನೆಗೆ ಬಂದು 'ರಾಮೂ ಬಂದ್ನಾ?' ಅಂತ ವಿಚಾರಿಸ್ತಿದ್ದ. ಪೊಲೀಸ್ ಶ್ಯಾಮೂನ ಎಲ್ಲಿದ್ದೆ ಅಂತ ಕೇಳಿದಾಗ

ಗೊಲ್ಲಳ್ಳಿ ಮಾರಮ್ಮನ ಜಾತ್ರೆಗೆ ಹೋಗಿದ್ದೇಂತ ಅನ್ಸಿಟ್ಟ'', ಅನಿಲ್ ಚಂದ್ರನತ್ತ ನೋಡಿದ.

ಚಂದ್ರನ ಮುಖದಲ್ಲೀಗ ಕಳವಳ ಕಂಡಿತ್ತು.

''ಏನು ವಿಶೇಷ ಗೊಲ್ಲಳ್ಳಿ ಜಾತ್ರೇಲಿ? ಅಂತ ಪೊಲೀಸ್ ಪ್ರಶ್ನಿಸಿದಾಗ ಕೋಣನ ಬಲಿ ಕೊಟ್ರು ಅಂತ ಹೇಳಿ ಸಿಕ್‌ಹಾಕ್ಕೊಂಡ.''

ಅನಿಲ್‌ನ ಮಾತು ಮುಗಿಯುತ್ತಿದ್ದಂತೆ ಚಂದ್ರ ದಢಕ್ಕನೆದ್ದು ನಿಂತು, ''ಗೊಲ್ಲಳ್ಳೀಲಿ ಕೋಣನ ಬಲಿಕೊಟ್ರು'' ಎಂದು ಹೇಳಿ ನಾಲಗೆ ಕಚ್ಚಿಕೊಂಡ.

''ಯಾಕೆ ಶ್ಯಾಮೂ... ಐ ಮೀನ್ ರವಿ ಚಂದ್ರಾ... ಕತೆ ಯಾವಾಗ ಸತ್ಯರೂಪ ಪಡ ಕೊಂಡ್ತು?'', ಅನಿಲ್ ಗದರಿದ.

ಚಂದ್ರ ಕ್ಷಣಕಾಲ ಯೋಚಿಸಿ, ''ನೀವೇನು ಹೇಳಿದ್ದೀರಿ, ಗೊಲ್ಲಳ್ಳೀಲಿ ಈ ಸಲಾನೂ ಕೋಣನ ಬಲಿಕೊಟ್ರು....'' ಎಂದ. 'ನೀವೇನೂ ಪ್ರೂವ್ ಮಾಡಲಾರಿರಿ' ಎನ್ನುವ ಭಾವದೊಂದಿಗೆ.

ಅನಿಲ್ ತನ್ನ ಟೇಬಲ್ ಮೇಲಿದ್ದ ಅಂದಿನ ವೃತ್ತಪತ್ರಿಕೆ ತೆಗೆದು ಚಂದ್ರನಿಗೆ ನೀಡಿದ.

ಮೂರನೇ ಪುಟದಲ್ಲಿ ಪ್ರಕಟವಾಗಿತ್ತು ಗೊಲ್ಲಳ್ಳಿಯ ಸುದ್ದಿ.

'ಕೋಣನ ಬಲಿ ತಡೆದ ವಿಶಿಷ್ಟ ರೀತಿ'

'ಗೊಲ್ಲಳ್ಳಿಯಲ್ಲಿ ಎಂದಿನ ಸಲದಂತೆ ಈ ಸಲವೂ ಕೋಣನ ಬಲಿ ಕೊಡುವುದರಲ್ಲಿದ್ದಾಗ ಊರಿನ ವಯೋವೃದ್ಧ ಡಾ|| ಸುಂದರಮೂರ್ತಿ ಕೋಣ ಕಡಿಯುವವರಿಗೆ ಅಡ್ಡ ಬಂದರು. ತಮ್ಮ ಬಲಿ ಮೊದಲಾಗಬೇಕೆಂದರು. ವಾಗ್ವಾದ ಮುಗಿಲು ಮುಟ್ಟಿದಾಗ, ಹಳ್ಳಿಯ ಜನ ಮಾರಮ್ಮನ ಪ್ರಕೋಪಕ್ಕೆ ಬಲಿಯಾಗದಂತೆ ಕಾಪಾಡಲು ಸಿರಿಂಜ್ ಸಹಾಯದಿಂದ ಕೋಣನ ಹತ್ತು ಮಿ ರಕ್ತವನ್ನು ಹೊರಗೆಳೆದು ಬಟ್ಟಲೊಂದಕ್ಕೆ ತುಂ ಮಾರಮ್ಮನ ಪಾದಗಳಿಗರ್ಪಿಸಿದರು. ಅ ಅಲ್ಲದೇ ಗೊಲ್ಲಳ್ಳಿಯಲ್ಲಿ ಇನ್ನೊಂದೂ ಬಲಿಕೊ ವುದಿಲ್ಲವೆಂದು ಹಳ್ಳಿಯ ಜನ ಶಪಥಗೈದರು'.


ಚಂದ್ರನ ಮುಖ ಬಣ್ಣ ಕಳೆದುಕೊಂಡಿತ್ತು

''ಛೇ! ಇವತ್ತು ಪೇಪರ್ ಓದದೇ ತ ಮಾಡಿದೆ ಎಂಬ ಭಾವನೆ ಮೂಡಿತಾ? ಪಾಪ! ಸುಧೀರ, ನಿನ್ನ ಗೆಳೆಯ, ತಲೆಯ ಮೇಲಿ ಪೆಟ್ಟಿನಿಂದ ನರಳುತ್ತಾ, ಮೈಮೇಲಿನ ಬೆ ನೋಡಿ ಗಾಬರಿಯಿಂದ ರವೀ ಅ ಕೂಗಿಕೊಂಡಾಗ ನಿನ್ನ ಕರುಣೆ ಸತ್ತು ಹೋಗಿ ಚಂದ್ರಾ? ಮೂಕಪ್ರಾಣಿಯ ವಧೆಯ ತಪ್ಪೆಂದು ಹಳ್ಳಿಯ ಮುಗ್ಧರು ಒಪ್ಪಿಕೊಂಡಿ ವಾಗ, ಸಂಚಿಕೆಯ ಗೆಳೆಯನಿಗೆ ಅಗ್ನಿಸ್ನಾನ ಮಾ ಸುವ ಕೆಟ್ಟ ಭಾವನೆ ನಿನ್ನ ಮನಸ್ಸಿನಲ್ಲಿ ಹೇ ಬಂತು? ಎಲ್ಲಿ ಆ ಅರುವತ್ತು ಸಾವಿರ?'' ಎಂ ಲಾರಿ ಕೈಗೆತ್ತಿಕೊಂಡ.

ಕೊನೆಗೂ ರವಿಚಂದ್ರ, ಸುಧೀರನ ಕೊ ಮಾಡಿದ್ದನ್ನು ಒಪ್ಪಿಕೊಂಡ. ಗೊಲ್ಲಳ್ಳಿಯ ಕ ಕುರಿಕಾಯುವ ಬೀರ ಸಾಕ್ಷಿಗಳಾದ ಮುಖ್ಯವಾಗಿ ಸುಧೀರನ ಪರಟನೆ ಹೆಸರು ಹತ್ಯೆಗೈದವನನ್ನು ಪತ್ತೆಹಚ್ಚಿ ಅವನಿಗೆ ಯಾಗುವಂತೆ ಮಾಡಿತ್ತು.

[illegible]

[illegible]



# ಝೆನ್ ಕಥೆಗಳು

ಮುನಿಯಾಲ ಗಣೇಶ ಶೆಣೈ

## ಒಂದು ಹನಿ ನೀರು

ಗಿಸನ್ ಎಂಬ ಒಬ್ಬ ಝೆನ್ ಗುರುವಿದ್ದರು. ಇವರು ಒಮ್ಮೆ ಸ್ನಾನ ಮಾಡುತ್ತಿದ್ದಾಗ, ಒಬ್ಬ ವಿದ್ಯಾರ್ಥಿಯನ್ನು ಕರೆದು, ಒಂದು ಪಾತ್ರೆಯಲ್ಲಿ ನೀರು ತರಲು ಹೇಳಿದರು. ವಿದ್ಯಾರ್ಥಿ ಪಾತ್ರೆಯಲ್ಲಿ ನೀರನ್ನು ತಂದ. ಸ್ನಾನದ ತೊಟ್ಟಿಯಲ್ಲಿ ಇದ್ದ ಬಿಸಿ ನೀರಿಗೆ ತಾನು ತಂದ ನೀರನ್ನು ಬೆರೆಸಿದ. ಪಾತ್ರೆಯಲ್ಲಿ ಸ್ವಲ್ಪ ನೀರಿತ್ತು. ಅದನ್ನು ಚೆಲ್ಲಿಬಿಟ್ಟ.

ಇದನ್ನು ನೋಡಿ ಗುರುಗಳು, ''ನೀನೊಬ್ಬ ಮೂರ್ಖ, ಉಳಿದಿದ್ದ ನೀರನ್ನು ಚೆಲ್ಲುವ ಬದಲು ಗಿಡಗಳಿಗೆ ಹಾಕಬಾರದಿತ್ತೆ? ಈ ಮಂದಿರದಲ್ಲಿ ಒಂದು ಹನಿ ನೀರನ್ನಾದರೂ ವ್ಯರ್ಥ ಮಾಡುವ ಹಕ್ಕು ನಿನಗಿಲ್ಲ'' ಎಂದು ಕೋಪದಿಂದ ಗುಡುಗಿದರು.

ಗುರುಗಳ ಮಾತನ್ನು ಕೇಳಿದ ಕೂಡಲೆ ವಿದ್ಯಾರ್ಥಿಗೆ ಜ್ಞಾನೋದಯವಾಯಿತು. ಆತ ನಂತರ ತನ್ನ ಹೆಸರನ್ನು 'ತೆಕಿಸುಯ್' ಎಂದು ಬದಲಿಸಿಕೊಂಡ.

ಹಾಗೆಂದರೆ 'ಒಂದು ಹನಿ ನೀರು' ಎಂದು ಅರ್ಥ.

## ಇಷ್ಟೇನಾ?

ಕನ್‌ಫ್ಯೂಶಿಯಸ್ ಎಂಬ ವಿದ್ವಾಂಸನೊಬ್ಬ ಇದ್ದ. ಎಂಬತ್ತರ ವಯೋವೃದ್ಧ. ತನ್ನ ಜ್ಞಾನಕ್ಕೆ ಸರಿಸಮನಾದವರು ಯಾರೂ ಇಲ್ಲವೆಂದೇ ಆತ ಭಾವಿಸಿದ್ದ.

ದಕ್ಷಿಣ ಪ್ರಾಂತ್ಯದಲ್ಲಿ ಝೆನ್ ಗುರುವೊಬ್ಬ ಜನಪ್ರಿಯನಾಗುತ್ತಿರುವ ಸಂಗತಿ ಅವನಿಗೆ ತಿಳಿಯಿತು. ಅವನ ಜ್ಞಾನ ತನಗಿಂತ ಹೆಚ್ಚೋ, ಕಡಿಮೆಯೋ ಎಂದು ಪರೀಕ್ಷಿಸಲು ನಡೆದ. ಬಹುದಿನಗಳ ಕಾಲ ನಡೆದು ಝೆನ್ ಗುರುಗಳನ್ನು ಭೇಟಿಯಾದ. ತನ್ನ ಆಗಮನದ ಕಾರಣವನ್ನು ತಿಳಿಸಿದ. ತಾನು ಅರಿತ, ಕಲಿತ ಸಂಗತಿಗಳನ್ನು ವಿಸ್ತಾರವಾಗಿ ಹೇಳಿದ. ಝೆನ್ ಗುರು ಮೌನವಾಗಿ ಕುಳಿತು ಕೇಳಿದರು.

ಕೊನೆಗೂ ಹೇಳಬೇಕಾದ್ದನ್ನೆಲ್ಲ ಹೇಳಿದ ವೃದ್ಧ, ''ನಿಮ್ಮ ಹೊಸ ಧರ್ಮ ಏನು ಹೇಳುತ್ತದೆ? ವಿವರಿಸಿ ನೋಡೋಣ'' ಎಂದ. ಝೆನ್ ಗುರು ಹೇಳಿದರು, ''ದುಷ್ಟ ಕಾರ್ಯ ಮಾಡದಿರು, ಸಾಧ್ಯವಾದಷ್ಟು ಒಳ್ಳೆ ಕೆಲಸವನ್ನು ಮಾಡು ಎಂಬುದೇ ಬುದ್ಧನ ಉಪದೇಶ.''

ವೃದ್ಧನಿಗೆ ಸಿಟ್ಟು ನೆತ್ತಿಗೇರಿತು, ''ಅಲ್ಲಯ್ಯಾ, ಇಂತಹ ಇಳಿವಯಸ್ಸಿನಲ್ಲಿ ದುರ್ಗಮವಾದ ಮಾರ್ಗವನ್ನು ಕ್ರಮಿಸಿ ಬಂದ ನನಗೆ, ನಿನ್ನ ಧರ್ಮದ ಬಗ್ಗೆ ನೀನು ಹೇಳುವುದು ಇಷ್ಟೇನಾ? ಮೂರು ವರ್ಷದ ಮಗು ಹೇಳುವುದನ್ನಷ್ಟೆ ನೀನು ಹೇಳಿದ್ದೀಯ'' ಎಂದ.

ಝೆನ್ ಗುರು ಶಾಂತವಾಗಿ ಹೇಳಿದರು-

''ನಾನು ನಿಮ್ಮನ್ನು ಗೇಲಿ ಮಾಡಲು ಹಾಗೆ ಹೇಳಲಿಲ್ಲ.''

ನಾನು ಹೇಳಿದ್ದನ್ನು ಮೂರು ವರ್ಷದ ಮಗುವೂ ಹೇಳುವುದು ನಿಜ. ಆದರೆ ಎಂಬತ್ತು ವರ್ಷದ ವೃದ್ಧರೂ ಈ ಹೇಳಿಕೆಗೆ ಅನುಸಾರವಾಗಿ ಬದುಕುವಲ್ಲಿ ಸೋಲುವುದೂ ನಿಜ.''

# ಪ್ರೋತ್ಸಾಹಕರ ಬಹುಮಾನ ಪಡೆದವು









ಅವನು ಮುಗ್ಧ! ಹಸುವಿನಂತವನು!
-ನಿಂಗೆ ಹ್ಯಾಗೊತ್ತು?




ನನಗಾಗಿ ಪಾರ್ಕಿನಲ್ಲಿ ಕಾಯುತ್ತಿರ...
ಹುಲ್ಲು ಕಿತ್ತು ತಿನ್ನುತ್ತಾ ಇರ್ತಾನೆ!




ದಿನೇಶ್ ಕುಕ್ಕುಜಡ್ಕ



ಕೆ. ಜೆ. ರಾವ್ (ಜಸ್ಸು)




ಪ್ರಕಾಶ ಚಿಕ್ಕಪಾಳ್ಯ





ನೀರ್ನಳ್ಳಿ ಗಣ




ಥತ್! ರಸ್ತೆ ಹಾಳು ಮಾಡಿಬಿಟ್ರು....
ಮೊದಲಿನ ಹಾಗೆ ಓಡಾಡೋಕೆ ಗ್ರಿಪ್ಪೇ ಸಿಗಲ್ಲ...!






## ಝುಂಪಾ ಲಹಿರಿ

# ಬೀಬಿ ಹಲ್ದಾರ್‌ಳ ಚಿಕಿತ್ಸೆ

ಕನ್ನಡಕ್ಕೆ: ದೀಪಾ ಗಣೇಶ್



ರವಚೈಲ್

ಇಪ್ಪತ್ತೊಂಬತ್ತು ವರ್ಷದ ಬೀ
ಹಲ್ದಾರ್‌ಳನ್ನು ಕಾಡುತ್ತಿದ್ದ ರೋ
ಮನೆಯವರನ್ನು, ಸ್ನೇಹಿತರನ್ನು, ಪಂ
ರನ್ನು, ಜ್ಯೋತಿಷಿಗಳನ್ನು, ಮದ
ಯಾಗದ ಹೆಣ್ಣುಗಳನ್ನು, ಪ್ರವಾದಿಗಳ
ಹಾಗೂ ಮೂರ್ಖರನ್ನು ಬ
ಗೊಳಿಸಿತ್ತು. ಅವಳನ್ನು ಗುಣಪಡಿಸ
ನಮ್ಮೂರಿನ ಜನ ಅವಳಿಗೆ ಏಳು ಪ
ನದಿಗಳ ಜಲವನ್ನು ತಂದುಕೊಟ್ಟಿದ್ದ
ರಾತ್ರೋರಾತ್ರಿ ನೋವಿನಿಂದ ಅ
ಕಿರುಚಿಕೊಂಡಾಗ, ಅವಳ ಕೈಗಳನ್ನು
ಹಾಕಿದಾಗ, ಅವಳ ಕೈಗಳಿಗೆ ಬಿಸಿ ನೀ
ಶಾಖ ಕೊಟ್ಟಾಗ, ನಾವು ಅವಳ
ದೇವರಲ್ಲಿ ಮೊರೆ ಇಟ್ಟಿದ್ದ
ಬುದ್ಧಿವಂತರು ಅವಳ ಹಣೆಗೆ ನೀ
ತೈಲವನ್ನು ಹಚ್ಚುತ್ತಿದ್ದರು. ತರತರ

ಗಿಡ ಮೂಲಿಕೆಗಳನ್ನು ಕುದಿಸಿ ಹಬೆ ನೀಡುತ್ತಿದ್ದರು. ಕ್ರಿಶ್ಚಿಯನ್ ಸಲಹೆಯ ಮೇರೆಗೆ ಸಾಧುಸಂತರ, ಹುತಾತ್ಮರ ಗೋರಿಗಳನ್ನು ಚುಂಬಿಸಲು ಅವಳನ್ನು ರೈಲಿನಲ್ಲಿ ಕರೆದೊಯ್ಯುತ್ತಿದ್ದರು. ದೋಷ ಪರಿಹಾರಕ್ಕೆ ಅವಳ ಕೈಗಳು, ಕುತ್ತಿಗೆಗೆ ತಾಯಿತ ಬಿಗಿದಿದ್ದರು. ಶುಭ ತರುವ ಮಣಿಗಳನ್ನು ಉಂಗುರಗಳಾಗಿ ಮಾಡಿ ಬೆರಳಿಗೆ ತೊಡಿಸಿದ್ದರು.

ಡಾಕ್ಟರುಗಳು ನೀಡುತ್ತಿದ್ದ ಔಷಧಿಗಳಿಂದ ಅವಳ ಖಾಯಿಲೆ ಉಲ್ಬಣವಾಗುತ್ತಿತ್ತು. ಅಲೋಪಥಿ, ಹೋಮಿಯೋಪಥಿ, ಆಯುರ್ವೇದ ಹೀಗೆ ಎಲ್ಲಾ ಔಷಧಿಗಳನ್ನು ಅವಳ ಮೇಲೆ ಪ್ರಯೋಗಿಸಲಾಗಿತ್ತು. ಇನ್ನಿಲ್ಲದಷ್ಟು ಸಲಹೆಗಳು. ಎಕ್ಸ್‌ರೇ ಅಂತೆ, ಇಂಜೆಕ್ಷನ್ ಅಂತೆ, ಕೆಲವರು ಬೀಬಿಗೆ ಸ್ವಲ್ಪ ತೂಕ ಹೆಚ್ಚು ಮಾಡಲು ಹೇಳಿದರೆ, ಇನ್ನು ಕೆಲವರು ಕಡಿಮೆ ಮಾಡಲು ಹೇಳುತ್ತಿದ್ದರು. ಒಬ್ಬರು ಸೂರ್ಯ ಹುಟ್ಟುವ ಮೊದಲೆ ಎದ್ದುಬಿಡಬೇಕೆಂದು ಹೇಳಿದರೆ, ಇನ್ನು ಕೆಲವರು ಮಧ್ಯಾಹ್ನದವರೆಗೂ ಮಂಚ ಬಿಟ್ಟು ಕದಲಕೂಡದೆಂದು ಹೇಳುತ್ತಿದ್ದರು. ಒಬ್ಬರು ಶೀರ್ಷಾಸನ ಮಾಡಲು ಹೇಳಿದರೆ, ಮತ್ತೊಬ್ಬರು ನಿರ್ದಿಷ್ಟ ಸಮಯಗಳಲ್ಲಿ ವೇದ ಪಠಿಸಬೇಕೆಂದು ಸಲಹೆ ನೀಡಿದ್ದರು. 'ಕಲ್ಕತ್ತಾಗೆ ಕರೆದೊಯ್ದು ಹಿಪ್ನೋಸಿಸ್ ಮಾಡಿಸಿ' ಎಂದು ಮತ್ಯಾರೋ ಹೇಳಿದರು. ಬೆಳ್ಳುಳ್ಳಿ ನಿಷೇಧ ಮಾಡಬೇಕು ಎಂದರು. ಕಹಿ ಔಷಧಿ ಕುಡಿಸಿದರು. ಬಾತುಕೋಳಿಯ ಮೊಟ್ಟೆಯನ್ನು ಹಾಲಿನಲ್ಲಿ ಬೆರೆಸಿ ಕುಡಿಯುವುದು, ಎಳನೀರು, ಧ್ಯಾನ ಹೀಗೆ ಹಲವಾರು ಶುಶ್ರೂಷೆಗಳು... ಸಂಕ್ಷಿಪ್ತವಾಗಿ ಹೇಳಬಹುದಾದರೆ ಬೀಬಿಯ ಜೀವನ ಒಂದಾದ ಮೇಲೊಂದು ವ್ಯರ್ಥ ಔಷಧಿಗಳೊಂದಿಗೆ ಮುಖಾಮುಖಿಯಾಯಿತಷ್ಟೆ.

ಹೇಳದೆ ಕೇಳದೆ, ಸುಳಿವೇ ನೀಡದೆ ದಿಢೀರನೆ ಆಕ್ರಮಿಸುತ್ತಿದ್ದ ಆ ರೋಗ, ಸುಣ್ಣ ಬಣ್ಣ ಕಾಣದ ಆ ನಾಲ್ಕು ಅಂತಸ್ತಿನ ಕಟ್ಟಡಕ್ಕೆ ಬೀಬಿಯನ್ನು ಕಟ್ಟಿ ಹಾಕಿತ್ತು. ಮನೆಯವರೆಂದು ಅವಳ ಜೊತೆಗಿದ್ದವರು ಚಿಕ್ಕಮ್ಮನ ಮಗ ಮತ್ತು ಅವನ ಹೆಂಡತಿ. ಎಲ್ಲಾ ಎರಡನೇ ಮಹಡಿಯಲ್ಲಿ ವಾಸಿಸುತ್ತಿದ್ದರು. ಜೊತೆಯಿಲ್ಲದಿದ್ದರೆ ಬೀಬಿಗೆ ರಸ್ತೆ ದಾಟುವುದು, ಟ್ರಾಮ್ ಹತ್ತುವುದು ಎಲ್ಲವೂ ಕಷ್ಟದ ಕೆಲಸವೇ. ಏಕೆಂದರೆ, ಅವಳು ಯಾವ ಗಳಿಗೆಯಲ್ಲಿ ಮೂರ್ಛೆ ತಪ್ಪುತ್ತಾಳೆಂದು ಹೇಳಬರುತ್ತಿರಲಿಲ್ಲ.

ಬಿಸಿಲ್ಮಚ್ಚಿನ ಮೇಲೆ ಸಣ್ಣದೊಂದು ಕೋಣೆ. ಕುಳಿತುಕೊಳ್ಳಲಷ್ಟೇ ಸ್ಥಳವಿತ್ತು. ಪಕ್ಕದಲ್ಲಿ ಬಚ್ಚಲು ಮನೆ. ಬಾಗಿಲಿಗೆ ಪರದೆಗಳಿದ್ದವು. ಸರಳಿಲ್ಲದ ಕಿಟಕಿ, ಮರದ ಹಲಗೆಗಳುಳ್ಳ ಒಂದು ಕಪಾಟು. ಇಲ್ಲಿ, ಕಾಲ ಮೇಲೆ ಕಾಲು ಹಾಕಿ, ಚಾಪೆಯ ಮೇಲೆ ಕುಳಿತು, ಚಿಕ್ಕಮ್ಮನ ಮಗ ನಡೆಸುತ್ತಿದ್ದ ಸ್ನೋ, ಪೌಡರ್ ವ್ಯಾಪಾರದ ಲೆಕ್ಕವನ್ನು, ಉದ್ದನೆಯ ಪುಸ್ತಕದಲ್ಲಿ ಬರೆಯುತ್ತಾ ಕುಳಿತುಕೊಳ್ಳುವಳು ಬೀಬಿ. ಅಂಗಡಿ, ಮನೆಯಂಗಳದ ಹೊರ ಬದಿಗೆ ಅಂಟಿಕೊಂಡಂತೆಯೇ ಇದೆ.


ಅವಳ ಕೆಲಸಕ್ಕೆ ಸಂಬಳವಿರಲಿಲ್ಲ. ಬದಲಿಗೆ ಊಟ, ತಿಂಡಿ, ಪ್ರತಿ ಅಕ್ಟೋಬರ್ ತಿಂಗಳಲ್ಲಿ ಹಲವಾರು ಮೀಟರು ಉಣ್ಣೆಯ ಬಟ್ಟೆ. ಇದರ ಜೊತೆಗೆ ಅವಳಿಗೆ ಅಗತ್ಯವಾದ ವಸ್ತುಗಳು. ರಾತ್ರಿಯ ಹೊತ್ತು ಚಾರ್ಪಾಯಿಯ ಮೇಲೆ, ಎರಡನೇ ಮಹಡಿಯಲ್ಲಿ ವಾಸಿಸುತ್ತಿದ್ದ ಚಿಕ್ಕಮ್ಮನ ಮಗನ ಮನೆಯಲ್ಲಿ ಮಲಗುತ್ತಿದ್ದಳು.

ಹಳೇ ಮುರುಕಲು ಪ್ಲಾಸ್ಟಿಕ್ ಚಪ್ಪಲಿ, ಹದಿನೈದು ವರ್ಷದ ಹುಡುಗಿಯರು ಹಾಕಿಕೊಳ್ಳಬಹುದಾದಂಥ


ಮಂಡಿಗೇ ಬರುತ್ತಿದ್ದ ಸ್ಕೈಟ ಬೀಬಿಯ ದಿರಿಸು. ಕಾಲಿನಲ್ಲಿ ಕೂದಲಿಲ್ಲದಿದ್ದರೂ, ಸಾವಿರಾರು ಕಪ್ಪು ಚುಕ್ಕೆಗಳಿದ್ದವು. ನಾವು ಬಟ್ಟೆ ಒಣಗಿ ಹಾಕುತ್ತಿದ್ದಾಗ, ಸಾರಿಗಾಗಿ ಮೀನಿನ ಚರ್ಮ ಉಜ್ಜುತ್ತಾ ಕೂತಾಗ ನಮ್ಮೊಂದಿಗೆ ಮಾತಿಗಿಳಿದು ತನ್ನ ಅದೃಷ್ಟ ಹಳಿಯುತ್ತಿದ್ದಳು.

ಬೀಬಿ ಸುಂದರವಾಗಿರಲಿಲ್ಲ. ತುಟಿಯ ಮೇಲ್ಭಾಗ ತೆಳ್ಳಗಿದ್ದು, ಚಿಕ್ಕ ಹಲ್ಲುಗಳಿದ್ದವು. ಮಾತನಾಡುವಾಗ ಒಸಡು ಮುಂದಕ್ಕೆ ಚಾಚಿಕೊಳ್ಳುತ್ತಿತ್ತು. ''ನೀವೇ ಹೇಳಿ, ವಯಸ್ಸಿಗೆ ಬಂದ ಹೆಣ್ಣು, ಹೀಗೇ ಲೇಬಲ್ ಅಂಟಿಸುತ್ತಾ, ಬಿಲ್ಲೆಗಳ ಪಟ್ಟಿ ಮಾಡುತ್ತಾ, ಭವಿಷ್ಯದ ಬಗ್ಗೆ ಯಾವೊಂದು ಭರವಸೆಯಿಲ್ಲದೆ ಕಾಲ ಹಾಕುವುದು ಹೇಗೆ?'' ಎಂದು ಕಿವುಡರನ್ನು ಮಾತನಾಡಿಸುವಂತೆ, ಅಗತ್ಯಕ್ಕಿಂತಾ ಹೆಚ್ಚು ಎತ್ತರದ ದನಿಯಲ್ಲಿ ಅವಳು ಕೇಳುತ್ತಿದ್ದಳು. ತಾನು ನವವಧುಗಳನ್ನು, ತಾಯಂದಿರನ್ನು ಕಂಡು ಅಸೂಯೆ ಪಟ್ಟರೆ, ಅದು ತಪ್ಪೇನು? ಕಾಡಿಗೆ ಹಚ್ಚಬೇಕು, ಪರಿಮಳದ ಎಣ್ಣೆ ಸವರಿಕೊಳ್ಳಬೇಕು ಎಂದು ತನಗೂ ಆಸೆಗಳಿರುವುದು ಸುಳ್ಳೇನು? ಮಕ್ಕಳನ್ನು ಬೆಳೆಸಬೇಕು, ಅದಕ್ಕೆ ಹುಳಿ ಯಾವುದು, ಸಿಹಿ ಯಾವುದು, ಒಳ್ಳೇದು, ಕೆಟ್ಟದು ಹೇಳಿಕೊಡಬೇಕೆಂದು ತನಗನಿಸಿದರೆ ವಿಚಿತ್ರವೇ...?

ಪ್ರತಿದಿನವೂ ತನ್ನ ಮನಸ್ಸಿನ ವೇದನೆ ನಮ
ಹತ್ತಿರ ತೋಡಿಕೊಳ್ಳುತ್ತಿದ್ದಳು. ಅವಳಿಗೊಬ್
ಗಂಡಸಿನ ಅವಶ್ಯಕತೆ ಎಷ್ಟಿದೆ ಎನ್ನುವುದು ದಿ
ಕಳೆದಂತೆ ನಮಗೆ ಅರಿವಾಯಿತು. ಕಾಳಜಿ, ಪ್ರೀ
ವ್ಯಕ್ತಪಡಿಸುವವರ ಅಗತ್ಯ ಬೀಬಿಗಿತ್ತು. ಅಡಿ
ಮಾಡಿ ಬಡಿಸಬೇಕು, ಮನೆ ಯಜಮಾನ್ತಿಯಾ
ಕೆಲಸದವರ ಮೇಲೆ ಅಧಿಕಾರ ಚಲಾಯಿಸಬೇಕು
ಮೂರು ವಾರಕೊಮ್ಮೆ ಚೈನೀಸ್ ಪಾರ್ಲರ್‌ನ
ಹುಬ್ಬು ತಿದ್ದಿಸಿಕೊಳ್ಳುವುದಕ್ಕೆ ಯಾರ ಗಮನಕ್ಕೂ
ಬರದಂತೆ ದುಡ್ಡು ಎತ್ತಿಡಬೇಕು... ಒಂದೇ, ಎರಡೆ
ಎಷ್ಟೋ ಆಸೆಗಳಿದ್ದವು ಅವಳಿಗೆ. ಕಾಡಿಸಿ, ಪೀಡಿ
ನಮ್ಮ ಮದುವೆ, ಆಹ್ವಾನ ಪತ್ರಿಕೆ, ಕೊನೆಗೆ ಪ್ರಸ್ತ
ವಿವರಗಳನ್ನೂ ಹೇಳಬೇಕೆನ್ನುತ್ತಿದ್ದಳು. ಅವಳ ಕಾ
ತಡೆಯಲಾರದೆ ಅಂದದ ಬೈಂಡಿದ್ದ ನಮ್ಮ ಮದು
ಆಲ್ಬಮ್‌ಗಳನ್ನು ಹೊರ ತೆಗೆದೆವು. ಆ ಮಧು
ಗಳಿಗೆಗಳನ್ನು ಸೆರೆಹಿಡಿದಿದ್ದ ಫೋಟೋಗಳನ್ನು ಮ
ಮತ್ತೆ ನೋಡಿದಳು. ಹೋಮದ ಕುಂಡಕ್ಕೆ ನಾ
ತುಪ್ಪ ಸುರಿದಿದ್ದು, ಹಾರ ಬದಲಾಯಿಸಿದ್ದು
ಸುತ್ತಮುತ್ತಲಿದ್ದ ಅರಿಶಿನ ಕುಂಕುಮದ ಭರಣಿಗಳು
ಬೆಳ್ಳಿ ನಾಣ್ಯಗಳಿಟ್ಟಿದ್ದ ತಟ್ಟೆಗಳು, ಎಲ್ಲವನ್ನು ಪು
ಪುನಃ ನೋಡಿದಳು. ''ಅಬ್ಬಾ! ಎಷ್ಟು ಮಂ
ನೆಂಟರು'' ಎಂದಳು. ಫೋಟೋದಲ್ಲಿದ್ದ ಮು



ಇತ್ತೀಚೆಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಪಡೆದ ಭಾರತೀಯ ಸಂಜಾತೆ, ಅಮೆರಿಕ ವಾಸಿ ಝುಂಪಾ ಲಹಿರಿ ಭಾರತೀಯ ಆಂಗ್ಲ ಸಾಹಿತ್ಯಕ್ಕೆ (Indo-Anglian writing) ಮೂಡಿದ ಮತ್ತೊಂದು ಗರಿ. ಅರುಂಧತಿ ರಾಯ್ ನಿರ್ಮಿಸಿದ 'ಪರಂಪರೆ'ಯಲ್ಲಿ ಸೂಕ್ಷ್ಮ ಬರವಣಿಗೆಯಲ್ಲಿ ತೊಡಗಿ ಜಗತ್ತಿನಾದ್ಯಂತ ಗಮನ ಸೆಳೆದ ಝುಂಪಾ ಬರೆದ ಕತೆಗಳಲ್ಲಿ ದೇಶೀಯತೆ, ಪಾತ್ರಗಳು ಅತಿರಂಜಿತ ಎನ್ನಿಸುವುದಿಲ್ಲ. ಸಣ್ಣ, 'ಅತಿಸಣ್ಣ ಕತೆ'ಗಳ ಗಾಳಿ ಬೀಸುತ್ತಿರುವಾಗ ಝುಂಪಾ ವಿರಾಮವಾಗಿ, ದೃಶ್ಯರೂಪಿ ಘಟನೆಗಳನ್ನು ಎಳೆಎಳೆಯಾಗಿ ಬಿಡಿಸಿಡುತ್ತಾ, ಉಪಮೆ, ರೂಪಕ, ಪ್ರತಿಮೆಗಳನ್ನು ಇನ್ನಿಲ್ಲದ ತಾಜಾತನದೊಂದಿಗೆ ಬಳಸುತ್ತಾ ಗಮನ ಸೆಳೆಯುತ್ತಾರೆ.



ಝುಂಪಾರ ಈ ಕತೆಯನ್ನು ಕನ್ನಡಕ್ಕೆ ತಂದ ದೀಪಾ ಗಣೇಶ್ ಎಳೆ ತಲೆಮಾರಿನ ಪತ್ರಕರ್ತೆ, ಸಾಹಿತ್ಯ ಪ್ರೇಮಿ.

ಗಳನ್ನು ಸವರುತ್ತಾ, "ನನ್ನ ಮದುವೆಯ ಫೋಟೋದಲ್ಲಿ ನೀವೆಲ್ಲಾ ಇರುತ್ತೀರಲ್ಲಾ" ಎಂದಳು.

ಮದುವೆಯ ಬಯಕೆ ಅವಳಲ್ಲಿ ಎಷ್ಟು ತೀವ್ರವಾಗಿತ್ತೆಂದರೆ, ಗಂಡು ಸಿಕ್ಕಲ್ಲ ಎಂಬ ಆತಂಕದಿಂದ ಅವಳ ಮೂರ್ಛೆ ರೋಗ ಉಲ್ಬಣಗೊಂಡಿತ್ತು. ಮಹಡಿಯ ಕೋಣೆಯಲ್ಲಿ ಪೌಡರ್, ಹೇರ್ ಪಿನ್‌ಗಳ ರಾಶಿಯ ಮಧ್ಯೆ ಮುದುರಿಕೊಂಡು ಬಡಬಡಿಸುತ್ತಿದ್ದಳು, "ನಾನೆಂದು ಹಾಲಿನಲ್ಲಿ ಕಾಲು ತೊಳೆಯುವುದು," ನನ್ನ ಮುಖಕ್ಕೆ ಗಂಧ ಲೇಪನವಾಗುವುದೆಂದು? ಅರಿಶಿನದ ಸ್ನಾನವೆಂದು? ಕೆಂಪು ಅಕ್ಷರಗಳಲ್ಲಿ ಆಹ್ವಾನ ಪತ್ರಿಕೆಯ ಮೇಲೆ ನನ್ನ ಹೆಸರು ಎಂದಾದರೂ ಮೂಡುವುದೇ?"

ಅವಳ ಸ್ವಗತಗಳು ಮೊನಚಾಗಿದ್ದವು. ಅವಳ ಭಾವನೆಗಳು ಬಾಲಿಶವಾಗಿದ್ದುವು. ಹೊಟ್ಟೆಯ ಕಿಚ್ಚು ಅವಳ ದೇಹದ ರಂಧ್ರಗಳಿಂದ ವಿಷಮಜ್ವರದಂತೆ ತೊಟ್ಟಿಕ್ಕುತ್ತಿತ್ತು. ಅತ್ಯಂತ ದುಃಖಿತಪ್ತ ಕ್ಷಣಗಳಲ್ಲಿ, ಅವಳಿಗೆ ಬೆಚ್ಚಗೆ ಹೊದಿಸಿ, ತಣ್ಣೀರಿನಿಂದ ಮುಖವೊರೆಸಿ, ಲೋಟಗಳಲ್ಲಿ ಪನ್ನೀರು, ಮೊಸರು ತಂದುಕೊಟ್ಟೆವು. ಅವಳನ್ನು ಸಮಾಧಾನ ಪಡಿಸುವುದು ಅಸಾಧ್ಯವೆನಿಸಿದಾಗ, ನಮ್ಮೊಂದಿಗೆ ಟೈಲರ್ ಅಂಗಡಿಗೆ ಕರೆದೊಯ್ದು, ಹೊಸ ಲಂಗ, ಬ್ಲೌಸು ಹೊಲಿಯೋದಕ್ಕೆ ಹಾಕು ಎಂದು ಓಲೈಸುತ್ತಿದ್ದೆವು. "ನೀನು ಪಾತ್ರೆ ತೊಳೆಯೋಳ ಹಾಗಿದ್ರೆ, ಯಾವ ಗಂಡ್ಸೂ ನಿನ್ನನ್ನ ಮದ್ವೆ ಮಾಡ್ಕೊಳ್ಳೋದಿಲ್ಲ" ಎಂದೆವು. "ಅಷ್ಟೊಂದು ಬಟ್ಟೆ ಇಟ್ಕೊಂಡಿದ್ದೀಯಲ್ಲಾ, ಎಲ್ಲಾ ಹೊರತೆಗೆದು ಹಾಕ್ಕೋ, ಇಲ್ದಿದ್ರೆ ಜಿರಳೆ ತಿನ್ನತ್ತೆ ಅಷ್ಟೆ" ಎಂದೆವು. ಬೇಸರ, ದುಗುಡ, ದುಮ್ಮಾನಗಳ ದನಿಯಲ್ಲಿ ಅವಳು, "ನಾನು ಎಲ್ಲಿಗೆ ಹೋಗ್ಬೇಕು, ಯಾರ್ಗೋಸ್ಕರ ಅಲಂಕಾರ ಮಾಡ್ಕೊಬೇಕು ಎನ್ನುತ್ತಿದ್ದಳು. ಸಿನಿಮಾಗೆ, ಜಾಗೆ, ಗೋಲಿ ಸೋಡಾ ಕುಡಿಯೋದಕ್ಕೆ, ಗೋಡಂಬಿ ತಿನ್ನಕ್ಕೆ ಯಾರು ನನ್ನ ಕರ್ಕೊಂಡ್ಹೋಗ್ತಾರೆ. ನಂಗೆ ಗುಣಾನೂ ಆಗೋದಿಲ್ಲ, ಮದ್ವೇನೂ ಆಗೋದಿಲ್ಲ" ಎಂದು ಅಲವತ್ತುಕೊಳ್ಳುವಳು.

ಅಷ್ಟರಲ್ಲಿ ಅದುವರೆವಿಗೂ ಯಾರೂ ಹೇಳದ



ಮದ್ದನ್ನು ಹೇಗೆ ಎಲ್ಲಿಯೂ ಹೇಳದಂತೆ ಮಾಡಿದವರು ವೈದ್ಯರು. ಅದೇ ರಾತ್ರಿ, ಅವಳು ಊಟಕ್ಕೆಂದು ಮಹಡಿಯಿಂದ ಇಳಿದು ಬರುತ್ತಿದ್ದಳು. ಮೆಟ್ಟಿಲಿನ ಮೂರನೇ ಮಹಡಿಯಲ್ಲಿ ಕುಸಿದುಬಿದ್ದಳು. ಮುಷ್ಟಿಯನ್ನು ನೆಲಕ್ಕೆ ಕುಟ್ಟುತ್ತಾ, ಕಾಲುಗಳನ್ನು ಬಡಿಯುತ್ತಾ, ಬಿಕ್ಕಳಿಗಟ್ಟಿ ಬಿಕ್ಕಳಿಸುತ್ತಾ, ಜಗತ್ತೇ ಕಳೆದುಹೋದಂತೆ ಬಿದ್ದಳು. ಅವಳ ಆಕ್ರಂದನ ಕೇಳಿ ಧಾವಿಸಿ ಬಂದೆವು. ಗ್ಲಾಸ್ ಹಾಕಿದೆವು, ಬಾಯಿಗೆ ಸಕ್ಕರೆ ಸುರಿದೆವು, ತಣ್ಣನೆ ನೀರು ತಲೆಯ ಮೇಲೆ ಸುರಿದೆವು. ನಮ್ಮ ಮಕ್ಕಳು ಮೆಟ್ಟಿಲ ಸರಳುಗಳನ್ನು ಹಿಡಿದು, ಈ ವಿಚಿತ್ರ ತೊಳಲಾಟವನ್ನು ಗಾಬರಿಯಿಂದ ವೀಕ್ಷಿಸಿದರು. ಹಲ್ಲುಗಳನ್ನು ಕಟಕಟನೆ ಕಡಿಯತೊಡಗಿದಳು. ಹತ್ತು ನಿಮಿಷಗಳ ನಂತರ ಅವಳು, ಮುಖದ ಸ್ವಾಭಾವಿಕ ಕಂಪು ಬಿಟ್ಟರೆ, ಬೇರ್ಯಾವ ಭಾವಂತವೂ ಇಲ್ಲದೆ ಬಂದ. ನಾವು ಮಾಡುತ್ತಿದ್ದದ್ದು ವಿಪರೀತವೆಂದು ರೇಗಿ, ಆಟೋ ಕರೆದು, ಬೀಬಿಯನ್ನು ಕೂರಿಸಿ ಕ್ಲಿನಿಕ್‌ಗೆ ಕರೆದೊಯ್ದು. ಹತ್ತಾರು ರಕ್ತ ಪರೀಕ್ಷೆಗಳ ನಂತರ, ಮದುವೆಯೊಂದೇ ಮದ್ದು ಎಂದು ಘೋಷಿಸಿಬಿಟ್ಟರು ವೈದ್ಯರು.

ಕೂಡಲೆ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತು. ಕಿಟಕಿಯಿಂದಾಚೆ. ಬಟ್ಟೆ ಒಣ ಹಾಕಿದ

ಸಾಲಿನಿಂದಾಚೆ. ಸೂರಿನಾಚೆ. ಬೆಳಗಾಗುವ ವೇಳೆಗೆ ಮೂವರು ಜ್ಯೋತಿಷಿಗಳು ಬಂದು, ಬೀಬಿಯ ಕೈನೋಡಿ, ಸದ್ಯದಲ್ಲೇ ಸಮ್ಮಿಲನವಾಗುವುದು ಖಂಡಿತ ಎಂದು ಖಚಿತವಾಗಿ ನುಡಿದರು. ಬೋಂಡಾ ಅಂಗಡಿಯ ಬಳಿ ನಿಂತ ಪೋಲಿಗಳು ಕೆಟ್ಟದಾಗಿ ಹರಟಿದರು. ಆಚೆ ಈಚೆಯ ಮನೆ ಅಜ್ಜಯರು ಪಂಚಾಂಗ ನೋಡಿ ನಿಶ್ಚಿತಾರ್ಥದ ದಿನ ಇತ್ಯರ್ಥ ಮಾಡಲು ತೊಡಗಿದರು. ಸುಮಾರು ದಿನ ನಾವು ಮಕ್ಕಳನ್ನು ಸ್ಕೂಲಿಗೆ ಬಿಡಲು ಹೋದಾಗ, ಇಸ್ತ್ರಿ ಬಟ್ಟೆ ತರಲು ಹೋದಾಗ, ರೇಷನ್ ಸಾಲಿನಲ್ಲಿ ನಿಂತಾಗ, ಈ ವಿಷಯವನ್ನೇ ಪಿಸುಗುಟ್ಟಿದೆವು. ಮೊದಲ ಬಾರಿಗೆ, ಅವಳ ಹೌಸ್ ಕೋಟಿನ ಒಳಗಿರುವ ದೇಹದ ಉಬ್ಬು ತಗ್ಗುಗಳ ಬಗ್ಗೆ, ಗಂಡಸಿಗೆ ಅವಳು ನೀಡಬಹುದಾದ ಸುಖದ ಬಗ್ಗೆ ಯೋಚಿಸಿದೆವು. ಅವಳ ಚರ್ಮದ ಕಾಂತಿ, ಉದ್ದನೆಯ ಕಣ್ರೆಪ್ಪೆಗಳು, ಸುಂದರ ಕೈಗಳನ್ನು ಮೊದಲ ಬಾರಿಗೆ ಗಮನಿಸಿದೆವು. ''ಅದೊಂದೇ ದಾರಿಯಂತೆ, ಉನ್ಮಾದದ ಸ್ಥಿತಿಯಂತ ಹೇಳ್ತಾರೆ...'' ಸ್ವಲ್ಪ ತಡೆದು ನಾಚಿ ಕೆಂಪಾಗುತ್ತಾ ನುಡಿದೆವು. ''ಗಂಡಸಿನ ಸಂಪರ್ಕ ಅವಳ ದೇಹದ ಉದ್ವೇಗ ತಣಿಸುವುದಂತೆ.''

ಈ ಹೊಸ ಮದ್ದು ಬೀಬಿಗೆ ಅತೀವ ಸಂತೋಷ ತಂದಿತ್ತು. ಆ ಹೊತ್ತಿನಿಂದಲೇ ತನ್ನ ದಾಂಪತ್ಯ ಜೀವನಕ್ಕೆ ತಯಾರಿ ನಡೆಸಲು ಪ್ರಾರಂಭಿಸಿದಳು. ಹಲ್ದಾರನ ತಿರಸ್ಕೃತ ಮಾಲಿನಿಂದ ಉಗುರಿಗೆ ಬಣ್ಣ ಹಚ್ಚಿದಳು. ಮೊಳಕೈಗಳನ್ನು ತೀಡಿ ತೀಡಿ ಮೆತ್ತಗೆ ಮಾಡಿಕೊಂಡಳು. ಹೊಸ ಸಾಮಾನು ಬಂದಿದ್ದರೂ, ಅವುಗಳನ್ನು ಜೋಡಿಸದೆ, ಲೆಕ್ಕ ಬರೆಯದೆ, ತಿಂಡಿ ತಿನಿಸುಗಳನ್ನು ಮಾಡುವ ವಿಧಾನಕ್ಕಾಗಿ ನಮ್ಮ ಬೆನ್ನಹಿಂದೆ ಬಿದ್ದಳು. ಶಾವಿಗೆ ಉಪ್ಪಿಟ್ಟು, ಪರಂಗಿ ಕಾಯಿಯ ಪಲ್ಯ, ಹೀಗೆ ದಿನಕ್ಕೊಂದು. ಲೆಕ್ಕ ಪುಸ್ತಕದ ಕೊನೆಯ ಹಾಳೆಗಳಲ್ಲಿ ಅತಿಥಿಗಳ ಪಟ್ಟಿ, ಸಿಹಿತಿಂಡಿಗಳ ಪಟ್ಟಿ, ಮಧುಚಂದ್ರಕ್ಕೆ ಹೋಗಬಹುದಾದ ಸ್ಥಳಗಳ ಪಟ್ಟಿ. ತುಟಿಗೆ ಗ್ಲಿಸರಿನ್ ಬಳಿದಳು. ಸೊಂಟದ ಅಳತೆ ಕಡಿಮೆ ಮಾಡಬೇಕೆಂದು ಸಿಹಿ ತಿನ್ನುವುದ ಬಿಟ್ಟಳು. ಟೈಲ ಬಳಿ ಹೋಗೋಣವೆಂದು ಪೀಡಿಸಿದಳು ದಾರಿಯಲ್ಲಿ ಕಾಣುವ ಒಡವೆ ಅಂಗಡಿಗೆ ಸುಗ್ಗಿದಳು. ಗಾಜಿನ ಕಪಾಟುಗಳಲ್ಲಿ ಇಣುಕಿ ಎಂಥ ಒಡವೆ ಮಾಡಿಸಿಕೊಳ್ಳಬೇಕೆಂಬುದರ ಬ ತಲೆಕೆಡಿಸಿಕೊಂಡಳು. ಸೀರೆ ಅಂಗಡಿಯೊಳ ಪ್ರವೇಶಿಸಿ ಗುಲಾಬಿ ಬಣ್ಣದ ಬನಾರಸ್ ಸೀರೆ ಬೊಟ್ಟು ಮಾಡಿ ತೋರಿಸಿದಳು. ಅದರ ಪಕ್ಕದಲ್ಲಿ ನೀಲಿ, ಚೆಂಡು ಹೂವಿನ ಬಣ್ಣದ ಸೀರೆಗಳನ ಕಂಡು ಹಿಗ್ಗಿದಳು. ''ಬೆಳಗಿನ ವಿಧಿಗಳಿಗೆ ಈ ಸೀ ಉಡಬಹುದು, ಮಧ್ಯಾಹ್ನಕ್ಕೆ ಈ ಸೀ ಚೆನ್ನಾಗಿದೆಯಲ್ಲವೇ?''

ಇತ್ತ ಹಲ್ದಾರ್ ಮತ್ತವನ ಹೆಂಡತಿ ಯೋಚನಾಲಹರಿ ಬೇರೆ ರೀತಿಯಲ್ಲೇ ಸಾಗಿತ್ತು ಗಳಿಗೆಗೊಮ್ಮೆ ಬದಲಾಗುತ್ತಿದ್ದ ಬೀಬಿಯ ಆಸೆಗಳಿ ಕಿವಿಗೊಡದೆ, ತಮ್ಮ ನಿತ್ಯದ ಕೆಲಸಗಳಲ್ಲಿ ಅವ ಮಗ್ನರಾಗಿದ್ದರು. ಕಪಾಟಿನಷ್ಟೇ ಇದ್ದ ಅವ ಅಂಗಡಿಯಲ್ಲಿ ಪೌಡರ್, ಸ್ನೋ, ಲಿಪ್‌ಸ್ಟಿಕ್ ಕಾಡಿಗೆ, ಎಣ್ಣೆಗಳು... ಎಲ್ಲವನ್ನೂ ಪೇರಿಸಿದ್ದರು ''ಇಂಥ ಹುಚ್ಚು ಸಲಹೆಗಳ ಬ ತಲೆಕೆಡಿಸಿಕೊಳ್ಳುವುದಕ್ಕೆ ನಮಗೆ ಸಮಯವಿಲ್ ಎಂದು ಹಲ್ದಾರ್, ಬೀಬಿಯ ಮದುವೆ ವಿಷಯವನ್ನು ಪ್ರಸ್ತಾಪಿಸುವವರಿಗೆ ಹೇಳಿ ''ಈಗಾಗ್ಲೇ ದೊಡ್ಡ ತಲೆನೋವಾಗಿದ್ದಾ ಸುಮಾರು ದುಡ್ಡು ಸುರಿದಾಯ್ತು. ಗುಣಪಡಿಸ ರೋಗ ಅಲ್ದಿದ್ರೆ ಅನುಭವಿಸಬೇಕು. ಇಷ್ಟ ಮನೆತನದ ಹೆಸರಿಗೇ ಕಳಂಕ.'' ಈ ಮಾತುಗಳ ಚಿಕ್ಕ ಗಾಜಿನ ಕಪಾಟಿನ ಹಿಂದೆ ಸುಕ್ಕುಗಟ್ಟಿದ ಕತ್ತ ಗಾಳಿ ಹಾಕುತ್ತಾ ಕುಳಿತಿದ್ದ ಹಲ್ದಾರನ ಹೆಂಡ ತಲೆಯಾಡಿಸಿದಳು. ಧಡೂತಿ ಹೆಂಗಸವಳು. ಅವ ಹಚ್ಚಿದ ಮಂಕಾದ ಪೌಡರ್, ಬೆವೆತ ಕತ್ತಿನ ನೆರಿಗೆ ಮಧ್ಯೆ ಹೆಕಳೆಗಟ್ಟಿ ನಿಂತಿತ್ತು. ''ಇವಳನ್ನು ಯಾ ತಾನೇ ಮದ್ವೆಯಾಗ್ತಾರೆ? ಏನೂ ತಿಳಿಯೋದಿ ಮಾತೆಲ್ಲಾ ತಿರುಗ-ಮುರುಗ. ಮೂವತ್ತು ತುಂಬಿ ಒಲೆ ಅಂಟ್ಸೋದಕ್ಕೂ ಬರೋದಿಲ್ಲ.

ಮಾಡೋಕ್ಕೆ ಬರಲ್ಲ, ಸಾಸಿವೆ ಯಾವ್ದು, ಮೆಂತ್ಯ ಯಾವ್ದು ಗೊತ್ತಿಲ್ಲ. ಏನು ಅಡಿಗೆ ಮಾಡ್ತಾಕ್ಕಾಳೆ ಇವ್ಳು?''

ಅವಳ ಮಾತುಗಳಲ್ಲಿ ನಿಜಾಂಶವಿತ್ತು. ಹೆಂಗಸಿಗೆ ಸಹಜವಾದ ವಿದ್ಯೆಗಳಾವುದೂ ಬೀಬಿಗೆ ಬರುತ್ತಿರಲಿಲ್ಲ. ರೋಗದಿಂದಲೋ ಏನೋ, ಲೋಕ ವ್ಯವಹಾರದ ವಿಷಯದಲ್ಲಿ ದಡ್ಡಿಯಾಗಿದ್ದಳು. ಹಲ್ದಾರನ ಹೆಂಡತಿಯಂತೂ ಅವಳಿಗೆ ದೆವ್ವ ಮೆಟ್ಟಿದೆ ಎಂದು ಒಲೆಯ ಅಸುಪಾಸಿನಲ್ಲಿ ಸುಳಿಯಲೂ ಬಿಡುತ್ತಿರಲಿಲ್ಲ. ಹತ್ತಾರು ಪಿನ್ನುಗಳನ್ನು ಸಿಕ್ಕಿಸದೆ ಅವಳಿಗೆ ಸೀರೆ ಉಡಲು ಬರುತ್ತಿರಲಿಲ್ಲ. ಶಾಲಿಗೆ ಕ್ರೋಷಾ ಮಾಡುವುದಕ್ಕಾಗಲೀ, ಒಳಲಂಗಕ್ಕೆ ಎಂಬ್ರಾಯಿಡರಿ ಮಾಡುವುದಕ್ಕಾಗಲಿ ನೆಟ್ಟಗೆ ಬರುತ್ತಿರಲಿಲ್ಲ. ಟಿವಿ ನೋಡಲು ಅವಳಿಗೆ ಅನುಮತಿಯಿರಲಿಲ್ಲ. (ಅದರ ಎಲೆಕ್ಟ್ರಾನಿಕ್ ಅಲೆಗಳು ಅವಳಿಗೆ ಸನ್ನಿ ಹಿಡಿಸಬಹುದು ಎಂಬುದು ಹಲ್ದಾರನ ಸಂಶಯವಾಗಿತ್ತು.) ಲೋಕದ ಸುದ್ದಿಯ ಬಗ್ಗೆ, ಮನರಂಜನಾ ಕಾರ್ಯಕ್ರಮಗಳ ಬಗ್ಗೆ ಅವಳಿಗೆ ಗೊತ್ತೇ ಇರಲಿಲ್ಲ. ಓದೂ ಕೂಡ ಒಂಭತ್ತನೆಯ ತರಗತಿಗೆ ಮುಕ್ತಾಯವಾಗಿತ್ತು.



ಬೀಬಿಗಾಗಿ ಗಂಡು ಹುಡುಕಲೇಬೇಕೆಂದು ಒತ್ತಾಯಿಸಿದೆವು. ''ಇದು ಅವಳ ಬಹುದಿನದ ಬಯಕೆ'' ಎಂದೆವು. ಆದರೆ ಹಲ್ದಾರ್ ಮತ್ತವನ ಹೆಂಡತಿಗೆ ಮನವರಿಕೆ ಮಾಡುವುದು ಸಾಹಸದ ಕೆಲಸವೇ ಆಗಿತ್ತು. ಬೀಬಿಯ ಮೇಲಿನ ತಿರಸ್ಕಾರ ತುಂಬಿ ಅವರಲ್ಲಿ ತುಳುಕುತ್ತಿತ್ತು. ''ಬೀಬಿಗೆ ಅತ್ತ ನಿಗ್ರಹವಾಗಲಿ, ಮರ್ಯಾದೆಯಾಗಲಿ ಇಲ್ಲ. ಎಲ್ಲರೂ 'ಅಯ್ಯೋ' ಅನ್ನೋಂತ ಹೆಚ್ಚು ಮಾಡ್ತಾಳೆ. ಏನಾದ್ರು ಕೆಲ್ಸ ಹಚ್ಚಿ, ಮನಸ್ಸು ಬೇರೆಡೆಗೆ ತಿರುಗಿಸೋದ್ರಿಂದ, ಈ ತಾಪತ್ರಯಗಳಿಗೆಲ್ಲಾ ಕೊನೆ ಕಾಣಿಸ್ಬೋದು ಎಂದರವರು.

''ಮದ್ವೆ ಮಾಡಿ ಕೈ ತೊಳ್ಕೋಬಹುದಲ್ಲಾ?''

''ಮದ್ವೆ ಮಾಡಿ ನಮ್ಮ ಕೈ ಖಾಲಿ ಮಾಡ್ಕೋಬೇಕೇನು? ಬಂದವ್ರಿಗೆ ಊಟ ಹಾಕ್ಬೇಕು, ಒಡ್ವೆ ಮಾಡ್ಬೇಕು, ಹಾಸಿಗೆ ಹೊಲಿಸಬೇಕು, ವರದಕ್ಷಿಣೇನೂ ಕೊಡ್ಬೇಕು.''

ಇತ್ತ ಬೀಬಿಯ ಗೊಣಗಾಟ ಮುಂದುವರೆದಿತ್ತು. ಹೀಗೊಂದು ದಿನ, ನಾವು ಸಲಹೆ ನೀಡಿದಂತೆ, ತಿಳಿನೀರಳೆ ಬಣ್ಣದ ಶಿಫಾನ್ ಸೀರೆಯನ್ನುಟ್ಟು, ಕನ್ನಡಿ ಅಳವಡಿಸಿದ ಚಪ್ಪಲಿ ಮೆಟ್ಟಿ,

ಹಲ್ದಾರ್ ಅಂಗಡಿಯ ಮುಂದೆ ನಿಂತು, ಗಂಡಿರುವ ಮನೆಗಳಿಗೆ ಹಂಚಲು ತನ್ನ ಫೋಟೋ ತೆಗೆಸಬೇಕೆಂದು ಹಟ ಹಿಡಿದಿದ್ದಳು. ನಾವು ಬಾಲ್ಕನಿಯಲ್ಲಿ ನಿಂತು ನೋಡುತ್ತಿದ್ದವು. ಆಗಲೇ ಅವಳ ಬ್ಲೌಸಿನ ಕಂಕುಳಲ್ಲಿ, ಕಪ್ಪು ಚಂದ್ರನಂತೆ ಗುಂಡಗೆ ಬೆವರು ಮೂಡಿತ್ತು. "ಎಕ್ಸ್-ರೇ ಬಿಟ್ಟರೆ ನಾನು ಬೇರ್‍ಯಾವ ಫೋಟೋ ತೆಗೆಸಿಕೊಂಡಿಲ್ಲ" ಎಂದು ಆತಂಕಪಟ್ಟಳು. "ಭಾವೀ ಅತ್ತೆ-ಮಾವಂದಿರಿಗೆ ನಾನು ಹೇಗಿದ್ದೀನಿ ಅನ್ನೋದು ತಿಳೀಬೇಕು," ಎಂದು ಬೊಬ್ಬೆಯಿಟ್ಟಳು. ಹಲ್ದಾರ್ ಜಗ್ಗಲಿಲ್ಲ. ಆಸಕ್ತಿ ಇದ್ದವರು ತಾವೇ ಬರುತ್ತಾರೆಂದ. ಅತ್ತು, ಗೋಳಾಡಿ ಗೋಗರೆದಳು. ಬಂದ ಗಿರಾಕಿಗಳೆಲ್ಲಾ ಈ ರಂಪಾಟ ನೋಡಿ ಹಿಂದಿರುಗಿದರು. ವ್ಯಾಪಾರಕ್ಕೆ ಇವಳೊಂದು ಕಂಟಕವೆಂದು ಹಲ್ಕಡಿದ ಹಲ್ದಾರ್.

ಮರುದಿನದಿಂದಲೇ ಲೆಕ್ಕಪತ್ರ ಬರೆಯುವುದನ್ನು ಬೀಬಿ ಸಂಪೂರ್ಣವಾಗಿ ನಿಲ್ಲಿಸಿದಳು. ಬದಲಿಗೆ, ಹಲ್ದಾರ್ ಮತ್ತವನ ಹೆಂಡತಿಯ ಬಗ್ಗೆ ವ್ಯಂಗ್ಯವಾಗಿ ಮಾತಾಡಿ ನಮ್ಮನ್ನೆಲ್ಲಾ ರಂಜಿಸಿದಳು. "ಭಾನುವಾರ ಬಂದರೆ ಸಾಕು. ಅವಳ ಗಲ್ಲದಿಂದ ಕೂದಲು ಕೀಳುತ್ತಾನೆ. ದುಡ್ಡನ್ನು ಫ್ರಿಡ್ಜ್‌ನಲ್ಲಿಟ್ಟು ಬೀಗ ಹಾಕ್ತಾರೆ" ಎಂದು ಅಕ್ಕಪಕ್ಕದವರ ಅನುಕೂಲಕ್ಕಾಗಿ ಮಹಡಿಯ ಮೇಲೆ ನಿಂತು ಸಾರಿದಳು. ಒಂದೊಂದು ಘೋಷಣೆಯ ನಂತರವೂ, ಕೇಳುಗರು ಹೆಚ್ಚುತ್ತಾ ಹೋದರು. "ಬೆಳ್ಳಗಾಗ್ತೀಕೊಂತ ಸ್ನಾನ ಮಾಡೋವಾಗ ಕಡ್ಲೆ ಹಿಟ್ಟು ಬಳ್ಕೊತಾಳೆ. ಅವಳ ಬಲಗಾಲಿನ ಮೂರನೆ ಬೆರಳೇ ಇಲ್ಲಾ, ಗೊತ್ತೇನು? ಅವರ್‍ಯಾಕೆ ಅಷ್ಟೊತ್ತು ಮಲ್ಗೋದು ಹೇಳಿ? ಅಯ್ಯೋ, ಅವಳ ಆಸೆ ಪೂರೈಸೋದಕ್ಕೇ ಆಗಲ್ವಂತೆ."

ಬೀಬಿಯ ಬಾಯ್ಮುಚ್ಚಿಸಲು ಹಲ್ದಾರ್ ಒಂದು ಸಾಲಿನ ಜಾಹಿರಾತನ್ನು ದಿನಪತ್ರಿಕೆಗೆ ಕೊಟ್ಟ. "ಹುಡುಗಿ ಮಾನಸಿಕ ಅಸ್ವಸ್ಥಳು. 152 ಸೆ.ಮೀ. ಎತ್ತರ, ಗಂಡು ಬೇಕಾಗಿದ್ದಾನೆ." ಸುಮಾರು ಮದುವೆಯಾಸಕ್ತ ಗಂಡುಗಳಿಗೆ ಹುಡುಗಿ

ಯಾರೆಂದು ತಿಳಿದಿದ್ದರಿಂದ, ಜವಾಬ್ದಾರಿ ಹೋ
ಯಾರೂ ತಯಾರಿರಲಿಲ್ಲ. ನಿದ್ದೆಯಲ್ಲಿ ಚ
ಅರ್ಥವಾಗದ ಭಾಷೆಯಲ್ಲಿ ಬಡಬಡಿಸುತ್ತಾಳೆ
ಗಾಳಿಸುದ್ದಿ ಊರೆಲ್ಲಾ ಹರಡಿತ್ತು. ಹೀಗ
ಮಾರ್ಕೆಟ್ಟಿನಲ್ಲಿ ಬ್ಯಾಗ್ ರಿಪೇರಿ ಮಾಡುವ ನಾ
ಹಲ್ಲುಗಳಿದ್ದ ವಿಧುರ ಕೂಡ ಇವ
ಮದುವೆಯಾಗಲಾರೆನೆಂದ.

ಅವಳ ಮನಸ್ಸನ್ನು ತಿಳಿಗೊಳಿಸಲು ಪ
ಬೇಕಾದ ವಿದ್ಯೆಗಳನ್ನು ಕಲಿಸಲು ಪ್ರಾರಂಭಿಸಿ
"ಹೀಗೆ ಸದಾಕಾಲ ಗಂಟು ಮುಖ ಮಾಡಿ ಕುಳಿ
ಯಾವ ಗಂಡಸೂ ನಿನ್ನ ಬಳಿ ಬರುವುದಿಲ್ಲ.
ಮುಖಚರ್ಯೆ ತಂಪೆರೆಯಬೇಕು," ಎಂದ
ಬೋಧಿಸಿದೆವು. ವರ ಬಂದರೆ ಆಭಾಸ
ಬಾರದಂಬ ದೃಷ್ಟಿಯಲ್ಲಿ, ಅಕ್ಕಪಕ್ಕದ ಗಂಡಸರೊ
ಮಾತನಾಡಲು ಹೇಳಿದೆವು. ನೀರು ಹೊರುವವ
ಬೀದಿಯ ಕೊನೆಯಲ್ಲಿದ್ದ ಹಂಡೆಯನ್ನು ತುಂ
ಬಂದಾಗ "ಹೇಗಿದ್ದೀ?" ಎಂದು ಕೇಳ
ಎಂದೆವು. ಇಜ್ಜಲು ಮಾರುವವನು ಮಹ
ಮೇಲೆ ಇಜ್ಜಲು ಸುರಿಯಲು ಬಂದಾಗ ಹ
ಬಗ್ಗೆ ವಿಚಾರಿಸಲು ಹೇಳಿದೆವು. ನಮ್ಮ ಅನು
ಗಳನ್ನು ನೆನಪು ಮಾಡಿಕೊಂಡು, ಬೀಬಿಯನ್ನು
ಪರೀಕ್ಷೆಗೆ ತಯಾರುಗೊಳಿಸಿದೆವು. "ಸಾಧಾ
ವಾಗಿ ವರ ತಂದೆ-ತಾಯಿ, ಅಜ್ಜ-ಅಜ್ಜಿ ಅ
ಚಿಕ್ಕಮ್ಮನೊಂದಿಗೆ ಬರುತ್ತಾನೆ. ದುರು
ನೋಡುತ್ತಾರೆ, ಹತ್ತು-ಹಲವಾರು ಪ್ರಶ್ನೆಗಳನ್ನು
ತ್ತಾರೆ. ಕೂದಲಿನಿಂದ ಕಾಲವರೆಗೂ ಎಲ್ಲ
ಗಮನಿಸುತ್ತಾರೆ. ಪ್ರಧಾನಿ ಯಾರೊಂತ ಕೇ
ಪದ್ಯ ಹೇಳೊಂತಾರೆ, ಒಂದು ಡಜನ್ ಜನ
ಅರ್ಧ ಡಜನ್ ಮೊಟ್ಟೆಯಲ್ಲಿ ಅಡಿಗೆ ಮಾಡೋ

ಎರಡು ತಿಂಗಳು ಹೀಗೆ ಕಳೆ
ಜಾಹೀರಾತಿಗೆ ಒಂದು ಉತ್ತರವೂ ಬರ
"ಈಗ ತಿಳೀತಾ, ಇವ್ಳು ಮದ್ವೆಗೆ ಯೋಗ್ಯ
ಅನ್ನೋದು? ಬುದ್ಧಿ ನೆಟ್ಟಗಿರೋನು ಅವಳ
ಸುಳಿಯೋದೂ ಇಲ್ಲ" ಎಂದು ಹ
ದಂಪತಿಗಳು ಕೋಪದಿಂದ ನುಡಿದರು.

ಬೀಬಿಯ ತಂದೆ ಬದುಕಿದ್ದಾಗ, ಅವಳ ಆರೋಗ್ಯ ಇಷ್ಟು ಹದಗೆಟ್ಟಿರಲಿಲ್ಲ. (ತಾಯಿ ಬೀಬಿ ಹುಟ್ಟಿದ ಕೂಡಲೇ ಸತ್ತಿದ್ದಳು). ಅವರ ಕೊನೆಯ ದಿನಗಳಲ್ಲಿ ಬೀಬಿಯ ತಂದೆ, ಗಣಿತದ ಮೇಷ್ಟ್ರು, ಅವಳ ದೇಹಸ್ಥಿತಿಯ ಬಗ್ಗೆ ಅಪಾರ ಕಾಳಜಿ ವಹಿಸಿದ್ದರು. ಯಾರಾದರೂ ಬೀಬಿಯ ಬಗ್ಗೆ ವಿಚಾರಿಸಿದರೆ, "ಎಲ್ಲಾ ರೋಗಕ್ಕೂ ಒಂದು ಪರಿಹಾರ ಇದ್ದೇ ಇರುತ್ತೆ," ಎನ್ನುತ್ತಿದ್ದರು. ಬೀಬಿಗೆ ಧೈರ್ಯ ಹೇಳುತ್ತಿದ್ದರು. ಒಂದು ಕಾಲಕ್ಕೆ ನಮಗೆಲ್ಲಾ ಧೈರ್ಯ ಹೇಳಿದರು. ಇಂಗ್ಲೆಂಡಿನ ಡಾಕ್ಟರುಗಳಿಗೆ ಕಾಗದ ಬರೆದಿದ್ದರು. ಸಂಜೆಯಾದರೆ ಲೈಬ್ರರಿಗೆ ಹೋಗಿ ಪುಸ್ತಕಗಳನ್ನು ಓದುತ್ತಿದ್ದರು. ಮನೆದೇವರನ್ನು ಒಲಿಸುವುದಕ್ಕಾಗಿ ಮಾಂಸ ತಿನ್ನುವುದನ್ನೂ ಬಿಟ್ಟಿದ್ದರು. ಕೊನೆಗೆ ಸ್ಕೂಲನ್ನೂ ಬಿಟ್ಟಿದ್ದರು. ಮನೆಯಲ್ಲೇ ಮಕ್ಕಳಿಗೆ ಪಾಠ ಹೇಳಿ ಕೊಡುತ್ತಾ, ಬೀಬಿಯನ್ನು ನೋಡಿಕೊಳ್ಳುತ್ತಿದ್ದರು. ಅತಿ ಕ್ಲಿಷ್ಟವಾದ ವರ್ಗಮೂಲಗಳನ್ನು ಬಾಯಿಪಾಠ ಮಾಡಿ ಬಹುಮಾನ ಗಿಟ್ಟಿಸಿದ್ದ ಅವರಿಗೆ, ಮಗಳ ರೋಗದ ಒಗಟನ್ನು ಬಿಡಿಸಲಾಗಲಿಲ್ಲ.

ಅವರು ಕಂಡುಕೊಂಡ ಪ್ರಕಾರ, ಬೀಬಿಗೆ ಚಳಿಗಾಲಕ್ಕಿಂತ ಬೇಸಿಗೆಯಲ್ಲೇ ಹೆಚ್ಚು ಆಘಾತವಾಗುತ್ತಿತ್ತು. ರೋಗ ಲಕ್ಷಣಗಳನ್ನೆಲ್ಲಾ ಪಟ್ಟಿ ಮಾಡಿ, ಅದಕ್ಕೆ ಮದ್ದೂ ಸೂಚಿಸಿ, ಇಡೀ ವಠಾರದಲ್ಲಿ ಹಂಚಿದ್ದರು. ಅವೆಲ್ಲಾ ಗಾಳಿಪಟಗಳಾಗಿ, ಹಾಯಿ ದೋಣಿಗಳಾಗಿ, ಮನೆಯ ಸಾಮಾನುಗಳ ಪಟ್ಟಿ ಬರೆಯುವುದಕ್ಕಾಗಿ ಉಪಯೋಗವಾಗಿದ್ದವು.

ಆಗೀಗ ಬೀಬಿಯ ಜೊತೆಗಿರುವುದು, ಅವಳ ದುಃಖ-ದುಮ್ಮಾನಗಳನ್ನು ಹಂಚಿಕೊಳ್ಳುವುದು, ಅಲ್ಪಸ್ವಲ್ಪ ಸಮಾಧಾನಪಡಿಸುವುದನ್ನು ಬಿಟ್ಟರೆ, ನಮ್ಮಿಂದ ಹೆಚ್ಚೇನೂ ಮಾಡಲಾಗುತ್ತಿರಲಿಲ್ಲ. ಬೀಬಿಯ ನೋವು-ಸಂಕಟಗಳ ಪರಿಪೂರ್ಣ ಅರಿವೂ ನಮಗಾಗುತ್ತಿರಲಿಲ್ಲ. ಒಮ್ಮೊಮ್ಮೆ ಮಧ್ಯಾಹ್ನದ ಹೊತ್ತು ಅವಳಿಗೆ ತಲೆ ಬಾಚುತ್ತಿದ್ದೆವು, ಹುಬ್ಬನ್ನು ತೀಡಿದ್ದೆವು. ಕೆಲವೊಮ್ಮೆ ಅವಳೊಂದಿಗೆ ಕೆರೆಯೇರಿಯ ಮೇಲೆ ಕುಳಿತು ಮಕ್ಕಳ ಕ್ರಿಕೆಟ್ ಆಟ ನೋಡಿದ್ದೆವು.

ಗಂಡಸಿನ ಮನ ಒಲಿಸಿಕೊಳ್ಳಬೇಕೆಂದು ಅವಳು ದೃಢವಾಗಿ ನಿಶ್ಚಯಿಸಿದ್ದಳು. "ಈ ರೋಗ ಬಿಟ್ಟರೆ, ನನಗೆ ಬೇರೇನೂ ಇಲ್ಲ. ಆರೋಗ್ಯವಾಗಿದ್ದೇನೆ" ಎನ್ನುವಳು. ರಸ್ತೆಯ ಬದಿಗಿದ್ದ ಬೆಂಚಿನ ಮೇಲೆ ಕೂತು, ಕೈಯೊಳಗೆ-ಕೈ ಹಾಕಿ ಹೋಗುವ ಗಂಡಹೆಂಡಿರನ್ನು ನೋಡಿ, 'ನೆಗಡಿ, ಜ್ವರ ಇಲ್ಲ, ಕಾಮಾಲೆ ಬಂದಿಲ್ಲ. ಹೊಟ್ಟೆ ನೋವು, ಅಜೀರ್ಣ ಇಂಥ ಸಮಸ್ಯೆಗಳು ಇಲ್ಲವೇ ಇಲ್ಲ" ಎನ್ನುತ್ತಿದ್ದಳು. ಚಾರ್ಟ್, ನಿಂಬೆ ಹಣ್ಣಿನ ರಸ ಬಳಿದ ಸುಟ್ಟ ಜೋಳ, ಪೆಪ್ಪರಮೆಂಟು ಕೊಡಿಸಿದೆವು. ಸಮಾಧಾನ ಹೇಳಿದೆವು. ಅವನು ನನ್ನನ್ನೇ ನೋಡುತ್ತಿದ್ದಾನೆ ಎಂದು ಬಿಗ್ಗಿದಾಗ, ಅವಳಿಗೆ ಖುಷಿಯಾಗಲೆಂದು ನಾವು ಹೂಂಗುಟ್ಟಿದೆವು. ಆದರೆ ನಮ್ಮ ಖಾಸಗಿ ಕ್ಷಣಗಳಲ್ಲಿ ಅವಳು ನಮ್ಮ ಜವಾಬ್ದಾರಿ ಅಲ್ಲವೆಂದು ನಿಟ್ಟುಸಿರಿಟ್ಟೆವು.

ನವೆಂಬರ್‌ನಲ್ಲಿ ಹಲ್ವಾರ್ ಹೆಂಡತಿ ಗರ್ಭಿಣಿಯೆಂದು ತಿಳಿಯಿತು. ಅಂದು ಬೆಳಗ್ಗೆ ಬೀಬಿ ಗೋಳೋಯೆಂದು ಅತ್ತಳು. "ನನ್ನದು ಅಂಟು ರೋಗವಂತೆ. ನನ್ನಿಂದ ಮಗುವಿಗೆ ತೊಂದರೆಯಂತೆ" ಎಂದು ಜೋರಾಗಿ ಉಸಿರಾಡುತ್ತಾ, ಗೋಡೆಯ ಮೇಲೆ ಬಣ್ಣ ಕಳಕೊಂಡ ಸಣ್ಣ ಜಾಗದಲ್ಲಿ ಕಣ್ಣು ನೆಟ್ಟು "ನನ್ನ ಗತಿ ಏನು?" ಎಂದು ಪ್ರಲಾಪಿಸಿದಳು. ಜಾಹಿರಾತಿಗೆ ಉತ್ತರವಿರಲಿಲ್ಲ. "ಈ ಶಾಪವನ್ನು ನಾನೊಬ್ಬಳೇ ಸಹಿಸುವುದು ಸಾಲದೇ? ಬೇರೆಯವರಿಗೂ ಇದನ್ನು ಅಂಟಿಸುತ್ತಿದ್ದೇನೆ ಎನ್ನುವ ಆರೋಪವನ್ನು ನಾನು ಸಹಿಸಬೇಕೆ?"

ಮನೆಯೊಳಗಿನ ವೈಮನಸ್ಯ ಹೆಚ್ಚಾಯಿತು. ಹಲ್ವಾರನ ಹೆಂಡತಿ ಬೀಬಿಯಿಂದ ರೋಗ ತಗುಲಬಹುದೆಂಬ ಭಯದಿಂದ ಹೊಟ್ಟೆಯ ಸುತ್ತ ಉಣ್ಣೆಯ ಶಾಲನ್ನು ಕಟ್ಟುತ್ತಿದ್ದಳು. ಬೀಬಿಗೆಂದು ಬೇರೆ ಸೋಪು, ಟವಲ್ ಇಟ್ಟರು. ಕೆಲಸದವಳ ಪ್ರಕಾರ, ಬೀಬಿಯ ಊಟದ ತಟ್ಟೆಯನ್ನೂ ಬೇರೆ ಇಡುತ್ತಿದ್ದರು.

ಹೇಳದೆ ಕೇಳದೆ, ಸುಳಿವು ಸೂಚನೆಯಿಲ್ಲದೆ, ಒಂದು ಮಧ್ಯಾಹ್ನ ಮತ್ತೆ ರೋಗ ಮರುಕಳಿಸಿತು. ಕೆರೆಯೇರಿಯ ಮೇಲೆ ಬೀಬಿ ದಢಾರನೆ ಬಿದ್ದಳು. ಗಡಗಡನೆ ನಡುಗಿದಳು. ತುಟಿ ಕಚ್ಚಿದಳು. ಗುಂಪೊಂದು ಕೂಡಲೇ ಕಲೆಯಿತು. ಸಹಾಯಕ್ಕೆಂದು ಬಂದರು. ಸೋಡಾ ಒಡೆಯುತ್ತಿದ್ದವ ಅವಳ ಕಾಲುಗಳನ್ನು ಒತ್ತಿ ನೆಲಕ್ಕೆ ಹಿಡಿದುಕೊಂಡ. ಸೌತೆಕಾಯಿ ಮಾರುವವನು ಮಡಚಿಕೊಂಡ ಬೆರಳನ್ನು ಬಿಡಿಸಲು ಪ್ರಯತ್ನಿಸಿದ. ನಮ್ಮಲ್ಲೊಬ್ಬರು ಕೆರೆಯಿಂದ ನೀರು ತಂದು ತಲೆಯ ಮೇಲೆ ಸುರಿದೆವು. ಸುವಾಸಿತ ಕರ್ಚಿಫಿನಿಂದ ಯಾರೋ ಅವಳ ಬಾಯನ್ನು ಒರೆಸಿದರು. ತೂಗುತ್ತಿದ್ದ ತಲೆಯನ್ನು ಹಲಸು ಮಾರುವವನು ಗಟ್ಟಿಯಾಗಿ ಹಿಡಿದ. ನೊಣಗಳನ್ನು ಓಡಿಸುವ ಸಲುವಾಗಿಟ್ಟಿದ್ದ ಬೀಸಣಿಗೆಯಿಂದ ಕಬ್ಬಿನ ಹಾಲಿನವನು ಗಾಳಿ ಹಾಕಿದ.

"ಇಲ್ಲಿ ವೈದ್ಯರಿದ್ದಾರೆಯೇ?"

"ನಾಲಿಗೆ ನುಂಗಲು ಬಿಡಬೇಡಿ."

"ಹಲ್ದಾರಿಗೆ ಯಾರಾದರೂ ಸುದ್ದಿ ಮುಟ್ಟಿಸಿದರೇನು?"

"ಮೈ ಕೆಂಡವಾಗಿದೆ!"

ನಮ್ಮೆಲ್ಲಾ ಪ್ರಯತ್ನಗಳ ಬಳಿಕವೂ ಕೋಲಾಹಲ ಮುಂದುವರೆದಿತ್ತು. ವೈರಿಯೊಂದಿಗಿನ ಅವಳ ಸೆಣಸಾಟ ನಡೆದೇ ಇತ್ತು. ಕೈ ಕುಟ್ಟಿದಳು, ಅವಡುಗಚ್ಚಿ ಕಾಲು ಬಡಿದಳು. ಎರಡು ನಿಮಿಷಗಳು ಕಳೆದವು, ಆತಂಕದಿಂದ ನಿಂತೆವು... ಮುಂದೇನು ಎಂದು ತೋಚಲಿಲ್ಲ. ಅಷ್ಟರಲ್ಲಿ, "ಚರ್ಮದ ವಾಸನೆ ತೋರಿಸಿ" ಎಂದು ಯಾರೋ ಕೂಗಿದರು. ಹಿಂದೆಯೂ ಚಪ್ಪಲಿ ಅವಳ ಮೂಗಿನ ಬಳಿ ಹಿಡಿದಿದ್ದಾಗ ಅವಳು ಗುಣವಾಗಿದ್ದಳು. ಕೊನೆಗೂ ಬೀಬಿ ವೇದನೆಯಿಂದ ಮುಕ್ತಗೊಂಡಳು.

ಅವಳು ಕಣ್ಣು ಬಿಡುತ್ತಿದ್ದ ಹಾಗೆಯೇ 'ಏನಾಯ್ತು ಹೇಳು" ಎಂದೆವು.

"ಮೈಯೆಲ್ಲಾ ಸ್ವಲ್ಪ ಬಿಸಿಯಾಯ್ತು, ಮತ್ತಷ್ಟಾಯ್ತು. ಕಣ್ಮುಂದೆ ಹೊಗೆಯಾಡಿತು. ಇಡೀ ಜಗತ್ತೇ ಕತ್ತಲಾಯ್ತು. ನೀವ್ಯಾರ... ನೋಡಲಿಲ್ವೇನೂ?" ಎಂದಳು. ನ... ಗಂಡಂದಿರು ಅವಳನ್ನು ಮನೆಗೆ ಕರೆದೊಯ್ದರ... ಕತ್ತಲಾಯ್ತು. ದೂರದಲ್ಲಿ ಶಂಖ ಊದಿದ ಸದ... ಸಂಜೆ ಗಾಳಿಯೆಲ್ಲಾ ಧೂಪದ, ಪ್ರಾರ್ಥನೆ... ಪರಿಮಳದಿಂದ ತುಂಬಿಕೊಂಡಿತು. ಬೀ... ಬಡಬಡಿಸುತ್ತಲೇ ಇದ್ದಳು. ಆದರೆ ಏನ... ಹೇಳಲಿಲ್ಲ. ಅವಳ ಕೆನ್ನೆಯ ಮೇಲೆ ಗಾಯವಾಗಿ... ಕೂದಲಲ್ಲಿ ಮಣ್ಣು, ಮೊಳಕೈಗೆಲ್ಲಾ ... ಅಂಟಿಕೊಂಡಿತ್ತು. ಮುಂದಿನ ಹಲ್ಲು ಮುರಿದಿ... ನಾವೂ ಬೀಬಿಯ ಹಿಂದೆಯೇ, ಮಕ್ಕಳ ಕೈ ಹಿಡಿ... ಕ್ಷೇಮವೆನಿಸುವಷ್ಟು ಅಂತರದಲ್ಲಿ ನಡೆದೆವು.

ಬೀಬಿಗೆ ಕಂಬಳಿಯ ಅವಶ್ಯಕತೆಯಿ... ನಿದ್ರೆಮಾತ್ರೆಯ ಅವಶ್ಯಕತೆಯೂ ಇತ್ತು. ವೈದ್ಯಕೀ... ತಪಾಸಣೆ ಬೇಕಿತ್ತು. ಹಲ್ದಾರ್ ಮತ್ತವನ ಹೆಂ... ಬೀಬಿಯನ್ನು ಮನೆಯೊಳಗೆ ಸೇರಿಸ... ತಯಾರಿರಲಿಲ್ಲ. ಆ ರಾತ್ರಿ ಬೀಬಿ ಬಿಸಿಲ್ಮ... ಕೋಣೆಯಲ್ಲಿ ಮಲಗಿದಳು.

ಜೂನ್ ತಿಂಗಳ ಕೊನೆಯಲ್ಲಿ force... ಪ್ರಯೋಗದಿಂದ ಹಲ್ದಾರನ ಹೆಂಡತಿಗೆ ಹೆಣ್ಣುಮ... ಹುಟ್ಟಿತು. ಆ ವೇಳೆಗೆ ಬೀಬಿ ಮತ್ತೆ ಕೆ... ಮಲಗುತ್ತಿದ್ದಳು. ಆದರೆ ಅವಳ ಚಾರ್ಪಾಯಿಯ... ಹೊರ ಅಂಗಳದಲ್ಲಿ ಹಾಕಿದ್ದರು. ನೇರ ಮಗುವ... ಮುಟ್ಟಲು ಅವಳಿಗೆ ಅನುಮತಿ ಇರಲಿಲ್ಲ. ಪ್ರತಿ... ಮಧ್ಯಾಹ್ನದ ಊಟದ ಸಮಯದವರೆಗೆ ಅವ... ಮಹಡಿಗೆ ಸಾಮಾನುಗಳ ಲೆಕ್ಕ ಬರೆಯ... ಕಳುಹಿಸುತ್ತಿದ್ದರು. ಊಟದ ಹೊತ್ತಿಗೆ, ಒ... ಬಟ್ಟಲು ಆಹಾರ ತಂದು ಅದರೊಂದಿಗೆ ಬೆಳ... ವ್ಯಾಪಾರದ ರಸೀತಿಗಳನ್ನು ಕೊಟ್ಟು ಹೋಗು... ಹಲ್ದಾರ್. ರಾತ್ರಿಯ ಊಟಕ್ಕೆ ಬ್ರೆಡ್ ವ... ಹಾಲು. ಮೆಟ್ಟಿಲಿನ ಮೇಲೆ ಕೂತು ಒ... ತಿನ್ನುತ್ತಿದ್ದಳು. ಬೀಬಿಯ ರೋಗ ಆ... ಮರುಕಳಿಸುತ್ತಲೇ ಇತ್ತು. ಗಮನಿಸುವವರಾ... ಇರಲಿಲ್ಲ. ಬೀಬಿಯ ಜೀವನ ಹೀಗೇ ಸಾಗಿತ್ತು.

ನಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ...

ನಿರ್ದಾಕ್ಷಿಣ್ಯವಾಗಿ ಅದು ನಿಮಗೆ ಸಂಬಂಧಿಸಿದ್ದಲ್ಲ ಎಂದ ಹಲ್ದಾರ್. ನಮ್ಮ ಕೋಪ ತೀರಿಸಿಕೊಳ್ಳಲು ಅವನ ಅಂಗಡಿಯ ಸಾಮಾನು ಕೊಳ್ಳುವುದು ಬಿಟ್ಟೆವು. ವಾರಗಳಾದರೂ ಅವನ ಸಾಮಾನು ಖರ್ಚಾಗಲಿಲ್ಲ. ಲೇಬಲ್‌ಗಳೆಲ್ಲಾ ಬಣ್ಣ ಕಳ ಕೊಂಡವು. ಪರಿಮಳ ದ್ರವ್ಯಗಳು ಪರಿಮಳ ಹೀನವಾದವು. ಸಂಜೆಯಾಯಿತೆಂದರೆ ನೊಣ ಹೊಡೆಯುತ್ತಾ ಕುಳಿತಿರುತ್ತಿದ್ದ. ಅವನ ಹೆಂಡತಿಯಂತೂ ಹೊರಗೇ ಬರುತ್ತಿರಲಿಲ್ಲ. ಅವಳ ಹೆರಿಗೆ ಕಷ್ಟವಾಗಿದ್ದು, ಅವಳಿನ್ನೂ ಚೇತರಿಸಿಕೊಂಡಿಲ್ಲ ಎಂದು ಕೆಲಸದವಳು ಹೇಳಿದಳು.

ಶಿಶಿರ ಬಂತು. ಅದರ ಹಿಂದೆಯೇ ಅಕ್ಟೋಬರ್ ರಜೆ. ಇಡೀ ಊರೇ ಹಬ್ಬದ ತಯಾರಿ ನಡೆಸಿತ್ತು. ಮರದ ಮೇಲೆ ನೇತುಕಿದ ಸ್ಪೀಕರು ಗಳಿಂದ ಸಿನಿಮಾ ಹಾಡುಗಳು ಕೂಗುತ್ತಿದ್ದವು. ಈ ದಿನಗಳಲ್ಲಿ ಮಾರ್ಕೆಟ್ಟು, ಅಂಗಡಿಗಳೆಲ್ಲಾ ಹೆಚ್ಚು ಹೊತ್ತು ತೆರೆದಿರುತ್ತಿದ್ದವು. ಮಕ್ಕಳಿಗೆ ಬಲೂನ್, ಬಣ್ಣ ಬಣ್ಣದ ರಿಬ್ಬನ್‌ಗಳು, ಸಿಹಿ ತಿಂಡಿ ಕೊಡಿಸಿದೆವು. ಹಗಲು ಚಿಕ್ಕದಾಗಿ, ರಾತ್ರಿ ಉದ್ದವಾಯಿತು. ಚಳಿಗಾಳಿ ಗಂಟಲು ನೋವು ತಂದಿತು. ಉಪ್ಪು ನೀರಿನಿಂದ ಮಕ್ಕಳು ಗಂಟಲು ಮುಕ್ಕಳಿಸಿದರು. ಕತ್ತಿನ ಸುತ್ತ ಮಫ್ಲರ್ ಕಟ್ಟಿದೆವು. ಹಲ್ದಾರ್ ಮಗುವಿಗೆ ಆರೋಗ್ಯ ಮಾತ್ರ ಕೆಟ್ಟಿತು.

ಮಧ್ಯರಾತ್ರಿ ವೈದ್ಯರನ್ನು ಕರೆತಂದರು, "ಅವಳನ್ನು ಗುಣಪಡಿಸಿ", ಎಂದು ಬೇಡಿದಳು ಹಲ್ದಾರನ ಹೆಂಡ್ತಿ. ಅವಳ ಕೀರಲು ಧ್ವನಿ ನಮ್ಮನ್ನೆಲ್ಲಾ ಎಚ್ಚರಗೊಳಿಸಿತು. "ಏನು ಬೇಕಾದ್ರೂ ಕೊಡ್ತೀವಿ," ಎಂದು ಗೋಗರೆದರು. ವೈದ್ಯರು ಮದ್ದು ಹೇಳಿ, ಮಗುವನ್ನು ಬೆಚ್ಚಗಿನ ಕಂಬಳಿಯಲ್ಲಿ ಸುತ್ತಿಡಬೇಕೆಂದು ಹೇಳಿದರು.

ಐದು ದಿನಗಳಾದರೂ ಜ್ವರ ಇಳಿಯಲಿಲ್ಲ. "ಬೀಬಿನೇ ಕಾರಣ" ಎಂದು ಹಲ್ದಾರನ ಹೆಂಡ್ತಿ ಅತ್ತಳು. ಬೀಬಿಗೆ ಮತ್ತೆ ಬಿಸಿಲ್ಛಚ್ಚು ವಾಸ. ಹೆಂಡತಿಯ ಬಲವಂತಕ್ಕೆ ಅವಳ ಕಬ್ಬಿಣದ ಪೆಟ್ಟಿಗೆ, ಹಾಸಿಗೆ ಎಲ್ಲವನ್ನೂ ಮೇಲಿಟ್ಟನು. ಮೆಟ್ಟಿಲ ಮೇಲೆ



ಅವಳ ಊಟ ಇಡುತ್ತಿದ್ದರು.

"ನನ್ಗೇನೂ ಬೇಸರ ಇಲ್ಲ" ಎಂದಿದ್ದಳು ಬೀಬಿ. "ಅವ್ರಿಂದ ಬೇರೆ ಇರೋದೇ ಒಳ್ಳೇದು. ನನಿಷ್ಟ ಬಂದ್ಹಾಗೆ ಇರ್ತೀನಿ." ಪೆಟ್ಟಿಗೆಯಲ್ಲಿದ್ದ ಸಾಮಾನೆಂದರೆ ಹಳೇ ಬಟ್ಟೆಗಳು, ಅವಳ ತಂದೆಯ ಭಾವಚಿತ್ರ, ಹೊಲಿಗೆ ಸಾಮಾನು. ಖಾಲಿ ಬಿದ್ದಿದ್ದ ಹಲಗೆಗಳ ಮೇಲೆ ಎಲ್ಲ ಜೋಡಿಸಿದಳು. ಮಗು ಹುಷಾರಾದರೂ ಅವರು ಬೀಬಿಯನ್ನು ಕೆಳಗೆ ಬರಲು ಹೇಳಲಿಲ್ಲ. "ಅವರೇನು ನನ್ನ ಕೂಡ್ಹಾಕಿಲ್ಲಲ್ಲಾ, ನೀವ್ಯಾಕೆ ಯೋಚ್ನೆ ಮಾಡ್ತಿರಿ" ಎಂದು ನಮ್ಮನ್ನೆಲ್ಲಾ ಬೀಬಿಯೇ ಸಮಾಧಾನಗೊಳಿಸಿದಳು.

ಅವಳು ಹೊರಬರುವುದನ್ನೇ ಬಿಟ್ಟಳು. ನಮ್ಮೊಂದಿಗೆ ಕೆರೆಗೆ, ದೇವಸ್ಥಾನಕ್ಕೂ ಬರಲಿಲ್ಲ. ಬಾಗಿಲಿಗೆ ಪರದೆ ಹೊಲಿಯಬೇಕೆಂದಳು. ಮುಖ ಕಳೆಗುಂದಿತ್ತು. "ಒಳಗೆ ಕೂತಿದ್ರೆ ಯಾವ ಗಂಡೂ ಸಿಗೋದಿಲ್ಲ, ಬಾ" ಎಂದೆವು. ಆದರೂ ಅವಳ ನಿರ್ಧಾರ ಬದಲಾಯಿಸಲಾಗಲಿಲ್ಲ.

ಡಿಸೆಂಬರ್ ಹೊತ್ತಿಗೆ ಮಾರಾಟವಾಗದ

ಸಾಮಾನೆಲ್ಲಾ ಅಂಗಡಿಯಿಂದ ಬಿಸಿಲ್ಗಚ್ಚಿನ ಕೊಠಡಿಗೆ ಬಂತು. ಹಲ್ದಾರನ ವ್ಯಾಪಾರ ಕುಸಿದಿತ್ತು. ವರ್ಷದ ಕೊನೆಯ ಹೊತ್ತಿಗೆ, ಒಂದು ಕವರಿನಲ್ಲಿ ಮುನ್ನೂರು ರೂಪಾಯಿಯನ್ನು ಬೀಬಿಯ ಕೋಣೆಯ ಬಾಗಿಲಿನ ಕೆಳಗಿಟ್ಟು, ಹಲ್ದಾರ್ ಮತ್ತವನ ಹೆಂಡತಿ ಊರು ಬಿಟ್ಟುಹೋದರು.

ನಮ್ಮಲ್ಲೊಬ್ಬರ ಬಳಿ ಹೈದರಾಬಾದಿನಲ್ಲಿದ್ದ ಬೀಬಿಯ ದೂರದ ನೆಂಟರ ಅಡ್ರೆಸ್ಸಿತ್ತು. ಅವರಿಗೆ ಬರೆದ ಕಾಗದ ಎರಡು ವಾರದ ನಂತರ ಹಿಂದಿರುಗಿ ಬಂತು. ಬೀಬಿಯ ಕೋಣೆಯ ಬಾಗಿಲನ್ನು ಸರಿಪಡಿಸಿದೆವು. ಯಾರೋ ಸೀಮೆಎಣ್ಣೆಯ ದೀಪ ಕೊಟ್ಟರು. ಇನ್ನೊಬ್ಬರು ಸೊಳ್ಳೆ ಪರದೆ ಕೊಟ್ಟರು. ಸಮಯ ಸಿಕ್ಕಾಗೆಲ್ಲಾ ನಾವು ಅವಳ ಜೊತೆಗಿದ್ದೀವಿ ಎಂದು ಆಶ್ವಾಸನೆ ನೀಡಿದೆವು. ಅವಳಿಗೆ ಮತ್ತೊಮ್ಮೆ ಆಘಾತವಾದರೆ ನಮಗೆ ಸುಳಿವು ಕೊಡಬೇಕೆಂದು ಹೇಳಿ, ಮಧ್ಯಾಹ್ನದ ಹೊತ್ತು ಮಕ್ಕಳನ್ನು ಬಿಸಿಲ್ಗಚ್ಚಿಗೆ ಆಟವಾಡಲು ಕಳುಹಿಸುತ್ತಿದ್ದೆವು.

ತಿಂಗಳುಗಳು ಕಳೆದವು. ಬೀಬಿ ಸುದೀರ್ಘ ಮೌನ ತಾಳಿದ್ದಳು. ದಿನಕ್ಕೊಬ್ಬರು ಅವಳಿಗೆ ಊಟ ತಿಂಡಿ ಕೊಡುತ್ತಿದ್ದೆವು. ತಿನ್ನುವುದು, ಕುಡಿಯುವುದು ತೀರಾ ಕಡಿಮೆ ಮಾಡಿದ್ದಳು. ಅವಳ ಮುಖದಲ್ಲಿ ವಯಸ್ಸಿಗೆ ಮೀರಿದ ಭಾವವಿತ್ತು. ಸಂಜೆಹೊತ್ತು ಒಂದೆರಡು ಬಾರಿ ಬಿಸಿಲ್ಗಚ್ಚಿನ ಮೇಲೆ ಓಡಾಡುತ್ತಿದ್ದಳೇ ಹೊರತು, ಮಹಡಿಯಿಂದ ಕೆಳಗಿಳಿಯುತ್ತಿರಲಿಲ್ಲ. ಕತ್ತಲಾದ ನಂತರ ಅವಳ ಕೋಣೆಯ ತಗಡಿನ ಬಾಗಿಲ ಹೊರಗೆ ಬರುತ್ತಿರಲಿಲ್ಲ. ನಾವೂ ಅವಳ ಗೊಡವೆಗೆ ಹೋಗುತ್ತಿರಲಿಲ್ಲ. ಸಾಯುತ್ತಿದ್ದಾಳೇನೋ ಎಂದು ಕೆಲವರು ಭಾವಿಸಿದರು. ಇನ್ನು ಕೆಲವರು ಅವಳಿಗೆ ಬುದ್ಧಿ ಭ್ರಮಣೆಯಾಗಿರಬಹುದೆಂದರು.

ಏಪ್ರಿಲ್‌ನ ಒಂದು ಮುಂಜಾನೆ. ಆಲೂಗೆಡ್ಡೆ ಉಪ್ಪೇರಿ ಒಣಗಿಹಾಕಲೆಂದು ಬಿಸಿಲ್ಗಚ್ಚಿಗೆ ಹೋದಾಗ ಯಾರೋ ಟ್ಯಾಂಕಿನ ನಲ್ಲಿಯ ಬಳಿ ವಾಂತಿ ಮಾಡಿದ್ದರು. ಎರಡನೇ ದಿನವೂ ಅದೇ ದೃಶ್ಯ ಕಂಡಾಗ, ಬೀಬಿಯ ಬಾಗಿಲು ತಟ್ಟಿದೆವು. ಒಳಗೆ ಸದ್ದಿಲ್ಲದ್ದನ್ನು ಗಮನಿಸಿ, ನಾವೇ ಬಾಗಿ... ತಳ್ಳಿದೆವು. ಬೀಬಿ ತನ್ನ ಚಾರ್ಪಾಯಿಯ ಮೇ... ಬಿದ್ದುಕೊಂಡಿದ್ದಳು. ಅವಳು ನಾಲ್ಕು ತಿಂಗ... ಗರ್ಭಿಣಿ ಎಂದು ತಿಳಿಯಿತು.

ಏನಾಯಿತು, ಹೇಗಾಯಿತು ಎಂಬ ನೆನ... ಅವಳಿಗಿರಲಿಲ್ಲ. ಯಾರೆಂದು ಬಾಯ್ಬಿಡಲು ಅವ... ತಯಾರಿರಲಿಲ್ಲ. ದ್ರಾಕ್ಷಿ, ಗೋಡಂಬಿ ಹಾಕಿ ಶ್ಯಾವ... ಪಾಯಸ ಮಾಡಿಕೊಟ್ಟೆವು. ಆದರೂ ಹೇಳಲಿ... ಯಾವುದಾದರೂ ಸುಳಿವು ಸಿಗಬಹುದೇನೋ ಎಂದು ಹುಡುಕಿದೆವು. ಆದರೆ ಕೋ... ಸ್ವಚ್ಛವಾಗಿತ್ತು. ಮಂಚದ ಪಕ್ಕದಲ್ಲಿ ಬಿದ್ದಿದ್ದ ಲೆಕ್ಕ... ಪುಸ್ತಕದಲ್ಲಿ ಹೆಸರಿನ ಪಟ್ಟಿಯೇ ಇತ್ತು.

ನವಮಾಸಗಳ ನಂತರ ಸೆಪ್ಟೆಂಬರಿನಲ್ಲಿ ಬೀಬಿ... ಮಗ ಹುಟ್ಟಿದ. ಹಾಲುಣಿಸುವುದು, ಸ... ಮಾಡಿಸುವುದು, ಜೋಗುಳ ಹಾಡುವುದ... ಹೇಳಿಕೊಟ್ಟೆವು. ಮಗುವಿಗಾಗಿ ಅಂಗಿ, ದಿಂ... ಹೊಲಿಯಲು ಸಹಾಯ ಮಾಡಿದೆವು. ತಿಂಗಳ... ಬೀಬಿ ಚೇತರಿಸಿಕೊಂಡಳು. ಹಲ್ದಾರ್ ಇ... ದುಡ್ಡಿನಲ್ಲಿ ಕೋಣೆಗೆ ಸುಣ್ಣ ಬಣ್ಣ ಹೊಡಿಸಿ, ಕಿ... ಬಾಗಿಲುಗಳನ್ನು ಸರಿಪಡಿಸಿದಳು. ಕಪಾಟಿನ ಧೂ... ಹೊಡೆದು, ಅಂಗಡಿ ಸಾಮಾನೆಲ್ಲಾ ಅರ್ಧ ಬೆ... ಮಾರಿದಳು. ಟ್ಯಾಕ್ಸಿಯಲ್ಲಿ ಹೋಲ್‌ಸೇ... ಮಾರ್ಕೆಟ್ಟಿಗೆ ಹೋಗಿ ಹೊಸ ಮಾ... ಖರೀದಿಸಿದಳು. ವ್ಯಾಪಾರ ನಡೆಸಿದಳು. ಬ... ಹಣದಲ್ಲಿ ಮಗನನ್ನು ಬೆಳೆಸಿದಳು.

ಸುಮಾರು ವರ್ಷಗಳವರೆಗೆ ಅವಳ ಮೇ... ಹಲ್ಲೆ ನಡೆಸಿದವರ್ಯಾರೆಂದು ಯೋಚಿಸಿದೆ... ಮನೆಯ ಕೆಲಸದಾಳುಗಳನ್ನು ಪ್ರಶ್ನಿಸಿದೆ... ಬಸ್‌ಸ್ಟಾಂಡಿನಲ್ಲಿ, ಟೀ ಅಂಗಡಿಗಳಲ್ಲಿ ಆರೋಪಿ... ಬಗ್ಗೆ ಚರ್ಚೆಗಳಾದವು. ಈ ತನಿಖೆ... ಅವಶ್ಯಕತೆಯಿರಲಿಲ್ಲ. ನಮಗೆ ತಿಳಿದ ಮಟ್ಟಿಗೆ ಬೀ... ಗುಣವಾಗಿದ್ದಳು.

# ಬಸ್ಸು

## ಅರವಿಂದ ನಾವಡ

ಬಸ್ಸಿಗೂ ನನಗೂ ಸುಮಾರು ವರ್ಷಗಳ ಸಂಬಂಧ. ಸುಮಾರು ವರ್ಷಗಳೆಂದರೆ ಅದಕ್ಕೂ ಅಖಚಿತ ಲೆಕ್ಕವಿದೆ.  ಸರಕಾರಿ ಬಸ್ಸನ್ನು ಅವಲಂಬಿಸಿ, ಅನುಭವಿಸಿ 20 ವರ್ಷಗಳು ಕಳೆದಿರಬಹುದು. ಬಸ್ಸಿಗೂ ನನಗೂ ಅನ್ಯೋನ್ಯತೆ ಬೆಳೆದದ್ದು ಅನಿವಾರ್ಯತೆಯಿಂದ. ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗ ಬಸ್ಸನ್ನೇರಿಯೇ ಹೋಗಬೇಕಿತ್ತು.  ನಡೆಯಲು ಸಾಧ್ಯವಿರಲಿಲ್ಲ ಎಂದಲ್ಲ, ಮನಸ್ಸಿರಲಿಲ್ಲ. ಕಾರಣ, ನಮಗೆ ಆಗಲೇ ನಾಗರಿಕತೆಯ ಝಲಕ್ ಅರ್ಥವಾಗಿತ್ತು. ಸಂಶೋಧನೆಗಳು ಮಿತಿ ಮೀರಿ ನಡೆದು, ನಾಗರಿಕನ ಬದುಕನ್ನು ಹೆಚ್ಚು ಸುಲಲಿತ ಮಾಡುತ್ತಿರುವಾಗ ನಾನೇಕೆ ಅನುಭವಿಸದೇ ಸುಮ್ಮನಿರಬೇಕೆಂಬ ವಿಚಾರವೂ ಇದಕ್ಕೆ ಕಾರಣ. ನನ್ನ ಅಜ್ಜ, ಅಪ್ಪ ಹತ್ತು ಹನ್ನೆರಡು ಕಿ.ಮೀ. ದೂರದ ಶಾಲೆಗೆ ಗುಡ್ಡ ದಾಟ ಹೋಗಬೇಕಿದ್ದು ನಡೆದುಕೊಂಡೇ.  ಅವರೆಲ್ಲಾ ಕಲಿತದ್ದು ಹಾಗೆಯೇ. ಕಷ್ಟಪಟ್ಟು, ದಾರಿದೀಪದ ಕೆಳಗೆ, ವಾರಾನ್ನ, ತಿಂಗಳಾನ್ನವೋ ಮಾಡಿಕೊಂಡು. ಅಷ್ಟೇ ಏಕೆ? ಹರಕು ಚಡ್ಡಿ, ಷರಟು ಹಾಕಿಕೊಂಡು.  ಷರಾಯಿ ತೊಟ್ಟುಕೊಂಡದ್ದೇ ಇಲ್ಲವೆನ್ನುತ್ತಾರೆ.  ಹಾಗೆಂದು ನೋಡಿರಲಿಲ್ಲ ಎಂದಲ್ಲ.  ಊರ ಪಟೇಲರು, ಅವರ ಮಗ ತೊಟ್ಟದ್ದನ್ನು ಬಹು ದೂರದಿಂದಲೇ ನೋಡಿದವರು. ಆದರೆ ಅಂದಿನಿಂದ ಇಂದಿಗೆ ನಮ್ಮ ಬದುಕನ್ನು ನಾವೇ ಹೆಚ್ಚು ಸರಳೀಕರಿಸಿಕೊಂಡಿದ್ದೇವೆ ಎನ್ನುವುದಕ್ಕಿಂತಲೂ ಹೆಚ್ಚು 'ಸಾಧ್ಯ'ವಾಗಿಸಿಕೊಂಡಿದ್ದೇವೆ.



ಶಶಿಧರ್

ಬಹುಶಃ ನನಗೆ ಈ ಬಸ್ಸು ಕಲಿಸಿದಷ್ಟು ಜೀವನ ಪಾಠ, ಸಮಾಜದೊಂದಿಗಿನ ಸ್ಪಂದನ ಸ್ವಭಾವ ಯಾವ ಶಾ
ಮನೆ, ಗುರುಪೀಠಗಳೂ ಕಲಿಸಿಲ್ಲ. ಮಗುವಿನೊಂದಿಗೆ ಬಂದ ತಾಯಿಗೆ ಸೀಟು ಬಿಟ್ಟುಕೊಡುವ ಮಾ
ವರ್ತನೆಯಿಂದ ಹಿಡಿದು, ಫುಟ್‌ಬೋರ್ಡ್‌ನಲ್ಲಿ ನಿಂತು ಸಿಗರೇಟು ಸೇದುವ ಮಂದಿಗೆ 'ಸ್ವಲ್ಪ ಆರಿಸ್ತೀರಾ
ಎಂದು ಹೇಳುವವರೆಗೆ, ಜೋರು ಮಾಡುವ ಕಂಡಕ್ಟರ್‌ಗೆ ಪ್ರತಿ ಜೋರು ಮಾಡುವುದಕ್ಕೆ, ರಶ್ ಇದ್ದ
ಕೈಗಳನ್ನು ಜೇಬಿನ ಕಾವಲಿಗೆ ನೇಮಿಸುವುದಕ್ಕೆ. ಜತೆಗೆ ಪೈಪೋಟಿಯಲ್ಲಿ ಜಯಿಸುವುದನ್ನೂ ಕಲಿಸಿದೆ.
ಕಿಕ್ಕಿರಿದ ಜನಜಂಗುಳಿಯ ನಡುವೆ ಬಸ್ಸಲ್ಲಿ ಸೀಟು ಹಿಡಿಯಲು ನಡೆಯುವ ಪೈಪೋಟಿ ಯಾವುದಕ್ಕೆ ಕಪಿ
ಪುಸ್ತಕ, ಕರವಸ್ತ್ರ, ಮ್ಯಾಗಝಿನ್ ಹೀಗೆ ಏನೇನೋ ಎಸೆದು ಸೀಟು ಕಾದಿರಿಸುವುದು. ಒಮ್ಮೊಮ್ಮೆ ಏ
ಸಿಗದಾಗ ಉದ್ದ ನೋಟ್ ಪುಸ್ತಕದ ಹಾಳೆ ಹರಿದು ಉದ್ದಕ್ಕೆ ಹಾಸಿ ಬಿಡುವುದೂ ನಮ್ಮ ಜಾಣ್ಮೆ. ಮುಂದೆ ನಿ
ಹುಡುಗಿಯ ಮೈ ಅಪ್ಪಿಕೊಂಡ ಉಡುಪು ಸೋಕಿದರೂ ಏನೋ ಒಂದು ಸುಖವಿದೆ ಎಂದು ತಿಳಿದದ್ದು, ನಿ
ಹುಡುಗಿ ಲೀಲೂ ಮೇಲೆ ಮನಸ್ಸಾಗಿದ್ದು ಬಸ್ಸಲ್ಲೇ. ಡ್ರೈವರ್ ಪಕ್ಕದ ಮೀಸಲು ಸೀಟಿನಲ್ಲಿ ಕುಳಿತಿ
ಲೀಲೂಗೂ, ಹಿಂದಿನ ಬಾಗಿಲ ಆರಂಭದ ಸೀಟು ಹಿಡಿದು ಕುಳಿತುಕೊಳ್ಳುವ ನನಗೂ ನಡುವೆ ಒಂ
ಸಮಾನಾಂತರ ನೇರ ರೇಖೆ. 'ಕಾಮನಬಿಲ್ಲು ಚಿತ್ರ'ದ 'ಕಣ್ಣು ಕಣ್ಣು ಕಲೆತಾಗ' ಹಾಡಿನ ಅರ್ಥ ಹೇಳಿಕೊಟ್ಟಿದ್ದು ಇದೇ ರೇಖೆ, ಇದೇ ಬಸ್ಸು.



ಬಸ್ಸೆಂದರೆ ಅಂತಿಂಥದ್ದಲ್ಲ. ಎಂಥದ್ದು? ಒಂದು ಜಗತ್ತು. ಹಳ್ಳಿಗೆ ಆಧುನಿಕತೆಯ ಬೆರಗು ಬಂದದ್ದು ಬಸ್ಸಿನಿಂದ. ಪಟ್ಟಣಗಳ ಕತೆಗಳು ಹಳ್ಳಿಯಲ್ಲಿನ ಮನೆಗಳಲ್ಲಿ, ಬಸ್ ಸ್ಟ್ಯಾಂಡಿನ ಕಾಫೀ ಕ್ಲಬ್ಬಿನಲ್ಲಿ, ಬಣ್ಣ ಬಣ್ಣದ ಮೆರುಗು ಪಡೆದಿದ್ದಕ್ಕೆ ಈ ಬಸ್ಸೇ ಕಾರಣ. ಪಟ್ಟಣದ ಸಂತೆ ವಿಚಾರ, ಅಲ್ಲಿನ ಬದುಕು, ಸಾಬಣ್ಣ ಮಾರುತ್ತಿದ್ದ ಕಾರ ಶೇವ್ ಮುಂಡಕ್ಕಿ ಪರಿಮಳ, ಅದರೊಳಗಿದ್ದ ಹುರಿದ ಕಡಲೆ ಬೀಜದ ಬಣ್ಣ ತಿಳಿದದ್ದು ಇದೇ ಬಸ್ಸಿನಿಂದ. ಸಮ ಭಾವ ಬಿತ್ತಿದ್ದೂ ಇದೇ ಬಸ್ಸು. ಅದು ನಿಜವಾದ ಸಮಾಜವಾದಿ, ಸಮತಾವಾದಿ ಹಾಗೂ ಜಾತ್ಯಾತೀತ ಸಮಾಜ ಪರ.

ಬಸ್ಸಿನ ಅನಂತ ಅನುಭವ ಹೊಚ್ಚಹೊಸ, ಬೆಚ್ಚಗಿನ ಕನಸು ಕಟ್ಟಿಕೊಟ್ಟಿದೆ. ಶಾಲೆಗೆ ಹೋಗಲು ಮೊದಲ ಬಾರಿ ಬಸ್ಸಿಗೆ ಕಾಲಿಟ್ಟಾಗ ಹೊಸ ಲೋಕ. ಕಿಟಕಿಗೆ ಆತು ಕುಳಿತು, ಗ್ಲಾಸು ತೆರೆದು, ಓಡುವ ರಸ್ತೆ, ಹಸಿರು, ಗದ್ದೆ, ತೋಟ, ಹಸು-ಕರು, ನಾಯಿ, ಜನ, ಕೊನೆಗೆ ಊರಿಗೇ ಊರು, ಲೋಕಕ್ಕೆ ಲೋಕವನ್ನು ನೋಡೋದೇ ಒಂದು ಸೊಬಗು. ಮೊದ ಮೊದಲು ಬಸ್ಸು ನಿಂತ ಎಷ್ಟೋ ಕ್ಷಣಗಳ ಮೇಲೆ ಇಳಿಯಲೂ ಭಯ.
ಓಡುವ ಬಸ್ಸಿಂದ ಹಾರಿದ ಮೇಲೆ ಕೆಲ ಕ್ಷಣ ಓಡುತ್ತಿರಲೇಬೇಕು ಎಂದು ಭೌತಶಾಸ್ತ್ರ ಉಪನ್ಯಾಸಕ
ಕಲಿಸಿದ್ದು ಇದೇ ಬಸ್ಸು.

ಬಸ್ಸು ಊರ ವಿಚಾರವನ್ನೆಲ್ಲಾ ನಮ್ಮ ಮನದ ಜಗುಲಿಗೆ ತಂದು ಸುರಿಯುವ ವರದಿಗಾರ. ಅಷ್ಟೇ
ಅನಂತರ ಸುದ್ದಿಯ ವಿಶ್ಲೇಷಣೆಗೆ ತನ್ನಲ್ಲೇ ಅವಕಾಶ ಮಾಡಿಕೊಡುವ ಒಬ್ಬ ಪ್ರೋತ್ಸಾಹಕ. ಪ್ರೇಮಿಗ
ಒಂದುಗೂಡಿಸಿ ಬದುಕು ಕಟ್ಟಿಕೊಡುವ ಹಿತೈಷಿ. ನಮ್ಮ ಕೇರಿ ಕೊನೆ ಮನೆ ಸರಸೂ ತನ್ನ ಪ್ರಿಯಕರನೊ
ಓಡಿಹೋದದ್ದು ಈ ಬಸ್ಸಿನ ಮೂಲಕವೇ. ಇಷ್ಟೆಲ್ಲದರ ನಡುವೆ ಆತ ಬಡವರ ಬಂಧು. ಹೀಗಾಗಿ
ಎಂದರೆ ಬದುಕು. ಕಷ್ಟ, ನಷ್ಟ, ಸುಖ, ದುಃಖಗಳು ಒಟ್ಟಿಗೆ ಚಲಿಸುವ ಲೋಕ. ಒಂದು ಅದ್ಭುತ ಜಗ
ಇದನ್ನು ದೂರುವ ಎಷ್ಟೋ ಮಂದಿ ಇದ್ದಾರೆ. ಛೀಕರಿಸುವವರಿದ್ದಾರೆ. ಅಷ್ಟೇ ಏಕೆ, ಘಳಿಗೆ ಘಳಿ
ಹಿಡಿಶಾಪ ಹಾಕುವವರಿದ್ದಾರೆ. ಪ್ರತಿ ಕ್ಷಣ ಬಸ್ಸಿಗೆ, ಅದರ ಚಾಲಕನಿಗೆ, ನಿರ್ವಾಹಕ ಮಹಾಶಯ

ಬೈಯುತ್ತಲೇ ಬಸ್ಸು ಹತ್ತುವವರಿದ್ದಾರೆ. ಸೀಟು ಸಿಕ್ಕರೂ ತಮ್ಮ ಗೊಣಗಾಟಕ್ಕೆ ಪೂರ್ಣವಿರಾಮ ಹೇಳದೇ ಅಲ್ಪವಿರಾಮದಲ್ಲಿಯೇ ದಾರಿ ನೂಕುವವರೂ ಇದ್ದಾರೆ. ಎಲ್ಲಾ ಅನಾನುಕೂಲತೆಯ ಒಟ್ಟು ಮೊತ್ತ ಈ ಬಸ್ಸು ಎಂದು ಆರೋಪಿಸುವವರಿಗೇನು ಕೊರತೆಯಿಲ್ಲ. ಹಾಗೆಂದು ಅವರು ಬಸ್ಸು ಬಿಟ್ಟು ಬದುಕುವುದಿಲ್ಲ. ಬಸ್ಸಿಲ್ಲದೇ ಅವರ ಬದುಕಿಲ್ಲ. ಅದಕ್ಕೇ ಹೇಳಿದ್ದು ಬದುಕಿದು ಜಟಕಾ ಬಂಡಿಯೆಂದು. ಆದರೆ ಇಂದಿಗೆ ಸರಿ ಹೊಂದುವಂತೆ ಬದುಕು ಮೋಟಾರು ಬಂಡಿ' ಎಂದು ಬದಲಿಸುವುದೊಳಿತು.

ಸೂರ್ಯ ಕಣ್ಣರಳಿಸಿದ ಕೂಡಲೇ ಕೈಯಲ್ಲಿ ಊಟದ ಚೀಲ ಹಿಡಿದು ಸಾಗುವುದು ಮತ್ತೆ ಬಸ್ಸಿನಲ್ಲೇ. ಏದುಸಿರನ್ನು ಬಿಡುತ್ತಲೋ, ಫುಟ್‌ಬೋರ್ಡ್ ಸರಳನ್ನು ಹಿಡಿದುಕೊಂಡೋ, ಹೊಸ ಪ್ರಪಂಚದೊಳಗೆ ಪ್ರವೇಶಿಸಿದರೆ ಸಂಪೂರ್ಣ ಭಿನ್ನವಾದ ಜಗತ್ತು. ಪರಿಚಯಿಸಿಕೊಳ್ಳಲು ಕೆಲ ಕಾಲ ತಗುಲಬಹುದು. ಆದರೆ 'ತಾನು ಬೇರಲ್ಲ' ಎಂಬ ಸಮತಾ ಭಾವನೆ, 'ತಾನೊಬ್ಬನೇ ಅಲ್ಲ' ಎಂಬ ಸಮಾಧಾನ ಚಿಗುರೊಡೆಯುವುದೇ ಇಲ್ಲಿ. ಕಂಬಿಗಳಿಗೆ, ಸೀಟುಗಳಿಗೆ ಆತುಕೊಂಡು, ಜೋತುಕೊಂಡು ನಿಂತವರ ಲೋಕವನ್ನು ನಿಧಾನವಾಗಿ ಪರೀಕ್ಷಿಸಿಕೊಂಡು ಬನ್ನಿ, ನಿಮ್ಮದೂ ಸೇರಿದಂತೆ. ಶಿವರಾಮ ಕಾರಂತರ ಮಾತು ಸುಳ್ಳಾಗುತ್ತದೆ. ಅಲ್ಲಿರುವುದು ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲ, ನೂರು..ಸಾವಿರಾರು.. ಲಕ್ಷವಾರು.. ಎಷ್ಟು ಬೇಕಾದರೂ ಎಣಿಸಿಕೊಳ್ಳಿ, ನಿಮಗೆ ಶಕ್ತಿ ಸಾಮರ್ಥ್ಯವಿದ್ದರೆ?

ಅಲ್ಲಿ ಸಮಾಜದ ಮಾರ್ಗದರ್ಶಿಗಳು, ರೂಪದರ್ಶಿಗಳು, ಹೋರಾಟಗಾರರು, ಹೇಡಿಗಳು, ಕಾಮುಕರು ಎಲ್ಲರಿಗೂ ಪ್ರವೇಶಾವಕಾಶವಿದೆ. ಅಲ್ಲಿ ಬರಬೇಡಿ ಎನ್ನುವವರೂ ಇಲ್ಲ. 'ನಮಸ್ಕಾರ, ಪುನಃ ಬನ್ನಿ' ಎಂದು ಫಲಕ ತೂಗು ಹಾಕಿದ ಯಾವುವೋ ಅಪರೂಪದ ಬಸ್‌ಗಳನ್ನು ಬಿಟ್ಟರೆ, ನಿಮ್ಮನ್ನು ಬನ್ನಿ ಎಂದು ಸ್ವಾಗತಿಸುವವರೂ ಇಲ್ಲ. ಈ ಅಪರೂಪವೂ ನಾಲ್ಕೈದು ವರ್ಷಗಳಿಗೊಮ್ಮೆ ಬರುವ ಅಧಿಕ ವರ್ಷದಂತೆ. ಇದನ್ನು ಸಾರ್ವತ್ರಿಕ ಎಂದು ತಿಳಿದುಕೊಳ್ಳಬೇಡಿ. ಸಾರ್ವಕಾಲಿಕವೂ ಅಲ್ಲ. ಬಿಸಿರಕ್ತದ ಯುವಕನ ಮುಖದಲ್ಲಿ ಮೂಡಿದ ನೂರಾರು ಮೀಸೆ ಕೂದಲುಗಳ ನಡುವೆ ಎಲ್ಲೋ ಒಂದು ಕೆಂಪೋ, ಬಿಳಿಯದು ಬಂದರೆ... ಊಹಿಸಿಕೊಳ್ಳಿ. ಹಾಗೇ.

ಫುಟ್‌ಬೋರ್ಡಿನಲ್ಲಿ ನಿಂತು ರಸ್ತೆಗಳಲ್ಲಿನ ಮೇಲಿನ ಸಂಗತಿಗಳನ್ನು ಸಂಗ್ರಹಿಸುವ ದಾಖಲಾಶೂರರು, ಇಂದೂ ಕಚೇರಿಗೆ ಹೋಗಬೇಕೇ? ಎಂದು ಪ್ರತಿಫಲಿಸುವ ಸರಕಾರಿ ನೌಕರರ ಬೇಸರ ವದನಗಳು, ವರ್ಷರಾಜನ ಕನಲಿಕೆಗೆ ಮುಲುಗುವ ಹೆಣ್ಣುಮಕ್ಕಳು ತುಟಿಗೆ ಮೆತ್ತಿಕೊಂಡ ಬಣ್ಣ, ಅವರ ಹಿಂದೆ ಬಿದ್ದ ಕಾಮಣ್ಣರು, ಬಗಲಲ್ಲಿ ಮಗು ಇರಿಸಿಕೊಂಡು, ಆಸೀನಳಾದ ಕಾಲೇಜು ಹುಡುಗಿ ಕಡೆ ಸೀಟಿಗಾಗಿ ದೈನ್ಯ ದೃಷ್ಟಿ ಬೀರುವ ತಾಯಿ, ಕೆಮ್ಮಿನಿಂದ ನರಳುತ್ತಿರುವಾತ ಎಲ್ಲರೂ ಇಲ್ಲಿ ಕಾಣಸಿಕ್ಕುತ್ತಾರೆ... ಎಷ್ಟೊಂದು ವಿಧದ ಗೊಣಗಣ್ಣರನ್ನು ಕಾಣಬಹುದು, ಅಥವಾ ಗೊಣಗಾಟವನ್ನು ಕೇಳಬಹುದು ಗೊತ್ತೆ? ಅವರನ್ನು ಹುಡುಕಬೇಕೆಂದರೆ ನೀವು ಆ ಗುಂಪಿಗೇ ಸೇರಬೇಕು. ಸಮಾಜದ ಎಲ್ಲಾ ಮುಖಗಳಿಗೂ ಬಸ್ಸು ಏಕ ಕನ್ನಡಿಯಾದ್ದರಿಂದ ಎಲ್ಲರೂ ಅಲಂಕರಿಸಿಕೊಳ್ಳಬೇಕಾದ್ದು ಅದರಲ್ಲೇ. ಮಧ್ಯಮ ವರ್ಗದ, ಜನಸಾಮಾನ್ಯರಿಗೆ ಇರುವ ಎರಡನೇ ಕನ್ನಡಿ ಎಂದರೆ ರೈಲು. ರೈಲಿನ ಮಾತನ್ನು ಅಲ್ಲಿಗೇ ಬಿಡಿ. ಬಸ್ಸಿಗೆ ಮತ್ತೆ ಬನ್ನಿ. ಬಸ್ಸು ಒಂದು ಅನುಭವ ಮಂಟಪ. ನಮಗೆ ತಿಳಿದಿರದ್ದನ್ನು, ಕಲಿಯದ್ದನ್ನು ಅದು ಕಲಿಸುತ್ತದೆ. ನಾವು ಕಲಿಯಲು ತಯಾರಿರಬೇಕಷ್ಟೇ. ನೀವು ಡಿವಿಜಿ ಅವರ ಮಂಕುತಿಮ್ಮನಂತೆ ಎಲ್ಲರೊಳಗೊಂದಾಗುವುದನ್ನು ಕರಗತ ಮಾಡಿಕೊಂಡಿದ್ದರೆ ಸಲೀಸು. ನಿಮ್ಮದೇ ಪ್ರಪಂಚ, ನಿಮ್ಮದೇ ಬದುಕು. ನಿಮ್ಮದೇ ಬಸ್ಸು.

ಬಸ್ಸು ನಮ್ಮೊಂದಿಗೆ ಅಷ್ಟೊಂದು ಆತ್ಮೀಯನಾಗಲು ಮಹತ್ವದ ಕಾರಣವಿದೆ. ಅದಕ್ಕೆ ಅಹಂಕಾರವಿಲ್ಲ. ಅಹಂನ ಕೋಟೆ ಕಟ್ಟಿಕೊಂಡು ದೂರ ನಿಲ್ಲುವುದಿಲ್ಲ ಅದು. ನೀವು ನಿಂತಲ್ಲಿ (ಬಸ್ ನಿಲ್ದಾಣದಲ್ಲಿ) ಅದು ಬಂದು ನಿಲ್ಲುತ್ತದೆ. ನಿಮ್ಮನ್ನು ಮಾತನಾಡಿಸಿಕೊಂಡು ಕರೆದೊಯ್ಯುತ್ತದೆ. ಇಳಿದು ಟಾಟಾ ಹೇಳುವವರೆಗೂ ನಿಮ್ಮನ್ನು ಆದರಿಸುವ ಬಸ್ಸು, ಮರುಕ್ಷಣದಲ್ಲೇ ಮತ್ತೊಬ್ಬ ನಮ್ಮ ಸಹೋದರನನ್ನು ಬರಸೆಳೆದುಕೊಳ್ಳುತ್ತದೆ. ಈ ಕಾರ್ಯ

ನಮ್ಮ-ನಿಮ್ಮಿಂದ ಸಾಧ್ಯವಿದೆಯೇ ಹೇಳಿ.
ಆತ್ಮೀಯತೆ ಬಸ್ಸಲ್ಲಿ ಸಿಕ್ಕಿದಷ್ಟು 'ಫ್ರೀ' ಎಲ್ಲೂ ಸಿಗಲಾರದು. ಆಟೋದಲ್ಲಿ ಒಮ್ಮೆ ಹೋಗಿಬನ್ನಿ; ಹೋಗುವ
ಮುನ್ನ ಆಟೋ ಚಾಲಕನಿಗೆ ನಮಸ್ಕಾರ ಹೇಳಿ, 'ಸ್ವಾಮಿ, ಜಯನಗರದ ಕಡೆ ಬರುತ್ತೀರಾ' ಎಂದು ಕೇಳಬೇಕು;
(ಕರಾವಳಿ ಕಡೆ ದೇವಸ್ಥಾನಗಳಲ್ಲಿ ಪುಷ್ಪ ಪ್ರಶ್ನೆ ಎಂಬುದಿದೆ. ಅದರರ್ಥ ಇಷ್ಟೇ. ಭಕ್ತರು ತಮ್ಮ ಬಯಕೆ
ಈಡೇರಿಸುವಂತೆ ಕೋರಿ ನೀಡಿದ ಪುಷ್ಪವನ್ನು ಪುರೋಹಿತರು ದೇವರಿಗರ್ಪಿಸಿ ಮಂಗಳಾರತಿ ಮಾಡುತ್ತಾರೆ.
ಅನಂತರ ದೇವರ ಬಲಭಾಗಕ್ಕೆ ಪ್ರಸಾದ ಬಿದ್ದರೆ 'ಆಗುತ್ತದೆ', ಎಡಕ್ಕೆ ಬಿದ್ದರೆ 'ಆ ಚಿಂತೆ ಬಿಡಿ' ಎಂದು ಅರ್ಥ.
ಆಟೋ ವಿಹಾರ ವಿಷಯದಲ್ಲೂ ಹೀಗೆಯೇ ಕಾಯಬೇಕು.) ರಿಕ್ಷಾವಾಲನ ಮುಖದಲ್ಲಿ ಆಗುವ ಸೂಕ್ಷ್ಮ
ಬದಲಾವಣೆಗಳಿಗೂ ಅರ್ಥ ಕಲ್ಪಿಸಬೇಕು. ಒಂದು ವೇಳೆ ಆತನ ಮುಖದಲ್ಲಿ ನಗೆ ಮಿಂಚಿ, ಕೈಯೋ, ಕತ್ತೋ
ಅಲ್ಲಾಡಿದರೆ 'ಹತ್ತಿಕೊಳ್ಳಬಹುದು', ಇಲ್ಲದಿದ್ದರೆ 'ಈ ಆಟೋ ಆಸೆ ಬಿಟ್ಟುಬಿಡಿ' ಎಂಬುದು ವೇದ್ಯವಾಗುತ್ತದೆ.
ಇದು ನಿತ್ಯ ಪುರಾಣ.

ಆಟೋ ಹಿಡಿದು ಇರಲಿ ನೀವು ಬೈಕ್, ವಿಮಾನ, ಏರಿದಾಗಲೂ ಒಂದು ಅವ್ಯಕ್ತ ಭಾವ, ಸುಖ ಅನುಭವಿಸಲು ಬಿಡದೇ ಹಿಡಿದಿಡುತ್ತದೆ. ಅತ್ತಿ ಹಣ್ಣು ನೋಡಲು ಬಹಳ ಚೆಂದವಂತೆ. ಅದನ್ನು ಕಂಡಷ್ಟೂ ಸುಖವಿದೆ. ಆದರೆ ತಿನ್ನಲು ಅಸಾಧ್ಯ. ಗಣ್ಯವ್ಯಕ್ತಿಗಳ ಭದ್ರತಾ ಪಡೆಯ ಮಂದಿ ಸುತ್ತಲೂ ಕಣ್ಣು ತಿರುಗಿಸುತ್ತಾ ಕಾಯುವ ತರಹ, ನಿಮ್ಮೊಳಗೆ ಜಾಗರೂಕವಾಗಿರುವ ವಿಶೇಷ ಪ್ರಜ್ಞೆ ಆ ಸುಖದಿಂದ ನಿಮ್ಮನ್ನು ವಂಚಿತನಾಗಿಸುತ್ತದೆ; ನಿಮ್ಮ ಮೆದುಳಿನ ಥ್ಲಾಪಿಯಲ್ಲಿ ಸಂಗ್ರಹಿತ ಎಚ್ಚರಿಕೆಗಳು ನಿಮ್ಮ ಮನಸ್ಸಿಗೆ ಟೆಲಿಗ್ರಾಮ್ ಮೂಲಕ ರವಾನಿಸಲ್ಪಡುತ್ತವೆ. 'ಅತ್ತಿ ಹಣ್ಣಿನೊಳಗೆ ಬರೀ ಹುಳು' ಎಂಬುದು ನಿಮ್ಮನ್ನು ಕೊರೆಯುತ್ತಲೇ ಇರುವಂತೆ. ಇಲ್ಲಿ ಸುಖದ ಮೂಟೆ ಸೋರುತ್ತಲೇ ಇರುತ್ತದೆ.



ಆದರೆ ಬಸ್ಸಿನಲ್ಲಿ ಈ ಸಂಗತಿಗಳೇ ಉದ್ಭವಿಸುವುದಿಲ್ಲ. ಅಲ್ಲಿರುವ ಚಾಲಕ, ನಿರ್ವಾಹಕರೂ ನಮ್ಮ ಹಾಗೆಯೇ ತಮ್ಮ ಹೆಂಡತಿ, ಮಕ್ಕಳು, ಸಂಸಾರಕ್ಕಾಗಿ ದುಡಿಯುತ್ತಿರುವವರು. ಅವರಿಗೆ ಬಸ್ಸಿನ ಮೇಲಿನ ಪ್ರೀತಿಗಿಂತಲೂ ಸಂಸಾರದ ಮೇಲೆ ಹೆಚ್ಚು ಒಲವು?! ಆದ್ದರಿಂದಲೇ, ಯಾರು ಬಂದಿರಿ, ಯಾರು ಇಳಿದಿರಿ, ಯಾರು ಹೋದಿರಿ ಎಂಬ ಯಾವುದೇ ಪ್ರಶ್ನೆಗಳನ್ನು ಯಾರೂ ಯಾರಿಗೂ ಕೇಳುವುದೇ ಇಲ್ಲ. ನಿಮ್ಮದೇ ಸ್ವಾತಂತ್ರ್ಯ, ನಿಮ್ಮದೇ ರಾಜ್ಯ. ಎಲ್ಲಿ ಬೇಕಾದರೂ ಇಳಿಯಬಹುದು, ಎಲ್ಲಿಗೆ ಬೇಕಾದರೂ ತೆರಳಬಹುದು.

ನೀವು ನಿಮ್ಮ ಮನದ ಮಾತನ್ನು ಹೇಳಿ, ಅಂದರೆ ಸತ್ಯವನ್ನೇ ಹೇಳಿ. ಬಸ್ಸಿನಲ್ಲಿ ಸಿಕ್ಕ ಸ್ವಾತಂತ್ರ್ಯ ಬೇರೆ ಎಲ್ಲಾದರು ಸಿಗುವುದು ಸಾಧ್ಯವೇ? ಅಲ್ಲಿ ಯಾರಾದರೂ ನಿಮ್ಮನ್ನು ಕೇಳುವವರಿದ್ದಾರೆಯೇ? ಒಂದು ವೇಳೆ ಅಮೆರಿಕ ಇಂಗ್ಲೆಂಡ್, ಸಿಂಗಾಪುರದಂಥ ರಾಷ್ಟ್ರಗಳಲ್ಲಿ ಪ್ರಶ್ನಿಸುವವರಿದ್ದಾರು ಆದರೆ ನಮ್ಮ ಭವ್ಯ ಭಾರತದಲ್ಲಿಲ್ಲ. ಬಸ್ಸಿನ ಟೈಮ್ ಪಾಸ್ ಮಾಡಲು ಕಡ್ಲೇಕಾಯಿ ಕೊಂಡು ತರುತ್ತೀರಿ. ಸುಲಿದ ಸಿಪ್ಪೆಯನ್ನು ಜೇಬಲ್ಲಿ ಹಾಕಿಕೊಳ್ಳ ಮನಸ್ಸು ಒಪ್ಪುವುದಿಲ್ಲ. ನೂರಾರು ರೂಪಾಯಿ ಕೊಟ್ಟು ಷರಾಯಿ, ಷರಟು ಹೊಲಿಸಿ, ಜೇಬು ಇರಿಸಿದ 'ಬೇಡದ್ದು' ತುಂಬಲೇ? ಎಂದಿಗೂ ಅಲ್ಲ. ಅದನ್ನೆಲ್ಲಾ ಬಸ್ಸಿಗೆ ಹಾಕುತ್ತೇವೆ. ಮುಸುಕಿನ ಜೋಳದ ದಂಟ ಪ್ಲಾಸ್ಟಿಕ್ ಕಾಗದ, ಬಾಳೆಹಣ್ಣಿನ ಸಿಪ್ಪೆ, ಬಾಡಿದ ಮಲ್ಲಿಗೆ ಮಾಲೆ, ಬಸ್ ಟಿಕೆಟ್... ಹೀಗೆ ಎಲ್ಲಾವನ ಯಾವುದೇ ಮುಜುಗರವಿಲ್ಲದೇ ನಮ್ಮ 'ಕಸದ ಬುಟ್ಟಿ' ಎಂದು ತಿಳಿದು ಎಸೆಯುತ್ತೇವೆ. ನಿರ್ವಾಹಕ

ಆಕ್ಷೇಪಿಸುವುದೂ ಇಲ್ಲ. ಏಕೆಂದರೆ ಅವರೂ 'ನಮ್ಮವರೇ'. ಈ ಸ್ವಾತಂತ್ರ್ಯ ಇನ್ನೆಲ್ಲಿದೆ? ಆಟೋ ನಿಮ್ಮ ಕಸದ ಬುಟ್ಟಿ ಆಗಲು ತಯಾರಿದೆಯೇ?

ಇನ್ನು ಎಲ್ಲಿಗೆ ಬೇಕಾದರೂ ತೆರಳುವ ವಿಚಾರ. ಆಟೋ, ಬೈಕ್‌ನಲ್ಲಿ ಸಾಧ್ಯವಿದೆ. ಆದರೆ ಮಾಲೀಕನ 'ಸ್ವಾರ್ಥ ಪ್ರಜ್ಞೆ, 'ಜಾಗರೂಕತೆ' ಪ್ರತಿಕ್ಷಣದಲ್ಲೂ ಇಣುಕು ಹಾಕುತ್ತಾ ನಿಮ್ಮ ಸುಖಾಸುಭವಕ್ಕೆ ರಸಭಂಗವುಂಟು ಮಾಡುತ್ತದೆ. ಉದಾಹರಣೆಗೆ, ನೀವು ಆಟೋದಿಂದ ಇಳಿದು ಹಣ ನೀಡಲು ಬಂದರೂ, ಚಾಲಕನಿಗೆ ನಿಮ್ಮ ಹಣಕ್ಕಿಂತಲೂ ಆತನ ಸೀಟು ಮುಖ್ಯ. ಆತ ನೀವು ಕುಳಿತಿದ್ದ ಆ ಸೀಟು ಸರಿಯಿದೆಯೋ, ಬಿದ್ದೋಯಿತೋ ಎಂಬುದನ್ನು ಖಚಿತಪಡಿಸಿಕೊಂಡು, ಸರಿಪಡಿಸಿದ ಅನಂತರ ಉಳಿದ ವ್ಯಾಪಾರ. ನಿಮ್ಮ ಬೈಕೂ ಅಷ್ಟೇ. ರಸ್ತೆ ಮೇಲೆ ಹೋಗುತ್ತಿದ್ದಾಗ ಯಾರಿಗಾದರೂ ಡಿಕ್ಕಿ ಹೊಡೆದೇನೆಂಬ ಭಯಕ್ಕಿಂತಲೂ ನಿಮ್ಮನ್ನು ಕಾಡುವುದು, ಬೈಕ್‌ಗೆ ಏನಾದರೂ ಆದರೆ... ಎಂಬುದು. ಹಾಗಾಗಿ ಮೈಯೆಲ್ಲಾ ಕಣ್ಣಾಗಿ ರಸ್ತೆ ನೋಡುತ್ತಿರುತ್ತದೆ. ಈಗ ಹೇಳಿ, ಬಸ್ಸಿನಲ್ಲಿ ಕುಳಿತರೆ ಇದ್ಯಾವುದಾದರೂ ಉಪದ್ರವಿರುತ್ತದೆಯೇ?


ಇಷ್ಟೆಲ್ಲಾ ಕಲಿಸಿದ ಬಸ್ಸಿಗೆ ಒಂದೇ ಒಂದು ಬಾರಿ ಬೈಯ್ದುಬಿಟ್ಟಿದ್ದೇನೆ, ದೊಡ್ಡ ಕಲ್ಲನ್ನು ಎತ್ತಿ ಅದರ ಮೈಗೆ ಬೀಸಿ ಒಗೆದು ಅದಕ್ಕೆ ಗಾಯ ಮಾಡಿದ್ದೇನೆ. ಮನಸ್ಸಿಗೆ ಬಂದಷ್ಟು ತೆಗಳಿದ್ದೇನೆ. ಕೊನೆಗೆ ಪಶ್ಚಾತ್ತಾಪದಿಂದ ಮರುಕಿದ್ದೇನೆ. ಕಣ್ಣಲ್ಲಿ ನೀರು ತೋಡಿನಂತೆ ಹರಿದಿದೆ. ದೊಡ್ಡಮ್ಮ ಬಂದು, 'ಮಾಡಿದ್ದಾಯ್ತಲ್ಲ. ಇನ್ನು ಮರುಕೋದು ಏಕೆ? ನಾಳೆಯಿಂದ ಇದನ್ನು ಮಾಡಬೇಡ' ಎಂದು ಹೇಳಿದರೂ ನಾನು ಮರುಕುವುದನ್ನು ಬಿಡಲಿಲ್ಲ. ಆ ದುಃಖ ಮಾಯವಾದದ್ದು ಅದೇ ಬಸ್ಸಣ್ಣ ಹೊಸ ಅಂಗಿ ತೊಟ್ಟ ಮೇಲೆಯೇ. ಆ 'ದುರ್ಘಟನೆ' ನಡೆದದ್ದು ಹೀಗೆ:

ಒಂಬತ್ತನೇ ಕ್ಲಾಸಿನಲ್ಲಿ ಓದುತ್ತಿದ್ದ ಸಮಯ. ಭದ್ರಾವತಿಯ ಸಿಲ್ವರ್ ಜ್ಯೂಬ್ಲಿಯಲ್ಲಿ ಪಾಠ ಕೇಳುತ್ತಿದ್ದೆ. ಸಂಜೆ 5 ಕ್ಕೆ ಶಾಲೆ ಮುಗಿಯುತ್ತಿತ್ತು. 5.30 ಗೆ ಹೋಟೆಲ್‌ಗೆ ಹಾಜರಾಗಬೇಕಿತ್ತು. ಕಾದು ಕಾದು ಸುಸ್ತಾಗುವ ಹೊತ್ತಿಗೆ ಬಸ್ಸು ಬಂತು. ಆದರೆ ನಿಲ್ಲಿಸಲಿಲ್ಲ. ನನಗೆ ಹೊತ್ತಾಗಿಬಿಟ್ಟಿತ್ತು. ಸಿಟ್ಟು ಬಂತು. ಪಕ್ಕದಲ್ಲಿದ್ದ ಕಲ್ಲನ್ನು ಎತ್ತಿ ಒಗೆದೇ ಬಿಟ್ಟೆ. ಸ್ವಲ್ಪ ದೂರ ಹೋಗಿ ಬಸ್ಸು ನಿಂತಿತು. ತಕ್ಷಣವೇ ನಾನು ಅಲ್ಲಿಂದ ಓಡಿದೆ. ಯಾರ ಕೈಗೂ ಸಿಕ್ಕದೆಯೇ. ನಂತರ ಒಂದು ವಾರ ಆ ಬಸ್ಸನ್ನೇ ಹತ್ತಿರಲಿಲ್ಲ.


ಅಂದು ಬೇರೆ ಬಸ್ಸು ಹತ್ತಿ ಮನೆಗೆ ಬಂದೆ. ಏಕೋ ಮನದೊಳಗೆ ಒಂದು ಥರಾ ಭಯ ಗೊರಕೆ ಹೊಡೆಯುತ್ತಿತ್ತು. ಏನು ಮಾಡುವುದು ತಿಳಿಯಲಿಲ್ಲ. ನನ್ನ ದೊಡ್ಡಮ್ಮನಿಗೆ ಹೇಳಿದ್ದಕ್ಕೆ,'ಬಸ್ಸಿಗೆ ಕಲ್ಲು ಹೊಡೆದ್ರೆ ಏನೂ ಆಗೋಲ್ಲ. ಗ್ಲಾಸು ಒಡೆಯುತ್ತಷ್ಟೇ. ನಾಳೆ ಅದರ ಖರ್ಚನ್ನು ನಾವೇ ಭರಿಸಬೇಕು. ಟ್ಯಾಕ್ಸ್ ಕಟ್ಟೋದು ನಾವೇ. ಇನ್ನು ಮುಂದೆ ಹಾಗೆ ಮಾಡಬಾರದು' ಎಂದು ಬುದ್ಧಿವಾದ ಹೇಳಿದಳು.

ಒಮ್ಮೆಲೆ ಅಳು ಬಂತು. ಅತ್ತೆ, ಅತ್ತೆ, ಕಣ್ಣು ನೋಯುವಷ್ಟು ಅತ್ತೆ. ನನಗೆ 'ಸಾರ್ವಜನಿಕ ಪ್ರಜ್ಞೆ' ಹೇಳಿಕೊಟ್ಟಿದ್ದು, ಸ್ವಾನುಭವದಿಂದಲೇ ಸಾರ್ವಜನಿಕ ಆಸ್ತಿ ನಷ್ಟ ಕೂಡದು ಎಂಬ ಹೊಸ ಪಾಠ ಹೇಳಿಕೊಟ್ಟ ಬಸ್ಸು ಎಂದೆಂದಿಗೂ ನನ್ನ ಮುದ್ದಿನ ಮೇಷ್ಟ್ರು. ಅದಕ್ಕೆ ಥ್ಯಾಂಕ್ಸ್ ಹೇಳಲು ಶುರು ಮಾಡಿದರೆ, ಜೀವನ ಪೂರ್ತಿ ಅದರಲ್ಲೇ ಕಳೆಯಬೇಕು. ಅದೂ ನಿಜವೆನ್ನಿ. ಮಧ್ಯಮ ವರ್ಗದ ನಾವು ಬದುಕನ್ನು ಕಳೆಯೋದು ಬಸ್ಸಲ್ಲೇ ಅಲ್ಲವೇ?

ಹೀಗೆ ಬಸ್ಸಿಂದ ಕಲಿತಷ್ಟೂ ಇದ್ದೇ ಇದೆ. ಅದು ಖಾಲಿಯಾಗದ ಅಕ್ಷಯ ಭಂಡಾರ. ಬದುಕಲು ಕಲಿಯಬೇಕೆಂದರೆ ಬಸ್ಸಲ್ಲಿ ಕಲಿಯಬೇಕು. ನಂತರ ಇಳಿದು ಬಂದು ಬದುಕಬೇಕು. ■




[illegible]



'ಮಾಯಾಮೃಗ'ದ ಸಂಕಲ್ಪನೆ, ಬರವಣಿಗೆ ಮತ್ತು ನಿರ್ದೇಶನದಿಂದ ಕನ್ನಡ ಜನಮನದ ಮಾತಾಗಿರುವ ಟಿ.ಎನ್. ಸೀತಾರಾಂ ಕವಿ, ಕತೆಗಾರ, ನಾಟಕಕಾರ, ನಟ ಎಲ್ಲಾ ಹೌದು. 16 ಕ್ಕೂ ಹೆಚ್ಚು ಟಿವಿ ಸರಣಿಗಳನ್ನು ಬರೆದು ನಿರ್ದೇಶಿಸಿರುವ ಸೀತಾರಾಂ ಇತ್ತೀಚೆಗೆ ರಾಷ್ಟ್ರಪ್ರಶಸ್ತಿ ಪಡೆದ ತಮ್ಮ ನಿರ್ದೇಶನದ 'ಮತದಾನ' ಚಲನಚಿತ್ರಕ್ಕೂ ತಾವೇ ಚಿತ್ರಕಥೆ ಬರೆದಿದ್ದಾರೆ. ಹೀಗೆ ನಾಟಕ, ಟಿವಿ ಸೀರಿಯಲ್ ಮತ್ತು ಸಿನೆಮಾ- ಈ ಮೂರೂ ಮಾಧ್ಯಮಗಳ ಬರವಣಿಗೆಯಲ್ಲಿ 'ನುರಿತಮತಿ' ಇವರದು.


# ಕಾಗದಗಳಿಗಿಂತ ಜಾಸ್ತಿ ನನ್ನ ತಲೇಲೇ ನನ್ನ ಚಿತ್ರಕಥೆ

# 'ಬೆಳ್ಳಿ ಕಸುಬು'




ಸಂಭಾಷಣೆ, ಧ್ವನಿಗ್ರಹಣ, ಮೇಕಪ್, ವಸ್ತ್ರವಿನ್ಯಾಸ ಇತ್ಯಾದಿ ಕ್ಷೇತ್ರಗಳ ಬಗ್ಗೂ ನಮ್ಮ ಮುಂದಿನ ಸಂಚಿಕೆಗಳಲ್ಲಿ ತಜ್ಞ ಪ್ರತಿಭಾವಂತರ ಜತೆ ಮಾತುಕತೆ ಮುಂದುವರೆಯಲಿದೆ, 'ಬೆಳ್ಳಿ ಕಸುಬು' ಅಂಕಣದಲ್ಲಿ.

'ನಿತ್ಯಜೀವನದಿಂದ ಹೊಮ್ಮಿದ ವಿನೋದ, ಮಧ್ಯಮವರ್ಗದ ಮನಸ್ಸಿನ ಪುಡಿಗಾಸು ರಾಜಕೀಯ... ಇವು ನನ್ನ ನಾಟಕ ಬರವಣಿಗೆಯ ಮುಖ್ಯ ಧಾತುವಾಗಿದ್ದವು. 'ನಾಜೂಕಯ್ಯ'ದ ಘಟ್ಟ ಅದು. raw ಸಮಕಾಲೀನತೆಯನ್ನು ಹೂಬೇಹೂಬು ಕೊಡುವ ರಂಗಭೂಮಿ, ನನ್ನ ವಿನೋದ ಪ್ರಜ್ಞೆ ಮತ್ತು ಸಮಯ ಪ್ರಜ್ಞೆ ಎರಡಕ್ಕೂ ತಕ್ಕ ಅವಕಾಶ ಕೊಟ್ಟಿತು. ನಟನಾಗಿ, ನಾಟಕಕಾರನಾಗಿ, ನಾನು ಯಶ ಗಳಿಸಿದ್ದು-ಈ ತಕ್ಕಗಳಿಗೆಯಲ್ಲಿ ತಕ್ಕ ಮಾತು ಇಡುವ 'ಪರ್ಫೆಕ್ಟ್ ಟೈಮಿಂಗ್' ನಿಂದಾಗಿ. 'ಪಲ್ಲವಿ'ಯಲ್ಲಿಯ ನನ್ನ ಪಾತ್ರ ತುಂಬ ವಿಷಾದ ತುಂಬಿದ್ದು. ಆದರೆ ಅದು ಪ್ರಕಟಗೊಳ್ಳುವ ಸಂದರ್ಭಗಳಲ್ಲೆಲ್ಲ ವಿಚಿತ್ರ ವಿನೋದವಿತ್ತು. ಹೀಗಾಗಿ ರಂಗ ಭೂಮಿ ಮತ್ತು ನಂತರದ ಘಟ್ಟದಲ್ಲಿ ದಟ್ಟ ರಾಜಕೀಯ ಪ್ರಜ್ಞೆ ಮತ್ತು ವಿನೋದ ನನ್ನಲ್ಲಿ ಬರವಣಿಗೆಯ ಮುಖ್ಯ ನಾಡಿಯಾಗಿತ್ತು.



## 'ಭಾವಯಾನ'

ನಾನು 'ಕಥೆಗಾರ'ನಾಗಿ ಕನ್ನಡದ ನೂರಾರು ಕಥೆಗಳನ್ನು ಆಯ್ದುಕೊಂಡಾಗ ಮತ್ತು ಟೆಲಿವಿಜನ್‌ಗೆ ಸೀರಿಯಲ್ ಬರೆದು ನಿರ್ದೇಶಿಸಲು ತೊಡಗಿದಾಗ ಬಹುಶಃ ನನ್ನೊಳಗೆ ಸುಪ್ತವಾಗಿದ್ದ ಸೂಕ್ಷ್ಮ ಭಾವಜೀವಿ ಮೆಲುದನಿಯಲ್ಲಿ ಮಾತಾಡ ತೊಡಗಿದ. ನಿತ್ಯಜೀವನದಲ್ಲಿ ನಾವೆಲ್ಲರೂ ಒಂದೊಂದು ಭಾವಲೋಕ ಇಟ್ಟುಕೊಂಡೇ ತಿರುಗುತ್ತಿರುತ್ತೇವೆ. ಪ್ರತಿಯೊಬ್ಬನಲ್ಲೂ ಒಂದು ಭಾವಲೋಕ ಇದೆ. ಆ ಲೋಕದ ಎಳೆಗಳನ್ನು ತುಸುವೇ ಸ್ಪರ್ಶಿಸಿದರೂ ಸಾಕು ಸನ್ನಿವೇಶದಲ್ಲಿ




(ಚಿತ್ರಕಥೆಯ ಒಂದು ತುಣುಕು-ಸೀತಾರಾಂ ಅಕ್ಷರದಲ್ಲಿ)



ಜೀವ ಬರುತ್ತದೆ. ಮಾಯಾಮೃಗದ ಬರವಣಿಗೆ ಈ ರೀತಿ
ಪ್ರಯತ್ನ. ಮತ್ತು ಅದರ ಯಶಸ್ಸಿನ ಕಾರಣವೂ ಅದೇ.

## ಸನ್ನಿವೇಶದ ಗುಂಗು

ನಾನು ಪಟಕಥೆ ಬರೆಯುವಾಗ ಸನ್ನಿವೇಶಗಳ ಗುಂಗಿನ
ಇರುತ್ತೇನೆ. ನನ್ನ ಕಣ್ಣೆದುರು ಒಂದು ಘಟನೆ ಜರುಗುತ್ತದೆ. 'ಅ
ಮಗಳಿಗೆ ಮನೆಯಿಂದ ಹೊರಟು ಹೋಗು ಅಂತ ಹೇಳುತ್ತಿದ್ದಾ
ಇದಿಷ್ಟೇ ನನ್ನ ಕಣ್ಣೆದುರಿನ ಸನ್ನಿವೇಶ. ಇದರ ವಿವರಗಳೆಲ್ಲ
ಮನದಲ್ಲಿ ಗುಂಯ್‌ಗುಡುತ್ತಿರುತ್ತವೆ. ಒಂದು ಕಾಗದ
ಗೋಜಲು ಗೋಜಲಾಗಿ ಟಿಪ್ಪಣಿ ಮಾಡುತ್ತೇನೆ.




'ಮತದಾನ' ಚಿತ್ರದ ಒಂದು ದೃಶ್ಯ

ವ್ಯವಸ್ಥಿತವಾದ ಶಾಟ್, ಬ್ರೆಕ್‌ಡೌನ್ ಇತ್ಯಾದಿ ಇರೋದಿಲ್ಲ. ನನ್ನ ಚಿತ್ರಕಥೆಯ ಪುಟವೊಂದು ಮಹಾ ಅವ್ಯವಸ್ಥೆಯ ಪ್ರತೀಕದಂತಿರುತ್ತದೆ. ಅದಕ್ಕೊಂದು ಆಕಾರ, ಶಿಸ್ತು ಬರುವುದು ಶೂಟಿಂಗ್ ಶುರುಮಾಡಿದಾಗಲೇ. ಮಾಯಾಮೃಗದ ಸಂಭಾಷಣೆಗಳ ಯಶಸ್ಸಿಗೆ ಇನ್ನೊಂದು ಕಾರಣವೇನೆಂದರೆ-ಕಣ್ಣಿಗೆ ಕಾಣ್ತಾ ಇರೋ ಸಂಗತಿಗಳನ್ನು ಜಾಸ್ತಿ ವಿವರಿಸೋ ಗೋಜಿಗೆ ಹೋಗಲಿಲ್ಲ. ದೃಶ್ಯ ಮಾಧ್ಯಮದಲ್ಲಿ ಸಿಟ್ಟು ಬಂದವನು ಏದುಸಿರಿನಲ್ಲಿ 'ಏ' ಎಂದು ಕೂಗಿದರೂ ಸಾಕು-ಹೊರತು 'ನನಗೆ ಸಿಟ್ಟು ಬಂದಿದೆ ಗೊತ್ತಾ?' ಎಂದು ಹೇಳಬೇಕಾಗಿಲ್ಲ.

## 'ಮತದಾನ'

'ಮತದಾನ' ಸಿನೀಮಾ ಮಾಡುವ ನಿರ್ಧಾರ ತಗೊಂಡ ಮೇಲೆ ಅದನ್ನು ಅತಿ ಎಚ್ಚರದಿಂದ ಓದಿದೆ. ಪ್ರತಿ ಘಟನೆಗಳನ್ನು - ಸನ್ನಿವೇಶಗಳನ್ನಾಗಿ ಟಿಪ್ಪಣಿ ಮಾಡುತ್ತ ಹೋದೆ. ಹೀಗೆ ನನ್ನ ಮೊದಲ ಟಿಪ್ಪಣಿಯಲ್ಲಿ ಒಟ್ಟೂ 780 ಸನ್ನಿವೇಶಗಳಿದ್ದವು. ಕೊನೆಗೆ ಚಿತ್ರದಲ್ಲಿ ನಾನು ಬಳಸಿಕೊಂಡಿರೋದು ಕೇವಲ 40. ಅಂದರೆ, ಹೇಗೆ ಒಬ್ಬ ಶಿಲ್ಪಿ ತನ್ನ

ಜನಪ್ರಿಯ ಮೆಗಾ ಧಾರಾವಾಹಿ 'ಮಾಯಾಮೃಗ'ದ ಒಂದು ಸನ್ನಿವೇಶ





'ಮಾಯಾಮೃಗ'ದ ಮೂವರು 'ಕನ್ಯೆ'ಯರು

ಮೂರ್ತಿಯನ್ನಷ್ಟೇ ಬಳಸಿ-ಉಳಿದುದನ್ನು ಕಡೆಗಣಿಸುತ್ತಾನೋ ಹಾಗೆ. ಇದರರ್ಥ ಬಳಕೆಯಾಗದ ವಿವರಗಳು ಅನಿವಾರ್ಯ ಅಂತಲ್ಲ. ನಾನು ಆಯ್ದುಕೊಂಡ ಎಳೆಗೆ ಅವು ಬೇಕಾಗಿಲ್ಲ ಅಷ್ಟೆ.

ಕಾದಂಬರಿ ನಡೆಯೋದು ತುಮಕೂರು ಸುತ್ತಣ ಪರಿಸರದಲ್ಲಿ. ಇಲ್ಲಿ ಮಾತು ತುಂಬ ಒರಟಾಗಿತ್ತು. ರಾಮಲಿಂಗೇಗೌಡ-ಮಗಳನ್ನು 'ಲೌಡಿ' ಅಂತ ಕರೆಯೋನು. ಆದರೆ ಯಾಕೋ ನಾನು ರೂಪಿಸಲಿರುವ ಅನುಭವಕ್ಕೆ ತುಸು ಮೃದುವಾದ ಒಳಮೈ ಬೇಕು ಅನಿಸಿತು. ಹೀಗಾಗಿ ಅವೇ ಪಾತ್ರಗಳನ್ನು ಮಲೆನಾಡು, ತೀರ್ಥಹಳ್ಳಿಗೆ ವರ್ಗಾಯಿಸಿಕೊಂಡೆ. ಅಲ್ಲಿ ಪಾತ್ರಗಳ ಭಾವ, ಭಂಗಿ ಬದಲಾಯಿತು. ರಾಮಲಿಂಗೇಗೌಡನ ಪಾತ್ರಕ್ಕೆ ವಿಚಿತ್ರವಾದ ಮಾರ್ದವ, ಮೌನ ಅಲ್ಲಿ ಲಭಿಸಿತು. ಮೂಲದಲ್ಲಿ ಡಾಕ್ಟರ್ ಮತ್ತು ತಾರಾಳ ನಡುವೆ ಅಂಥ ಪ್ರೇಮದ ಪುರಾವೆ ಇಲ್ಲ. ಅವರಿಬ್ಬರೂ 'ಪರಸ್ಪರರ ಸ್ಮೃತಿಯಲ್ಲಿ ಸುಳಿಯುತ್ತಿರುತ್ತಾರೆ'-ಅಷ್ಟೆ. ಆದರೆ ಸಿನಿಮಾದಲ್ಲಿ ಆ ನಂಟನ್ನು ಅಧಿಕೃತವಾಗಿ ಅನುಭವವೇದ್ಯ ಮಾಡಲೇಬೇಕಲ್ಲ. ಹೀಗಾಗಿ ಅವರಿಬ್ಬರ ನಡುವಿನ ಆಕರ್ಷಣೆ ಸ್ಫುಟವಾಗುವಂತೆ ಬರೆದೆ.

## ಅಭಿನಯಿಸುತ್ತಲೇ ಬರೆಯುತ್ತೇನೆ!

ಸಿನಿಮಾದಲ್ಲೂ ಅಷ್ಟೆ-ನನ್ನ ಚಿತ್ರಕಥೆಯಲ್ಲಿ ಶಾಟ್ ಡಿವಿಜನ್ ಇಂಥ ವಿವರಗಳು ಕಡಿಮೆ. ಅದೊಂದು ಸನ್ನಿವೇಶದ ಸಾರಾಂಶ. ಅನಂತರ ಶೂಟಿಂಗ್ ಸಮಯದಲ್ಲಿ ಪ್ರತಿದಿನ ಬೆಳಗ್ಗೆ ನಾಲ್ಕಕ್ಕೆ ಎದ್ದು ಸಂಭಾಷಣೆಗಳನ್ನು ಬರೆಯುತ್ತಿದ್ದೆ. ನನಗೆ casting ಗೊತ್ತಿಲ್ಲದಾಗ ಹೆಚ್ಚು ಮುಕ್ತವಾಗಿ ಬರೆಯುತ್ತೇನೆ. ನಾನೇ ಸ್ವತಃ ನಟನಾಗಿರೋದ್ರಿಂದ ಮಾತುಗಾರಿಕೆಯ ವೈಖರಿ ಅಭಿನಯದ ರೂಪದಲ್ಲಿ ಬರವಣಿಗೆಯಲ್ಲಿ ಪ್ರಕಟವಾಗುತ್ತಿರುತ್ತದೆ. ನಾನು ಡೈಲಾಗ್ ಬರೆಯುವಾಗ ಯಾರಾದರೂ ಕದ್ದು ನೋಡಿದರೆ ನಾನು ಅಭಿನಯಿಸುತ್ತಲೇ ಬರೆಯುತ್ತಿದ್ದೇನೆ ಎಂದು ತೋರಬಹುದೇನೋ. ನನ್ನ ಪರವಶತೆ ಹಾಗಿರುತ್ತದೆ. ಸಿನಿಮಾ ಬರವಣಿಗೆ ಟಿವಿಗಿಂತ ಭಿನ್ನ. ಅಂದರೆ ಟಿವಿಯ ಮೂರು ಪುಟದ ಮಾತು ಇಲ್ಲಿ ಅರ್ಧ ಪುಟದಲ್ಲಿ ಆಗಬೇಕು. ಟಿವಿಯ ಭಾಷೆ ನಿರೂಪಣಾತ್ಮಕ. ಸಿನಿಮಾದಲ್ಲಿ ಅದು ತುಂಬಾ ನಿಖರ.

ಬೇರೆಯವರು ಬರೆದ ಚಿತ್ರಕಥೆಯನ್ನ ನಾನು ನಿರ್ದೇಶಿಸುವುದು ನನಗೆ ಅಷ್ಟು ಹಿತ ಕೆಲಸವಲ್ಲ. Same vice versa. ಅಂದರೆ ನಾನು ಬೇರೆ ನಿರ್ದೇಶಕರಿಗೆ ಬರೆಯುವುದು ಇಷ್ಟವಿಲ್ಲ. ಏಕೆಂದರೆ ನನ್ನ ಚಿತ್ರಕಥೆ ಕಾಗದಕ್ಕಿಂತ ಜಾಸ್ತಿ ತಲೇಲೇ ಇರುತ್ತದೆ. ಅದಕ್ಕೆ."



# ತೆರೆದ ಅಂಚೆ

ಕನ್ನಡ ತಾಯಗರ್ಭದಲ್ಲಿ ಇಷ್ಟೊಂದು ವೈವಿಧ್ಯಮಯ, ವರ್ಣರಂಜಿತ, ಧ್ವನಿಪೂರ್ಣ ಕತೆಗಳು ಇಷ್ಟು ದಿನ ನಿಮ್ಮ ಪತ್ರಿಕಾ ಪ್ರಸವಕ್ಕಾಗಿ ಕಾದು ಕುಳಿತಿದ್ದವೆ? ಎಷ್ಟೊಂದು ಜನ ಶಕ್ತಿಪೂರ್ಣ ಲೇಖಕರನ್ನ, ಅದರಲ್ಲೂ ಹೊಸಬರನ್ನ ಪತ್ತೆಹಚ್ಚಿದ್ದೀರಿ!

**ಮೈಸೂರು** **ಪ್ರಭುಶಂಕರ**

ಸಂಚಿಕೆ ಕೈಗೆತ್ತಿಕೊಂಡರೆ ಫ್ಯಾನಿನ ಗಾಳಿಯಿಂದ ಜಡ್ಡು ಹಿಡಿದ ದೇಹಕ್ಕೆ, ಕಡಲು ಸೂಸುವ ಮೆಲುಗಾಳಿಯ ಸ್ಪರ್ಶಸುಖ ಸಿಕ್ಕಂತಾಗುತ್ತದೆ. ವೈವಿಧ್ಯಮಯ ಕತೆಗಳು, ಸಶಕ್ತ ರೇಖಾಚಿತ್ರಗಳು ಪುಳಕಗೊಳಿಸುತ್ತವೆ.

**ಮುಂಬಯಿ** **ರಾಮನಾಥ ಜೋಶಿ**

'ಮೆಲುಕಿ'ನಲಿ ಹಳಬರ ಪಲುಕು; ಕತೆಗಳಲ್ಲಿ ಲವಲವಿಕೆಯ ಕುಲುಕು; 'ವಿಶ್ವಭಾರತಿ'ಯಲಿ ವಿಶಾಲ ಜಗದ ತುಣುಕು. ಏನೆಲ್ಲಾ ಇದೆ!... ಏನಿಲ್ಲವೆಂದು ಹೇಳುವುದು ಕಷ್ಟ.

**ಬೆಂಗಳೂರು** **ದೊಡ್ಡರಂಗೇಗೌಡ**

ಇಂದಿನ ಯುವ ಪೀಳಿಗೆಯ ಸಾಹಿತ್ಯಾಸಕ್ತರಿಗೆ 'ಭಾವನಾ' ಒಂದು ಸುಂದರ ಕನಸಿದ್ದಂತೆ. ಕಂಪ್ಯೂಟರ್ ಖಾಯಿಲೆಗೆ ಬಿದ್ದು ಜಡ್ಡುಹಿಡಿದಿರುವ ಮನಸ್ಸುಗಳಿಗೆ ಔಷಧಿಯಿದ್ದಂತೆ.

**ಮೈಸೂರು** **ರಾಂಚಂದ್ರ ಕೊಪ್ಪಲು**

ಅತ್ಯುತ್ತಮವಾಗಿ ಮೂಡಿಬರುತ್ತಿರುವ 'ಭಾವನಾ', ಓದುವ ಮನಸ್ಸಿದ್ದವರನ್ನು ಬಿಡುವುದೇ ಇಲ್ಲ.

**ದೊಂಬಿವಿಲಿ ಪೂರ್ವ** **ಅಣ್ಣಪ್ಪ**

ಮೊದಲ ಬಾರಿ ನಮ್ಮ ಕಾಲೇಜಿನ ರೀಡಿಂಗ್ ರೂಮಿನಲ್ಲಿ ನೋಡಿದಾಗಲೇ 'ಭಾವನಾ' ನನ್ನ ಮನಸ್ಸನ್ನು ಗೆದ್ದಳು. ಅವಳೊಟ್ಟಿಗಿನ ಸಮಯ ಅಮೃತದಷ್ಟು ಸವಿ.

**ಕುಂತಾನಾಡು** **ಅ. ವಿವೇಕಾನಂದ**

ಒಳ್ಳೆಯ ಸಾಹಿತ್ಯ ಬೇಕಾದರೆ 'ಭಾವನಾ' ಓದು ಎನ್ನುವಂತಾಗಿದೆ. ಭವಿಷ್ಯ, ಮಹಿಳೆ, ಅಡಿಗೆ, ದಾಂಪತ್ಯ, ಪ್ರವಾಸ... ಇತ್ಯಾದಿ ಅಂಕಣಗಳನ್ನು ಆರಂಭಿಸಿ 'ಭಾವನಾ'ವನ್ನು ಕೆಡಿಸಬೇಡಿ.

**ಗುಲಬರ್ಗಾ** **ಕೃಷ್ಣಮೂರ್ತಿ ಕಿತ್ತೂರ**

ಹುಟ್ಟಿ ಒಂದೇ ವರ್ಷದಲ್ಲಿ 'ಭಾವನಾ' ನಮ್ಮ ಮನೆಯ ಅವಿಭಾಜ್ಯ ಅಂಗವಾಗಿಬಿಟ್ಟಿದೆ! ಸುಂದರ ಕತೆಗಳು, ಗಾಢವಾಗಿ ತಟ್ಟುವ ಬರಹಗಳು ಹಾಗೂ ವಿಸ್ಮೃತಿಗೆ ತಳ್ಳಬಲ್ಲ ಫೋಟೋ, ಚಿತ್ರಗಳು ಇದಕ್ಕೆ ಕಾರಣ.

**ಉಜಿರೆ** **ಕೇಶವ ಎಚ್. ಕೊರ್ಸೆ**

ವಿಚಾರವಂತ ಓದುಗ ವರ್ಗ ನಿರ್ಲಕ್ಷಿಸಬಹುದಾಗಿದ್ದ 'ಜನಪ್ರಿಯ' ಮಾದರಿಗೆ ಹೊಸ ರೂಪ ನೀಡಿ, ಓದಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತಿದ್ದೀರಿ. ಕನ್ನಡ ಪತ್ರಿಕೋದ್ಯಮ ಇತ್ತೀಚೆಗೆ ಕಂಡ ಬೆರಗು ಹುಟ್ಟಿಸುವ ಬೆಳವಣಿಗೆ ಇದು.

**ಸವಣೂರ** **ಎಂ.ಡಿ. ಒಕ್ಕುಂದ**

ಏನೆಲ್ಲಾ ಭಾವನೆಗಳ ಯಜಮಾನಿ ನೀನು- 'ಭಾವನಾ'

**ಬೆಳಗಾವಿ** **ಶ್ರೀಕಾಂತ ಶಾನವಾಡ**

'ಭಾವನಾ'ಳ ಹುಟ್ಟಿನಿಂದ ಪ್ರತಿ ತಿಂಗಳೂ ತಪ್ಪದೆ ಕೊಂಡು ಓದಿ, ಹಾಗೆಯೇ ಸಂಗ್ರಹಿಸಿ ಇಟ್ಟಿದ್ದೇನೆ. ಖ್ಯಾತ ಚಿತ್ರಕಾರರ ಚಿತ್ರಗಳು ಇನ್ಯಾವುದೇ ಪತ್ರಿಕೆಯಲ್ಲಿ ಈ ಪ್ರಮಾಣದಲ್ಲಿ ದೊರೆಯಲಾರದು.

**ಇಳಕಲ** **ಲಿಂಗಪ್ಪ ಎಸ್.**

ಎಲ್ಲಾ ಪತ್ರಿಕೆಗಳನ್ನು ಓದುವ ಹವ್ಯಾಸ ನನಗೆ ಮೊದಲಿನಿಂದಲೂ ಇದ್ದರೂ, ಓದಿದ ಮೇಲೆ ಅವುಗಳಲ್ಲಿ ಹೆಚ್ಚಿನವು ಮೂಲೆ ಸೇರಿದವುಗಳೇ. ಆದರೆ 'ಭಾವನಾ' ಹಾಗಲ್ಲ. ಅದು ನನ್ನ 'ವಿಐಪಿ' ಪುಸ್ತಕಗಳ ಸಾಲಿನಲ್ಲಿ ವಿರಾಜಮಾನವಾಗುತ್ತಲಿದೆ.

**ಹುಬ್ಬಳ್ಳಿ** **ಅರಾಟೆ ಅಣ್ಣಪ್ಪ ಎಸ್.ಶೆಟ್ಟಿ**

ಶಸ್ತ್ರಚಿಕಿತ್ಸೆಯೊಂದರ ಬಳಿಕ ಚೇತರಿಸಿಕೊಳ್ಳುತ್ತಿರುವ ನನಗೆ ಮಾರ್ಚ್ ತಿಂಗಳ 'ಭಾವನಾ' ಕೈಸೇರಿ 'ಹಾಯ್' ಎನಿಸಿತು. ಕೃತಕತೆ ಇಲ್ಲದ ಅದರ ಸರಳ ಪ್ರಪಂಚ, ಆಪ್ತ ಧಾಟಿ, ಒಂದೊಂದು ಪುಟದ ಸೌಂದರ್ಯದ ಬಗ್ಗೆಯೂ ಸಂಪಾದಕೀಯ ಬಳಗ ತೋರುವ ಶ್ರದ್ಧೆ, ಅಭಿಮಾನ ಮೂಡಿಸುತ್ತದೆ.

**ಗುಬ್ಬಿಮನೆ** **ಮಹೇಶ್ವರಿ**

'ಭಾವನಾ' ತನ್ನ ಆಕರ್ಷಕ ಮುಖಮುದ್ರೆಯಿಂದ ಖರೀದಿಸಲ್ಪಟ್ಟು, ಓದಿದಾಗ ಭಾವನಾತ್ಮಕ ಕಥೆಗಳಿಂದ, ಲೇಖನಗಳಿಂದ ಸಾರ್ಥಕ 'ಚಿಹ್ನೆ'ಯಿಂದ, ಹೊಸ ಶೈಲಿಯೊಂದಿಗೆ ಕನ್ನಡಿಗರಿಗೆ ಕೊಡುಗೆಯಾಗಿ ಜನ್ಮ ತಳೆದಿದ್ದಾಳೆ.

**ಕೋಣಾಜೆ** **ರವಿಚಂದ್ರನ್ ಪಿ.**

ಹೋಳಿಹಬ್ಬದ ಹಿನ್ನೆಲೆಯಲ್ಲಿ ಮಾರ್ಚ್ ತಿಂಗಳ 'ಭಾವನಾ' ಮುಖಪುಟ ಕಲಾಕೃ ತುಂಬಾ ಚೆನ್ನಾಗಿ ಮೂಡಿಬಂದಿದೆ. ಕಲಾವಿ ದೇವದಾಸ್ ಶೆಟ್ಟಿಯವರಿಗೆ ಅಭಿನಂದನೆಗಳು.

**ಮೂಡಿಗೆರೆ** **ಅನೂಷಾ ಹೊನ್ನೆಕೋ**

ಈ ಸಲದ ಒಳಪುಟದ ನಿಸ್ಸಹಾಯ ಮ ವಿನ ಚಿತ್ರ ನೋಡಿ ಸಂಕಟವಾಯಿತು. ಕಣ್ಣ ನಲ್ಲಿ ಕಂಬನಿ ಮೂಡಿ 'ಭಾವನಾ' ಮುಚ್ಚಿಬಿ ಇಂಥ ಕಾಡುವ ಚಿತ್ರಗಳಿಗಾಗಿ ಭೂಮಿ ಬಿರು ಬಿಡಲೇಬೇಕೆ?

**ಚಿಕ್ಕಮಗಳೂರು** **ಶಶಿಕಲಾ ವೀರಯ್ಯಸ್ವಾ**

ಒಳಪುಟದ ಸಿ. ಚಂದ್ರಶೇಖರ್ ಅವರ ತ ವರ್ಣಚಿತ್ರ, ತುಂಬಾ ಅರ್ಥಪೂರ್ಣವಾದದ

**ಬಂಗಾರಪೇಟೆ** **ಸ್ನೆ**

ಕುಂ. ವೀರಭದ್ರಪ್ಪ ಅವರ 'ಭಳಾ ವಿಚಿತ್ರಂ' ಅಂಕಣವನ್ನು ತಪ್ಪದೇ ಓದುತ್ತೇ ಕೊಟ್ಟೂರಿನ ಆಡುಭಾಷೆ ಪರಿಚಯವಿದ್ದ ಗಂತೂ ಈ ಅಂಕಣ ಇನ್ನಷ್ಟು ರಂಜನೆ ನೀಡು

**ರಾಣೆಬೆನ್ನೂರು** **ಪುಟ್ಟರಾಜ ಒಡೆಯ**

ವಿವೇಕ ಶಾನಭಾಗ ಬ್ರುನೋ ಶು ಚಿತ್ರಕ ಶಕ್ತಿ ಕುರಿತು ಹೇಳುವಾಗ 'ಹಕ್ಕಿಗ ಎಂಬ ಅವನ ಕತೆಯ ಸಾಲುಗಳನ್ನು ಪುನರು ಸಿದ್ದು ಕಣ್ಮುಂದೆ ಕಟ್ಟಿದಂತಾಯಿತು. ವೀಣಾ ಪಡಿಯವರ 'ಇದೆಂಥ...' ಕವನ ಬಹಳ ಚೆನ್ನಾ

**ಲಿಂಗಸುಗೂರು** **ಬಿ.ಎಸ್. ಕೌ**

ಜಗತ್ತಿನ ಅಕ್ಷರಗಳ, ಭಾವನೆಗಳ, ವಿಚಾ ನಕಾಶೆಯಲ್ಲಿ ನಕ್ಷತ್ರದಂತೆ ತಲೆಮಾರುಗಳ ಬೆಳಗಬೇಕಿದ್ದ 'ಬ್ರುನೋ' ಬಗ್ಗೆ ಬರೆದದ್ದು ಖುಷಿಯಾಯಿತು.

**ಬೆಂಗಳೂರು** **ಮಂಜುನಾಥ**

'ಜನಪದ'ದಲ್ಲಿ 'ಹೊರ್ಸಿ-ತುಂಬಾಸಿ-ಒಳ್ಸಿ' ಓದಿ ಆನಂದವಾಯ್ತು.

**ಪಾಣಾಜೆ** **ಶಂಪಾ ದೈತೋಟ**

'ಹೊರ್ಸಿ-ತುಂಬಾಸಿ-ಒಳ್ಸಿ' ಜನಪದ ಬುದ್ಧಿವಂತಿಕೆಯ ಕತೆ ಸ್ವಾರಸ್ಯಕರವಾಗಿತ್ತು. ಶಾಲೆಯಲ್ಲಿ ಮಕ್ಕಳಿಗೆ ಹೇಳಿ ಖುಷಿಪಟ್ಟೆ.

**ಗಳತಗಾ** **ಪ್ರಶಾಂತಕುಮಾರ್ ಅ.ಖರ್ಗೆ**

ಮಹೇಶ್ವರಿಯವರ 'ಹೋಗು ತಂಗಾಳಿಯೇ' ಕವಿತೆ ತುಂಬಾ ಇಷ್ಟವಾಯಿತು. ಅಂತೆಯೇ 'ಎದೆಯಲ್ಲೊಂದು ಚಿತೆ' ಕತೆ ಕೂಡ.

**ಕಾಸರಗೋಡು** **ಬಿ. ಬಾಲಕೃಷ್ಣ ಅಗ್ಗಿತ್ತಾಯ**

ವೈ. ಮಹಾಂತೇಶ್ ಅವರ 'ಗುಳೇ ಹೊರಟವರು' ಲಘು ಕತೆ ಚೆನ್ನಾಗಿತ್ತು. ಜಾಗತೀಕರಣದಿಂದ ಆರ್ಥಿಕವಾಗಿ ಕುಬ್ಜರಾದ ನಮಗೆ ಬದುಕಿನ ನೈತಿಕತೆ ನೆನಪಿಸುವ ವಿವರ ಕತೆಯಲ್ಲಿ ನೈಜವಾಗಿ ಮೂಡಿದೆ.

**ಹೂವಿನ ಹಡಗಲಿ** **ರತ್ನ ನಂದಿನಿಕೇಣಿ**

ತಿಲಕನಾಥ ಮಂಜೇಶ್ವರ ಅವರ 'ಎದೆಯಲ್ಲೊಂದು ಚಿತೆ' ಕತೆ ಬಹಳ ಕುತೂಹಲಕಾರಿಯಾಗಿತ್ತು.

**ನವಲಗುಂದ** **ನವೀನ ಅನಂತರಾವ್ ಕುಲಕರ್ಣಿ**

ಕತೆಗೆ ಅದೆಂಥಾ ಕೊನೆ ಮಾರಾಯ್ರಾ. ಬರೆದ ತಿಲಕನಾಥ ಮಂಜೇಶ್ವರರ ಎದೆಯಲ್ಲೊಂದು ಚಿತೆ ಉರಿದಂತೆ ಓದುಗರ ಎದೆಯಲ್ಲೂ ಉರಿಯುತ್ತದೆ. ಇಂತಹದುಕೆಲ್ಲಾ ನಿಮ್ಮ 'ಭಾವನಾ'ಳೆ ಕಾರಣ. ಅವಳೇನು ಸುಮಧುರ ಅಲ್ಲ ಒಮ್ಮೊಮ್ಮೆ ಘೋರಾ, ಭೀಕರ.

**ಬೆಂಗಳೂರು** **ಪ್ರಮಿಳಾ ಸುಂದ್ರೇಶ್**

ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ನನ್ನ ಗಂಡನಿಗೆ ವಿಷ ಹಾಕಿದೆ' ಕತೆ ತುಂಬಾ ಚೆನ್ನಾಗಿದೆ. ತಿಲಕನಾಥ ಮಂಜೇಶ್ವರರ 'ಎದೆಯಲ್ಲೊಂದು ಚಿತೆ' ಕೂಡ ತುಂಬಾ ಸುಂದರವಾದ ಕತೆ.

**ಮಂಡ್ಯ** **ದಿನೇಶ್ ಪಿ. ಕಿನ್ನಾಳು**

ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ನನ್ನ ಗಂಡನಿಗೆ ವಿಷ ಹಾಕಿದೆ' ಅತ್ಯುತ್ತಮ ಕತೆ. ಕನಕ ಹಾ.ಮ.ರ 'ರಿಹರ್ಸಲ್', ವಾಸುದೇವ ನಾಡಿಗ್‌ರ 'ಚಿದೂ' ಕತೆಗಳು ಸೊರಗಿವೆ. ಕುಂ.ವೀ. ಅವರ 'ಭಳಾರೆ ವಿಚಿತ್ರಂ' ವಿಶಿಷ್ಟ ಕಥನ ಶೈಲಿಯಿಂದ ತುಂಬಾ ಸ್ವಾರಸ್ಯಕರವಾಗಿದೆ.

**ಹೊಸದುರ್ಗ** **ಟಿ.ಎಸ್. ರಾಜೇಂದ್ರ ಪ್ರಸಾದ್**

ರೇಖಾ ಕುಂದಾರರ 'ಮಳೆ' ಕತೆ ನಮ್ಮ ಮನೆ ಅಥವಾ ನೆರೆಮನೆಯಲ್ಲೆಲ್ಲೋ ನಡೆದಹಾಗಿತ್ತು. ಶ್ರೀದೇವಿ ಕೆರೆಮನೆಯವರ 'ಮೀಸೆ' ಹಾಸ್ಯ ಲೇಖನ ನಕ್ಕು ನಗಿಸಿತು.

**ಕುಮಟಾ** **ಜಯಶ್ರೀ ಭಟ್**

ಮಳೆ ಬರುವುದೇ ಹೀಗೆ, ಭುಗಿಲೆದ್ದ ಧರೆಯನ್ನು ತಂಪೆರೆದು, ಸಾಂತ್ವನಗೊಳಿಸಿ, ಉರಿಯುತ್ತಿರುವ ಮನಗಳಲ್ಲಿ ಉಲ್ಲಾಸವನ್ನು ಚಿಮ್ಮಿಸುತ್ತಾ ಆಗ ಪರಿಸರ, ಬದುಕು ಎರಡೂ ಹಸಿರಾಗುತ್ತವೆ.

**ಬೆಂಗಳೂರು** **ನರೇಂದ್ರ, ಸಿರಕಜೆ**

'ಭೂತ' 'ಎದೆಯಲ್ಲೊಂದು ಚಿತೆ' ಹಾಗೂ 'ನನ್ನ ಗಂಡನಿಗೆ ವಿಷ ಹಾಕಿದೆ' ಕತೆಗಳು ಸ್ತ್ರೀ-ಪುರುಷ ಸಂಬಂಧಗಳನ್ನು ಹರಿತ ಬುದ್ಧಿಗಳಿಂದ ಪರೀಕ್ಷಿಸುತ್ತವೆ.

**ಸುಳ್ಯ** **ಸುಧನ್ವಾ ದೇರಾಜೆ**

ಚಿತ್ರಶೇಖರ ಕಂಠಿಯವರ 'ತಮ್ಮ' ಕತೆಯ ಕೇಂದ್ರ, ಚೌಕಟ್ಟು, ಬಳಸಿದ ಭಾಷೆ, ಪ್ರಾದೇಶಿಕ ನುಡಿಗಟ್ಟುಗಳು ಎಲ್ಲವೂ ಸಮಪ್ರಮಾಣದಲ್ಲಿ ಮಿಳಿತಗೊಂಡು, ಕತೆಗೆ ಒಂದು ರೀತಿಯ ಹದ ತಂದಿವೆ.

**ಅಫ್‌ಜಲಪುರ** **ಡಿ.ಎಂ. ನದಾಫ್**

ಫೆಬ್ರವರಿ ಸಂಚಿಕೆಯ 'ವೈಶಾಖ ಶುದ್ಧ ಪೂರ್ಣಿಮೆ' ಕತೆ ಓದಿ ರೋಮಾಂಚನ ವಾಯಿತು. ಈ ಕತೆಯ ಮೂಲಕ ನೀವು ಕೊಟ್ಟಿದ್ದು ಬರೀ ಒಂದು ಒಳ್ಳೆ ಕತೆಯಲ್ಲ, ನಿಶ್ಕಲ್ಮಷ ಶಾಂತಿಯನ್ನ. ರಾಜಲಕ್ಷ್ಮಿಯವರು ನನ್ನೆದುರಿಗಿದ್ದಿದ್ದರೆ ಸಾಷ್ಟಾಂಗ ನಮಸ್ಕರಿಸಿ ಕಂಬನಿ ತೋರುತ್ತಿದ್ದೆ.

**ಕಾರ್ಕಳ** **ಜ್ಯೋತಿ ಗುರುಪ್ರಸಾದ್**

# ಕೊನೇ-ಸಿಪ್



- ವೈವಾಹಿಕ ಜೀವನ ಮೋಜಿನದು. ಮೊದಲನೆ ವರ್ಷ ಆತ ಮಾತಾಡುತ್ತಾನೆ; ಆಕೆ ಕೇಳಿಸಿಕೊಳ್ಳುತ್ತಾಳೆ. ಎರಡ
ವರ್ಷ ಆಕೆ ಮಾತಾಡುತ್ತಾಳೆ; ಆತ ಕೇಳಿಸಿಕೊಳ್ಳುತ್ತಾನೆ. ಮೂರನೆ ವರ್ಷದಿಂದ ಇಬ್ಬರೂ ಮಾತಾಡುತ್ತಾ
ನೆರೆಯವರು ಕೇಳಿಸಿಕೊಳ್ಳುತ್ತಾರೆ! ಎಂಬುದು ಹಳೆಯ ಜೋಕಾದರೂ ಗಂಡ-ಹೆಂಡತಿ ಜಗಳ ನಿತ್ಯ ನೂತ
ಹಾಸ್ಯದ ಸರಕು.
- 'ಹೆಂಡತಿ ಬೇಕಾಗಿದೆ' ಎಂದೊಬ್ಬ ಪತ್ರಿಕೆಯ ವೈವಾಹಿಕ ಅಂಕಣದಲ್ಲಿ ಜಾಹಿರಾತು ಕೊಟ್ಟ. ಮರುದಿನ ಆತ
ವಿಳಾಸಕ್ಕೆ ನೂರು ಪತ್ರಗಳು ಬಂದವು. ಎಲ್ಲದರಲ್ಲೂ ಇದ್ದಿದ್ದು ಒಂದೇ- 'ನನ್ನ ಹೆಂಡತಿ ತಗೋ'!
- ಒಬ್ಬ (ಹೆಮ್ಮೆಯಿಂದ) : ನನ್ನವಳು ದೇವತೆ<br>ಇನ್ನೊಬ್ಬ : ನೀನೇ ಅದೃಷ್ಟವಂತ. ನನ್ನವಳು ಇನ್ನೂ ಜೀವಂತವಾಗಿದ್ದಾಳೆ!
- ಹೆಂಡತಿ: ಅಡಿಗೆ ಹೇಗಾಗಿದೆ ರೀ?<br>ಗಂಡ : ರುಚಿ ಕಟ್... ಕಟ್ಟಾಗಿದೆ (ಅರೆ, ಅದೆಷ್ಟು ಧೈರ್ಯ ಇವನಿಗೆ! ಇಲ್ಲ ಪಾಪ ಉಗ್ಗ್ ಗ್ಗ.)
- ಇಚ್ಛಿಸಿದ್ದು ಕೈಗೂಡುವಂತೆ ಮಾಡುವ ಮಹಿಮೆಯುಳ್ಳ ಬಾವಿಯೊಂದರ ಬಳಿ ಗಂಡ-ಹೆಂಡತಿ ಬಂದ
ಮೊದಲು ಗಂಡ ಬಾವಿಯ ಬಳಿ ಬಾಗಿ ತನ್ನ ಮನದಿಚ್ಛೆಯನ್ನು ನೆನಸಿಕೊಂಡು, ಒಂದು ನಾಣ್ಯವನ್ನು ಬಾ
ಹಾಕಿದ. ನಂತರ ಹೆಂಡತಿಯೂ ತನ್ನ ಇಚ್ಛೆಯನ್ನು ಮನದಲ್ಲೇ ಕೋರಿಕೊಂಡು, ನಾಣ್ಯ ಹಾಕಲೆಂದು ತು
ಹೆಚ್ಚೇ ಬಾಗಿದಳು. ಮತ್ತು ಆಯತಪ್ಪಿ ಬಾವಿಯೊಳಕ್ಕೆ ಬಿದ್ದು ಮುಳುಗಿಹೋದಳು.<br>ಒಂದು ಕ್ಷಣ ದಿಗ್ಭ್ರಮೆಗೊಂಡ ಗಂಡ ತನ್ನಷ್ಟಕ್ಕೆ ಹೇಳಿಕೊಂಡ, 'ಪರವಾಗಿಲ್ಲ, ಈ ಬಾವಿಯ ಮಹಿಮೆಯ
ಜನ ಹೇಳೋದು ನಿಜ!'
- ಆತ ಸಮಾಧಿಯೊಂದರ ಬಳಿ ಮೊಣಕಾಲೂರಿ ಅತೀವ ದುಃಖದಿಂದ ಕಣ್ಣೀರ್‌ಗರೆಯುತ್ತಾ, 'ನೀನು
ಪ್ರಪಂಚವನ್ನು ತೊರೆದು ಯಾಕೆ ಹೊರಟುಹೋದೆ? ಯಾಕೆ?' ಎಂದು ಪದೇಪದೇ ಹೇಳುತ್ತಾ ಶೋಕಿಸು
ಈತನ ದುಃಖವನ್ನು ನೋಡಿ ಅಚ್ಚರಿಗೊಂಡವರೊಬ್ಬರು, ಅವನನ್ನು ಸಮಾಧಾನಿಸುವ ದನಿಯಲ್ಲಿ ಕೇಳಿದ
''ಇಷ್ಟೊಂದು ತೀವ್ರವಾಗಿ ನೀನು ದುಃಖಿಸುತ್ತಿರುವುದು ಯಾರಿಗಾಗಿ? ನಿನ್ನ ಮಗನಿಗಾಗಿಯೆ
ತಾಯಿಗಾಗಿಯೋ?''<br>ಒಂದು ಕ್ಷಣ ಸಾವರಿಸಿಕೊಂಡ ಆತ ಹೇಳಿದ, ''ನನ್ನ ಹೆಂಡತಿಯ ಮೊದಲ ಗಂಡನಿಗಾಗಿ'' !
- ಹೆಂಡತಿಯನ್ನು ಅಪಹರಿಸಿದವರು ಗಂಡನಿಗೆ ಫೋನ್ ಮಾಡಿ, ಒಂದು ಲಕ್ಷ ಕೊಟ್ಟರೆ ಮಾತ್ರ ಬಿಡ
ಮಾಡುತ್ತೇವೆ ಎಂದು ಹೆದರಿಸಿದರು. ಗಂಡ ಕೇರೇ ಮಾಡಲಿಲ್ಲ! ಏಳು ದಿನದ ನಂತರ ಕ
ಅಪಹರಣಕಾರರು ಮತ್ತೆ ಫೋನ್ ಮಾಡಿ, ''ಎರಡು ಲಕ್ಷ ಕೊಡದಿದ್ದರೆ ನಿನ್ನ ಹೆಂಡತಿಯನ್ನು ಮನೆಗೆ ತ
ಬಿಡುತ್ತೇವೆ'' ಎಂದರು.<br>ಈ ಸಲ ಅಪಹರಣಕಾರರ ತಂತ್ರ ಯಶಸ್ವಿಯಾಯಿತು! ಅರ್ಧ ಗಂಟೆಯಲ್ಲೇ ಹಣ ಅವರ ಕೈ ಸೇರಿತು!!
- ಪುಟ್ಟ ಮಗ ಕೇಳಿದ : ''ಅಪ್ಪಾ, ಮದುವೆಯಾಗಬೇಕೆಂದರೆ ಎಷ್ಟು ಖರ್ಚಾಗುತ್ತೆ?''<br>ಅಪ್ಪ : ಗೊತ್ತಿಲ್ಲಪ್ಪ. ಯಾಕೆಂದ್ರೆ I am still paying for it! (ನಾನೀಗಲೂ ಅದಕ್ಕೆ ಬೆಲೆ ತೆರುತ್ತಿದ್ದ

**ಕಚಗುಳಿ** : ಭ್ರಷ್ಟರಿಗೊಂದು ತಾಜಾ ವಿಶೇಷಣ: ''ತೆಹಲ್ಕಾ ನನ್ ಮಕ್ಳು''!

Printed, published and owned by **Vijay Sankeshwar**, Published at 1st Floor, "Giriraj Annexe
P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-253630
Printed at Anand Printers & Publishers, 9/A, Pantharapalya Village, Nayandahalli, Mysore Road, Bangalore - 56
Editor: **Jayant Kaikini**

© All rights reserved. Reproduction without permission is prohibited.



KANCHI-CO
Kamakshi Silks

The finest Silken Expression

Kanchi Co Kamakshi Silks
(Kancheepuram Co-op Society Showroom)
Air Conditioned)

AGENTS :
Kancheepuram Murugan Silk Co-op Society Ltd.
G1653

No. 16 to 25, 1st Floor, NKS Plaza, BVK Iyengar Road Down,
(A.S. Char Street) Bangalore - 560 053. Ph : 2253522.

BHAVANA - Monthly May 2001 AFD. CR. 1/2001

